Substance, Śrītāḷa. Size, $19\frac{3}{8} \times 2\frac{3}{16}$ inches. Pages, 47. Lines, 12 on a page. Character, Kanarese. Condition, good. Appearance, old. Mode of writing, good, but not free from mistakes.

Contains the seventh Skandha complete.

Same work as the above.

(ವಿ.ವಿ.)—

ಭಾಗವತ ಸಪ್ತಮಸ್ಕಂಧ ಸಮಗ್ರ. ಅಕ್ಷರಗಳು ಮುದ್ದಾಗಿವೆ. ತಪ್ಪುಗಳುಂಟು. ಕವಿ ನಿತ್ಯಾತ್ಮ ಶುಕಯೋಗಿ. ಹಿಂದೆ ವರ್ಣಿತವಾಗಿರುವ ಗ್ರಂಥವೇ ಸರಿ.

No. 164. ಭಾಗವತ.

BHĀGAVATA.

Substance, Śrītāḷa. Size, $20\frac{1}{4} \times 2$ inches. Pages, 62. Lines, 13 on a page. Character, Kanarese. Condition, injured. Appearance, old. Mode of writing, good, but not free from mistakes.

Contains the eighth Skandha complete.

For other particulars see under No. 139 *ante*.

Beginning :

ಸೂ ॥ ಹೇಳದನು ಮುನಿ . . . . ।
. . . . ।
. . . . ರಂಗಳನು ಮುನಿಪ ॥
ಕೇಳದೆನಲ್ಕೆ ಮುನಿಪ ಪರಮುಕ್ಕೆ ।
ಪಾಳುವಿನ ಪದ ಭಕ್ತನಹ ಸುವಿ ।
ಕಾಲ ಸ್ವಾಯಂಭುವಿನವರ ವಂಶಾನುಚರಿತವನು ॥
ಸೋಲುತಿದೆ ಮನ ಮಿಕ್ಕಮನುಗಳ ।
ಪೀಳಗೆಯು ಪಾವನ ಚರಿತ್ರವ
ಕೇಳುವೊಡೆ ಮುರಮಥನ . . . . . ॥

* * *

[ಎನಲು ಮುನಿಕುಲ] ತಿಲಕ ನೈಹಿಕ ।
ವಿನಯುವನು ವಿಷಯುವನು ನೃಪತಿಯು ।
ಮನವ ರಾಗವನಟಿಸ ಹರಿಚರಣಾನುಚರಿತದಲಿ ॥
ತನುವನೊಳಿದಾಡುತ್ತ ಮನ ಸಂ ।
ಜನಿಸಿ ನಿತ್ಯಾತುಮನ ಮಹಿಮೆಯು ।
ನೆನೆವುತೊಯ್ಯನೆ ಕಣ್ದೆಱೆದು ಗುಣನಿಧಿಯ ಕೇಳೆಂದ ॥

Colophon:

ಪ್ರಥಮಸಂಧಿ ಸಮಾಪ್ತಂ.

ಶಾಪವಶದಲಿ ಗಜವೆನಿಸಿ ವರ ।
ಭೂಪನಿಂದ್ರದ್ಯುಮ್ನನೆಂಬ ಮ ।
ಹಾಪುರಷನೆಸೆದನು ತ್ರಿಕೂಟಗಿರೀಂದ್ರ ಶಿಖರದಲಿ ॥

* * *

ಎಡದ ಕೈಯಲಿ ನೇವರಿಸುತುಡೆ ।
[ಯುಡೆ] ಮುಡಿಯ ಬಲಗೈಯ್ಯಲಗಲಕೆ ।
ಹೊಡೆದು ಚೆಂಡಾಡುತ್ತೆ ವನದೊಳಗಬಲೆಯಿರಲೊಲಿದು ॥
ಮೃಡನು ಕಂಡನು ಕಂಡನಬಲೆಯು ।
ಕಡು ಚೆಲುವ ಮೋಹನದ ಲೀಲೆಯು ।
ನೊಡನೆ ತನ್ನನು ಗಿರಿಜೆಯುನು ಪರಿವಾರವನು ಮಱೆದ ॥

ನೋಡಿದಾಗಳೆ ಹರನ ತನು ಮಿಗೆ ।
ಬಾಡಿ ಮನುಮಥನಲಗು ಮಱುಮೊನೆ ।
ಮೂಡಿ ಮುದ್ರಿತವಾಯ್ತು ಹೃದಯು ಮೃಗಾಕ್ಷಿಯಂಗದಲಿ
ಮಾಡಿದನು ಸಂಕಲ್ಪವನು ಸತಿ ।
ನೋಡೆ ನೋಡಲು ನಗುತ ಹೆಜ್ಜೆಯು ।
ನೀಡಿದನು ನಳಿನಾಕ್ಷಿಯಿದ್ದುಪವನದ ಸಮ್ಮುಖಕೆ ॥

ಬರವಕಾಣುತ ಕಾಣುತವೆ ಸತಿ ।
ಮರದ ಮಱೆಯನು ಸಾರಿದಳು ನಿಜ ।
ಕರಕಲಿತ ಕೌತುಕದಲೊಯ್ಯನೆ ನಗುತ ಲಜ್ಜಿಸುತ ॥
ಹರನ ಹಗೆ ಮೂದಲಿಸಿತಬಲೆಗೆ ।
ಹರಹಿಕೊಂಡನು ಮನವನೇಕಲೆ ।
ಮಱುಳೆ ಲಜ್ಜಿಸಲೇಕೆಲೇ ನಿನ್ನವರು ನಾವೆಂದ ॥

ಭಾಳನೇತ್ರನು ನೋಡನೋಡಲು ।
ಮೇಲುದುವು ಜಾರಿದುದು ವೊಲೆಗಳ ।
ಮೇಲೆಬಿದ್ದುವು ಕಂಗಳೆದ್ದುವು ಕೀಟಿಲತೆದೆನಲು ॥

ಸೋಲ ಸೋತುದು ಮನ ಮೃಗಾಕ್ಷಿಗೆ ।
ಬೀಳುಕೊಂಡುದು ಲಜ್ಜೆ ಹಱಿದುದು ।
ಶೈಲನಂದನೆ ನೋಡನೋಡಲು ಸತಿಯು ಸಮ್ಮುಖಕೆ ॥
ಹಱಿದುಬಹುದನು ಕಂಡು ಹಾಯ್ದಳು ।
ಹರಿಣಲೋಚನೆಯಿತ್ತ ಲಿತ್ತವೆ ।
ತರುಗಳೊಳಗಡ ಗುತ್ತ ಕಡೆ ಗಣ್ಣಿನಲಿನೋಡುತ್ತ ॥
ತರಳೆಚಾಳೈಸಿದಳು ಮುನಿಮನ ।
ವೆಱಸಲಱಿಯದ ಭವನು ನೋಡದೆ ।
ಹಱಿವುತಿರ್ದನು ನಿಗಮದೂರನು ನಳಿನಮುಖಿಗಳುಪಿ ॥

End:

ಭೂವರನೆ ಸತ್ಯವ್ರತನು ಬಳಿ ।
ಕಾವರಾಹಾಖ್ಯೆಯುಲಿ ಜನಿಸಿದ ।
ನೀ ವಿವಸ್ವತನಾತ್ಮಭವ ನೀಶ್ರಾದ್ಧದೇವನೆನೆ ॥
ಆವದಱಿದಚ್ಯುತನ ಕಾರು ।
ಣ್ಯಾವಲೋಕನವುಳ್ಳ ತತ್ವದ ।
ಸೇವಕರಿಗಿಹ ಪರಗಳಲಿ ಕೇಳೆಂದೆನಾಮುನಿಪ ॥
ಹೇಳದೆನು ಮತ್ಸ್ಯಾವತಾರದ ।
ಲೀಲೆಯನು ಮುರಹರನ ವಾರಿಧಿ ।
ಕೇಳಿಯನು ಪಾರಿತಮಹಾಪಾಪೌಘಕೇಳಿಯನು ॥
ಹೇಳುವನು ತಾನಾವ ಮರ್ತ್ಯನು ।
ಕೇಳುವನು ಸಕಲಾತ್ಮನವರನು ।
ಪಾಲಿಸುವನಭಿಮತಮನೋರಥ ಸಿದ್ಧಿಗಳನಿತ್ತು ॥
ಪ್ರಳಯಜಲಧಿಯಲಾಡಲೆಂದೇ ।
ತಱಿದು ಮತ್ಸ್ಯಾಕಾರವನು ಶ್ರುತಿ ।
ಗಳನು ತಂದಿತ್ತಬುಜಭವಗಸುರರನು ಸಂಹರಿಸಿ ॥
ಒಲಿದು ಸತ್ಯವ್ರತಗೆ ತತ್ವವ ।
ತಿಳುಹಿನಿಜದಲಿ ನಿಂದ ಕರುಣಾ ।
ಜಲಧಿ ನಿತ್ಯಾತ್ಮನ ಮತ್ಸ್ಯಾಕೃತಿಗೆನಮೊಯೆಂದ ॥

Colophon:

ಅಷ್ಟಮ ಸ್ಕಂಧಂ ಸಮಾಪ್ತಂ

(ವಿ.ವಿ.)—

ಭಾಗವತ ಅಷ್ಟಮಸ್ಕಂಧ ಸಮಗ್ರ. ಶಿಥಿಲ. ಅಕ್ಷರಗಳು ಮುದ್ದಾಗಿವೆ. ತಪ್ಪುಗಳಿವೆ. ಗ್ರಂಥಪಾತವುಂಟು. ಮುದ್ರಿತಪುಸ್ತಕಕ್ಕಿಂತಲೂ ಇದರಲ್ಲಿ ಕೆಲವೆಡೆ ಉತ್ತಮವಾದ ಪಾಠವು ದೊರೆಯುವುದು. ಕವಿ ನಿತ್ಯಾತ್ಮ ಶುಕಯೋಗಿ. ಉಳಿದ ವಿಷಯಗಳನ್ನು ಹಿಂದೆ ವರ್ಣಿತವಾಗಿರುವ 139 ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

No. 165. ಭಾಗವತ.

BHĀGAVATA.

Substance, palm-leaf. Size, $14\frac{3}{4} \times 1\frac{1}{2}$ inches. Pages, 368. Lines, 5 on a page. Character, Kanarese. Condition, injured. Appearance, old. Mode of writing, not bad.

Contains the eighth Skandha complete.

Same work as the above.

(ವಿ.ವಿ.)—

ಭಾಗವತ ಅಷ್ಟಮಸ್ಕಂಧ ಸಮಗ್ರ. ಶಿಥಿಲ. ಲಿಪಿ ಸಾಮಾನ್ಯ. ಮುದ್ರಿತ ಪುಸ್ತಕಕ್ಕಿಂತಲೂ ಇದರಲ್ಲಿ ಕೆಲವೆಡೆ ಉತ್ತಮವಾದ ಪಾಠಗಳು ದೊರೆಯುವುವು. ಕವಿ ನಿತ್ಯಾತ್ಮ ಶುಕಯೋಗಿ. ಹಿಂದೆ ವರ್ಣಿತವಾದ ಗ್ರಂಥವೇ ಸರಿ.

No. 166. ಭಾಗವತ.

BHĀGAVATA.

Substance, Śrītāḷa. Size, $19\frac{5}{8} \times 2\frac{1}{4}$ inches. Pages, 85. Lines, 10 on a page. Character, Kanarese. Condition, good. Appearance, old. Mode of writing, good, but not free from mistakes.

Contains the eighth Skandha complete.

Same work as the above.

(ವಿ.ವಿ.)—

ಭಾಗವತ ಅಷ್ಟಮಸ್ಕಂಧ ಸಮಗ್ರ. ಲಿಪಿ ಉತ್ತಮ. ಕವಿ ನಿತ್ಯಾತ್ಮ ಶುಕಯೋಗಿ. ಹಿಂದೆ ವರ್ಣಿತವಾಗಿರುವ ಗ್ರಂಥವೇ ಸರಿ.

No. 167. ಭಾಗವತ.

BHĀGAVATA.

Substance, palm-leaf. Size, $16 \times 1\frac{5}{16}$ inches. Pages, 66. Lines, 3 on a page. Character, Kanarese. Condition, slightly injured. Appearance, old. Mode of writing, good, but not free from mistakes.

The other works herein are :—(1) Varāha Purāṇa. (2) Narāyaṇa Kavaca.

Contains the Adhyāyās 2 to 4 complete in the eighth skandha.

Same work as the above.

(ವಿ. ವಿ.)—

ಭಾಗವತ ಅಷ್ಟಮ ಸ್ಕಂಧದಲ್ಲಿ ಗಜೇಂದ್ರೋಪಾಖ್ಯಾನವು ಪೂರ್ಣವಾಗಿದೆ. ಸ್ವಲ್ಪ ಶಿಥಿಲ. ಬರವಣಿಗೆ ಚೆನ್ನಾಗಿದೆ. ಕವಿ ನಿತ್ಯಾತ್ಮ ಶುಕಯೋಗಿ. ಹಿಂದೆ ವರ್ಣಿತವಾದ ಗ್ರಂಥ ವೇಸರಿ.

No. 168. ಭಾಗವತ.

BHĀGAVATA.

Substance, Śrītāla. Size, 20¼ × 2 inches. pages, 76. Lines, 12 on a page. Character, Kanarese. Condition, injured. Appearance, old. Mode of writing, good, but not free from mistakes.

Contains the ninth Skandha complete.

, For other particulars see under No. 139 *ante*.

Beginning:

ಸೂ ॥ ಹೇೞಿದನು ವೈವಸ್ವತನ ಸುವಿ ।
ಶಾಲವಂಶಚರಿತ್ರವನು ಭೂ ।
ಪಾಲಮೌಳಿ ಮಹಾಮಣಿಗೆ ಮುನಿನಾಥಮನವೊಲಿದು ॥

* * *

ಕೇೞಿದೆನು ಮನ್ವಂತರಂಗಳ ।
ಪೇೞಿಗೆಯು ಪುಣ್ಯಾತ್ಮರಮಳ ವಿ ।
ಶಾಲಚರಿತ್ರವನು ಧರೆಗೆ ಮಹಾ ಪವಿತ್ರವನು ॥
ಹೇೞುವುದು ವೈವಸ್ವತನ ವಂ ।
ಶಾಳಿ ತತ್ಸಂಬಂಧ ನೃಪರನು ।
ನಾಳಿದನೆ ತನಗೆನಲು ನಗುತಿಂತೆಂದನಾ ಮುನಿಪ ॥
ಅರಸ ಕೇಳಾದಿಯಲಿ ವಿಶ್ವಂ ।
ಭರನ ನಾಭಿ ಸರೋಜದಿಂದವ ।
ತರಿಸಿದನು ಬಳಿಕಜನಜಂಗೆ ಮರೀಚಿ ಯೆಂಬುವನು ॥
ಪರಮರೀಚಿಗೆ ಕಾಶ್ಯಪನನಂ ।
ತರದಲದಿತಿಯುಲುದಿಸಿದನು ಸುರ ।
ವರ ವಿವಸ್ವಾನೆಂಬುವನು ಕಾಶ್ಯಪಗೆ ಕೇೞಿತೆಂದ ॥

* * *

ತನಯನಾ ಸಂಜಯನು ಸಹದೇ ।
ವನು ಕೃಶಾಶ್ವನು ಸೋಮದತ್ತನು ।
ಜನಿಸಿದನು ಬಳಿಕವನು ಪಡೆದನು ಯೋಗಿಗಳ ಗತಿಯ ॥
ಜನಪ ! ಕೇಳಾ ಸೋಮದತ್ತನ ।
ತನಯ ಸುಮತಿಯವಂಗೆ ಪುತ್ರನು ।
ಜನಿಸಿದನು ಜನಮೇಜಯನು ವೈಶಾಲರಿವೞಿಂದ ॥

ಅವನಿಪತಿ ! ಕೇಳಿಂತು ತೃಣಬಿಂ ।
ದುವಿನ ಕೀರ್ತಿ ವಿವರ್ಧನರು ಮಾ ।
ನವನಿಪಧೃಷ್ಟನ ಪರಂಪರೆಯಾತುಳ ಭುಜಬಲರು ॥
ಶ್ರವಣ ಮಾತ್ರದಲಖಿಳ ದುರಿತೌ ।
ಘವನು ಕೆಡಿಸುವುದಿದುವೆ ಧರೆಗಾ ।
ಭುವನನುತ ನಿತ್ಯಾತ್ಮ ನಾರಾಯಣನು ಕರುಣದಲಿ ॥

Colophon :

ಪ್ರಥಮ ಸಂಧಿ ಸಮಾಪ್ತಂ.

ಬರೆದು ಶರ್ಯಾತಿಯ ಸುಕನ್ಯಾ ।
ಚರಿತವನುಮಾಭಾಗವಂಶವ ।
ನೊರೆದನಾ ಮುನಿನಾಥನಾ ಮನುಜಾಧಿನಾಥಂಗೆ ॥

* * *

ಪಾತಕಿಗಳಾದವರು ತನ್ನಲಿ ।
ಪೂತಪಾತಕಹರರು ಮಿಂದಾ ।
ಪಾತಕವನಾನೆಲ್ಲಿ ಕಟಿತೆವೆನು ಘೋರತರವೆನಿಪ ॥
ಮಾತು ಹಲವೇನದಕೆ ಪರಿಹಾ ।
ರಾತಿಶಯವನು ಕಂಡೊಡಾ ನೀ ।
ಭೂತಳಕೆ ಬಹೆನೆನಲು ಕೈಮುಗಿದಳಿಗನಿಂತೆಂದ ॥
ಒಲ್ಲೆನೇನನು ? ತಾಯೆ ! ನೀನೇ ।
ಬಲ್ಲೆ ಪರಿಹಾರವನು ಲಕ್ಷ್ಮೀ !
ವಲ್ಲಭನ ಪದಕಮಲಪಾವನ ನಳಿನಜಾತೆಯುಲಾ ॥
ಎಲ್ಲಿಯುದ ಪಾತಕದ ಮಾತುರಿ ।
ಯಲ್ಲಿ ದೋಷವೆ ಸರ್ವಭಕ್ಷವ ।
ದಲ್ಲದೌ ನಾಕೆನ್ನಮನವನು ನೋಡಬೇಡೆಂದ ॥
ತಪ್ಪದಹುದ್ಯೈ ಬಾಳೆಯೆಲೆಯಲಿ ।
ತುಪ್ಪವನು ತೊಡೆದಂತೆ ಮಾತಿದ ।
ನೊಪ್ಪಿತವರವರಘವನೆನ್ನಲಿ ನೂಕಿಪಾಪಿಗಳು ॥
ಅಪ್ಪನನು ತಾ ಕಾಣೆ ನಂಘ್ರಿನ ।
ಲಪ್ರಭವೆ ತಾನೆಂಬಮಾತಿನ ।
ದರ್ಪದಲಿ ತಾನಿಳಿಯ ಲಂಜುವೆಯೆಂದಳಾದೇವಿ ॥
ಆ ದೊಡಿನ್ನೊಂದುಂಟು ನೀನೊಲಿ ।
ದಾದಡೆಸುವೊಡೆ ವಿಷ್ಣುಮೂರ್ತಿ ಗ ।
ಳಾದವಱು ಭೂಸುರಱು ಯೋಗಗಳವನಿಪಾವನಱು ॥
ವೇದವೇದಾಂಗೈಕ ನಿಷ್ಠರ ।
ಭೇದ ದರ್ಶಿಗಳಾತ್ಮವಿದರು ದ ।
ಯೋದಧಿಗಳಘರಹಿತ ಚರಿತರು ತಾಯೆ ! ಕೇಳೆಂದ ॥

ಅವಹೊಳಗೆ ಸಾಕ್ಷಾತ ಪುಣ್ಯ ।
ಶ್ರವಣ ಕೀರ್ತನವಖಿಲದೇವ ।
ಪ್ರವರಮಣಿಮುಕುಟೋಪಲಾಲಿತಚರಣನಖಹರಣ ॥

ಶ್ರವಣ ಮಂಗಳನಾಮ ನಿಹನಂ ।
ತವರಗಾತ್ರಸ್ಪರುಶದಲಿ ಸಂ ।
ಭವಿಸುವುದು ನಿನ್ನಘಕೆ ನಿಷ್ಕೃತಿ ತಾಯೆ ! ಕೇಳೆಂದ ॥

End :

ಧರೆಯಭಾರವ ಕಳೆಯಲೆಂದವ ।
ತರಿಸಿ ಭಕ್ತಾನುಗ್ರಹವ ನಾ ।
ಚರಿಸಿದನು ನೆರೆ ದುಷ್ಟನಿಗ್ರಹ ಲೀಲೆಗಳನೊಲಿದು ॥

ಅರಸ ! ವಿಸ್ತರಿಸುವನದಾವನು ? ।
ಪರಮಪುರುಷನ ಪುಣ್ಯಮಂಗಳ ।
ಚರಿತವನು ಸಂಕ್ಷೇಪಮಾತ್ರದ ಲೊಪೆವೆನಾನೆಂದ ॥

ಆವನಿದ ನೋದುವನು ಕೇಳುವ ।
ನಾವನೀಶಶಿ ವಂಶ ಭೂಪರ ।
ಪಾವನಾಮಳಚರಿತವನು ಹರಿಗುಣಸುಭರಿತವನು ॥

ಆ ವಿಪುಲ ಪುಣ್ಯಾತ್ಮರನು ದುರಿ ।
ತಾವಳಿಯ ನಪಹರಿಸಿ ಕೃಪೆಯುಲಿ ।
ಕಾವನಾನಿತ್ಯಾತ್ಮ ಕೃಷ್ಣನನಂತ ಗುಣವನಧಿ ॥

Colophon :

ನವಮಸ್ಕಂಧಂ ಸಂಪೂರ್ಣಂ.

(ವಿ.ವಿ.)—

ಭಾಗವತ ನವಮಸ್ಕಂಧ ಸಮಗ್ರ. ಶಿಥಿಲ. ಲಿಪಿ ಚೆನ್ನಾಗಿದೆ. ಮುದ್ರಿತ ಪುಸ್ತಕಕ್ಕಿಂತಲೂ ಇದರಲ್ಲಿ ಕೆಲವೆಡೆ ಉತ್ತಮವಾದ ಪಾಠವು ಕಂಡು ಬರುವುದು. ಕವಿ ನಿತ್ಯಾತ್ಮ ಶುಕಯೋಗಿ. ಮಿಕ್ಕ ವಿಷಯಗಳನ್ನು ಹಿಂದೆ ವರ್ಣಿತವಾಗಿರುವ ೧೫೪ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

No. 169. ಭಾಗವತ.

BHĀGAVATA.

Substance, Śrītāḷa. Size, $19\frac{3}{8} \times 1\frac{7}{8}$ inches. Pages, 66. Lines, 10 on a page. Character, Kanarese. Condition, injured. Appearance, old. Mode of writing, not bad, but not free from mistakes.

Contains the ninth Skandha complete, with additional stanzas at the end of the work, which are given below.

Same work as the above.

Date of transcription :—Fifth day of the dark fortnight of the lunar month Āśvayuja Śālivāhana Śaka year 1441, corresponding to 1518-19, A.D.

Name of the scribe :—Raghunātha son of Tirumalayya. For other particulars see the extracts given below.

(ವಿ.ವಿ.)—

ಭಾಗವತ ನವಮಸ್ಕಂಧ ಸಮಗ್ರ· ಶಿಥಿಲ. ಲಿಪಿ ಚೆನ್ನಾಗಿದೆ. ಗ್ರಂಥಪಾತ ಸ್ವಲ್ಪವುಂಟು. ಕವಿ ನಿತ್ಯಾತ್ಮ ಶುಕಯೋಗಿ. ಹಿಂದೆ ವರ್ಣಿತವಾದ ಗ್ರಂಥವೇ ಸರಿ. ಸ್ಕಂಧದ ಕಡೆಯಲ್ಲಿ ಈ ಕೆಳಗೆ ಬರೆದಿರುವಂತೆ ಇದೆ.

ಶ್ರೀವರನ ಶಂಕರ ಪಿತಾಮಹ ।
ದೇವಪತಿ ವಂದಿತಚರಣ ರಾ ।
ಜೀವಯುಗಳ ನನಂತ ವಿಧದವತಾರ ಚರಿತವಿಹ ॥

ಈ ವಿನುತ ಭಾಗವತವೆಂಬ ಕ ।
ಥಾವಳಿಯು ಬರೆಸಿದನು ಸಜ್ಜನ ।
ಜೀವಿತನು ರಾಮಣ್ಣ ಮಂತ್ರೀಶ್ವರನು ನಲವಿನಲಿ ॥

ಅವನು ಹೊಯ್ಸಳ ದೇಶದೊಳಗು ।
ತ್ತಮದೊಳಿಹ ದೇವಳಿಗೆ ನಾಡೊಳು ।
ತವೆ ಮೆಹೆಯುತಿಹ ಹಿರಿಯಮಗಳಿಪ್ರಭುವು ರಘುಪತಿಯು ॥

ಕುವರ ತಿಮ್ಮಯ್ಯಾಖ್ಯ ಗರ್ಭೋ ।
ದ್ಭವನು ನೆರೆ ವಾಧೂಲಗೋತ್ರಜ ।
ಕುವಲಯ ಶ್ರೀಕರನು ರಾಮಣ್ಣಾಖ್ಯ ಮಂತ್ರಿಪನು ॥

ದಾನ ಶೂರನು ಜಪತಪೋನು ।
ಷ್ಠಾನ ಶೀಲನು ಸತ್ಯಸಂಧನು ।
ದೀನಜನ ಸಂರಕ್ಷಕನು ಗುಣಗಣ ಸಮನ್ವಿತನು ॥

ಭೂಸುತನು ಸತ್ಸಂಗಯುತನು ಮ ।
ಹಾನುಭಾವನು ಪುಣ್ಯವಂತನು ।
ತಾನೆನಿಸಿ ಮೆಹೆದಿಹನು ರಾಮಣ್ಣಾಖ್ಯ ಮಂತ್ರಿಪನು ॥

ರಾಮಚಂದ್ರನ ಮಿರುಪ ಪದಯುಗ ।
ತಾಮರಸ ಭೃಂಗಾಯ ಮಾನವು ।
ಹಾಮಹಿಮ ಭಾಗವತ ಜನಕಾನತನು ತಾನಾಗಿ ॥

ಭೋಜು ದಿವಿಜರಿಗನ್ನ ವಸ್ತ್ರವ ।
ಪ್ರೇಮದಿಂ ದೀವುತ್ತ ಪುತ್ರ ।
ಸ್ತೋಮ ಪೌತ್ರರು ವೆರಸಿ ಮೆಱೆವುತ್ತಿಹನು ರಾಮಣ್ಣಾ ॥

ಬಂಧು ಜನವನು ಮಾನಿಸುತ ಗೋ ।
ವೃಂದವನು ಪೂಜಿಸುತ ಪಿರಿಯ ।
ರ್ಗಂದದಿಂದಲಿ ವಂದಿಸುತ ಸತ್ಸಂಗದಲಿ ರಮಿಸುತ್ತ ॥

ಬಂದ ವಿಪ್ರರ ಪರಕೆಗಳ ನಾ ।
ನಂದದಿಂ ಕೊಳ್ಳುತಚ್ಯುತ ಪದ ।
ದ್ವಂದ್ವವನು ನಮಿಸುತ್ತ ರಾಮಣ್ಣಾಖ್ಯ ನೆಸೆದಿಹನು ॥

ಬರೆದನಿಹ ನಮ್ಮಳಿಯಪುರ ಪ್ರಭು ।
ವರನು ರಘುಪತಿಯಾತ್ಮ ಸಂಭವ ।
ತಿರುಮಲೈಯನ ಸುತನು ರಘುನಾಥಾಂಕ ನೆಂಬುವನು ॥

ಪರಮ ಭಾಗವತ್ರದೊಳು ಪ್ರಥಮಾ ।
ದ್ಯುರುತರದ ನವನಾಂತ್ಯವೆನೆ ವಿ ।
ಸ್ತರದೊಳೀ ಪುಸ್ತಕದಿ ರಾಮಣ್ಣಾಖ್ಯ ಮಂತ್ರಿಪಗೆ ॥

ಶಾಲಿವಾಹನ ಶಕ ಸಹಸ್ರದ ।
ಮೇಲೆ ನಾನೂರ್ನಾಲ್ವತೊಂದರ ।
ಕಾಲದೊಳ ಗಾಶ್ವೀಜಮಾಸದೊಳಸಿತ ಪಕ್ಷದೊಳು ॥

ಶೀಲ ಪಂಚಮಿದಿವಸ ಯದುಕುಲ ।
ಪಾಲಕನ ಭಾಗವತ ಕಥೆಯನು ।
ಲೀಲೆಯಿಂ ರಾಮಣ್ಣನಿಗೆ ರಘುನಾಥ ನುರೆ ಬರೆದ ॥

ಕರಮುಱಿಹು ಪ್ರತಿಮೋಸ ತಪ್ಪುಗ ।
ಳಿರಲು ತಿದ್ದುವುದೋದಿ ನೆರೆ ಸ ।
ತ್ಪುರುಷರಾಗಿಹ ಜ್ಞಾನಿವಿದ್ವತ್ಪ್ರೌಢಿಯುಳ್ಳವರು ॥

ಬರೆದ ನಿದನೇನೆಂದು ಯೆನ್ನನು ।
ಜಱಿತಿದು ನೀಕರಿಸದೆ ಗುಣಂಗಳ ।
ಮೆಱೆದು ಬಹುಮಾನವನು ಮಾಳ್ಪುದು ಬಲ್ಲ ಸುಜನಜನ ॥

ಬಲ್ಲವರು ಬರೆಹದಲಿ ತಪ್ಪಿರ ।
ಲೆಲ್ಲರೆಹುದೆಂಬಂತೆ ತಿದ್ದಲು ।
ಬಲ್ಲವಿಕೆ ತಾನಿಲುಗು ಸಭೆಯಲಿ ಬಲ್ಲನಹ ನವನು ॥

ಬಲ್ಲವರು ಬರೆಹದಲಿ ಜಱಿತೆಯಲಿ ।
ಕಲ್ಲತಾ ಬಲ್ಲವಿಕೆ ಯೆಂಬರು ।
ಬಲ್ಲವರು ಬಲ್ಲಂತೆ ತಿದ್ದುವುದೋದಿ ಮನನಲಿದು ॥

ಉಳಿದ ವಿಷಯಗಳನ್ನು ೧೪೯ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

No. 170. ಭಾಗವತ.

BHĀGAVATA.

Substance, Śrītāḷa. Size, 19 × $1\frac{3}{4}$ inches. Pages, 112. Lines, 10 on a page. Character, Kanarese. Condition, slightly injured. Appearance, old. Mode of writing, good, but not free from mistakes.

Contains the ninth Skandha complete.

Same work as the above.

(ವಿ.ವಿ.)—

ಭಾಗವತ ನವಮಸ್ಕಂಧ ಸಮಗ್ರ. ಶಿಥಿಲ. ಲಿಪಿ ಉತ್ತಮ. ತಪ್ಪುಗಳಿವೆ. ಮುದ್ರಿತ ಪುಸ್ತಕಕ್ಕಿಂತಲೂ ಇದರಲ್ಲಿ ಕೆಲವೆಡೆ ಉತ್ತಮವಾದ ಪಾಠವು ದೊರೆಯುವುದು. ಕವಿ ನಿತ್ಯಾತ್ಮ ಶುಕಯೋಗಿ. ಹಿಂದೆ ವರ್ಣಿತವಾದ ಗ್ರಂಥವೇ ಸರಿ.

No. 171. ಭಾಗವತ-

BHĀGAVATA.

Substance, palm-leaf. Size, 18 × $1\frac{1}{2}$ inches. Pages, 126. Lines, 7 on a page. Character, Kanarese. Condition, much injured. Appearance, old. Mode of writing, not bad, but not free from mistakes.

Contains the ninth skandha complete.

Same work as the above.

(ವಿ.ವಿ.)—

ಭಾಗವತ ನವಮಸ್ಕಂಧ ಸಮಗ್ರ. ಶಿಥಿಲ. ಲಿಪಿ ಸಾಮಾನ್ಯ. ಗ್ರಂಥಪಾತ ಉಂಟು, ಕವಿ ನಿತ್ಯಾತ್ಮ ಶುಕಯೋಗಿ. ಹಿಂದೆ ವರ್ಣಿತವಾದ ಗ್ರಂಥವೇ ಸರಿ.

No. 172. ಭಾಗವತ-

BHĀGAVATA.

Substance, Śrītāḷa. Size, $19\frac{3}{8}$ × $2\frac{3}{16}$ inches. Pages, 94. Lines, 10 on a page. Character, Kanarese. Condition, good. Appearance, old. Mode of writing, good, but not free from mistakes.

Contains the ninth skandha complete.

Same work as the above.

Date of transcription :—Monday the third day of the bright fortnight of the lunar month Bhādrapada in the year Vibhava.

(ವಿ.ವಿ.)—

ಭಾಗವತ ನವಮಸ್ಕಂಧ ಸಮಗ್ರ. ಲಿಪಿ ಉತ್ತಮ . . ತಪ್ಪುಗಳವೆ. ಕವಿ ನಿತ್ಯಾತ್ಮ ಶುಕಯೋಗಿ. ಹಿಂದೆ ವರ್ಣಿತವಾದ ಗ್ರಂಥವೇ ಸರಿ.

ಗ್ರಂಥದ ಕಡೆಯಲ್ಲಿ ಈ ಕೆಳಗಿರುವಂತಿದೆ.

ತಪ್ಪಂ ಬರೆದಾತಂ ಜಡ ।
ನಪ್ಪಂ ಎಂದು ಬಯ್ಯಲ್ವೇಡಂ ॥ ?
ತಪ್ಪಕ್ಕೆ ಶುದ್ಧ ಮಾಳ್ಪಂ ।
ತಪ್ಪುಳ್ಳರೆ ತಿದ್ದಿಕೊಂಬುದುತ್ತಮ ಪುರುಷರ್ ॥ ?

ಗ್ರಂಥದ ಪ್ರತಿಯನ್ನು ಬರೆದಕಾಲ :—ವಿಭವ ಸಂವತ್ಸರದ ಭಾದ್ರಪದ ಶು॥ ೩ ಸೋಮ ವಾರ [ದ] ದಿವಸದಲ್ಲಿ ಗುರುಪಾದಾರವಿಂದ ಕರುಣಾ ಕಟಾಕ್ಷದಿಂದ ಮೂವನೂರ

No. 173. ಭಾಗವತ.

BHĀGAVATA.

Substance, Śrītāḷa. Size, $20\frac{1}{4} \times 2$ inches. Pages, 340. Lines, 11 on a page. Character, Kanarese. Condition, injured. Appearance, old. Mode of writing, good, but not free from mistakes.

Contains the tenth Skandha complete. For other particulars see under No. 139 *ante*.

Beginning :

ಸೂ ॥ ಅವನಿ ದುಷ್ಟಕ್ಷತ್ರ ಕುಲಭಾ ।
ರವನು ಸೈರಿಸಲರಿಯ ದಬುಜೋ ।
ದ್ಭವಗೆ ಬಿನ್ನವಿಸಿದಳು ಬಲಿದುದುಮೇಲೆ ಸುರಕಾರ್ಯ ॥

* * *

ಹೇಳಿರಿದಿರಿ ನೀವೆನಗೆ ತಾದಿಟ ।
ಕೇಳಿದೆನಲಾ ಸೋಮ ಸೂರ್ಯನೃ ।
ಪಾಲವಂಶ ಚರಿತ್ರವನು ಪಾವನ ಪವಿತ್ರವನು ॥

ಹೇಳಬೇಹುದು ತನಗೆ ಯಾದು ಭೂ ।
ಪಾಲರನ್ವಯದೊಳಗೆ ಲಕ್ಷ್ಮೀ ।
ಲೋಲನವತರಿಸಿದ ಕಥೆಯುನದನೆಂದ ನಾ ಭೂಪ ॥

ಅಜಿಯ ರಜಭವ ಮುಖ್ಯ ರಾವನ ।
ನಿಜಗೆಯನು ವೇದಾಂತ ಕೋಟಿಗ ।
ಳೊಜಲಿ ಕಾಣಿಸಲಜಿಯದಾವನ ಪಾದಪಂಕಜವ ॥

ಮಹಿವಿಡಿದು ವತ್ಸಾವತಾರದ ।
ಉಱುವ ದೈವವದೆಂತು ಜನಿಸಿದ ।
ತೆಱನ ನೆಲೆ ಮುನಿನಾಥ ಕೃಪೆ ಮಾಡುವುದು ತನಗೆಂದ ॥

ಆವಸುಕೃತದ ಸಿದ್ಧಿಯೋ ? ಮೇ ।
ಣಾವ ತಪದ ಸಮೃದ್ಧಿಯೋ ? ವಸು ।
ದೇವದೇವಕಿಯರಿಗೆ ಪೂರ್ವಭವಾಂತರಾರ್ಜಿತದ ॥

ದೇವ ದೇವನನಖಿಲ ನಿಗಮಶಿ ।
ರೋವಿರಾಜಿತ ಪಾದ ಪದುಮನ ।
ನಾವ ಪರಿಯಲಿ ಭಜಿಸಿ ಮಗನನು ಪಡೆದ ರವಹೆಂದ ।

ಉದಿಸಿ ಯದುಕುಲ ದೊಳಗದಾವಂ ।
ಗದಲಿ ಮಾನುಷವೆನಿಪ ಕರ್ಮವ ।
ಪದುಮನಾಭನು ವಿರಚಿಸಿದ ನವನೆಲ್ಲವನು ತನಗೆ ॥

ವಿದಿತವೆನೆ ವಿಸ್ತರಿಸಿ ಕಾರು ।
ಣ್ಯದಲಿ ಕರುಣಿಪುದಾಱು ನೀನ ।
ಲ್ಲದೆ ಭವಾಬ್ಧಿ ನಿಮಗ್ನಜನ ನಿಸ್ತಾರ ಕರವೆಂದ ॥

*　　　*　　　*

ಉಗ್ರಸೇನನೆನಿಪ್ಪ ನೃಪನ ।
ಭ್ಯಗ್ರತೇಜೋವನಧಿ ವಿಪುಳೋ ।
ದಗ್ರ ಭುಜಬಲನಹಿತ ಕಾನನದಹನ ದಾವಾಗ್ನಿ ॥

ಅಗ್ರಜನು ದೇವಕಿಗೆ ತತ್ಸುತ ।
ನುಗ್ರ ವಿಕ್ರಮ ಕಂಸನೆಂಬ ದು ।
ರಾಗ್ರಹಕ್ಷಿತಿಪಾಲ ನೊಪ್ಪಿರಲಿಂತು ಮಧುರೆಯಲಿ ॥

ದೇವಕಿನಸುತೆ ಸಕಲ ಸೌಭಾ ।
ಗ್ಯಾವಳೀ ಸಂಪನ್ನೆ ತ್ರಿಭುವನ ।
ಪಾವನಾಮಳ ಪುಣ್ಯಕೀರ್ತಿಪಿತಾನ ವಿಸ್ತೀರ್ಣೆ ॥

ದೇವಕೀ ಸಂಜ್ಞಿತೆ ಸಮಸ್ತ ಸು ।
ರಾವಳೀ ಸಂಸ್ತುತ್ಯೆ ರೂಪಗು ।
ಣಾವಲಂಬನೆ ಯೆಸೆದಳಾ ಪುರಲಕ್ಷ್ಮಿಯಂದದಲಿ ॥

ಮಧುರೆಯೆಂಬಾ ಪುರಕೆ ದೇವತೆ ।
ಮಧುಮಥನನದಹೊಳಗೆ ಸಲೆಸ ।
ನ್ನಿಧನೆನಿಸಿ ಸಾಕ್ಷಾತ್ಸುಕಾಮಿತ ಸಿದ್ಧಿಯನು ಕೊಡುತ ॥

ಮಧುರೆಯದು ಸಂಪನ್ನ ನಿಜಗುಣ ।
ಮಧುರದಲಿ ರಂಜಿಸಿತು ನೆರೆ ನಿರ ।
ವಧಿಕನಹ ನಿಶ್ಯಾತ್ಮ ನಾರಾಯಣನ ಕರುಣದಲಿ ॥

Colophon :

ಪ್ರಥಮ ಸಂಧಿ ಸಮಾಪ್ತಂ.

ದೇವಸನ್ನಿಭ ಮಹಿಮ ನಾವಸು ।
ದೇವನೆಸೆದನು ಮಧುರೆಯುಳಿವರ ।
ದೇವಕೀದೇವಿಯ ವಿವಾಹದ ಪರಮವಿಭವದಲಿ ॥

*　　　*　　　*　　　*

ಗೀತದವಸಾನದಲಿ ನೃಪನು ವಿ ।
ಧಾತನಂಘ್ರಿಗೆ ನಮಿಸಿ ಬಿನ್ನಹ ।
ವೀ ತಳೋದರಿ ತನ್ನ ಸುತೆ ಚಿತ್ತೈಸು ತಾನಾವ ।
ಭೂತಳಾಧೀಶ್ವರಜೆಗೀವೆನು ।
ಭೂತ ಕರ್ತೃವೆ ಕರುಣಿಸೆನಗೆನ ।
ಲಾತಗೆಂದಜ ನಾಲುಭೂಪರ ಹೆಸರ ಹೇಳಿತೆಂದ ॥
ಹೇಳಿದನು ಭೂತಳದ ಪೃಥ್ವೀ ।
ಪಾಲರನು ನಾನಾ ಪರಾಕ್ರಮ ।
ಶೀಲಗುಣ ಸಂಪನ್ನರನು ದೇಶಾಧಿಪತಿಗಳನು ॥
ಲೋಲಮತಿ ವಿಸ್ತರಿಸು ತಿಳಿಲದ ।
ಕೇಳಿಗಹಗಹಿಸಿದ ನದೆಂದಿನ ।
ಕಾಲದವನೀಶ್ವರರ ಮಾತೆಲೆ ಭೂಪ ಹೇಳಿತೆಂದ ॥
ಹೊಂದಿದರು ನೀಹೆಸಲುಗೊಂಡವ ।
ಉಂದೆ ತದ್ಗೋತ್ರಜಲು ಸಹಿತಲೆ ।
ತಂದೆ ಕಾಲಭ್ರಮಣವೇ ಗವನಜೀವಲಾರದನು ॥
ಸಂದವತ್ಸಲನೇಕ ಯುಗಗಳ ।
ದೊಂದು ನಿಮಿಷಾರ್ಧವ ವ್ರೋಲಾಯಿತ್ತು ।
ವಂದಿಗಳ ಸಂಗೀತ ಸಂಶ್ರವಣದಲಿ ನಿನಗೆಂದ ॥
ಇಲ್ಲ ನೃಪರೀ ನಿನ್ನ ಮಗಳಿಗೆ ।
ವಲ್ಲಭರ ನಳುಸುವ್ರೊಡೆ ಕಾಲನ ।
ಘಲ್ಲಣೆಯ ಘಾತಿಗಳಿಗೊಳಗಾಗದ ಶರೀರಗಳು ॥
ಎಲ್ಲ ಸಕಲಾಮರ ಮುನೀಂದ್ರಜೆ ।
ಗೆಲ್ಲಜೆಗೆ ಹಿತವೆನಿಸಿ ಲಕ್ಷ್ಮೀ ।
ವಲ್ಲಭನು ಜನಿಸಿರ್ಪ ನವನಿಗನಂತ ಸುಖವೆನಿಸಿ ॥
ದೇವಕಿಯ ಸುತರಾಗಿಯದು ಭೂ ।
ಪಾವಳಿಯ ಮಧ್ಯದಲಿ ಘನ ತೇ ।
ಜೋವಿಶಿಷ್ಟರು ರಾಮಕೃಷ್ಣರು ಚಾರುಮೂರ್ತಿಗಳು ।
ಸೇವಕರು ಸುರವರರು ನಾವೃಪ ।
ಜೀವಿಗಳು ತತ್ಪದಕೆ ನೀನೀ ।
ಗೀವುದಾರಾಮಂಗೆ ಮಗಳನು ಮಗನೆಹೋಗೆಂದ ॥

ಎನೆ ಹಸೊದವೆನುತ್ತ ನೃಪನಾ ।
ವನಜಭವ ನಡಿಗೆಉಗಿ ಬೀಟಿತ್ಕೊಂ ।
ಡನುಪಮನು ನಡೆತಂದನಂದಾ ದ್ವಾರಕಾಪುರಕೆ ॥
ಮನದೊಳಗೆ ನ್ಞುತ್ತ ತನ್ನಯ ।
ತನುಜೆಯನು ತಂದಿತ್ತನಬುಜಾ ।
ಸನನ ನೇಮದಲಚ್ಯುತಾಗ್ರಜನೆನಿಪ ರಾಮಂಗೆ ॥

End :

ಆವನಿದ ನೋದುವನು ಕೇಟಿವ ।
ನಾವನೀ ಪುರಹರನ ಮಂಗಳ ।
ಪಾವನಾಮಳ ಚರಿತವನು ಕಾರುಣ್ಯ ಭರಿತವನು ॥
ದೇವಸನ್ನಿಭ ಶುಕಮುಖ ಪ್ರ ।
ಸ್ತಾವಿತವ ನವರಿಬ್ಬರನು ನೆಹೆ ।
ಕಾವನಾ ಕಾರುಣ್ಯನಿಧಿ ನಿಜಪದವನೊಲಿದಿತ್ತು ॥
ಇವನಖಿಳಯೋಗೀಂದ್ರ ಪದಯುಗ ।
ಪದುಮ ಚರಿತಧ್ಯಾನ ನಿರ್ಮಳ ।
ಹೃದಯನಹಯೋಗೀಂದ್ರ ನಖಿಳೋದಿತ ಸದಾನಂದ ॥
ಮುದದಲಭಿವರ್ಣಿಸಿದ ನಜೆವಂ ।
ದದಲಿಗುಣದೋಷವನು ನೋಡದೆ ।
ವಿದಿತಶಿದ್ದುವುದೀಕೃತಿಯ ವಿಸ್ಮಿತಪದಾಕೃತಿಯ ॥
ಕರ್ತೃವಿವಕೆ ಹರೀತನೇಪುರ ।
ಭರ್ತೃಗೋಪೀನಾಥ ನಾಜ್ಞೆ ।
ಕರ್ತೃಲೇಖಕ ನಾನು ಕೃತಿಗಿಂತಿದೆ ನಿಧಾನಿಸಲು ॥
ವಕ್ತೃವಿನ ಗುಣದೋಷ ಲೇಖನ ।
ಕರ್ತೃವಿಂಗೆತ್ತಣದು ಸಕಳ ನಿ ।
ಯೋಕ್ತೃ ನಿತ್ಯಾತ್ಮಕನೆ ರಕ್ಷಿಸುಗಖಿಳಸಜ್ಜನರ ॥

Colophon :

ಅಂತು ಸಂಧಿ ೧೦೩ ಕ್ಕಂ ದಶಮಸ್ಕಂಧಂ ಸಂಪೂರ್ಣಂ.

(ವಿ.ವಿ.)—

ಭಾಗವತ ದಶಮಸ್ಕಂಧ ಸಮಗ್ರ. ಶಿಥಿಲ. ಅಕ್ಷರಗಳು ಮುದ್ದಾಗಿವೆ. ಗ್ರಂಥ ಪಾತ್ರವೂ ಸ್ವಲ್ಪವಿಪೆ. ಮುದ್ರಿತ ಪುಸ್ತಕಕ್ಕಿಂತಲೂ ಇದರಲ್ಲಿ ಕೆಲವೆಡೆ ಉತ್ತಮವಾದ ಪಾಠವು ದೊರೆಯುವುದು. ಕವಿ ನಿತ್ಯಾತ್ಮ ಶುಕಯೋಗಿ. ಉಳಿದ ವಿಷಯಗಳನ್ನು ಹಿಂದೆ ವರ್ಣಿತನಾಗಿರುವ 139 ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

No. 174. ಭಾಗವತ.

BHĀGAVATA.

Substance, Śrītāḷa. Size, 18 × 2⅝ inches. Pages, 344. Lines, 12 on a page. Character, Kanarese. Condition, good. Appearance, old. Mode of writing, good.

Contains the tenth Skandha compltee

Same work as the above.

(ವಿ.ವಿ.)—

ಭಾಗವತ ದಶಮಸ್ಕಂಧ ಸಮಗ್ರ. ಲಿಪಿ ಚೆನ್ನಾಗಿದೆ. ಮುದ್ರಿತ ಪ್ರತಿಗಿಂತಲೂ, ಇದರಲ್ಲಿ ಕೆಲವೆಡೆ ಉತ್ತಮವಾದ ಪಾಠಗಳು ದೊರೆಯುವುವು. ಕವಿ ನಿತ್ಯಾತ್ಮ ಶುಕಯೋಗಿ. ಹಿಂದೆ ವರ್ಣಿತವಾದ ಗ್ರಂಥವೇ ಸರಿ.

No. 175. ಭಾಗವತ.

BHĀGAVATA.

Substance, Śrītāḷa. Size, 25⅝ × 2½ inches. Pages, 270. Lines, 12 on a page. Character, Kanarese. Condition, slightly injured. Appearance, old. Mode of writing, not bad, but not free from mistakes.

Contains the tenth Skandha complete.

Same work as the above.

(ವಿ.ವಿ.)—

ಭಾಗವತ ದಶಮಸ್ಕಂಧ ಸಮಗ್ರ. ಸ್ವಲ್ಪ ಶಿಥಿಲ. ಬರೆವಣಿಗೆ ಸಾಮಾನ್ಯ. ತಪ್ಪುಗಳಿವೆ. ಕವಿ ನಿತ್ಯಾತ್ಮ ಶುಕಯೋಗಿ. ಹಿಂದೆ ವರ್ಣಿತವಾದ ಗ್ರಂಥವೇ ಸರಿ.

No. 176. ಭಾಗವತ.

BHĀGAVATA.

Substance, palm-leaf. Size, 17¾ × 1½ inches. Pages, 730. Lines, 7 on a page. Character, Kanarese. Condition, very much injured. Appearance, old. Mode of writing, good, but not free from mistakes.

Contains the tenth Skandha complete.

Same work as the above

(ವಿ.ವಿ.)—

ಭಾಗವತ ದಶಮಸ್ಕಂಧ ಸಮಗ್ರ. ಅತಿ ಶಿಥಿಲ. ಲಿಪಿ ಚೆನ್ನಾಗಿದೆ ತಪ್ಪುಗಳಿವೆ. ಗ್ರಂಥ ಪೂರ್ತವುಂಟು. ಕವಿ ನಿತ್ಯಾತ್ಮ ಶುಕಯೋಗಿ. ಕೊನೆಯ ಸಂಧಿಯಲ್ಲಿ ಈ ಕೆಳಗೆ ಬರೆಯಲ್ಪಟ್ಟ ಒಂದು ಪದ್ಯವು ಇತರ ಪ್ರತಿಗಳಿಗಿಂತಲೂ ಇದರಲ್ಲಿ ಹೆಚ್ಚಾಗಿ ಕಂಡು ಬರುತ್ತದೆ. ಅಧ್ಯಾಯದ ಸಂಖ್ಯೆಯನ್ನು ಮಾತ್ರ 106 ಎಂದು ತಿಳಿಸಿರುತ್ತಾನೆ.

> " ಅಜ ಭವಾರ್ಚಿತ ಚರಣ ಕಮಲನು ।
> ಭಜಕರಾರ್ತಿಯ ನೋವ ಶರಣನು ।
> ತ್ರಿಜಗವಂದಿತ ನಾಮಧೇಯನು ನಿಜದ ನಿರವಯನು ॥
> ಸುಜನ ಸೇವಿತಸಾದಪದ್ಮನು ।
> ಅಜಗಚಿಂತ್ಯನನಂತರೂಪನು ।
> ನಿಜಸುಖವ ಸಜ್ಜನರಿ ಗೊದಗಿಸುವಾ.......................... ॥ "

No. 177. ಭಾಗವತ.

BHĀGAVATA.

Substance, Śrītāḷa. Size, 25 × $1\frac{5}{16}$ inches. Pages, 110. Lines, 14 on a page. Character, Kanarese. Condition, slightly injured. Appearance, old. Mode of writing, good, but not free from mistakes.

Contains the Sandhis from 35 to the end and 34th incomplete in the tenth skandha

Same work as the above.

Name of the scribe:—Kariyaṇṇa.

(ವಿ.ವಿ.)—

ಭಾಗವತ ದಶಮಸ್ಕಂಧದಲ್ಲಿ ಸಂಧಿಗಳು, 35 ರಿಂದ ಕೊನೆಯ ವರೆಗೆ ಪೂರ್ಣವಾಗಿಯೂ, 34 ನೆಯದು ಅಪೂರ್ಣವಾಗಿಯೂ ಇವೆ. ಸ್ವಲ್ಪ ಶಿಥಿಲ. ಬರೆವಣಿಗೆ ಉತ್ತಮ. ತಪ್ಪುಗಳುಂಟು. ಕವಿ ನಿತ್ಯಾತ್ಮ ಶುಕಯೋಗಿ. ಹಿಂದೆ ವರ್ಣಿತವಾದ ಗ್ರಂಥವೇ ಸರಿ.

ಗ್ರಂಥದ ಕಡೆಯಲ್ಲಿ ಈ ರೀತಿ ಬರೆದಿದೆ :—' ಕರಿಯಣ್ಣ ಬರೆದ ದಶಮಸ್ಕಂಧ.'

No. 178 ಭಾಗವತ.

BHĀGAVATA.

Substance, palm-leaf. Size, $15\frac{1}{2}$ × 1 inches. Pages, 306. Lines, 5 on a page. Character, Kanarese. Condition, very much injured. Appearance, old. Mode of writing, not bad, but not free from mistakes.

Contains the Sandhis 38 to 55 complete in the tenth skandha.

Same work as the above.

(ವಿ.ವಿ.)—

ಭಾಗವತ ದಶಮಸ್ಕಂಧ ಅಸಮಗ್ರ. ಬಹು ಶಿಥಿಲ. ಅಕ್ಷರಗಳು ಸಾಮಾನ್ಯ. ಗ್ರಂಥ ಪಾತವುಂಟು. ಕವಿ ನಿತ್ಯಾತ್ಮ ಶುಕಯೋಗಿ. ಹಿಂದೆ ವರ್ಣಿತವಾದ ಗ್ರಂಥವೇ ಸರಿ.

No. 179. ಭಾಗವತ.

BHĀGAVATA.

Substance, palm-leaf. Size, $16\frac{3}{8} \times 1\frac{7}{79}$ inches. Page, 34. Lines, 3 on a page. Character, Kanarese. Condition, very much injured. Appearance, old. Mode of writing, good, but not free from mistakes.

Contains the Syamantakōpākhyāna complete.

Same work as the above.

(ವಿ.ವಿ.)—

ಭಾಗವತದಲ್ಲಿ ಸ್ಯಮಂತಕೋಪಾಖ್ಯಾನ ಸಮಗ್ರ. ಅತಿ ಶಿಥಿಲ. ಲಿಪಿ ಚೆನ್ನಾಗಿದೆ. ಗ್ರಂಥಪಾತ ಸ್ವಲ್ಪವುಂಟು. ಕವಿ ನಿತ್ಯಾತ್ಮ ಶುಕಯೋಗಿ. ಹಿಂದೆ ವರ್ಣಿತವಾದ ಗ್ರಂಥವೇಸರಿ.

No. 180. ಭಾಗವತ.

BHĀGAVATA.

Substance, Śrītāla. Size, $20\frac{1}{4} \times 2$ inches. Pages, 105. Lines, 12 on a page. Character, Kanarese. Condition, injured. Appearance, old. Mode of writing, good, but not free from mistakes.

Contains the eleventh Skaudha complete.

For other particulars see under No. 139 *ante*.

Beginning :

ಸೂ ॥ ಮೇದಿನಿಯು ಭಾರವನು ತಿದ್ದಲು ।
ವೇದವಂದಿತ ಕೃಷ್ಣ ಬಳಿಕಾ ।
ಯಾದವರಿಗೆ ಮುನೀಶ್ವರರ ಶಾಪವನು ಮಾಡಿಸಿದ ॥

ಶ್ರೀಲಕುಮಿಯುರಸನನೆ ಕಮಲಜ ।
ಶೂಲಿವಂದಿತ ಖಚರ ಭಕ್ತಜ ।
ನಾಳಹೃದಯುನಿವಾಸ ಮುನಿಜನವಂದ್ಯ ಶುಭಚರಿತ ॥

ಕಾಲಕರ್ಮವಿದೂರ ನಿಗಮಾ ।
ಜಾಲಸಂಸ್ತುತ ಮಹಿಮ ವೇಣುವಿ ।
ಲೋಲನೆನಿಸುವ ಗೋಪಿನಾಥನು ಸಲಹುಗೆಮ್ಮುವನು ॥

ಶಿವನೆ ಶಂಕರ ಭರ್ಗ ಭಯಹರ ।
ಭವನೆ ಭಾವಾತೀತಮಹಿಮನೆ ।
ಭುವನದೊಡೆಯನೆ ಶರಣು ಜನದಭಿಮಾನವರ್ಧನನೆ ॥

ರವಿಶಶಾಂಕಾನಲನನೇತ್ರನೆ ।
ನವರಸಂಗಳನಿತ್ತು ಕಥೆಯನು ।
ಅವತು ಮಾಡಭಯಪ್ರದಾಯಕ ಸಾಂದ್ರಸೌಭಗನೆ ।

* * * *

ಎಲೆ ಕಿರೀಟಿಯು ಮೊಮ್ಮ ಕೇಳಿಲೀ ।
ಯಿಳೆಯ ದಾನವರೆಲ್ಲರನು ಹರಿ ।
ಹಲಧರನು ಯಾದವ ಭಟರು ಸಹಿತೊರಸಿ ನಿಮ್ಮವರ ॥

ಕಲಕಿದಗಣಿತ ಭುಜಬಲರನಾ ।
ನಳನಮಿತ್ರನ ಸುತನ ನಗರಿಗೆ ।
ಸಲಿಸಿಭೂಮಿಯ ತಿಣ್ಣ ಕೆಡಿಸಿದ ನಸುರಮರ್ದನನು ॥
ಕೌರವನ ದ್ಯೂತದಲಿ ದ್ರುಪದಕು ।
ಮಾರಿಯಂಬರಹರಣ ಲಾಕ್ಷಾ ।
ಗಾರದಾಹನವೆಂಬ ಬಹಳಪರಾಧವನು ಕಂಡು ॥

ವೀರಕುಂತೀ ಸುತರು ಕೋಪಾ ।
ಗಾರದೃಷ್ಟಿಗಳಾಗ ಲವರನು ।
ಧಾರಿಣಿಯ ಹೋಣವಡಿಸಿ ಮುರವರ ನಧಿಕಕರುಣದಲಿ ॥
ಇಂತು ಪಾಂಡವರನು ನಿಮಿತ್ತವ ।
ನಂತ್ರಕಾಂತಕ ಮಾಡಿ ಕೊಡಿದ ।
ನಂತದಕ್ಷೋಹಿಣಿಯ ನಾಯಕರನು ವಿನೋದದಲಿ ॥

ಅಂತಗಾಣಿಸಿ ಧರೆಯ ಪಟ್ಟವ ।
ನಂತಕನ ತನಯನಲಿ ಮಾಡಿ ಮ ।
ಹಾಂತಮನುಮೆಱೆದನು ಭಕುತವಾತ್ಸಲ್ಯ ಗುಣದಲ್ಲಿ ॥

* * * *

ಭಾಗವತವರ ನಿನಗೆ ದ್ವಿಜಶಾ ।
ಪಾಗಮನ ತಾನಿಲ್ಲ ಯದುಕುಲ ।
ಸಾಗರನೆ ಕುಂಭಜನು ನೀಡಿದ ಪೊಱಗಿದರಬಲೆಗೆ ॥
ರಾಗವನು ಬಿಡು ಬಂಧುಜನದಲಿ ।
ಭಾಗವತನೇ ಎಂದು ಕರುಣಾ ।
ಸಾಗರನು ತನ್ನೊಚ್ಚತದ ಭಕ್ತನನು ಪಾಲಿಸಿದ ॥

ತಪ್ಪಿಸಿದನುದ್ಧವಗೆ ಶಾಪವ ।
ತಪ್ಪಿಸಿದುದಿಲ್ಲಳದ ಯಾದವ ।
ದರ್ಪಕರಿಗಸುರಾತಿ ಲೀಲಾಮಾತ್ರದಲಿ ತನ್ನ ॥

ವಿಪ್ರವಾಕ್ಯವ ಪೊಱತೆಯುಲೀಪರಿ ।
ತಪ್ಪದೆ ಸದಾನಂದನನು ಕಂ ।
ದರ್ಪಪಿತ ನಿತ್ಯಾತ್ಮ ಗೋಪೀನಾಥ ಸಲಹುವನು ॥

ಪ್ರಥಮ ಸಂಧಿ ಸಮಾಪ್ತಂ.

Colophon :

ಭಾಗವತ ಧರ್ಮವನುಭಕ್ತಿವಿ ।
ಭಾಗವನು ಕೇಳದನು ನೀ ನವ ।
ಯೋಗಿಗಳು ತಾಲೋಕ ವಿರಹಿತರೆಂಬ ವಾಕ್ಯದಲಿ ॥

* * * *

ನಾಯಿಗಳು ಪೆಣ್ಣಾಯಿಗಳನವು ।
ಬಾಯಿ ತೆಱೆದಂಜಿಸಲು ಬಿಡದವೊ ।
ಲಾಯತದ ಹಿಂಗಾಲಲೊದೆದರೆ ಬಿಡವು ತಾವೀಗ ॥
ಸಾಯಸದೆ ಬಳವಿಡದ ವೋಲೀ ।
ಕಾಯವಱಿವುದ ನಱಿಯದಾವ ।
ನ್ಯಾಯಕೆಳಸುವ ಪೋಲ್ನರರು ಬಯಸುವರು ಹೆಂಗಳನು ॥

ಎನಲು ನಸುನಗುತಚ್ಯುತನು ಕೇ ।
ಳೆನುತ ತನ್ನಯ ಮಾಯೆಯಿಂದಲೆ ।
ತನುವಿನಲಿ ತಾನೆಂಬಭ್ರಮೆ ಯಾಯಿತ್ತು ಮೂಢರಿಗೆ ॥
ಮನವುತಾವೈಕಾರಿಕವು ಸ ।
ಚ್ಚಿನುಮಯನು ತಾನೊಗೆದು ಮುಕುರವ ।
ಘನವೆನಿಪ ದುಃಖೌಘರಜಮುಸುಕುವುದು ಕೇಳಿತೆಂದ ॥

ರಜವಕೂಡಿದ ಮನವು ವಿಷಯ ।
ವ್ರಜವ ನೆನೆವುದು ಭೋಗದಲಿ ತಾ ।
ಸೃಜಿಸುವುದು ಸಂಕಲ್ಪವನು ಬಳಿಕೀಮನುಜರೊಳಗೆ ।
ಗಜರಥಾದಿಯನುಳ್ಳ ಭೂಮಿ ।
ಭೂಜರ ರೂಢಿಯು ಸಿರಿಯು ಪೆಂಗಳ ।
ಭಜನೆಯನು ಲೇಸೆಂದು ಬಗೆವುದು ಮಗನೆ ಕೇಳಿತೆಂದ ॥

End :

ಆದುವೇಕಾದಶಕೆ ಸಂಧಿಗ ।
ಳಾದಮೂವತ್ತಾಱು ಪದವದ ।
ಕಾದವಾಸಾಸಿರದವೈ ನೂಱೆನಲು ಯೆಂಭತ್ತು ॥
ಮೇದಿನಿಗೆ ಹಿತವಾಗಿ ಸಜ್ಜನ ।
ರೋದಿ ಸುಖಿಸಲು ರಚಿಸಿದನು ನಿಜ ।
ವಾದ ಸತ್ತ್ವವಿಚಾರವು ವಿಟ್ಠಲನಾಥೇನಿಕೃತಿಯು ॥

ನಿರುಪಮಾಚ್ಯುತ ಕೃಷ್ಣರಾಯರ ।

ಪರಮತೇಜಃ ಪುಂಜವೇ ಚೇ ।
ತರಿಸಿ ಗುರುರೂಪಾಗಿ ಭಾಗವತಾಂತರಂಗವನು ॥
ಧರೆಗೆ ಕನ್ನಡವಾಗಿ ತೆಗೆದು ।
ದ್ಧರಿಸಿ ಕಡೆಗಾಣಿಸಿದನತ್ಯಾ ।
ಶ್ಚರಿಯವೆನಲು ಸದಾಚ್ಯುತಾರಣ್ಯಾಖ್ಯಯತಿರಾಯ ॥

ಉತ್ತಮಾಂಗದಲಖಿಳಶ್ರುತಿಗಳು ।
ಚಿತ್ತದಕ್ಷಿಯುಗಂಗಳಲಿ ಕೃಪೆ ।
ಶಕ್ತಸುಮಹಾವಾಕ್ಯಮಂತ್ರೌಘಗಳು ವಾಕ್ಕಿನಲಿ ॥
ಮೊತ್ತದಣಿಮಾದಿಗಳು ಕರದಲಿ ।
ಯುತ್ತಮದ ಪದದಲ್ಲಿ ತೀರ್ಥೋರ್ ।
ತೃಪ್ತಿಗಾಶ್ರಯ ನಚ್ಯುತಾರಣ್ಯಾಖ್ಯ ಯತಿರಾಯ ॥

Colophon:

ಅಂತುಸಂಧಿ 36 ಕ್ಕಂ ಏಕಾದಶ ಸ್ಕಂಧಂ ಸಮಾಪ್ತಂ.

(ವಿ.ವಿ.)—

ಭಾಗವತ ಏಕಾದಶಸ್ಕಂಧ ಸಮಗ್ರ. ಶಿಥಿಲ. ಲಿಪಿ ಉತ್ತಮವಾದುದು. ತಪ್ಪುಗಳುಂಟು. ಮುದ್ರಿತ ಪುಸ್ತಕಕ್ಕಿಂತಲೂ ಇದರಲ್ಲಿ ಕೆಲವೆಡೆ ಉತ್ತಮವಾದ ಪಾಠವು ದೊರೆಯುವುದು. ಕವಿ ನಿತ್ಯಾತ್ಮ ಶುಕಯೋಗಿ. ಉಳಿದ ವಿಷಯಗಳನ್ನು ಹಿಂದೆ ವರ್ಣಿತವಾಗಿರುವ ೧೪೯ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

No. **181**. ಭಾಗವತ.

BHĀGAVATA.

Substance, palm-leaf. Size, $10\frac{3}{8} \times 1\frac{5}{8}$ inches. Pages, 100. Lines, 9 on a page. Character, Kanarese. Condition, slightly injured. Appearance, old. Mode of writing, not bad, but not free from mistakes.

Contains the Adhyāyās 1 to 13 complete and 14th incomplete in the eleventh Skandha.

Same work as the above.

(ವಿ.ವಿ.)—

ಭಾಗವತದ ಏಕಾದಶಸ್ಕಂಧದಲ್ಲಿ ಒಂದರಿಂದ ಹದಿಮೂರು ಅಧ್ಯಾಯಗಳು ಪೂರ್ಣವಾಗಿಯೂ, ಹದಿನಾಲ್ಕನೆಯದು ಅಸಮಗ್ರವಾಗಿಯೂ ಇವೆ. ಸ್ವಲ್ಪ ಶಿಥಿಲ. ಬರೆವಣಿಗೆ ಸಾಮಾನ್ಯ. ಕವಿ ನಿತ್ಯಾತ್ಮಶುಕಯೋಗಿ. ಹಿಂದೆ ವರ್ಣಿತವಾದ ಗ್ರಂಥವೇ ಸರಿ.

No. 182. ಭಾಗವತ.

BHĀGAVATA.

Substance, Śrītāḷa. Size, 18 × 2⅓ inches. Pages, 118. Lines, 12 on a page. Character, Kanarese. Condition, good. Appearance, old. Mode of writing, good.

Contains the eleventh Skandha complete.

Similar to the work described above. Though the version is different, the author seems to be the same as Nityātmaśukayōgi.

Beginning :

ಸೂ ॥ ನಿಗಮ ಸಿದ್ಧವನಂದು ನಿಸ್ಸಂ ।
ಗಿಗಳು ಪೇಳ್ದಂದವನು ಪುಂಗವ ।
ನಿಗೆ ಹಿಮಾದ್ರಿಯ ತೀರದಲಿ ನಾರದನು ವರ್ಣಿಸಿದ ॥
ಮುನಿಪ ! ಕೇಳ್ನವಯೋಗಿಗಳು ಪೇ ।
ಳ್ದನಿತುವಂ ಪೂರ್ವದಲಿ ವಸುದೇ ।
ವನಿಗೆ ಪೇಳಿದೆ ನಾಪ್ರಕಾರದ ಲಾಮಹಾಕಥೆಯ ॥

ನಿನಗೆ ಹೇಳುವೆನೆಂದು ಕೇಳುವು ।
ದೆನುತ ದೇವಜ್ಯೇಷ್ಠ ನಾದಾ ।
ವನಜ ಪೀಠನ ಪುತ್ರನಾಡಿದಡಾತನಿಂತೆಂದ ॥
ಆವ ಕಥೆಯನು ಹೇಳಿದಿರಿ ವಸು ।
ದೇವನಿಗೆ ತತ್ಕಥೆಯನುಸುರೆಂ ।
ದಾವಿರಿಂಚಿಯ ಸುತನಕೇಳಲು ನಗುತ ನಾರದನು ॥

ದೇವಕೀನಂದನನ ಮಹಿಮೆಯ ।
ನಾವಿದೇಹ ನೃಪಾಲಗಂದು ಮ ।
ಹಾವಿವೇಕಿಗಳುಸುರಿದುದನೊಱಹಿದೆನು ತಾನೆಂದ ॥
ಏನ ಕೇಳಿದ ನಾಕಯೋಗಿಗ
ಳೇನನುಸುರಿದರದನೆ ಹೇಳೆನ ।
ಲಾನರೇಂದ್ರನು ಭವಸಮುದ್ರವ ದಾಂಟುವಂದವನು ॥

ಜ್ಞಾನ ಸಾಧನಗಳನು ತತ್ವ ।
ಜ್ಞಾನದಿಂದಹ ಗತಿಯನಿಹಪರ ।
ಹಾನಿಯಹ ರೀತಿಯನು ಭಾಗವತೋತ್ತಮರನೆಂದ ॥

* * * *

ಸ್ನಾನ ಶೌಚಾಧ್ಯಯನ ವ್ರತತಪ ।
ದಾನಮೌನೋಪಾಸ ಹೋಮ ವಿ ।
ಧಾನಕರ್ಮೇಂದ್ರಿಯ ವಿನಿಗ್ರಹ ನಿಯಮವಿವು ದಶತ್ರ ॥

ಮಾನವರಿಗಿವು ದೊಱಕಲಱಿಯವು ।
ದಾನವಾರಿಯ ಕೃಪೆ ಯದುಳ್ಳೊಡೆ ।
ತಾನೆಲಭಿಸುವುದಲ್ಲದಿರೆ ದುರ್ಲಭವಲಾ ಎಂದ ॥
ಪರಮನಿಗಮ ರಹಸ್ಯವನು ವಿ ।
ಸ್ತರಿಸಿ ನವಯೋಗಿಗಳು ಜನಕಂ ।
ಗುರುತರಪ್ರೇಮದಲಿ ಪೇಳ್ದಿಂದವನು ಪುಂಗವಗೆ ॥

ಸುರಮುನೀಶ್ವರನುಸುರಿದನು ಯಿದ ।
ನರರು ಕೇಳದೊಡವರಿಗಾ ನರ
ಹರಿಯ ಕೃಪೆಯಿಂದಹುದು ಪರತರವಾದ ಸದ್ಗತಿಯು ॥

Colophon :

ಪೀಠಿಕಾಧ್ಯಾಯಂ ಸಮಾಪ್ತಂ.

ಭಯವ ನೊದಗಿಸುತಿಹುದು ಲೋಕ ।
ತ್ರಯಕೆ ದುರ್ಜಯ ವಾದುದಾ ಮಾ ।
ಯೆಯ ಗುಣತ್ರಯವೆನುತಲದ ವಿವರಿಸಿದ ನಾಮುನಿಪ ॥

*   *   *   *

ಮುಱಿದು ತಮನೆಂಬಸುರನಂ ಪಂ ।
ಕರುಹನಾಭನು ವೇದವನು ಸರ ।
ಸಿರುಹಸಂಭವಗಿತ್ತನೆಂಬುದನರಿಯರೇ ? ನರರು ॥
ಅರಿಯಲೀಸದು ಮಾಯೆ ಮಾಯಾ ।
ನರಚರಿತ್ರದ ವಿಷ್ಣುವಾತನ ।
ಲೆಱಗಿಸದೆ ಚಿತ್ತವನು ತಾಪತ್ರಯದೊಳಹರೆಂದ ॥

ಧರಣಿಯನು ನಿಜದ್ರಂಷ್ಟ್ರ ದಗ್ರದ ।
ಲಿರಿಸಿ ತಂದ ವರಾಹನಂ ಮಂ ।
ದರ ಮಹಾಬ್ಧಿಯೊ ಳಿಳಿಯಲೆತ್ತಿದ ಕೂರ್ಮಮೂರ್ತಿಯನು ॥
ಸುರರಿಗಮೃತವ ನಿತ್ತು ದೈತ್ಯರ ।
ನೆಱವಿಯನು ಸದೆದವನ ನಱಿಯದೆ ।
ನರರು ಸಂಸಾರಾಬ್ಧಿಯಲಿ ಮುಳುಗಾಡು ತಿಹರೆಂದ ॥

End :

ಅಂದು ಪಾರ್ಥಗೆ ತನ್ನ ನಿಜವ ಮು ।
ಕುಂದ ಕಾಣಿಸಿ ಯವನ ಹೃದಯದ ।
ಅಂಧಕಾರವ ಕೆಡಿಸಿ ಕಲಹಕೆ ನಡೆಸಿದಂದದಲಿ ॥
ಇಂದು ಕನಕನಕೃತಿ ಮನುಷ್ಯರ ।
ಮಂದಬುದ್ಧಿಯ ಬಿಡಿಸಿ ನಿತ್ಯಾ ।
ನಂದಮಯನಾದಾ ಪರಬ್ರಹ್ಮವನೆ ತೋರುವದು ॥

ಕಾಮಕಗ್ಗದ ತಲೆಯು ಕೆಡಿಸುವ ।
ಸೋಮಕಿರಣವಿದೀಗ ರಾಜಸ ।
ತಾಮಸಾಭ್ರವ ಕಿತ್ತುಬಿಡುವ ಪ್ರಚಂಡಮಾರುತನು ॥
ಈ ಮಹಾಕಥೆ ಯಿದನು ಕೇಳಿದ ।
ಡಾ ಮಹಾತ್ಮರಗೊಲಿದು ಅಸುರವಿ ।
ರಾಮ ನರಹರಿ ನಗುತ ಕೊಡುವನು ಪರಮಪದವಿಯನು ॥

Colophon:

ಇಂತು ಶ್ರೀಮನ್ಮಹಾ ಶುಕಯೋಗೀಂದ್ರ ವಿರಚಿತ ಭಾಗವತ ಪುರಾಣದೊಳ್ ಕರ್ಣಾಟಕ ಶಬ್ದಾಲಂಕಾರವಾದ ಭಾಮಿನೀಷಟ್ಪದಿನಿಕಾಯ ಶ್ರೀಮದೇಕಾದಶಸ್ಕಂಧದೊಳ್ ಸಪ್ತವಿಂಶಾಧ್ಯಾಯವು.

ಬೃಹ ದೇಕಾದಶಸ್ಕಂಧಂ ಸಮಾಪ್ತಂ.

(ವಿ.ವಿ.)—

ಭಾಗವತ ಬೃಹದೇಕಾದಶಸ್ಕಂಧ ಸಮಗ್ರ. ಅಕ್ಷರಗಳು ಚೆನ್ನಾಗಿವೆ. ಸ್ವಲ್ಪ ತಪ್ಪುಗಳುಂಟು. ಕವಿಯ ವಿಷಯವೇ ಮೊದಲಾದ ಸಂಗತಿಗಳು ಈ ಗ್ರಂಥದಿಂದ ತಿಳಿದು ಬರುವುದಿಲ್ಲ.(?) ಕೊನೆಯಲ್ಲಿ ಭಾಗವತದ ಕೆಲವು ಪದ್ಯಗಳುಳ್ಳ ನಾಲ್ಕೈದು ಓಲೆಗಳಿವೆ. ಆದರೆ ಈ ಪದ್ಯಗಳು ಹೇಗೆ ಹೇಗೆ ನೋಡಿದರೂ ಅನುಕ್ರಮವಾಗಿಲ್ಲ.

No. 183. ಭಾಗವತ.

BHĀGAVATA.

Substance, Śrītāḷa. Size, $18 \times 2\frac{3}{8}$ inches. Pages, 20. Lines, 12 on a page. Character, Kanarese Condition, good. Appearance, old. Mode of writing, good.

Contains the Sandhis 1 to 5 complete in the eleventh Skandha.

Similar to the work described under No. 139 *ante*; by Nityātma-śukayōgi.

(ವಿ.ವಿ.)—

ಏಕಾದಶ ಸ್ಕಂಧದಲ್ಲಿ 1 ರಿಂದ 5 ಸಂಧಿಗಳಿವೆ. ಲಿಪಿ ಉತ್ತಮ. ಕವಿ ನಿತ್ಯಾತ್ಮ ಶುಕಯೋಗಿ. ಉಳಿದ ವಿಷಯಗಳನ್ನು ೧೩೯ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

No. 184. ಭಾಗವತ.

BHĀGAVATA.

Substance, palm-leaf. Size, $17\frac{3}{4} \times 1\frac{1}{2}$ inches. Pages, 39. Lines, 7 on a page. Character, Kanarese. Condition, very much injured. Appearance, old. Mode of writing, good.

Contains the Sandhis 1 to 5 complete in the eleventh Skandha. by Nityātmaśukayōgi. For other particulars see under No. 139 *ante*.

(ವಿ.ವಿ.)—

ಏಕಾದಶ ಸ್ಕಂಧದಲ್ಲಿ 1 ರಿಂದ 5 ಸಂಧಿಗಳಿವೆ. ಲಿಪಿ ಉತ್ತಮ. ಕವಿ ನಿತ್ಯಾತ್ಮ ಶುಕ ಯೋಗಿ. ಉಳಿದ ವಿಷಯಗಳನ್ನು ೧೩೯ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

No. 185. ಭಾಗವತ.

BHĀGAVATA.

Substance, Śrītāḷa. Size, 19 × 1¾ inches. Pages, 28. Lines, 10 on a page. Character, Kanarese. Condition, slightly injured. Appearance, old. Mode of writing, good.

Contains the Sandhis 1 to 5 complete in the eleventh Skandha. by Nityātmaśukayōgi. For other particulars see under No. 139 *ante*.

(ವಿ. ವಿ.)—

ಏಕಾದಶ ಸ್ಕಂಧದಲ್ಲಿ 1 ರಿಂದ 5 ಸಂಧಿಗಳಿವೆ. ಲಿಪಿ ಉತ್ತಮ. ಕವಿ ನಿತ್ಯಾತ್ಮ ಶುಕ ಯೋಗಿ. ಉಳಿದ ವಿಷಯಗಳನ್ನು ೧೩೯ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

No. 186. ಭಾಗವತ.

BHĀGAVATA.

Substance, Śrītāḷa. Size, 20¼ × 2 inches. Pages, 8. Lines, 10 on a page. Character, Kanarese. Condition, injured. Appearance, old. Mode of writting, good, but not free from mistakes.

Contains the twelfth Skandha complete. For other particulars see under No. 139 *ante*.

Beginning:

ಸೂ ॥ ಕಲಿಯುಗದೊಳುದಿಸಿದ ಮಹೀಪತಿ ।
ತಿಲಕ ರನ್ವಯ ಚರಿತಗಳ ನತಿ ।
ಸುಲಭದಿಂ ದವನಿಪಗೆ ಶುಕಯೋಗೀಂದ್ರ ವಿವರಿಸಿದ ॥
ಕೇಳಿರೈ ಮುನಿಗಳಿರ ಬಹಳ ವಿ ।
ಶಾಲತರವಹ ಸೋಮಸೂರ್ಯರ ।
ಪೀಳಿಗೆಗಳುರೆ ಕಲಿಯುಗದ ಪ್ರಥಮಾಂಶದಂತ್ಯದಲಿ ॥

ಜೋಱಿಸಲು ಮಾಗಧನ ಕುಲದನು ।
ಕೂಲನೆನಿಪ ಪುರಂಜನಾಖ್ಯ ನೃ ।
ಪಾಲನಾಳುತ್ತ ಲೀಲೆಗವನಿಯು ನತಿಸತೀಜದಲಿ ॥
ಆತನನು ತನ್ಮಂತ್ರಿ ಶುಖನೆಂ ।
ಬಾತನಂಜದೆ ಕೊಂದು ಬಳಿಕಂ ।
ತಾತನಾಕ್ಷಣ ತನ್ನಮಗ ಪ್ರದ್ಯೋತನೆಂಬವಗೆ ॥
ಭೂತಳದ ರಾಜ್ಯಾಧಿಪತ್ಯವ ।
ನೋತು ಸಲಿಸುವ ನಾನೃಪನ ತನು ।
ಜಾತತಾರಕ ನಾತಗಾಸುವಿಶಾಖ ನುದಯಿಸುವ ॥
ನಂದಿವರ್ಧನ ನಾತ್ಮನಾತ್ಮಜ ।
ನೆಂದಿವರು ಪ್ರದ್ಯೋತ ಪಂಚಕ ।
ರಂದವಿಗೆ ನೆಜೆ ನೂರಮೂವತ್ತೆಂಟು ವರುಷಗಳ ॥
ಹಿಂದುಗಳೆಯಲು ಧರೆಯನಾಳ್ವರು ॥
ನಂಧಿವರ್ಧನ ನೃಪನ ನಾತನ ।
ನಂದು ಸಚಿವನೆ ಕೊಂದು ತಾನಾಳುವನು ಭೂತಳವ ॥

* * * *

ನೀರಬೊಬ್ಬುಳಿಕೆಯು ವೊಲೆಮ್ಮಶ ।
ರೀರ ವಧ್ರುವವೆಂಬುದನು ಕ ।
ಣ್ಣಾರೆ ಕಾಣುತ ಮತ್ತೆಯಾ ತದ್ದೇಹವನು ನಂಬಿ ॥
ವೈರಿನೃಪರನು ಕೆಡಿಸಿ ಬಾಳ್ವವಿ ।
ಚಾರವನು ಮಾಡುತ್ತಲಿಹ ವೈ ।
ಕಾರದಜ್ಞಾನಿಗಳ ಸುಡಲೆನುತಿರ್ಪಳಾ ಧರಣಿ ॥
ಮುನ್ನಿನತಿಬಲರಿಂದ ತಾವ್ ಸಂ ।
ಪನ್ನರೇ ? ಯಾಕಟಕಟ! ಬಯಲಿಗೆ ।
ಬನ್ನಬಡುತಿರಲೇಕೆ ಭವದುಃಖವನು ಪರಿಹರಿಸಿ ।
ತನ್ನ ನಿಜಪದ ಜೀವ ಹರಿಯನು ।
ಬಿನ್ನವಿಲ್ಲದೆ ಭಜಿಸಿ ಮುಕ್ತಿಸು ।
ಖೋನ್ನತಿಯ ಸಿರಿ ಪಡೆವುದೇ ಜಯವೆಂದಳಾ ಧರಣಿ ॥
ಎಂದು ಬಿಡದೀಪರಿಯು ಲೇಸಲೆ ।
ಸಂದು ಭೂಮಿನಾರಿ ಚಿಂತಿಸಿ ।
ಮಂದಮತಿ ಯೆನಿಪರಸುಗಳ ನುಡಿ ಜಱಿತೆವೃತಿಹಳಾಗಿ ॥
ಬೆಂದ ಸಂಸಾರಾಶೆಯನು ಮಡಿ ।
ದಿಂದಿರಾವಲ್ಲಭನ ಚರಣ ।
ದ್ವಂದ್ವವನು ಮರೆಯೊಕ್ಕು ಸುಖಿಯಾಗೆಂದ ನಾಮುನಿಪ ॥

Colophon:

ಪ್ರಥಮಸಂಧಿ ಸಮಾಪ್ತಂ.

ವರಪರೀಕ್ಷಿದ್ರಾಜ ನಳಿವನು ।
ಪಿರಿಯಾ ಮಾರ್ಕಂಡೇಯಮುನಿಪನ ।
ಚರಿತವನು ಹೇಳದನು ಸೂತಜ ನಖಿಳಮುನಿಗಳಿಗೆ ॥

* * * *

End:

ಆದಿನಾರಾಯಣ ನಜಂಗಜ ।
ನಾದರಿಸಿ ನಾರದಗೆ ನಾರದ ।
ಬಾದರಾಯಣಮುನಿಗೆ ಯಾಮುನಿ ಯೊಲವಿನಲಿ ಶುಕಗೆ ॥
ಭೇದವಿಲ್ಲದೆ ಶುಕನು ಚಿತ್ತಾ ।
ಹ್ಲಾದದಿಂ ನೃಪತಿಲಕ ಗೊಱಿದುದ ।
ನೈದೆ ನಿಮ್ಮನಿಬರಿಗೆ ವಿಸ್ತರಿಸಿದೆನು ನಾನೆಂದ ॥
ಅಸಮ ಕಲಿಯುಗ ದವನಿಪರ ರೂ ।
ಢಿಸಿದ ಕುಲಚಾರಿತ್ರಗಳ ನತಿ ।
ಕುಶಲನೆನಿಪ ಪರೀಕ್ಷಿತನ ದೇಹಾವಸಾನವನು ॥
ಹೊಸಫಲಂಗಳ ವೇಱು ವೀ ದ್ವಾ ।
ದಶಮಹಾಸ್ಕಂಧಾಂತರಂಗದ ।
ದೆಸೆಯಿದೆನ ಲೊಪೆದನು ಸದಾಚ್ಯುತಕೃಷ್ಣರೊಲುಮೆಯಾಲಿ ॥
ಸದಮಳ ದ್ವಾದಶಮಹಾಸ್ಕಂ ।
ಧದಲೆಱಡು ಸಂಧಿಗ ಳವಕ್ಕೊದ ।
ವಿದ ಪದಂಗಳು ತಾನವೆಂಭತ್ತೇಳೆನಿಸುತಿಹವು ॥
ವಿದಿತವಿದು ಬೋಧಾತುಮನಗಡ ।
ಗೊದವಿ ಭಾಗವತವನು ವಿಸ್ತರಿ ।
ಸಿದನು ಸತ್ಕವಿ ಚಾಟುವಿಟ್ಠಲನಾಥನರ್ಥಿಯಾಲಿ ॥
ಸದಮ್ಮಳಾಚ್ಯುತ ಕೃಷ್ಣರಾಯನ ।
ಹೃದಯವೆನಿಸುವ ಭಾಗವತ ಶಾ ।
ಸ್ತ್ರದ ಮಹಾಸತ್ಕೀರ್ತಿ ಲಕ್ಷ್ಮಿಯ ವಿಜಯ ಮಂದಿರದ ॥
ತುದಿಯಕಲಶಸ್ಥಾನವೆನಲೊ ।
ಪ್ಪಿದನು ಪಾಲಿಸುತೊಲಿದು ತನ್ನಯ ।
ಪದವಿಯೊಲುಮೆಯೊ ಳಚ್ಯುತಾರಣ್ಯಾಖ್ಯಯತಿರಾಯ ॥

Colophon: ಅಂತು ಸಂಧಿಸ್ತ (?) ಕ್ಕಂ ದ್ವಾದಶಸ್ಕಂಧಂ ಸಮಾಪ್ತಂ.

(ವಿ.ವಿ.)—

ಭಾಗವತ ದ್ವಾದಶಸ್ಕಂಧ ಸಮಗ್ರ. ಶಿಥಿಲ. ಅಕ್ಷರಗಳು ಚೆನ್ನಾಗಿವೆ. ತಪ್ಪುಗ ಮುದ್ರಿತ ಪುಸ್ತಕಕ್ಕಿಂತಲೂ ಇದರಲ್ಲಿ ಕೆಲವೆಡೆ ಉತ್ತಮವಾದ ಪಾಠವು ದೊರೆ ಯುವುದು. ಕವಿ ನಿತ್ಯಾತ್ಮ ಶುಕಯೋಗಿ. ಉಳಿದ ವಿಷಯಗಳನ್ನು ಹಿಂದೆ ವರ್ಣಿತವಾಗಿರುವ ೧೩೯ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು

No. **187**. ಭಾಗವತ-

BHĀGAVATA.

Substance, Śrītāḷa. Size, 18 × 1½ inches. Pages, 10. Lines, 7 on a page. Character, Kanarese. Condition, much injured. Appaerance, old. Mode of writing, not bad.

Contains the twelfth Skandha complete.

Same work as the above.

Date of transcription :—Second day of the bright fortnight of the lunar month Jyēṣṭha in the year Svabhānu.

Name of the scribe :—Ayyaṇṇa who copied the manuscript for Kuppayya.

(ವಿ.ಪಿ.)—

ದ್ವಾದಶಸ್ಕಂಧ ಸಮಗ್ರ. ಶಿಥಿಲ. ಲಿಪಿ ಸಾಮಾನ್ಯ. ಗ್ರಂಥಪಾತ ಸ್ವಲ್ಪವುಂಟು. ಕವಿ ನಿತ್ಯಾತ್ಮ ಶುಕಯೋಗಿ. ಹಿಂದೆ ವರ್ಣಿತವಾದ ಗ್ರಂಥವೇ ಸರಿ.

No. **188**. ಭಾಗವತ-

BHĀGAVATA.

Substance, Śrītāḷa. Size, 18 × 2⅜ inches. Pages, 7. Lines, 12 on a page. Character, Kanarese. Condition, good. Appearance, old. Mode of writing, good, but not free from mistakes.

Contains the twelfth Skandha complete

Same work as the above.

(ವಿ.ವಿ.)—

ಭಾಗವತ ದ್ವಾದಶಸ್ಕಂಧ ಸಮಗ್ರ. ಲಿಪಿ ಉತ್ತಮ. ತಪ್ಪುಗಳಿವೆ. ಮುದ್ರಿತ ಪ್ರತಿಗಿಂತಲೂ ಇದರಲ್ಲಿ ಕೆಲವೆಡೆ ಶ್ಲಾಘ್ಯವಾದ ಪಾಠವು ದೊರೆಯುವುದು. ಕವಿ ನಿತ್ಯಾತ್ಮ ಶುಕಯೋಗಿ. ಹಿಂದೆ ವರ್ಣಿತವಾದ ಗ್ರಂಥವೇ ಸರಿ.

No. **189**. ಭಾಗವತ-

BHĀGAVATA.

Substance, palm-leaf. Size, 17¼ × 1½ inches. Pages, 14. Lines, 7 on a page. Character, Kanarese. Condition, very much injured. Appearance, old. Mode of writing, good, but not free from mistakes.

Contains the twelfth Skandha complete .

Same work as the above,

(ವಿ·ವಿ·)—

ಭಾಗವತ, ದ್ವಾದಶಸ್ಕಂಧ ಸಮಗ್ರ. ಅತಿ ಶಿಥಿಲ. ಲಿಪಿ ಉತ್ತಮ. ತಪ್ಪುಗಳಿವೆ. ಕವಿ ನಿತ್ಯಾತ್ಮ ಶುಕಯೋಗಿ.

No. 190. ಭಾಗವತ.

BHĀGAVATA.

Substance, Śrītāḷa. Size, 20¾ × 2 inches. Pages, 6. Lines, 9 on a page. Character, Kanarese. Condition, injured. Appearance, old. Mode of writing, good.

Wants the beginning and the end of the twelfth Skandha; otherwise complete.

Same work as the above.

(ವಿ.ವಿ.)—

ಭಾಗವತ ದ್ವಾದಶಸ್ಕಂಧದಲ್ಲಿ ಆದ್ಯಂತಗಳಲ್ಲಿ ಕೆಲವು ಪದ್ಯಗಳು ಮಾತ್ರ ಹೋಗಿವೆ. ಇಲ್ಲದಿದ್ದರೆ ಸಮಗ್ರವೆಂದೇ ಹೇಳ ಬಹುದಾಗಿದ್ದಿತು. ಶಿಥಿಲ. ಬರೆವಣಿಗೆ ಉತ್ತಮವಾದುದು. ಮುದ್ರಿತ ಪುಸ್ತಕಕ್ಕಿಂತಲೂ ಇದರಲ್ಲಿ ಕೆಲವೆಡೆ ಉತ್ತಮವಾದ ಪಾಠವು ದೊರೆಯುವುದು. ಕವಿ ನಿತ್ಯಾತ್ಮ ಶುಕಯೋಗಿ.

No. 191. ಭಾಗವತ ಕಥೆ.

BHĀGAVATA KATHE.

Substance, palm-leaf. Size, 20¼ × 1¼ inches. Pages, 54. Lines, 6 on a page. Character, Kanarese. Condition, very much injured. Appearance, old. Mode of writing, not bad, and not free from mistakes. The other work herein is Bhārata I-a.

Contains the Sandhis 2 to 10 complete, and 1st incomplete.

A poem in Sāngatya metre describing the story of the Sanskrit Bhāgavata. The name of author is not given.

Beginning :

ಹೃದಯದೊಳರ್ದ.........ನಾರ್ಥ ।
ವದನದಿ ಪೊಣ್ಮಿತೆಂಬಂತೆ ॥
ರದನದ ಕಾಂತಿ ಸೂಸಲು ಮೇದಿನಿಯೊಳು ।
ಪದು......ಸಂಭವ ನಿಂತೆಂದಂ ॥
ಕಂಡಿದೆ ಮೋರೆ ಕುಂದಿದೆ ಮೂರ್ತಿ ಗದ್ಗದ ।
ಪೊಂದಿದೆ ನುಡಿಯೊಖಳು ದುಃ ॥

ಬಂದುದೇತರ ದೆಸೆಯಿಂದೆನೆ ಬಿಸುಸುಯ್ಯು
ತ್ತಿಂದಳಾ ಧರಣಿ ಯಬ್ಜಜಗೆ ॥
ಒಡೆದುದು ಬೆನ್ನು ಕೂರ್ಮನ ಫಣಿಪನ ಪೆಡೆ ।
ಯುಡುಗಿದುದು ಕುಲ ಶೈಲಗಳು ॥
ಪುಡಿಯಾದವು ಕೆಡೆದುವು ದಿಗ್ಗಜಗಳು ।
ಪಡೆಯ ತಿಣ್ಣಕೆ ದುಷ್ಟ ನೃಪರ ॥
ತಾಳುವೆ ನೆಂತು ? ದಾನವರ ಭಾರವ ಮುಂದೆ ।
ಬಾಳುವೆ ನೆಂತಿದ ಧರಿಸಿ ॥
ಹೇಳುವೆನೆಂತೆನ್ನ ಬೇಸರನೆಲೆಕರು ।
ಣಾಳು ಚಿತ್ತೈಸುವುದೆನಲು ॥

* * *

ಇಂದಿರೆರಮಣ ಸುರೇಂದ್ರ ವಂದಿತಪಾದ ।
ನಂದನಂದನ ನಿತ್ಯಾನಂದ ॥
ಕಂದರ್ಪಜನಕ ಮಂದರಧರ ದೇವ ಮು ।
ಕುಂದ ರಕ್ಷಿಸು ನೀನೆಂದೆಂದುಂ ॥

ಮತ್ತಗೆ ದುರ್ಮಾರ್ಗ ವೃತ್ತಗೆ ನಿಂದೆಯು ।
ಪೊತ್ತಗೆ ಪರವೆಣ್ಗೆ ಮಾನವ ॥
ಇತ್ತಗೆ ನಿರ್ದಯು ಚಿತ್ತಗೆ ಪ್ರಾಯು ।
ಶ್ಚಿತ್ತವಲ್ಲವೆ ಹರಿನಾಮ ॥
ಹರಿವಿಲಾಸದೊಳೊಂದು ವದನದೆವದನೊಂದು ?।
ಚರಣವ ನೊಂದಕ್ಷರವ ॥
ಪರಮ ಭಕ್ತಿವೆಯೊಳಾದರಿಸಿದ ನರರಿಗೆ ।
ದೊರೆಕೊಳ್ವುದಿಹ ಪರಸೌಖ್ಯ ॥

Colophon :

ಪ್ರಥಮ ಸಂಧಿ ಸಮಾಪ್ತಂ.

ನಿರ್ಗುಣ ನಿರುಪಮ ನಿತ್ಯ ನಿರ್ಮಾಯನಿ ।
ಸರ್ಗಪ್ರಕಾಶ ಸರ್ವೇಶ ॥
ಭರ್ಗವಿನುತ ಭವಭಯಹರ ಸಲಹುವ ।
ವರ್ಗ ಲಕ್ಷ್ಮೀ ಪ್ರಾಣಕಾಂತ ॥

* * *

ತಾಯಚಿತ್ತಕೆ ಮುದ್ದ ತೋರುತ ಮೊಲೆವಾಲ ।
ನೀಯಬೇಕೆನಗೆಂಬಂತೆ ॥
ಬಾಯ ಬಿಡುತ ಕಂಡಳಾಗೋಪಿದೇವಿ ಪೊ ।
ರಾಯದ ಪದಿನಾಲ್ಕು ಜಗವ ॥

ನಾಕವನೆಲ್ಲಿರ್ಪ ಸುರರನೆರವಿಯು ಭೂ ।
ಲೋಕವ ನೆಲ್ಲಿರ್ಪ ನರರ ॥

ಭೀಕರ ದನುಜರು ಸಹಿತ ಪಾತಾಳವ ।
ನೇಕಕಾಲದಿ ಕಂಡಳಲ್ಲಿ ॥

ಹಲವು ಮಾತೇನು ? ಸ್ಥಾವರ ಜಂಗಮನು ತನ್ನ ।
ಮೊಲೆಯು ಬೇಡುವ ಬಾಲಕನೊಳ್ ॥

ಲಲನೆ ಕಂಡೆಚ್ಚರಿವಟ್ಟು ಬೆಚ್ಚಿದಳಂ ।
ದೆಲೆಲೆ ಯಿದೇನಿದೇ ನೆನುತ ॥

End:

ಒಂದೊಂದುಕಾಲನೆ ಹೆಜ್ಜೆಯಿಡುತ ತೋ ।
ಳೆಂದರೆ ತೂಗುತ ಕೈಯ ॥

ಇಂದಾಗೆ ಬಂತೆಲೆ ಹಿಂದೆ ಮುಂದೊಲೆವುತ ।
ಚಂದಚಂದದೊಳಾಡುತಿರ್ದ ॥

ಅಪ್ಪೋ ಅಪ್ಪೋ ಎಂದೆನೆ ಬಿಗಿದಪ್ಪ ।
ತುಪ್ಪಪ್ಪನೆ ಬೆಗಲೇರಿಕೊಳುತ ॥ (?)

ಕಪ್ಪುರಗರಡಿಗೆಯೆನೆ ಮುತ್ತ ನೀವಮು ।
ದ್ದೊಪ್ಪಿದುದಾ ಮುಕುಂದನೊಳ್ ॥

ಗಣನೆಯು ಪದಿನಾಲ್ಕು ಲೋಕದ ಜೀವರ ।
ಕುಣಿಸುವ ವಿಷ್ಣು ಗೋಪಿಯರು ॥

ಕುಣಿಸುವಂತಾಡುತಿರ್ದನು ಘನಮಹಿಮೆಯು ।
ನೆಣಿಸಲಳವೆ ನಿತ್ಯಾತುಮನ ॥

ಹರಸಖಾತ್ಮಜರ ಶಾಪವಿಮೋಚನವ ದಾಮೋ ।
ದರಘಟನ . . . ಕಥೆಯು ॥

ಧರೆಯೊಳಾಲಿಸಿ ಕೇಳ್ವ ನರರಿಗೆ ಭವಬಂಧ ।
ಪರಿಹರಿಸುವು ದಾಕ್ಷಣದೊಳ್ ॥

Colophon:

ಅಂತು ಸಂಧಿ ೧೦ ಕ್ಕಂ ಮಂಗಳಂ.

(ವಿ.ವಿ.)—

ಭಾಗವತ ಕಥೆ ೨ ರಿಂದ ೧೦ ಸಂಧಿಗಳು ಸಮಗ್ರ. ಮೊದಲನೆಯದು ಅಸಮಗ್ರ. ಅತಿ ಶಿಥಿಲ. ಅಕ್ಷರಗಳು ಸಾಮಾನ್ಯ. ಗ್ರಂಥಪಾತ ಸ್ವಲ್ಪವುಂಟು. ಕವಿಯಾರೆಂಬುದು ತಿಳಿಯುವುದಿಲ್ಲ. ಕವಿತೆಯನ್ನು ಮಾತ್ರ ಶ್ಲಾಘ್ಯವೆಂದೇ ಹೇಳಬಹುದು.

No. 192. ಭಾಗವತ (ವಚನ).
BHĀGAVATA (PROSE).

Substance, Śrītāḷa. Size, $18\frac{3}{4} \times 1\frac{7}{8}$ inches. Pages, 66. Lines, 9 on a page. Character, Kanarese. Condition, slightly injured. Appearance old. Mode of writing, good, but not free from mistakes.

Contains the Sandhis 3 to 5 complete and 2nd and 6th incomplete in the eighth skandha.

A prose version in Kanarese describing the story of the Sanskrit Bhāgavata. The name of the author is not given.

Beginning:

. . . . ತೋಳ, ವರಾಹ, ಕಾಡೆಮ್ಮೆ, ಶಲ್ಯಮೃಗ, ಗೋಪುಚ್ಛ, ಕಿರುಬುಲಿಗಳು, ಮರ್ಕಟ, ಮೊಲ, ಹುಲ್ಲೆ ಮೊದಲಾದುವು ಲಕ್ಷ್ಯವಲ್ಲದ ಕಂಡು ನಿರ್ಭಯಗಳಾಗಿ ಚರಿಸುತ್ತಿಹವು. ಇಂಥಾ ಗಜೇಂದ್ರನು ಬೇಸಗೆಯ ಬಿಸಿಲಿನಿಂದ ಬಳಲಿ ಮದಸುರಿವುತ ಅನೇಕ ಆನೆಗಳಂ ಕೂಡಿಕೊಂಡು, ಮದಪರಿಮಳಕೆರಗುವ ಭ್ರಮರಕುಲಗಳ ಝುಂಕಾರಗಳ ಕೇಳುತ್ತ, ಶೈತ್ಯ, ಸೌರಭ್ಯ, ಮಂದಮಾರುತ ತೀಡಲಾಗಿ, ಆಘ್ರಾಣಿಸಿ, ಈ ಸಮೀಪದಲ್ಲಿ ಸರೋವರವುಂಟೆಂದು ವಾಯು ಬಂದ ದಾರಿಗೊಂಡು ಹಿಂಡಕೂಡಿಕೊಂಡು ನಡೆದನು. ಅಲ್ಲಿ ನಿರ್ಮಲವಾಗಿದ್ದ ಸರೋವರವ ಕಂಡು ಹಿಂಡುಸಹಿತ ಹೊಕ್ಕನು. ಆ ಸರೋವರ, ಅಮೃತಾಯಮಾನವಾದ ಉದಕ ; ದಿವ್ಯ ಪರಿಮಳವಾದಂಥ ಉದಕವನ್ನು ಯಥೇಷ್ಟವಾಗಿ ಪಾನಮಾಡಿ ಮೇಲೆಲ್ಲಾ ಚಲ್ಲಿಕೊಂಡು ಬಳಲಿಕೆಯನ್ನೆಲ್ಲ ಪರಿಹರಿಸಿಕೊಂಡಿತು. ಎಲೈ ! ಪರೀಕ್ಷಿದ್ರಾಯ !! ಆವನಿಗೂ ಉದ್ರೇಕಸಲ್ಲದು. ಆ ವೇಳೆಯಲ್ಲಿ ಜಲಗ್ರಾಹವಾದ ಮೊಸಳೆ ತನ್ನಂ ಮೆಟ್ಟಿದ ಕೋಪದಿಂದ ಈ ಗಜೇಂದ್ರನ ಕಾಲ ಹಿಡಿದುಕೊಂಡಿತು.

* * * *

ಗಜ ಹೊರಯಿಂಕೆ ಎಳೆಯುವುದು. ಮೊಸಳೆ ಒಳಯಿಂಕೆ ಎಳೆಯುವುದು. ಹೀಗೆ ದೇವತೆಗಳ ಸಹಸ್ರ ವರುಷ ಯುದ್ಧಮಾಡಿದುವು. ಸತ್ವ ಕುಂದಿದುದಿಲ್ಲ. ದೇವತೆಗಳು ವಿಚಿತ್ರವಾಯ್ತೊಂದು ವಿಮಾನದಲ್ಲಿ ಬಂದು ನೋಡುತ್ತ ಇದ್ದರು. ಮೇಲೆ ಗಜೇಂದ್ರಗೆ ಧೈರ್ಯ, ಮನೋಬಲ, ಓಜಸ್ಸು, ಶರೀರ ಸತ್ವ, ಇವೆಲ್ಲ ಕ್ಷೀಣವಾಯಿತು. ಆ ಮೊಸಳೆ ನೀರೊಳಗಣ ಪ್ರಾಣಿ. ಜಲವೇ ಆಹಾರವಾದ ಕಂಡು ಬಲ ಹೆಚ್ಚಿತು (?) ಈ ಗಜೇಂದ್ರನಿಗೆ ಪ್ರಾಣಸಂಕಟವಾಗಿ ಆಸೆಯುಷ್ಟಕ್ಕೆ ಇಲ್ಲವೆಂದು ಚಿಂತಿಸುತ್ತಿರುವಷ್ಟರೊಳಗೆ ಈಶ್ವರೇಚ್ಛೆಯಿಂದ ಆಪನ್ನಿಸ್ತರಣೋಪಾಯವು ಕಾಣಿಸಿತು. ಅದಾವುದೆನೆ :—ತಮ್ಮ ಸ್ವಜಾತಿಗಳಾದ ಗಜಗಳು ಬಿಡಿಸಲು ಸಮರ್ಥಗಳಲ್ಲ. ಗಂಡಾನೆ ಸಮರ್ಥನಲ್ಲದ ಬಳಿಕ ಹೆಣ್ಣಾನೆ ಬಿಡಿಸಿಕೊಳ್ಳಲರಿಯವು. ಇದು ಮೊಸಳೆಯಲ್ಲ. ತನ್ನ ಕರ್ಮಪಾಕವೆಂದು ನಿಶ್ಚೈಸಿ, ಇದಕ್ಕೊಬ್ಬಾನೊಬ್ಬ ಬ್ರಹ್ಮಾದಿಗಳಗೊಡೆಯನಾದ ಪರಮಪುರುಷನಾದ ಶ್ರೀ ನಾರಾಯಣನ ಮರೆವೊಗಬೇಕು. ಆತನೆಂಥಾವನೆನೆ :—ಒಬ್ಬಾನೊಬ್ಬನುಂಟು. ಆತನು ಬಂದ ವಿಪತ್ತಂ ಪರಿಹರಿಸಿಯಾನು ಎಂದು ತೋರುತ್ತದೆ. ಮೃತ್ಯುವೆಂಬ ಕಾಳೋರಗನ ದೆಸೆಯಿಂದ ಸ್ವಾಮಿ ಬಿಡಿಸಿ ಹಿಂದೆ ಹಾಕಿ ಕೊಂಬುದುಂಟೆಂದು ತಿಳಿದನು. ಆವಾತ್ರಗಂಜಿ ದುರ್ಗಾದೇವಿಯರು ಅಣುಮಾತ್ರ ಆತನಾಜ್ಞೆಯ ಮೀರಲಮ್ಮಳು-ಎಂದುಕೊಂಡನು.

Colophon;

ಇತಿ ಶ್ರೀ ಭಾಗವತೇ ಅಷ್ಟಮ ಸ್ಕಂಧೇ ದ್ವಿತೀಯೋಧ್ಯಾಯಃ.

ಈ ಅಧ್ಯಾಯದಲ್ಲಿ ಭಕ್ತಿಪೂರ್ವಕವಾದ ಸ್ತುತಿಯಿಂದ ಗಜೇಂದ್ರನಿಗೆ ಹೇಗೆ ಬಿಡುಗಡೆಯಾಗಿ ಹೇಗೆ ಸಂಸಾರೋತ್ತಾರಣವಾಯಿತು. ಆಹಾಗೆ ಅಹುದು ಎಂಬುದನ್ನು ಗಜೇಂದ್ರನ ಉದ್ಧರಿಸಿದ ಪ್ರಕಾರವನ್ನು ಹೇಳುತ್ತಾ ಇದ್ದರು.

* * * *

ಶ್ರೀ ನಾರಾಯಣನು ಪರದೇವತೆಯಾದ ಕಂಡು ಪ್ರತ್ಯಕ್ಷನಾದ. ಅದು ಹೇಗೆ ಆವಿರ್ಭೂತನಾದನೆಂದರೆ, ಈ ಗಜೇಂದ್ರನು ಮೊಸಳೆಯ ಕೈಯಲಿ ಸಿಕ್ಕಿದ್ದಾನೆ. ಈತನ ಸ್ತೋತ್ರವನ್ ವೈಕುಂಠದಲ್ಲಿ ಕೇಳಿ ಚಕ್ರಾಯುಧವ ತೆಗೆದುಕೊಂಡು ಗರುಡದೇವರ ಹಗಲ ಮೇಲೆ ಸಮಸ್ತದೇವತೆಗಳ ಕೈಯಲಿ ಹೊಗಳಿಸಿ ಕೊಳುತ್ತ, ಆಕಾಶಮಾರ್ಗದಲ್ಲಿ ಬಹುದನು ಈಗಜೇಂದ್ರನು ಕಂಡ, ದಿವ್ಯ ಪ್ರಕಾಶವು ಲೋಕವನೆಲ್ಲ ವ್ಯಾಪಿಸಿತು. ಆ ಗಜೇಂದ್ರನು ಪದ್ಮವನೆತ್ತಿಕೊಂಡು, ಶ್ರೀನಾರಾಯಣಾಯ ಶ್ರೀಗುರುಭಗವನ್ನಮಸ್ತೇ-ಎಂದು ಕೂಗಿದ, ಜನನಾದಿ ದೋಷರಹಿತನು ಭಕ್ತನೊಂದನಲ್ಲ ಎಂದು ಅಂತಃಕರಣಕರಗಿ ಅಲ್ಲಿಂದ ಆ ಸರೋವರದೊಳಯಿಂಕೆ ಧುಮುಕಿ ಆ ಮೊಸಳೆ ಸಹವಾಗಿ ಆನೆಯಂತಂದು ತೀರದಲ್ಲಿ ನಿಲ್ಲಿಸಿ, ಚಕ್ರವನ್ನು ತೆಗೆದುಕೊಂಡು ಮೊಸಳೆಯ ಎರಡು ಕಟವಾಯ ಕೊಯ್ದು ಈ ಗಜೇಂದ್ರನ ಕಾಲನ್ನು ನೋಯದ ಹಾಗೆ ತೆಗೆದನು.

End:

ಅತ್ರಿಜನಾದ ದುರ್ವಾಸಮುನಿಯ ಶಾಪದಲ್ಲಿ ಇಂದ್ರವೈಭವ ಬಯಲಾಗಿ ಹೋದಕಾರಣ ಸುರರು ಅಸುರರಿಂದ ಪರಾಜಯವನ್ನೈದಿ ನೊಂದು, ಎನ್ನ ಸಮೀಪಕ್ಕೆ ಬಂದು ಮೊರೆಯಿಟ್ಟರು. ನನ್ನ ಕೈಯ್ಯಲಿ ಹರಿವುದೇ ಈ ಕೃತ್ಯವು? ನಾನು, ಸುರರು, ಮೃಡನು ಸಹ ನಿನ್ನ ಚರಣಾರವಿಂದ ಸಮೀಪಕ್ಕೆ [ಬಂದು] ಬಿನ್ನವಿಸಲೆಂದು ಬಂದೆವು. ರಕ್ಷಿಸು, ತಂದೆ! ಯೆಂದು ಮತ್ತೆ ಅಭವ ಸುರೋತ್ತಮರು ಸಹ ದಂಡದಂತೆ ಅಷ್ಟಬೀಳಲು, ಕರುಣಾರ್ಣವನಾದ ಶ್ರೀ ನಾರಾಯಣನು ಸರೋಜಭವನೆ! ಶಂಭುವೆ!! ಸುರೋತ್ತಮರೆ!!! ಏಳಿ, ನೀವಿನ್ನು ಅಂಜದಿರಿ. ಮುನಿಶಾರ್ದೂಲರಂಜದಿರಿ. ದುರ್ವಾಸನ ಕೋಪದಿಂದ ನಿಮಗೀ ಯವಸ್ಥೆಯಾದುದು. ದೈತ್ಯರು ಹೆಚ್ಚಿದರು. ನಿಮ್ಮ ಶತ್ರುಗಳಾದ ದೈತ್ಯರ ಕೂಡೆ ನೀವು ಸಂಧಾನಮಂ ಮಾಡಿಕೊಂಡು ಅವರೂ ನೀವೂ ಮಂದರನಗಮಂ ತಂದು ಕ್ಷೀರಾರ್ಣವಮಂ ಮಥಿಸಲು ನಿಮ್ಮ ಇಷ್ಟಾರ್ಥವನ್ನು ಕಾಲಗತಿಯಿಂದ ಸಮುದ್ರರಾಜನೇ ಸಲಿಸುವನು. ಅಸುರರೊಡನೆ ನಿಮಗೆ ವಾಸಬೇಡ. ಐಹಿಕಾಮುಷ್ಮಿಕದ ಸಂಪ್ರೀತಿಗಳವೂಲು ಆಮುಷ್ಮಿಕಕ್ಕೆ ಹೇಳಗೆ . . . . ತರಿವನ್ನಿಬರ ಆಹಿನಂಟನು (?).

(ಪಿ.ವಿ.)—

ಭಾಗವತ ವಚನ ಎಂಟನೆಯ ಸ್ಕಂಧದಲ್ಲಿ ಮೂರರಿಂದ ಐದು., ಸಂಧಿಗಳು ಸಮಗ್ರ. ಎರಡು ಮತ್ತು ಆರನೆಯವು ಅಸಮಗ್ರ. ಸ್ವಲ್ಪ ಶಿಥಿಲ. ಬರೆವಣಿಗೆ ಚೆನ್ನಾಗಿದೆ. ತಪ್ಪುಗಳಿವೆ. ಕವಿಯಾರೆಂಬುದು ತಿಳಿಯುವುದಿಲ್ಲ.

No. 193. ಭಾಗವತ (ವಚನ).
BHĀGAVATA (PROSE).

Substance, palm-leaf. Size, $17\frac{5}{8} \times 1\frac{1}{4}$ inches. Pages, 268. Lines, 7 on a page. Character, Kanarese. Condition, injured. Appearance, old. Mode of writing, not bad, but not free from mistakes.

Contains the Adhyāyās 1st to 45th complete and 46th incomplete in the tenth Skandha.

Similar to the work described under the previous number. The name of the author is not given.

Beginning :

ಹಿಂದೆ ನವಮಸ್ಕಂಧದ ಕಥೆಯಲ್ಲಿ ಶುಕಾಚಾರ್ಯರು ಪರೀಕ್ಷಿದ್ರಾಯಗೆ . . . . . ಸಂಕೋಚದಿಂ ಹೇಳಿ ಮುಗಿಯಿಸಲಾಗಿ, ಅದ ಕೇಳಿದ ಪರೀಕ್ಷಿದ್ರಾಯನು ಶ್ರೀಕೃಷ್ಣಾವತಾರ ಚರಿತ್ರೆಯನ್ನು ವಿಸ್ತಾರದಿಂದ ಕೇಳಬೇಕೆಂಬ ಲವಲವಿಕೆಯಿಂದ ಶುಕಾಚಾರ್ಯರನ್ನು ಕುರಿತು ವೃತ್ತಾನು.

* * * *

ಜೀವನ ಶರೀರಸಂಬಂಧಯೋಗ ವಿಯೋಗಗಳಿಗೆ ಕಾರಣನಾದಂಥ ಹಗೆಗಿಂತ ಅನ್ಯನಿಲ್ಲವೆಂದು. ಈ ಮರ್ಯಾದೆಯೊಳಗೆ ತನ್ನೊಳಗೆ ತಾನೇ ವಿಚಾರಿಸಿಕೊಂಡು ಬಹುಮಾನಪುರಸ್ಸರವಾಗಿ ಕಂಸನ ಕುತ್ತರಿಸಿ(?) (ಕತ್ತರಿಸಿ) ಒಡಂಬಡಿಕೆಯು ಮಾಡಿದನು. ತನ್ನಮನಸ್ಸಿನೊಳಗೆ ಭೇದವಿದ್ದ ಅರಳಿದ ಮುಖವುಳ್ಳಾತನಾಗಿ ಅವನ ಮುಖವನೋಡಿ ನಗುತ ಒಂದು ಮಾತಾಡಿದನು. ಈಕೆರೂಯಿಂದ ನಿನಗೆ ಭಯವಿಲ್ಲವಲ್ಲ. ಈಕೆಯಿಂದ ಹುಟ್ಟಿದ ಮಗನಿಂದಲಷ್ಟೇ ನಿನಗೆ ಮೃತ್ಯುವೆಂದು ಅಶರೀರವಾಕ್ಯ ಆಡಿತು. ಅದಕ್ಕೆ ಈಕೆಯಲ್ಲಿ ಹುಟ್ಟಿದ ಮಕ್ಕಳಂ ನಿನ್ನ ವಶಕ್ಕೆ ಕೊಟ್ಟೇನೆಂದು ಒಡಂಬಡಿಸಿ ಆಕೆಯಾಂ ಬಿಡಿಸಿಕೊಂಡನು. ಎಂದು ಶುಕಾಚಾರ್ಯರು ಪರೀಕ್ಷಿದ್ರಾಯನಿಗೆ ಹೇಳಿದರು.

Colophon :

ಇತಿ ಶ್ರೀಮಹಾ ಭಾಗವತೇ ದಶಮಸ್ಕಂಧೇ ಪ್ರಥಮಾಧ್ಯಾಯವು.

ಈ ಅಧ್ಯಾಯದಲ್ಲಿ ಕಂಸ ಭರಿತ್ರವ್ಯಾಜದಿಂದ ಸಂಸಾರವು ಅನರ್ಥವೆಂದು ವರ್ಣಿಸುತ್ತಿದ್ದಾರು. ಶುಕಾಚಾರ್ಯರು ಪರೀಕ್ಷಿದ್ರಾಯಗೆ ಹೇಳುತಿದ್ದಾರು. ಕಂಸನು ವಸುದೇವನ ವಾಕ್ಯವನ್ನು ಬಲ್ಲಂಥವನಾಗಿ ಒಡಹುಟ್ಟಿದಳಾದ ದೇವಕಿ ವಧೆಯಿಂದ ವಿಮುಕ್ತನಾದನು. ಅದನ್ನು ಕಂಡು, ವಸುದೇವನು ಕಂಸನನ್ನು ಕೊಂಡಾಡಿ ಸಂತೋಷದಿಂದ ಹೋದನು. ಕಂಸನು ತನ್ನ ಅರಮನೆಗೆ ಹೋದನು.

* * * *

ಒಂದಾನೊಂದು ಕಡೆಯಲ್ಲಿ ಮೃಗಗಳ ಹಿಡಿಯೋಣ, ಖಗಗಳ ಹಿಡಿಯೋಣ, ಕಪ್ಪೆಗಳ ಹಾಗೆ ನೆಗೆಯೋಣ, ತೋಳದಂಡಿಗೆ ಮಾಡೋಣ ನಾನಾವಿಧವಾದ ಉಪಹಾಸಗಳ ನಾಡೋಣ, ... ಪಿಟ್ಟಗಳ ಚರಿಸೋಣ, ಈ ಪ್ರಕಾರದಿಂದ ಲೋಕದವರ ಹಾಗೆ ವ್ರಜದಲ್ಲಿ ಚರಿಸುತಿದ್ದರು. ನದಿ, ಅದ್ರಿ, ದೋಣಿಗಳಲ್ಲಿ, ಪರ್ವತಗಳ ಬಳಸಿನಲ್ಲಿ, ಅಡವಿಯಲ್ಲಿ ಸರೋವರಗಳಲ್ಲಿ, ಆ ವನಗಳಲ್ಲಿ ಹೀಗೆ ಗೋಪಾಲರಿಂದ ಚರಿಸುತ್ತಿದ್ದರು. ಆ ಕಾಲದಲ್ಲಿ ಪ್ರಲಂಬ

ನೆಂಬ ಅಸುರನು ರಾಮಕೃಷ್ಣರ ಕೊಂದೇನೆಂದು ಗೋಪರೂಪವ ಧರಿಸಿ, ಅವರಿದ್ದ ಬಳಿಗೆ ಬಂದನು. ಆಗ ಭಗವಂತನಾದ ಕೃಷ್ಣನು ಅಸುರನಂ ಕೊಲಬೇಕೆಂದು ನಿಶ್ಚಯುಮಾಡಿ, ಅವನ ಕೊಡೆ ಸಖ್ಯವ ಮಾಡಿಕೊಂಡನು. ಆಟಗಳ ಬಲ್ಲಂಥವರೊಳಗೆ ಅಧಿಕನಾದ ಕೃಷ್ಣನು ಗೋಪಾಲಕರ ಕರೆದು ಒಂದಾನೊಂದು ಮಾತನಾಡುತ್ತಿದಾನೆ. ಗೋಪಾಲರುಗಳಿರಾ ! ಇಬ್ಬಿಬ್ಬರಾಗಿ ಆಡುತ್ತಾ ಬನ್ನಿ. ಹೇಗೆಹೇಗೆನೆ :—ಬಲಭದ್ರ, ಕೃಷ್ಣ—ಇಬ್ಬರೂ ಹೆದ್ದರೆಗಳು. ಅದ ಱೊಳಗೆ ಕೆಲವರು ಕೃಷ್ಣ ಪಕ್ಷೀಯರು. ಕೆಲಬರು ರಾಮಪಕ್ಷೀಯರು. ಒಬ್ಬರನೊಬ್ಬರು ಅಟ್ಟಿಸಿಕೊಳ್ಳುವಾಗ ಸೋತವರು ಗೆದ್ದವರಂಹೊತ್ತು ಕೊಂಬರು. ಹೀಗೆ ಆಡುತ್ತಿದ್ದರು. ಅಲ್ಲಿ ಭಾಂಡೀರಕವೆಂಬ ಹೆಸರುಳ್ಳ ಒಂದು ಆಲದ ಮರನಿಹುದಲ್ಲ. ಆ ಮರದ ಬಳಿಗೆ ಹೋದರು. ಆರಾರು ಆರ ಪಕ್ಷವೆನೆ ಶ್ರೀದಾಮನು ವೃಷಭಮೊದಲಾದವರು ರಾಮನ ಪಕ್ಷ. ಮತ್ತೆ ಕೆಲಬರು ಕೃಷ್ಣನ ಪಕ್ಷ. ಎಲೈ ! ಪರೀಕ್ಷಿದ್ರಾಯ ! ಕೃಷ್ಣಪಕ್ಷೀಯರು ಗೆದ್ದಂಥಾ ರಾಮಪಕ್ಷೀಯರನು ಏರಿಸಿಕೊಂಡರು. ಶ್ರೀಕೃಷ್ಣನು ಶ್ರೀರಾಮನನ್ನು ಹೊತ್ತುಕೊಂಡನು. ವೃಷಭನೆಂಬುವನನ್ನು ಭದ್ರಸೇನನು ಎತ್ತಿಕೊಂಡನು. ಪ್ರಲಂಬಾಸುರನು ಬಲಭದ್ರನನೇರಿಸ್ಕಿಕೊಂಡನು.

End :

ಭಗವಂತನಾದ ಕೃಷ್ಣನು ಅಕ್ರೂರನನ್ನು ಕುರಿತು ವಾಕ್ಯಗಳಿಂದ ಮೋಹಿಸುವವನ ಹಾಗೆ ಮುಗುಳ್ನಗೆಯಿಂದ ಸಹಿತನಾಗಿ ಒಂದಾನೊಂದು ಮಾತನಾಡುತ್ತಿದ್ದಾನೆ. ಹೇ ! ನೀನು ನಮಗೆ ಗುರುವಾದಾತನು ಮೇಲೆ ಚಿ . . . . . ಸದಾಶ್ಲಾಘ್ಯನು, ಬಂಧು. ಇಂತಹ ನಿನ್ನಿಂದ ರಕ್ಷಣೀಯರು, ಪೋಷ್ಯರು, ನಿನ್ನದಯಾಪಾತ್ರರಾದ ಪ್ರಜೆಗಳು. ಎಲೈ ! ಭಾಗ್ಯಾಧಿಕನಾದ ಅಕ್ರೂರನೆ ! ಅತ್ಯಂತಪೂಜ್ಯರಾಗಿದ್ದಂಥ ನಿಮ್ಮಂಥವರುಗಳು ತಮಗೇನೆ . . . .

(ವಿ.ವಿ.)—

ಭಾಗವತವಚನ, ದಶಮಸ್ಕಂಧದಲ್ಲಿ ೧ ರಿಂದ ೪೫ ಅಧ್ಯಾಯಗಳು ಸಮಗ್ರ ೪೬ ನೆಯದು ಅಸಮಗ್ರ. ಶಿಥಿಲ. ಬರೆವಣಿಗೆ ಸಾಮಾನ್ಯ. ತಪ್ಪುಗಳಿವೆ. ಗ್ರಂಥಪಾತವುಂಟು. ಕವಿಯಾರೆಂಬುದು ತಿಳಿದು ಬರುವುದಿಲ್ಲ.

No. 194. ಭಾಗವತ (ವಚನ).

BHĀGAVATA (PROSE).

Substance, Śrītāḷa. Size, $18\frac{1}{4} \times 1\frac{7}{8}$ inches. Pages, 239. Lines, 9 on a page. Character, Kanarese. Condition, slightly injured. Appearance, old. Mode of writing, good, but not free from mistakes.

Contains from the beginning to the middle of Bhasmāsura Katha, in the tenth Skandha.

A prose version in Kanarese describing the story of the Sānskrit Bhāgavata. The name of the author is not given.

Beginning:

ಶ್ರೀ ಪರಮ ಪುರುಷರಹ, ಪುರುಷೋತ್ತಮರಹ, ಶ್ರೀಮದಶರಣ್ಯ ಶರಣ್ಯರಹ, ಅಪ್ರಮೇಯರಹ ವಾಙ್ಮನ ಸಗೋಚರರಹ, ಶ್ರಿತವತ್ಸಲರಹ. ಅದ್ವಂದ್ವರಹ, ಶ್ರೀ ಲಕ್ಷ್ಮೀ ಕುಚಕಲಶ ಕುಂಕುಮ ಪಂಕಾಂಕಿತ ವಕ್ಷ ಸ್ಥಳರಹ, ಶ್ರೀಮದ್ವಾಸುದೇವರ ದಿವ್ಯ ಶ್ರೀಪಾದ ಪದ್ಮಂಗಳಲ್ಲಿ ನಿರತಿಶಯ ಭಕ್ತಿಯುಕ್ತರಾದ ವೇದವ್ಯಾಸ ಮಹಾಮುನೀಂದ್ರರಿಂದ ಪ್ರಣೀತವಾದ ಶ್ರೀಮದ್ಭಾಗವತ ಮಹಾ ಪುರಾಣದಲ್ಲಿ ದಶಮಸ್ಕಂಧವು ಪ್ರಸರಿಸುತ್ತಲಿರಲು, ಶುಕಮಹಾಮುನೀಂದ್ರರಿಗೆ ವಂದಿಸಿ, ಪರಿಕ್ಷಿದ್ರಾಜೋತ್ತಮನು ಬಿನ್ನವಿಸುತ್ತಿದಾನೆ:—ಎಲೈ ಗುರುವರೇಣ್ಯರೇ! ಸೂರ್ಯವಂಶ, ಸೋಮವಂಶದ ಪರಂಪರೆಯನ್ನು ನಿರೂಪಿಸಿದಿರಿ. ಸೋಮವಂಶದಲ್ಲಿ ಕವಲಾದ ಯದುವಂಶದಲ್ಲಿ ಎನ್ನೊಡೆಯನಾದ ಶ್ರೀ ಕೃಷ್ಣನು ಅವತಾರವಂ ಮಾಡಿದನು ಎಂದು ಕರುಣಿಸಿ ಬುದ್ಧಿಗಲಿಸಿದಿರಿ. ಆಮ್ನಾಯ ಕೋಟಿಗಳು ನುತಿಸಿ ನೆಲೆಗಾಣದ ಪರಮಾತ್ಮನು ಏಳಗೆಯಾದನು. ಎನಿಬರು ಸತಿಯರು ? ಎನಿಬರಾತ್ಮಜರು ? ಎನಿತು ವತ್ಸರ ಭೂಮಿಯಲ್ಲಿ ಲೀಲೆಯಲ್ಲಿದ್ದು ಭಕ್ತರನ್ನು ರಕ್ಷಿಸಿದನು ? ಕಂಸನಂ ವಧಿಸಿ ಯಾದವರ ರಕ್ಷಿಸಿ, ಪಾಂಡವರ ಪಾಲಿಸಿ ದ್ರೋಣಿಯ ಅಮೋಘಾಸ್ತ್ರದ ಅಗ್ನಿಬಾಧೆಯಲ್ಲಿ ನಾನು ಉರಿಯದಂತೆ ನನ್ನಂ ರಕ್ಷಿಸಿದನು. ಮತ್ಕುಲ ದೇವನಾದ ಜಗನ್ಮಯನಾದ ಶ್ರೀ ವಾಸುದೇವನ ಚರಿತ್ರವ ಕೇಳದೆಯಿದ್ದ ಪಾಪಿಗಳಿಗೆ ಗತಿಯಾವುದು ? ತನ್ಮಹಾಪುರುಷನ ಚರಿತ್ರವನೆಲ್ಲ ಸಾಂಗವಾಗಿ ನಿರೂಪಿಸಿ, ನನಗೆ ಸಂಕರ್ಷಣಮೂರ್ತಿಯೊದ ಬಲರಾಮದೇವನು ದೇವಕೀ ರೋಹಿಣಿಯರಿಬ್ಬರ ಉದರದಲ್ಲಿ ಜನಿಸಿದನೆಂಬರು. ತತ್ಕಾರಣವ ನಿರೂಪಿಸಿ ನಿಮ್ಮ ಮುಖಾರವಿಂದ ಜನಿತ ಕೃಷ್ಣಚಾರಿತ್ರ ಸುಧೆಯನ್ನು ಮತ್ಕರ್ಣ ಪುಟಗಳೆಂಬ ವಿಮಳಪಾತ್ರೆಯಲ್ಲಿ ಭುಂಜಿಸಿ, ಮೃಷ್ಟಾನ್ನವನುಂಡ ತೃಪ್ತಿಗಿಂತಲೂ ಶತಾಧಿಕನಾಗಿದೆ ಮನವು-ಎಂದು ಆನಂದಾಶ್ರುಮಿಳಿತ ಸಾಷ್ಟಾಂಗದಿಂದೆರಗಲು, ದಯಾರ್ಣವರಾದ ಶುಕಮಹಾಮುನೀಂದ್ರರು ಪಿಡಿದೆತ್ತಿ ಮನ್ನಿಸಿ, ಹೃತ್ಪಂಕೇಜದಲ್ಲಿದ್ದ ವಾಸುದೇವ ಮೂರ್ತಿಯಂ ಧ್ಯಾನಿಸಿ, ಕಂಣ್ದೆರೆದು ಪರೀಕ್ಷಿದ್ರಾಜಂಗೆ ನಿರೂಪಿಸುತ್ತಾ ಇದ್ದಾರೆ.

* * * *

ದಿವದಲ್ಲಿ ಗೋಪಾಲರು ಸಹ ಬೃಂದಾವನದಲ್ಲಿ ಗೋವುಗಳನಾಡಿಸುತ್ತಲಿರಲು, ಗೋಪಾಂಗನೆಯರು ಮನೆಗಳಲ್ಲಿ ಗೃಹಕೃತ್ಯವಂ ಮಾಡುತ್ತಲೆ ಒಬ್ಬರೊಬ್ಬರೊಳು ಕೃಷ್ಣನ ಚರಿತ್ರವ ಹೇಳುವೆನು, ತಂಗಿ, ಕೃಷ್ಣನು ಅಧರಾಮೃತ ರಸವಸಗಲು ಬಿಡುವ (?) ಬಿಡುವಂಗುಲಿಗ ಪೆಳದನುಯುವಡೆದ ಸಪ್ತ ಸ್ವರಂಗಳಲ್ಲಿ ಚರಾಚರವಂ ಮೋಹಿಸುವಂತೆ ಕಲ್ಪತರುವನೆ ನೆಮ್ಮಿ ವೇಣುನಾದವ ಮಾಡುವನು. ತದ್ಧ್ವನಿಯ ನಾಲಿಸುತ್ತ, ಸಿದ್ಧ ವಿದ್ಯಾಧರ ಕಿನ್ನರ ಸುರವನಿತೆಯರು ತಮ್ಮ ತಮ್ಮ ನಲ್ಲರ ತೊಡೆಯಮೇಲೆ ಉಡಿಮುಡಿಗಳಂಮಱೆದು, ಮದನ ಶರ ಪೀಡಿತೆಯರಾಗಿ, ಮೂರ್ಛೆಗೆ ಸಂದು ಅಂಬರದಲ್ಲಿ ಕೃಷ್ಣನ ಮೂರ್ತಿಯನನವರತ ವೀಕ್ಷಿಸುತ್ತಿಹರು ಕೇಳಿರಾ ! ಬಾಲಕಿಯರಿರಾ ! ನೀಲಮೇಘಶ್ಯಾಮನಾದ ಕೃಷ್ಣನ ಉರದಲ್ಲಿ ವಿದ್ಯುಲ್ಲತೆಗಳಂತೆ ವನಮಾಲೆಗಳು ಮೌಕ್ತಿಕ ಹಾರ ಮೆಸೆದಿರಲು ವೇಣುನಾದವಂ ಮಾಡುತ್ತಿರಲು, ಗೋವುಗಳು ಹುಲ್ಲ ಮೇಯುತ್ತಾ ನರೆಗಚ್ಚಿ ಕಿವಿಗಳ ಮಿಳ್ಳಿರಿದು ಮೇಲ್ಮೊಗನಾಗಿ, ಬಲ್ಲ ಮಹಾತ್ಮರಂದದಲ್ಲಿ ವೇಣುನಾದವ ನಾಲಿಸುತ್ತ ಪರವಶವಾಗಿ ಕೇಳುತ್ತಿಹವು. ಹುಲ್ಲೆಗಳು, ಹದ್ದುಗಳು, ಗಜಗಳು, ಸಿಂಹಗಳು, ನವಿಲುಗಳು, ಕ್ರೂರಸರ್ಪಗಳು, ವನ ಮಾರ್ಜಾಲ ಮೂಷಕಂಗಳು ಮುಂತಾದ ನಾನಾಮೃಗ, ಪಕ್ಷಿ, ಕ್ರಿಮಿ, ಕೀಟಂಗಳು ತಮ್ಮತಮ್ಮ ಜಾತಿವೈರಂಗಳ ಬಿಟ್ಟು ಒಂದರಮೇಲೊಂದು ಒರಗಿಕೊಂಡು ಪರವಶವಾಗಿ ಕೃಷ್ಣನ ವಾಮ ಭಾಗದಲ್ಲಿ ಹಿಂಡುಹಿಂಡಾಗಿ ನಿಂದು ವೇಣುನಾದವಂ ಕೇಳುತ ಒಪ್ಪಿಹವು.

End :

ಪೂರ್ವದಲ್ಲಿ ಓರ್ವ ವೃಕನೆಂಬ ದಾನವಾಧಮನು ಮಹಾದೇವನನ್ನು ತಪದಲ್ಲಿ ಮೆಚ್ಚಿಸಿದನು ಅದೆಂತೆಂಬೆಯಾ?:—ಕೇದಾರ ಕ್ಷೇತ್ರವಲ್ಲಿ ತನ್ನ ಮಾಂಸವ ಕಡಿಕಡಿದು ಅಗ್ನಿಯಲ್ಲಿ ಆಹುತಿಯಾಗಿ ವಿರಚಿಸಿ ಶಿವ ! ತಡೆವಲಾ ? ಎನುತ ಏಳನೆಯ ದಿವಸದಲ್ಲಿ ತನ್ನ ತಲೆಯಂ ಖಂಡಿಸಿ ಪೂರ್ಣಾಹುತಿಯು ಮಾಡುವೆನೆಂಬ ಖಡ್ಗಮಂಗೊಣ್ಗೆ ಮಾಡಿರಲು, ಕರುಣಾಳು ಮೃಡನು ಬಂದು ವರವ ಬೇಡು ಎನಲು, ನಾನು ಆರ ಶಿರದ ಮೇಲೆ ಈ ಹಸ್ತವ ನಿರಿಸುವಿನೋ—ಅವನು ಭಸ್ಮವಾಗಲು ವರಮಂಪಾಲಿಸು ಎನಲು, ಆ ದೈತ್ಯಾಧಮನಿಗೆ ಮಹಾದೇವನು ಆವರವನಿತ್ತನು. ಈಯಲು, ಈ ಪರೀಕ್ಷೆಯನ್ನು ನಿನ್ನಲ್ಲಿಯೇ ನೋಡುವೆನೆನುತ ಶಿವನ ಮಸ್ತಕದ ಮೇಲೆ ಇರಿಸುವೆನೆಂದು ತನ್ನ ಹಸ್ತವನೆತ್ತಿದನು. ಅಭವನಿಲಲಾರದೆ ಕಂಗೆಟ್ಟು ಓಡಿದನು. ಖಳ ಬೆನ್ನಟ್ಟಿದನು. ಪಾತಾಳ ಲೋಕಗಳು, ಭೂಲೋಕದ ವಿವರವ ಸುರಲೋಕಗಿದ್ಧಾದಿ ಲೋಕಗಳನ್ನು ಜಟಾನೀಕ ಜಡಿಯುತ್ತಿರಲು ಹೊಕ್ಕನು. ಶಿವನು, ಖಳನು ಬೆನ್ನಟ್ಟಿ ಕೈಯೆತ್ತಿ ಬರಲು ಕಂಗೆಟ್ಟು ಗಿರಿಜೇಶ.

(ವಿ.ವಿ.)—

ಭಾಗವತ ವಚನ. ದಶಮಸ್ಕಂಧದಲ್ಲಿ ಮೊದಲಿಂದ ಭಸ್ಮಾಸುರನ ಕಥೆಯ ವರೆಗೆ ಇದೆ. ಸ್ವಲ್ಪ ಶಿಥಿಲ. ಅಕ್ಷರಗಳು ಚೆನ್ನಾಗಿವೆ. ತಪ್ಪುಗಳುಂಟು. ಕವಿಯಾರೋ ತಿಳಿದುಬರುವುದಿಲ್ಲ.

No. 195. ಭಾಗವತ (ವಚನ).

BHĀGAVATA (PROSE).

Substance, palm-leaf. Size, 16 × $1\frac{7}{16}$ inches. Pages, 352. Lines, 6 on a page. Character, Kanarese. Condition, slightly injured. Appearance, old. Mode of writing, not bad.

Contains a portion in the tenth Skandha.

Same work as the above.

(ವಿ.ವಿ.)—

ಭಾಗವತ ವಚನ ದಶಮಸ್ಕಂಧದಲ್ಲಿ ಮೊದಲಿಂದ ಪಾಂಡವರು ಸ್ಯಮಂತ್ರಪಂಚಕ ತೀರ್ಥಕ್ಕೆ ಸೂರ್ಯಗ್ರಹಣ ನಿಮಿತ್ತ ಬಂದಿದ್ದ ಕೃಷ್ಣ ಪರಮಾತ್ಮನನ್ನು ಸಂದರ್ಶಿಸುವ ವರೆಗಿದೆ. ಸ್ವಲ್ಪ ಶಿಥಿಲ ಅಕ್ಷರಗಳು ಸಾಮಾನ್ಯ. ಕವಿಯಾರೆಂಬುದು ತಿಳಿದು ಬರುವುದಿಲ್ಲ.

No. 196. ಭಾಗವತ (ವಚನ).

BHĀGAVATA (PROSE).

Substance, palm-leaf. Size, 18 × $1\frac{1}{4}$ inches. Pages, 296. Lines, 7 on a page. Character, Kanarese. Condition, very much injured Appearance, old. Mode of writing, not bad.

Contains the Adhyāyas 49 to 100 complete and 48th and 101st incomplete in the tenth Skandha.

A prose version in Kanarese describing the story of the Sanskrit Bhāgavata. The name of the author is not given.

Beginning:

. . . . . ನೆ ಎಂಬ ನೆವದಿಂದ ವಿತ್ತವನ್ನು ಅಪಹರಿಸು . . ವಾಜ . . ಣಿಗಳು ಜಲವನಪಹರಿಸುವ ಹಾಗೆ ಒಬ್ಬಾನೊಬ್ಬನು ತನ್ನವರೆಂಬ ಬುದ್ಧಿಯಿಂದ ಅಧರ್ಮ ದಿಂದ ಪೋಷಿಸುವನು. ಆ ಪೋಷಿಸಿಕೊಂಡವರುಗಳು ತನ್ನ ಪ್ರಾಣೇಂದ್ರಿಯ ದ್ರವ್ಯ ಸುತರು ಗಳು. ಮ . . . . . .

* * * *

ಈ ಮರ್ಯಾದೆಯಲ್ಲಿ ಆತನ ಅಭಿಪ್ರಾಯವ ತಿಳಿದ ಅಕ್ರೂರನು ಬಂಧುಗಳ ಅನುಜ್ಞೆಯ ತೆಗೆದುಕೊಂಡು ಮಧುರಾಪುರಕ್ಕೆ ಹೋಗಿ, ಎಲೈ ಪರೀಕ್ಷಿತ್ತೆ ! ಕೃಷ್ಣನ ಕೂಡೆ ಬಲಭದ್ರರಾ ಮನ ಕೂಡ, ಪಾಂಡವರ ವಿಷಯವಾಗಿ ಧೃತರಾಷ್ಟ್ರನು ಮಾಡುವ ಚೇಷ್ಟೆಯನ್ನು ಹೇಳಿ ದನು.

Colophon:

ಇತಿ ಶ್ರೀ ಭಾಗವತೇ ದಶಮಸ್ಕಂಧೇ ಅಷ್ಟಚತ್ವಾರಿಂಶೋಧ್ಯಾಯ ಃ

ಈ ಅಧ್ಯಾಯದಲ್ಲಿ ಸಚ್ಛಾಸ್ತ್ರಕ್ಕೆ ಅಸಚ್ಛಾಸ್ತ್ರದ ಕೂಡೆ ಹೇಗೆ . . . . ಹಾಗೆ ಕೃಷ್ಣನು ಜರಾಸಂಧನ ಕೂಡೆ ಕೆಲವಧ್ಯಾಯದಲ್ಲಿ ಯುದ್ಧವಂ ಹೇಳುತ್ತಿದ್ದಾರು.

* * * *

ಆಗ ಕೃಷ್ಣನು ಸೇನೆಯೆಂಬಂಥ . . . . ದ ಅತ್ಯಲ್ಪಬಣವಾದ ಬಾಣಗಳಿಂದ ಪ್ರೇರಿತವಾದ ಸೇನೆಯನ್ನು ನೋಡಿದಂಥವನಾಗಿ ದೇವಾಸುರರು ಅರ್ಚಿಸಲ್ಪಟ್ಟಂಥ ಶಾರ್ಙ್ಗಧ ನುಷ್ಟಂಕಾರವ ಮಾಡಿದನು. ಬತ್ತಳಿಕೆಯಿಂದ ಬಾಣಗಳನ್ನು ತೆಗೆದುಕೊಂಡು ಪ್ರಯೋಗಿ ಸಲು, ಆ ಬಾಣಗಳು ಶತ್ರುಗಳ ಸೇನೆಯಲ್ಲಿ ಚತುರಂಗ ಬಲವನ್ನು ಸಂಹರಿಸಲು, ಅವು ಅಲಾತ ಚಕ್ರದ ಹಾಗೆ ಇದ್ದುವು. ತರುವಾಯದಲ್ಲಿ ಶಶಾಂಕಾಕೃತಿಯಾಗಿದ್ದ ಅತ್ಯಂತ ಧ್ವನಿಯುಳ್ಳ ದೈತ್ಯಕುಲ ಸಂಹಾರಕವಾದ ಪಾಂಚಜನ್ಯವನ್ನು ಧ್ವನಿಮಾಡಿದನು. ಆ ಧ್ವನಿಯು ಕ್ಷತ್ರಿಯ ರಿಂದ ನೋಯಲ್ಪಟ್ಟ ಯಾದವರಿಗೆ ಶೀಘ್ರದಲ್ಲಿ ಧೈರ್ಯವನ್ನು ಹುಟ್ಟಿಸಿತು. ಅರಸುಗಳಿಗೆ ಅತ್ಯಂತ ಭಯ ಹುಟ್ಟಿಸಿತು ಅರಸುಗಳಿಗೆ ಕರ್ಣ ನಿಷ್ಠುರವಾದ ಈ ಧ್ವನಿಯನ್ನು ಕೇಳ ಬಡೆಯಲ್ಪಟ್ಟ ಹೃದಯವುಳ್ಳವರಾದರು ಯದುಪ್ರವೀರರು ತಮ್ಮಾಯುಧಗಳನ್ನು ತೆಗೆದುಕೊಂ ಡು ಅರಸುಗಳ ಸಂಹರಿಸಿ ನೋಯಿಸಿದರು. ತರುವಾಯದಲ್ಲಿ ತತ್ತದ್ದ್ವಾರಗತರಾದ ಅರಸುಗ ಳನ್ನು ಯಾದವರು ಪರಿಭವಿಸಿದವರಾಗಿ ಶಾರ್ಙ್ಗಧನ್ವಧ್ವನಿಯಿಂದ ಆತನನ್ನು ಕಂಡು ಆಪ್ಯಾ ಯಿಸಿ, ಶರಾಸನ ಸಮೂಹಗಳನ್ನು ಕೂಡಿಸಿದರು. ತರುವಾಯದಲ್ಲಿ ಮಂಡಲಾಕೃತಿಯುಳ್ಳ ಧನಸ್ಸುಳ್ಳ ಶಿಶುಪಾಲನು ಎಲೋ ಕಷ್ಣ ! ಎಲೋ ಕೃಷ್ಣ ! ಎಲ್ಲಿ ಹೋದೆಯೋ ! ನಿಲ್ಲು ! ನಿಲ್ಲು ! ಎಂದು ನುಡಿದನು. ಅದ ಕೇಳಿದಂಥ ಕೃಷ್ಣನು ಎದುರಾಗಿ ಹೋಗಿ, ಮಂಡಲಾಕೃ ತಿಯಹದ ಬಿಲ್ಲಿನಿಂದ ಶಿತಾಶಿತಗಳಾದ, ಸಾಣೆಯಿಂದ ಮೊನೆಯಾದ ಬಹು ಸಾಯಕಗಳನ್ನು ಧಮ . . ಸುರ . ದ . ಶಿಶುಪಾಲನಿಗೆ ಐದು, ಕುದುರೆಗಳಿಗೆ ನಾಲ್ಕು, ಸಾರಥಿಗೊಂದು—

ಅಂತು ಹತ್ತು ಬಾಣಗಳ ನೆಚ್ಚು ಸಿಂಹನಾದವಂ ಮಾಡಿದನು ಅದ್ಭುತವಾದ ಯುದ್ಧವಾಯಿತು. ಆಗ ಕೃಷ್ಣನು ಭಲಾ ! ಭಲಾ ! ಎಂದು ಶಿಶುಪಾಲನಂ ಕೊಂಡಾಡಿದನು. ನೀನು ದನುಜಶ್ರೇಷ್ಠನು. ವೀರನು. ಕರ್ಣ ಎಂದನು. ಇಷ್ಟರ ಮೇಲೆ ದುರ್ಬುದ್ಧಿಯುಳ್ಳ ಚೈದ್ಯನೆ ನನ್ನ ಪರಾಕ್ರಮವ ನೋಡು-ಎಂದನು.

* * * *

ಕೃಷ್ಣನು ಹಸ್ತಿನಾಪಟ್ಟಣಕ್ಕೆ ಹೋದ ವೇಳೆಯಲ್ಲಿ ಅಕ್ರೂರ ಕೃತವರ್ಮರಿಬ್ಬರೂ, ಅಸುರನಾಗಿದ್ದ ಶತಧನ್ವನ ಕರೆದು, ಆ ಮಣಿಯನ್ನು ತೆಗೆದುಕೊಳ್ಳೆಂದು ಪ್ರೇರಿಸಿದರು. ಅದನ್ನೇಕೆ ತೆಗೆದುಕೊಳ್ಳೋಣವೆಂದರೆ, ಆ ಸತ್ರಾಜಿತರಾಯನು ಮೊದಲು ಹೆಣ್ಣು ಕೊಟ್ಟೇನೆಂದು ಕೊಡದೇ ಹೋದ. ಅವನ ಕೊಂದು ಮಣಿಯ ತೆಗೆದುಕೊ. ಇದೇ ವೇಳೆ ಎಂದರು. ಅವರ ದುರ್ಬುದ್ಧಿಯ ಮಾತನ್ನು ಕೇಳಿ, ವಿಪರೀತ ಬುದ್ಧಿಯುಳ್ಳವನಾಗಿ ದುಷ್ಟನಾದ ಶತಧನ್ವನು ರಾತ್ರಿ ಮಲಗಿದ್ದಂಥ ಸತ್ರಾಜಿತರಾಯನ ಕೊಂದನು. ಆತನ ಹೆಂಡಿರು ಮಕ್ಕಳು ಹೋಹೆಯೋ ಎಂದು ಅಳುತ್ತಿರಲಾಗಿಯೂ ಕೇಳದೆ ಕೊಲೆಗೇಡಿಯು ಪಶುವ ಕೊಲುವ ಹಾಗೆ ರಾಕ್ಷಸ ನೋಪಾದಿಯಲ್ಲಿ ಕೊಂದು ಮಣಿಯ ನೆತ್ತಿಕೊಂಡನು.

End:

ಎಲೈ ! ರಾಜೇಂದ್ರಾ ! ಮಧು ದ್ವಿಷನಾಗಿದ್ದ ಶ್ರೀ ಕೃಷ್ಣನು, ಮಕ್ಕಳುಗಳೊಳಗೆ ಪ್ರಥಮನಾದ ರುಕ್ಮಿಣಿಯ ಸುತನಾದ ತಂದೆಯ ಗುಣಕ್ಕೆ ಸರಿಯಾದ ಮಹಾಸುಂದರನಾದ ಪ್ರದ್ಯುಮ್ನನನ್ನು ಕಂಡು ಸೋದರವಾವನಾದ . . . .

(ವಿ.ವಿ.)—

ಭಾಗವತ ವಚನ ದಶಮಸ್ಕಂಧದಲ್ಲಿ ೪೯ ರಿಂದ ೧೦೦ ಅಧ್ಯಾಯಗಳು ಪೂರ್ಣವಾಗಿಯೂ, ೪೮ ಮತ್ತು ೧೦೧ ನೆಯ ಅಧ್ಯಾಯಗಳು ಅಪೂರ್ಣವಾಗಿಯೂ ಇವೆ ಅತಿ ಶಿಥಿಲ. ಬರವಣಿಗೆ ಸಾಮಾನ್ಯ. ತಪ್ಪುಗಳಿವೆ. ಗ್ರಂಥಪಾತವುಂಟು. ಕವಿಯಾರೆಂಬುದು ತಿಳಿದುಬರುವುದಿಲ್ಲ.

No. 197. ಭಾಗವತ ಸಾರ.

BHĀGAVATA SĀRA.

Substance, palm-leaf. Size, 8 × 1⅛ inches. Pages, 198. Lines, 5 on a page. Character, Kanarese. Condition, injured. Appearance, old. Mode of writing, not good and not free from mistakes.

Incomplete.

Contains some select stanzas taken from the Bhāgavata, which work has been described under No. 139 *ante*.

Beginning:

ಚಾರು ದೀರ್ಘ ಚತುರ್ಭುಜದ ಸುಕು ।
ಮಾರ   ವಸನದ ।
ವಾರಿರುಹದಳ ಲೋಚನದ ಮೇಚಕ ತನುದ್ಯುತಿಯ ॥

ಭೋರಿ ಭೂ(ಷಣ) ರತ್ನ ನಿಕರದ ।
ಪಾರಮೇಷ್ಠ್ಯದ ಪರಮ ವಿಭವದ ।
ಭಾರಣೆಯು ಮುಕ . . . . ಮೆರೆವ ವೈಕುಂಠವನು ಕಂಡ ॥

* * * *

ಕೊರಳು ಮಣಿ ಕೌಸ್ತುಭಮಹಾದ್ಯುತಿ ।
ಭರಿತ ವಕ್ಷ ಸ್ಥಳದ ಲಕುಮಿಯು ।
ಪರಿವ ಸಿತವನ ಮಾಲಿಗಳ ಸಿರಿವತ್ಸಲಾಂಛನದ ॥
ಕರಚತುಷ್ಟಾದಿಸ್ಥಚಕ್ರಾಂ ।
ಬುರುಹ ಶಂಖಗದಾ ಪ್ರಭಾಭಾ ।
ಸುರದಿಗಂತ್ರದ ದಿವ್ಯಮೂರ್ತಿಯು ಬಿಡದೆನೆನೆಯೆಂದ ॥
ಮೆಱೆವ ಪೀತಾಂಬರದ ಮೊನೆಮುಂ ।
ಜೆಱಗಿನುಡಿಗೆಯು ಸುಪ್ರಸನ್ನಾಂ ।
ಬುರುಹವದನವ ಮೆಱೆವ ಕಾರುಣ್ಯಾ ಮೃತೇಕ್ಷಣದ ॥
ಅರಪ ಕರುವನು ತಾಯಿ ಮನದಲಿ ।
ಮಱುಗಿ । ರಕ್ಷಿಸುವಂತೆ ಭಕುತನ ।
ನಟಿಸಿ (?) (ನಱಸಿ). . . ಭೃತ್ಯ ಕಂಸಾರಿಯನು ನೆನೆಯೆಂದ ॥

* * * *

ಕಱೆಯ ಲೊಡ ನೊಯ್ಯನುತೆ ನೆಗಬಿದ ।
ಕರತಳದ ಕಮನೀಯ ಹೇಮಾಂ ।
ಬುರುಹ ದಳನಿಭ ಲೋಚನದ ಸಸ್ಮಿತ ಮುಖಾಂಬುಜದ ॥
ಕೊರಳಹಾರದ ಕೌಸ್ತುಭದ ಪೇ ।
ಉರದ ವನಮಾಲಿಗಳ ಪೀತಾಂ ।
ಬರದ ಪರಮಕೃಪಾಳು ಮೆಯ್ದೋರಿದನು ಮುನಿವರಗೆ ॥
ಚಲದಳಕನಿಕರದ ಲಲಾಟದ ।
ತಿಲಕ. ಶ್ರಸ್ವೇದ ವದನದ ।
ಹೊಳಹೊಳೆವ ಮಣಿಮಕುಟಪಾಡುವ ಮಕರಕುಂಡಲದ ॥
ಬೆಳಪ ವದನದ ಮೌಕ್ತಿಕದ ಮಂ ।
ಜುಳಕರಾಭಯಪಾಣಿಗಳ ಮಂ ।
ಗಳ ಮನೋಹರಮೂರ್ತಿ ಬಂದನು ಶಿಶುವಿನಭಿಮುಖಕೆ ॥

End:

ಆದೊಡವಧರಿಸಾ ದ್ವಿಜಾಧಮ ।
ನಾದಿಯಲಿ ತೋಱಗವನೆ ಸಂ । ?
ಪಾದಿಸಿದ ನಿನ್ನರಕ ಯಾತನೆಗಳನು ತಕ್ಕುದನು ॥
ಆದೊಡವನೆನ್ನಂತ್ಯಕಾಲದ ।
ಲಾದಡೆವ್ರು ದಿಟವಾತ್ಮ ಹಿತ ಸಂ ।
ಪಾದನವ ಮಾಡಿದನೆ ಚಿತ್ತವಿಸೆಂದರಾ ಭಟರು ।

ಹೋಗಲೆಮ್ಮನು ಕಂಡು ವಿಹ್ವಲ ।
ನಾಗಿ ಭಯದಲಿ ತನ್ನ ಮಗನನು
ರಾಗದಲಿ ನಾರಾಯಣಾ ! ಎಂದೊರೆಯಲಾ ಕ್ಷಣಕೆ ॥
(ಯೋಗಿಗಳು) ನಡೆತಂದ ರಲ್ಲಿಗೆ ।
ಯೋಗ ನಿಧಿಗಳು ಬಿಡದೆ ಹೋಹಾ ।
ಆಗಮಜ್ಞನೆ (.) ಅಂಜದಿ (ರಂಜದಿ)ರು ನೀನೆನುತ ॥

(ವಿ.ವಿ.)—

ಭಾಗವತದಲ್ಲಿನ ಕೆಲವು ಪದ್ಯಗಳನ್ನು ಸಂಗ್ರಹಿಸಿ ಇಲ್ಲಿ ಬರೆಯಲಾಗಿದೆ. ಶಿಥಿಲ. ಬರೆವಣಿಗೆ ಚೆನ್ನಾಗಿದೆ. ಗ್ರಂಥಪಾತವುಂಟು. ಕವಿ ನಿತ್ಯಾತ್ಮಶುಕಯೋಗಿ ಉಳಿದ ವಿಷಯಗಳನ್ನು 139 ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

No. 198. ಅಜಾಮಿಳನ ಚರಿತ್ರೆ.
AJĀMIḶANA CARITRE.

Substance, palm-leaf. Size, $16\frac{1}{2} \times 1\frac{1}{4}$ inches. Pages, 13. Lines, 4 on a page. Character, Kanarese. Condition, very much injured. Appearance, old. Mode of writing, not good and not free from mistakes.

Complete.

A poem describing the story of Ajāmiḷa as found in the Śrimad-Bhāgavata. The name of the author is not given.

Beginning:

ಅಜಮಿಳನೆಂಬಾ ಅಧಿಕ ಬ್ರಾಹ್ಮಣನು ।
ನಿಜಸತ್ರದೊಳಗೆ ಸೂರ್ಯನ ಬೇಡುತಿರಲು ॥
ಕುಜನ ಕುಲದ ಲಲಿತಾಂಗಿಯ ಕಂಡು ।
ಭಜನೆಯ ಮಜೆದು ಬ್ರಾಹ್ಮಣನು ಬಂದ ॥

ನುಡಿ ಗಿಣಿಮಾತನು ತನು ತುಂಬಿಗುರುಳ ।
ಬಡದೊಡೆಯೆಸೆವ ಹುಲ್ಲೆಯ ಕಣ್ಣ ನೋಟ ॥
ಕಡೆದ ಪೊಂಬುಗುರಿನ ಮಿಗಿಲೆಂಬ ಕುಚವು ।
ಬಡನಡುವಿನ ಹಂಸಗಮನೆ ಮಾತಾಡೆ ॥

ಮಾತಿನ ಮಜೆಯೇನು ಮಾದರಗಿಸಿ ।
ಸೂತಕವಾಗಿ ನಾಲ್ಕು ದಿನ ತುಂಬಿ ತಾನು ॥
ಪಾತಕಹರ ಗಂಗೆಯ ಮೀಯಲು ಬಂದೆ ।
ಏತಕೆ ನೀ ಬಂದೆ (ಕೆಲಸವ) ಹೇಳು ॥

ಹೇಳುವೆ ಹೇರಳವಿಲ್ಲವೀ ಮಾತು ।
ಬಾಳಿ ಬದುಕ ಬೇಕು ನಿನ್ನೊಳು ನಾನು ॥
ಹೇಳುವೆ ಯಿದು ನ್ಯಾಯವೆ ? ಎನ್ನಲು ಬೇಡ ।
ಹೇಪೆಲ ಹೆಣ್ಣೆ ನಿನ್ನಯ ಮನದಿರವ ॥

ಮೊತಿಗೆ ಮಾತ ಸಾನೇನ ಹೇಳಲಿ ।
ಕಾತ್ರಾರ ನಿನಗುಂಟೆ ಜಾತಿ ಬ್ರಾಹ್ಮಣನೊಳ್ ॥
ಜಾತಿಯು ಬಿಟ್ಟು ಬರುವುದು ನ್ಯಾಯವೆ ।
ಪಾತಕವನು ಕಟ್ಟಿ ಕೊಳಲು ಬೇಡ ॥

ಪಾತಕ ವೆನಗಿಲ್ಲ ಪಾಲಿಸೆಯೆನ್ನ ।
ಏತ್ರಕೆ ದಯವಿಲ್ಲ ಯಿದುವೇ ॥
. . . . ನುಗುಣವೇ ।
ಸೋತೆನೆ ನಿನ್ನ ರೂಪಿಗೆ ಮನಸಿಕ್ಕಿ ॥

ಸೋಲುವ ಬಳಿಯಲ್ಲಿ ಸೋಲಲು ಬೇಕು ।
ಸೋಲದ ಬಳಿಯಲ್ಲಿ ಸೋತರೆ ಪಾಪ ॥
ಮೇಲು ಕುಲ ಬಿಟ್ಟು ಬರುವುದು ಸಲ್ಲದು ।
ಪಾಲೊಳಗೆ ಪುಳಿಯು ಹಿಂಡಲು ಬೇಡ ಹೋಗು ॥

* * *

ಕೆಟ್ಟು ಹೋಗುವರಿಗೆ ಅಡವಿಯು ಮನೆಯು ।
ಮುಟ್ಟದ ಮೃಗಪಕ್ಷಿ ಬಂಧು ಬಳಗವು ॥
ಧಿಟ್ಟಮಾನುಷ ಬಾಡಿ ಹೆಣ್ಣೊ ನೀಯೆನುತಲೆ ।
ಬೆಟ್ಟದ ಬಳಿಗೆ ಬಂದರು ಬೆವರಿಡುತ ॥

ಕಕ್ಕೆ ಕಮ್ಮಾರ ಜಾಲಿ ಬಕ್ಕೆಯ ವನವು ।
ಸೊಕ್ಕಿಬೆಳೆದ ಆಲದ ಮರದಡಿಯು ॥
ಧಿಕ್ಕನೆ ಮನೆಕಟ್ಟಿದ ಠೀರ್ವರು ಲಗವಕ ।
ಲಕ್ಕನ ವಿದುವಾಮ್ಮೆ ಬಾಳಿದರು ॥

ಆಲದ ಮರನ ತರಿದು ನಾರ ತೆಗೆದು ।
ಮೇಲುಜೊತ್ತಿಗೆ ಮಿಣಿ ಹುರಿಹಗ್ಗ ಹೊಸೆದು ॥
ಕಾಲುಕೆಡದೆ ಹಳ್ಳಿ ಸಂತೆಯೊಳು ತಿರುಗಿ ।
ಆ ಲಲಿತಾಂಗಿ ಅಜಮಿಳನು ಬಾಳಿದರು ॥

End :

ಅಜಮಿಳನಿಗೆ ಅಂತ್ಯಕಾಲವು ಬಂದು ಮುಸುಕಿ ।
ರಜನಿಚೆಯು ಯಮದೂತರು ಬಂದೆಳೆಯೆ ॥ (?)
ಸಿ . ತಾನು ಕಾಣೆ ಮಗನ ನಾರುಗಾನೆಂದಾಕ್ಷಣವೆ ।
ಅಜನ್ಯೆಯು ಕಳುಹಿದ . ಪ್ಪಿದ ನಾತಾದ ॥

ಸಂದಣಿಸಿದರು ಸಂಕೀರ್ತನೆ ಗೈದುನೀ ।
ಪುಂದುರ್ಯಾ ವಿಷ್ಣುದೂತರು ಬಂದರಾಗ ॥
ತಂದು ಯಿರಿಸಿದರು ಪುಷ್ಪದ ರಥವ ।
ಸಂದಣಿ ತೆರಳಿತು ವೈಕುಂಠಪುರತೆ ॥

ಸುರರು ಪೂಮಳೆಗರೆಯೆ ಸುಮ್ಮಗಿದಿರದೆ
ಹರಿಕೃಪೆಯು ಯಿಂತು ಅಜಾಮಿಳಂಗೈತಂ
ದಿರಲು ಪರಮಾವೋದದೆ ಬ್ರಹ್ಮಾದಿಗಳೆಲ್ಲ
ವರದರಾಜನೆ ಬಂದು ಯೆತ್ತಿದ ನಾರತಿಯ ॥

Colophon:

ಅಜಾಮಿಳ ಚರಿತ್ರ ಸಮಾಪ್ತಂ.

(ವಿ.ವಿ.)—

ಅಜಾಮಿಳ ಚರಿತ್ರ ಸಮಗ್ರ. ಅತಿ ಶಿಥಿಲ. ಅಕ್ಷರಗಳು ಚೆನ್ನಾಗಿಲ್ಲ, ಗ್ರಂಥಪಾತವುಂಟು. ಭಾಗವತದಲ್ಲಿನ ಅಜಾಮಿಳನ ಕಥೆಯೇ ಸಂಗ್ರಹವಾಗಿ ಬರೆಯಲ್ಪಟ್ಟಿದೆ. ಇದರಲ್ಲಿ ಹೇರಳವಾಗಿ ತಪ್ಪುಗಳವೆ. ಕವಿ ಯಾರೆಂಬುದನ್ನು ಈ ಗ್ರಂಥದಿಂದ ತಿಳಿಯಲು ಎಲ್ಲಿಯೂ ಅವಕಾಶವಿಲ್ಲ.

No. 199. ಅಂಬಿಕಾವಿಜಯ.

AMBIKĀVIJAYA.

Substance, Śrītāḷa. Size, $13\frac{1}{4} \times 2\frac{1}{8}$ inches. Pages, 488. Lines, 10 on a page. Character, Kanarese. Condition, injured. Appearance, old. Mode of writing, good and free from mistakes.

Wants some leaves in the beginning, otherwise complete.

A poem containing 47 Adhyayas in the Bhāminiṣaṭpadi metre, describing the history of Ambikā or the Goddess Sakti ; by Bobbura-Ranga of the 18th century. The work is dedicated to God Rangadhama at Bobbūra. Date of transcription:—The twelfth day of the lunar month Adhika Bhādrapada in the year Śukla.

Name of the scribe:—Vēnkaṭaramaṇa who copied for the Subedār-Vīraṇṇa.

Beginning:

. . . .
. . . . ಳ ಮಂದಿ
ರವಹವಿವ್ರು ಗುರು ನಿಳಯ ಕವಿಸಾಮಂತ ಗೇಹವಿವ್ರು ॥
ವಿವಿಧ ನೃತ್ಯದ ಸರ್ಪವೇಣೀ ।
ಯುವತಿಯರ ಝಷಕೇತು ಕೇಳೀ ।
ಭವನವಿವ್ರು ನೋಡಿವೆ ನವಗ್ರಹ ವಲಸೆ ತೆಗೆದಂತೆ ॥
ಇತ್ತ ನೋಡೀಚೆಯಲಿ ತೋರ್ಪವ್ರು ।
ಕ್ಷತ್ರಿಯರ ಗೃಹನಿಚಯ ಶೌರ್‍ಯೋ ।
ನ್ಮತ್ತ ದುಬ್ಬಿನ ಭುಜಬಲರ ರಿಪುಭಯ ವಿವರ್ಜಿತರ ॥

ಇತ್ತರದ ಸಾಲಿನೊಳು ಮಣಿಗಣ ।
ಮುತ್ತು ದಿವ್ಯಾಂಬರವ ನೆರೆಕ್ರಯ ।
ವೆತ್ತಿರುಡುವಾರ್ಜಿತರ ಹರದರ ಶ್ರೇಣಿನೋಡೆಂದ ॥

ಮಾಲೆಗಾರರು ಚಿನಿವರದಜನ ।
ಬಾಲ ಘಾತಕ ತಿಲವಿಘಾತಕ ।
ಶೀಲ ರಣಿತ ಸುಚಿತ್ರಿಕನು ಮುಚ್ಚಿಗನು ಮೇದಾರ ॥

ಶಾಲಿವಾಹನ ಚಿಪ್ಪಿಗನು ವಿಾಂ ।
ಚಾಳ ಚಾರ್ವಕ ರಜಕ ಮೊದಲಾ ।
ಗಾಲಯಂಗಳ ನೆರವಿ ಇವೆ ಶತಕೋಟಿ ಸಂಖ್ಯೆಯಲಿ ॥

ಸತ್ಯಪುರುಷರು ಶೀಲನಿಷ್ಠರು ।
ನಿತ್ಯಕರ್ಮಾನುಷ್ಠತೆಯ ಸಂ ।
ವರ್ತಿಸುವ ನವ ಚಿತ್ರಮಂಟಪ ಧರ್ಮಶಾಲೆಗಳು ॥
ಇತ್ತೆರದಿ ಹರವಿಷ್ಣು ಭವನವು ।
ರತ್ನ ಶೋಭಿತದಿಂದ ಕಂಗೆ ವಿ ।
ಚಿತ್ರತರಗಳ ಬೀರುತಿವೆ ಲೇಸಾಗಿ ನೋಡೆಂದ ॥

* * *

ಕಾಗೆ ವೊತ್ತಕೆ ಬೇಟೆಗಾರನು ।
ಬಾಗಿ ಕೋಲೆ ಸದಂತೆದೆಸೆ ದೆಸೆ ।
ಗಾಗಿ ಚೆಲ್ಲಿತು ತಮ್ಮ ನಗರದ ಹೊರೆಯ ಪಥವಿಡಿದು ॥
ಹೋಗ ನೀಗಿದ ರತ್ನಲಿತ್ತನು ।
ರಾಗದಲಿ ಶಿವಭಟರು ತಮ್ಮಯ ।
ಬಾಗಿಲೊಳಗನುವಾಗಿ ನಿಂದರು ಕರದ ಖಡುಗದಲಿ ॥

ಹರುಷದಲಿ ಮಾರ್ಕಂಡ್ಯೆಬಲವಂ ।
ದೆರಗಿ ಭಯಭಕ್ತಿಯಲಿ ತಂದಾ ।
ಮರುಗ ಮಲ್ಲಿಗೆ ಕಕ್ಕೆಯೆಕ್ಕೆಯ ಜಾಜಿ ಬಿಲ್ವತದ ॥
ಪರಿಪರಿಯ ಕುಸುಮಗಳ ಬೊಬ್ಬರ
ಪುರದೆರೆಯ ಶ್ರೀರಂಗಮಿತ್ರನ
ಚರಣಕರ್ಪಿಸುತೇಕಭಾವ ದೊಳರ್ದ ನಿರ್ಭಯದಿ ॥

Colophon:

ನಾಲ್ಕನೆಯ ಅಧ್ಯಾಯಂ ಸಮಾಪ್ತಂ.

ಸೂಚನೆ ॥

ಬಾಲ ಮಾರ್ಕಂಡೆಯನ ರಕ್ಷಿಸಿ ।
ಕಾಲ ಮೃತ್ಯುವಗೆಲಿದು ಪಡೆದನು ।
ಶೂಲಿ ಕಾಲಾಂತಕನೆನಿಪ ನಿಜನಾಮಧೇಯಕವ ॥

ತಿರುಗಿದುದು ಬಳಿಕಿತ್ತ ದೂತರು ।
ಹರಿದ ಪಾಶಗಳಾಂತು ನೆತ್ತರ ।
ನೊರೆಯ ನೊರೆಸುತ್ತ ಕೆಡೆದ ಕೈದುವ ಬಿಸುಟು ಬಿರುನಡೆಯ ॥

ಭರದ ಲೋಡುತ್ತ ಲಂಜೆಗಂಜೆಗೆ ।
ತಿರುಗಿನೋಡುತ ತಮ್ಮ ಗೆಲ್ಲೆಯ ।
ಹೊರೆಯಸಾರಿದ ರುಳುರುತ್ತೆಗೆಬಗೆಯಿಂದ ಭೀತಿಯಲಿ ॥
ತರಣಿವಂಶ ಲಲಾಮ ಕೇಳಾ ।
ಹರನದೂತರು ಕಟ್ಟೆನೂಕಿದ ।
ಚರರು ಹೊಕ್ಕರು ಮುರಿದಹಮ್ಮಿನೊಳೆಂದು ಪುರವರವ ॥

ವರಸಭಾಮಧ್ಯದಲಿ ಯೋಲಗ ।
ದುರುಭಯಂಕರದಿಂದಲಿಸೆದಿಹ ।
ತರಣಿತನುಜನ ಬಳಿಗೆ ಬಂದರು ಭಯದ ಭಾರದಲಿ ॥

* * *

ಹರಿಗೆ ನೆಸು ಭಯವಾಯ್ತು ಶಕ್ರನೆ ।
ಸರಿರ ಪರವಶವಾಯ್ತು ಕಮಲಜ ।
ಸುರದ ಧೈರ್ಯವು ಕಲಕಿ ನಗೆಗೆಡೆಯಾಯ್ತು ಮಿಕ್ಕಳದಾ ॥

ಸುರರ ಹೇಳದಿರಾ ಗಜಾಸುರ ।
ಸುರವಣೆಯ ಕರೆಕಂಠ ನಿರ್ಭಯ ।
ದುರುತರದೆ ಲೆಕ್ಕಿಸದೆ ಹಳಚುತಲಿರ್ದ ನಿದಿರಾಗಿ ॥
ತುಡುಕುವನು ನಂದೀಶ್ವರಗೆ ಭವ ।
ನಡಸಿ ನುಂಗುವೆನೆಂದು ಸೊಂಡಿಲ ।
ಕಡು ನಿಗುರಿ ರೊಂಪಿಸುವ ಬೀಗುವ ಕವಣೆಯುಪಹತಿಗೆ ॥

ದಡದಡಿಸಿಲಳಿಯೇರಿ ಫುನರಪಿ ।
ತುಡುಕುವನು ಕೆಲಸಿಡಿವ ನೀಪರಿ ।
ನಡೆದುದ್ದೈ ಹದಿನಾರು ದಿನಸಂಗರವು ಸಮತಳರೆ ॥
ಹರಮಹಾದೇವನಿಗೆ ಕರಿಖಳ ।
ಸರಿಸಮನೆ ಸಂಹರಿಸ ಬೇಕೆಂ ।
ದರಿತು ನಂದೀಶ್ವರಗೆ ಸೂಚಿಸಿ ಜಡಿದುದಳ್ಳುರಿಯ ॥
ಬಿರುಗಿಡಿಯ ಮುಕ್ಕಳಸುವಗ್ಗದ ।
ಪರಮ ಶೂಲವ ನೆಗಹಿ ಕೆಡೆ ಫಡ.
ಧರಣಿಯೊಳಗಾರ್ಭಟಿಸಿ ತಿವಿದನು ಕಲಿಗಜಾಸುರನ ॥

End :

ಕೇಳದಿರೆ ಋಷಿಗಳಿರ ನಳಭೂ ।
ಪಾಲಕನ ಸಂಗತಿಯ ನೀಪರಿ ।
ಯಾಳದನು ಸತ್ಯದಲಿ ಧರಣಿಯನಧಿಕ ಶೀಲದಲಿ ॥

ಶ್ರೀಲತಾಂಗಿಯು ರಮಣ ಬೊಬ್ಬುರ ।
ನೀಲಮೇಘ ಶ್ಯಾಮ ಶುಭಕರ ।
ಪಾಲಿಸುವ ಸಿದ್ಧಾಂತಮಿದ ಬರೆದೋದಿ ಕೇಳ್ವರಿಗೆ ॥

ಎಂದು ಸೂತ ಪುರಾಣದೀಕ್ಷಿತ
ನೆಂದು ವಿವರಿಸಿ ಶೌನಕಾದಿ ಮು
ನೀಂದ್ರ ರಾಮೋದದಲಿ ತಮತಮಾಗೆದ್ದು ಕೈಮುಗಿದು ॥
ಓಂದಿಗೆಯೊಳುರೆ ನುತಿಸಿ ಬೊಬ್ಬುರ ।
ಇಂದಿರೇಶನ ಭಜಿಸಿ ಮುಕ್ತಿಯು ।
ಹೊಂದ ಬೇಕೆಂದಾಗ ಸರಿದುದು ವರ ತಪೋವನಕೆ ॥
ಬೆಳಗುವಷ್ಟಾದಶ ಸುವರ್ಣದ ।
ಲಲಿತನವರಸ ಯುಕ್ತ ಪುಷ್ಪದ
ಹೊಳೆವ ನೀಲಾಲಕದ ಕೋಮಲಶಬ್ದ ಬಾಯ್ದರೆಯು ॥
ಸಲೆ ಸುಲಕ್ಷಣ ನವ್ಯಕವಿತಾ ।
ಲಲನೆಯುನು ಬೊಬ್ಬುರ ಪುರವರ ।
ನಿಲಯುಗರ್ಪಿಸಿ ಸೂತಬಿಜಯುಂಗೈದನಜಪುರಿಗೆ ॥
ಶರಣು ಭಾಸ್ಕರತೇಜ ಶ್ರೀಧವ ।
ಶರಣು ಭಕ್ತಾಧಾರ ಪಾವನ ।
ಶರಣು ದೋಷವಿನಾಶ ಸುರಗಣ ಪೋಷ ಪರಮೇಶ ॥
ಶರಣು ನಿತ್ಯಾನಂದ ಲೀಲೋ ।
ತ್ಕರ ಚತುರ್ಭುಜ ವಿಷ್ಣು ಕೇಶವ ।
ಶರಣು ಬೊಬ್ಬುರ ರಂಗ ಮಂಗಳ ನಾಮಜಯು ಜಯತು ॥

ಪರಮಮೂರ್ತಿ ಸುಕೀರ್ತಿದಾನವ ।
ಹರ ತ್ರಿಯಂಬಕ ಕಮಲಜಾಸನ ।
ಸುರ ನಿಕರ ಸಂಸ್ತುತ್ಯ ಶೋಭನಮಹಿತ ಜಗದುವರ ।
ಕರುಣಿ ನಿಂದಕಕುಲ ವಿಮೋಚನ
ಶರಧಿಶಯುನ ಮುಕುಂದ ಬೊಬ್ಬುರ
ಪುರದೆರೆಯು ಶ್ರೀರಂಗಧಾಮಾರ್ಪಿತ ಕಥಾಮೃತವು ॥

ಸುಕವಿಗಳ ಕರಮುಕುರ ದೂಷಣೆ
ಕುಕವಿಗಳಿಗೆದೆಗಿಚ್ಚು ಸಜ್ಜನ
ನಿಕರ ಮನದಾನಂದ ನಂದನ ಚೈತ್ರನೆಂದೆಂಬ ।
ರುಕುಮಿಣಿಶನಗ್ಗಳಿಕೆ ಘನಪುರಿ
ಸಕಲ ಸುಸ್ಥೀಕರಣಿಕಾಗ್ರಣಿ
ಮಕುಟ ರಂಗನಪುತ್ರ ಬೊಬ್ಬುರ ರಂಗನಗ್ಗಳಿಕೆ ॥

Colophon :

ಇಂತು ನಲುವತ್ತೇಳನೆಯು ಸಂಧಿ.

The scribe adds :—ಶುಕ್ಲ ಸಂವತ್ಸರದ ಅಧಿಕ ಭಾದ್ರಪದ ಶುದ್ಧ ೧೦ ರಲ್ಲು ಸುಬೇದಾರ ವೀರಣ್ಣನವರು ರಾಯಸ್ತ ವೆಂಕಟರಮಣಯ್ಯನ ಕೈಲಿ ಬರೆಸಿದ ಅಂಬಿಕಾವಿಜಯಕೆ ನಿತ್ಯ ಜಯಮಂಗಳ ಮಹ ॥

(ವಿ.ವಿ.)—

ಮಾರ್ಕಂಡೇಯನ ತಪಸ್ಸು, ಯಮನ ನಿಗ್ರಹ, ಮಾರ್ಕಂಡೇಯನಿಗೆ ಚಿರಂಜೀವಿವರ ಪ್ರದಾನ, ರಕ್ತಬೀಜಾಸುರನ ದಿಗ್ವಿಜಯ, ದೇವತೆಗಳು ದೇವಿಯನ್ನು ಮೊರೆಹೊಗುವಿಕೆ, ರಕ್ತಬೀಜಾಸುರನೊಡನೆ ದೇವಿಯ ಯುದ್ಧ, ಬಲಾಸುರ ದೇವೇಂದ್ರರ ಯುದ್ಧ, ನಿಋುರಾತಿ ಶಂಭುಕರ ಯುದ್ಧ, ಮಹಿಷಾಸುರನ ದಿಗ್ವಿಜಯ, ಮಹಿಷಾಸುರ ಸಂಹಾರ, ಶುಂಭನಿಶುಂಭರ ಯುದ್ಧ, ವೀರಭದ್ರ ಕರಾಳ ಮುಖರ ಯುದ್ಧ, ಗಜಾಸುರನ ವಧೆ ಮುಂತಾದ ವಿಷಯಗಳ ನ್ನೊಳಗೊಂಡ ೪೩ ಸಂಧಿಗಳಾಗಿ ವಿಭಕ್ತವಾಗಿರುವ ಈ ಗ್ರಂಥವನ್ನು ಬೊಬ್ಬೂರ ರಂಗನೆಂಬ ಬ್ರಾಹ್ಮಣ ಕವಿಯು ಕ್ರಿ. ಶ. ೧೮ ನೆಯ ಶತಮಾನದಲ್ಲಿ ಭಾಮಿನೀ ಷಟ್ಪದಿಯಲ್ಲಿ ಬರೆದಿರುತ್ತಾನೆ. ಬರೆವಣಿಗೆಯು ಚೆನ್ನಾಗಿದೆ. ಗ್ರಂಥವು ಸಮಗ್ರವಾಗಿದೆ. ಆದರೆ ಗ್ರಂಥಾರಂಭದಲ್ಲಿ ೩ ಪತ್ರಗಳೂ ಅಲ್ಲಲ್ಲಿ ಕೆಲವು ಓಲೆಗಳೂ ಕಾಣ ಬರುವುದಿಲ್ಲ. ಗ್ರಂಥವು ಅಲ್ಲಲ್ಲಿ ಶಿಥಿಲ ವಾಗಿದೆ. ಕವಿಯು ಈ ಗ್ರಂಥವನ್ನು ಬೊಬ್ಬೂರು ಪುರದ ಶ್ರೀರಂಗನಾಥಸ್ವಾಮಿಗೆ ಅಂಕಿತ ವಾಗಿ ಸಮರ್ಪಿಸಿರುತ್ತಾನೆ.

No. 200. ಆದಿತ್ಯ ಪುರಾಣ.

ĀDITYAPURĀṆA.

Substance, paper. Size $10\frac{1}{2} \times 9\frac{1}{2}$ inches. Pages, 449. Lines, 20 on a page. Character, Kanarese. Condition, good. Appearance, new. Mode of writing, not good and not free from mistakes. The other works herein are :—(1) Brahmōttara Khāṇḍa. (2) Nāgarāja Mahime. (3) Airavata.

Complete.

A poem in the Bhāminiṣatpadi metre describing the story of Ādityapurāna, which forms a portion of the Brahmōpapurāṇa. The author whose name is not given states that he was a pupil of His Holiness Śri Ramachandra Bhārati of Śringēri Mutt and praises Kumāravālmīki (1430 A.D.) Hariśvara (1160 A.D.), etc. It is presumed that the author lived in 1550 A.D.

Date of transcription :—Monday the second day of the bright fortnight of the lunar month Māgha in the year Śukla.

Name of the scribe :—Bhimēśvara, son of Kṛṣnabhaṭṭa of Bareṅgōḍi.

Beginning :

ಸೂ ॥ ....ತವೆಂಬ ಶಿವಕಥಾ ।
ವ್ಯವನು ಕೇಳ್ವಡೆ ಮೊದಲು ವಿಸ್ತರಿ ।
ಸುವೆನು ನಾಂದಿಯ ಸಂಧಿಯಲಿ ಶಿವಮುಖ್ಯ ಸಂಸ್ತುತಿಗಳ ॥

ಶ್ರೀಮದಮೃತಮಯೂಖ ರೇಖಾ ।
ಕಾಮರಸ ನೇತ್ರಾದಿ ದಿವಿಜ ।
ಸ್ತೋಮಮಣಿ ಮಕುಟಪ್ರಭಾಸಿತ ರಾಜಿತಾಂಘ್ರಿಯುಗ ॥

ಸೋಮ ಮಂಗಳನಾಮ ಕರುಣಾ ।
ಧಾಮ ಸುಖನಿಸ್ಸೀಮ ಭಕ್ತಿ ।
ಪ್ರೇಮ ಕಾಶೀರಮಣ ವಿಸ್ತರಿಸೀ ಕಥಾಮೃತವ ॥

*　　　　*　　　　*

ಆಶುಕವಿಯುದ್ಭಟನು ಬಾಣನು ।
ವ್ಯಾಸ ಮಲ್ಹಣ ಶುಕನು ಕಾಳೀ ।
ದಾಸ ಕುಮರವ್ಯಾಸ ಪೌರಾತನ ಕವೀಶ್ವರರು ॥

ಭಾಸುರದ ? (ವಿರಚಿಸಿದ) ಕವಿಗಳು । ?
ಲೇಸೆನಿಸಿ ನಿವ್ರುಷವಿದ ಶಬ್ದಮ ।
ಹಾಸುಧೆಯೊಳೊಂದಿನಿತ ನೀವ್ರುದು ತಮಗೆ ಕರುಣದಲಿ ॥

ರವಿಯೊರೆದ ಸಾದಿತ್ಯ ಪೌರಾ ।
ಣವನು ವೈವಸ್ವತಗೆ ಪರಶಾಂ ।
ಭವ ಮಹಾ ಪರತತ್ವಬೋಧೆಯುನಿದನು ಋಷಿಗಳಗೆ ॥
ಶಿವ ಶರಣ ಭಕ್ತರಿಗೆ ಹೇಳದ ।
ನವನಿ ಹಿತವೆನೆ ಸೂತನಿದ ನುಸು ।
ರುವನು ಶಿವನೆನ್ನೊಳಗೆ ಕರುಣಿಸಿದಂತೆ ಶುಭಕರವ ॥

ಉಪಯಿಸುವುದಾದಿತ್ಯ ಪೌರಾ ।
ಣದಲಿ ಸಾರವನುಳಿದ ಪೌರಾ ।
ಣದ ಕಥಾಸಾರವನು ಕೆಲವನು ಕೂಡಿ ಸಂಗ್ರಹಿಸಿ ॥
ಮದನಹರ ಸಂಪ್ರೀತಿಗೋಸುಗ ।
ಯಿದನು ವಿಸ್ತರಿಸುವೆನು ಮಾಡುವ ।
ಮದುವೆಗೆಲ್ಲರು ನೆರೆದೊಡತಿ ಮಾಂಗಲ್ಯ ವಾದಂತೆ ॥

*　　　　*　　　　*

ಧಾತೃ ಹೋತೃ ಚರಾಚರಾಖಿಳ ।
ಭೂತ ಸಪ್ತಾತೀತ ವಾದಾ ।
ಜ್ಯೋತಿ ನಾಯಕ [ನಾದ ನಿಃಕೃತಿ] ಗೊಲಿದು ಕಾಶೀಪುರವರಾಧೀಶ ॥ ?
ಮಾತು ಬೇರಿನ್ನಿಲ್ಲ ಮಾಯಾ ।
ತೀತ ಪೂರ್ಣಜ್ಯೋತಿಯೊಳು ಹೊರ ।
ಗಾತ್ರು ಕಳೆಗೊಂಡಿಹುದು ಕರುಣಿಸು ವಿಶ್ವನಾಥ ಶಿವ ॥

Colophon:

ನಾಂದೀಸಂಧಿ ಸಮಾಪ್ತಂ.

ಸೂ ॥ ಪರಮ ಮಂಗಳ ಮೂರ್ತಿಯನು ವಿ।
ಸ್ತರದಿ ವೈವಸ್ವತನು ಭಜಿಸಲು ।
ಧರಣಿಯಲಿ ಪ್ರತ್ಯಕ್ಷನಾದನು ಚಂಡ ಮಾರ್ತಾಂಡ ॥

* * *

ಲಿಂಗಪೂಜೆಯ ಮಾಡುವನು ಬಾ ।
ಹ್ಯಾಂಗ ವೇದೋಕ್ತದಲಿ ಶಿವಗಣ ।
ಸಂಗ ದೊಳಗಡರಿಸಿದ ನಾ ನಿಜ ಮಾತೆಯನು ಕುವರ ॥
ಲಿಂಗ ವೆಂದೇಕಾಂಬ ಸೆಲ್ಲಜ ।
ಗಂಗಳನು ನಿಚ್ಚಲು ಮಹಾಶಿವ ।
ಲಿಂಗ ವೈತಂದುದು ಯೆನುತ್ತೆರಗಿದನು ಭಕ್ತಿಯಲಿ ॥
ಭಕ್ತರೇ ಶಿವನೆಂದು ಕಾಣು ।
ತ್ತುತ್ತಮರು ಶಿವನೆಂದು ಬರಬರ ।
ಲುತ್ತಮಾಧಮರೆನದೆಯೆಲ್ಲಾ ಶಿವಮಯ ವಿದೆಂದು ॥
ಒತ್ತಿ ಬಂದುದು ಬುದ್ಧಿ ತಿಳಿತಿಳಿ ।
ದುಕ್ತಲಿಂಗಧ್ಯಾನ ಬರಲೀ ।
ಮತ್ತೆ ಸಚರಾಚರವ ಶಿವನೆಂದರಿದ ನುಪಮನ್ಯು ॥
ತರುವ ಕಂಡೊಡೆ ಲಿಂಗವೇ ಜಯ ।
ಸಿರಿಯ ಕಂಡೊಡೆ ಲಿಂಗಸೇ ವರ ।
ತುರುಕುಲವ ಕಂಡೊಡನೆ ಜಯ ಜಯ ಲಿಂಗವೇ ಎನುತ ॥
ಇರುಹೆ ಮೊದಲಾಗಿರ್ದ ಜೀವರ ।
ಕರಿಯು ಮೊದಲಾದ ಚರ ಜೀವರ ।
ನರಿದು ಲಿಂಗವೆ ಜಯವೆನುತ ಕೈಮುಗಿದ ನುಪಮನ್ಯು ॥
ಲಿಂಗವೆನುತವೆ ಕಣ್ಣುಮುಚ್ಚುತ ।
ಲಿಂಗವೆನುತವೆ ಬಾಯ ಬಿರಿವುತ ।
ಲಿಂಗವೆನುತಲೆ ಕೊರಳ ಸೆರೆ ಬಿರಿವುತ್ತ ಗದ್ಗದದಿ ॥
ಲಿಂಗದಾನಂದಾಶ್ರು ಜಲದೊಳ ।
ಗಂಗ ಮುಳುಗಲು ಪೂರ್ಣಚಿದ್ಘನ ।
ಲಿಂಗ ಸುಖಮಯನಾಗಿ ವರ್ತಿಸುತಿರ್ದ ನುಪಮನ್ಯು ॥

End:

ಖುಲ್ಲಪುರುಷರು ನೋಡಿ ಗ್ರಂಥದ ।
ಸೊಲ್ಲು ತಪ್ಪಿಹುದೆಂದು ಜರೆಯದೆ ।
ಯೆಳ್ಳನಿತು ತಪ್ಪೇನ ಕಂಡೊಡೆ ಪೂರ್ವಪ್ರತಿಯಂತೆ ॥
ಸಲ್ಲದುದ ನುರೆ ಕಳೆದು ಪ್ರತಿಯೊಳೆ ।
ಗುಳ್ಳುದನು ನೆರೆ ಬರೆವು ದಿದರೊಳು ।
ಸಲ್ಲದಾವುದು ಸಲುವುದಾವುದು ಯೆಂದು ನಾನರಿಯೆ ॥
ಹಿಂದೆ ವೇದವ್ಯಾಸ ಮುನಿಪಗೆ ।
ಯಿಂದುಧರ ಕರುಣಿಸಿದ ತೆರದಿಂ ।
ಚಂದವಾಗಿಯೆ ಪೇಳ್ವೆ ನೊಲಿದೀ ರವಿಪುರಾಣವನು ॥

ಅರಿದು ಸೂತಪುರಾಣಿಕಗೆ ನಲ।
ವಿಂದ ಸೂತನು ಶೌನಕಗೆ ಪೇ।
ಳ್ದಿಂದದಲಿ ಲೋಕಕ್ಕೆ ಹರಿದುದು ದೇಶದೇಶದಲಿ॥
ಅದನು ಕಾಣುತ ಕವಿಕುಲೋತ್ತಮ।
ಮದನಹರನನು ನೆನೆದು ಲೋಕದ।
ಮದಮುಖತ್ವದ ನರರು ಮುಕ್ತಿಯ ನೈದಬೇಕೆಂದ।
ಇದನು ಕನ್ನಡ ಭಾಷೆಯಲಿ ತ।
ತ್ವದದ ಕೃತಿಯಲಿ ರಚಿಸಿ ಪುಣ್ಯಾವ।?
ನೊದವಿದನು ಕವಿರಾಜ ಕಂಠೀರವನು ಶಿವಕಥೆಯ॥
ದುರಿತ ತಿಮಿರಕೆ ಸೂರ್ಯನಂದದಿ।
ಧರೆಯೊಳಗೆ ಚರಿಸುತ್ತ ಲಿರಲಿದ॥
ನರುರತಿಳಿಯದೆ ನರಕಕುಂಡದೊಳುರಿದು ಬೀಳುವರು॥
ದುರುಳರವರಿಂ ಗೇನು ಗತಿಯೋ ?।
ಹರನು ಬಲ್ಲನು ತಿಳಿದ ನರರಿಗೆ।
ದುರಿತ ಕೋಟಿಗಳಿರಲು ಬಲ್ಲದೆ ಸುವರ ದೋಷದಲಿ॥
ಇದನು ತಿಳಿದಾಚರಿಸಿದವರಿಗೆ।
ಮದನ ಹರ ಕೃಪೆಯಹುದು ಬರಿದೇ।
ಮದಮುಖತ್ವದ ಕರ್ಮವನು ಮಾಡುವರು ಮಾನವರು॥
ಸುದತಿ ಧನ ಕರಿ ತುರಗ ವೆಂಬಿವು।
ಸದನ ದೊಳಗಿಹ ವಕಟ ನರಕದ।
ಪದವಿಗೈದಲು ಬಹುದೆ ? ಮೂಢರು ತಿಳಿದು ಬದುಕುವುದು॥

Colophon:

ಅಂತು ಸಂಧಿ 48 ಕ್ಕಂ ಆದಿತ್ಯಪುರಾಣಂ ಸಂಪೂರ್ಣಂ.

(ಪ.ವಿ.)—

ಆದಿತ್ಯ ಪುರಾಣ ಸಮಗ್ರ. ಅಕ್ಷರಗಳು ಸಾಮಾನ್ಯ. ಗ್ರಂಥಪಾತವುಂಟು. ಕವಿಯು ತನ್ನ ಹೆಸರನ್ನು ಹೇಳಿಕೊಂಡಿಲ್ಲ. 'ಇದನ್ನು ಕನ್ನಡ ಭಾಷೆಯಲ್ಲಿ ತತ್ವದ ಕೃತಿಯಲಿ ರಚಿಸಿ ಪುಣ್ಯವನೊದವಿದನು ಕವಿರಾಜಕಂಠೀರವನು' ಎಂದು ಹೇಳಿದ್ದಾನೆ. ಶೃಂಗೇರಿಯ ರಾಮಚಂದ್ರಭಾರತೀಸ್ವಾಮಿಗಳ ಶಿಷ್ಯನು ಈ ಗ್ರಂಥಕರ್ತನಾಗಿರ ಬಹುದೆಂದೂ 'ರಾಮಚಂದ್ರ ಗುರು ಶಿಷ್ಯ' ಎಂದೂ. ಈತನ ಕಾಲವು 1550 ಎಂದೂ, ಕವಿಚರಿತ್ರೆಯಲ್ಲಿ ಹೇಳಿದೆ ಇದು 'ಶಿವ ಕಥಾಮೃತವೆಂಬ ಶಿವಕಾವ್ಯ' ವೆಂದೂ, ಈ ಗ್ರಂಥಕ್ಕೆ ಕಾಶೀ ವಿಶ್ವನಾಥನೇ ನಾಯಕನೆಂದೂ ಕವಿಯು ಹೇಳುತ್ತಾನೆ. ಗ್ರಂಥಾಂತ್ಯದಲ್ಲಿ 'ಶುಕ್ಲ ಸಂ॥ ಮಾಘಶುದ್ಧ ೨ ಚಂದ್ರವಾರದಲ್ಲಿ ಬರೆಂಗೋಡಿ ಕೃಷ್ಣ ಭಟ್ಟರಮಗ ಭೀಮೇಶ್ವರನು ಬರೆದ ಆದಿತ್ಯ ಪುರಾಣಕ್ಕೆ ಆಚಂದ್ರಾರ್ಕಮಸ್ತು. ಎಂದಿದೆ.

No. 201. ಆದಿತ್ಯ ಪುರಾಣ-

ĀDITYAPURĀṆA.

Substance, Śrītāḷa. Size, $14\frac{1}{16} \times 1\frac{15}{16}$ inches. Pages, 312. Lines, 10 on a page. Character, Kanarese. Condition, slightly injured. Appearance, old. Mode of writing, good.

Begins on fol. I *a*. The other works herein are :—(1) Apāmārganastōtra 158*a*, (2) Rudrapraśna 162*a*, (3) Namakacamaka 185*a* (4) Puruṣasūkta 190*a* (5) Hariharasambhāṣaṇa 191*a*, (6) Jyantiṣaviṣaya 196*a* and (7) Gāṇapadya 197*a*.

Same work as the above.

(ವಿ.ವಿ.)—

ಆದಿತ್ಯ ಪುರಾಣ :—ಹಿಂದೆ ವರ್ಣಿಸಲ್ಪಟ್ಟ ಪ್ರತಿಯಲ್ಲಿ ೪೮ ಅಧ್ಯಾಯಗಳಿಗೆ ಗ್ರಂಥವು ಪೂರ್ಣವಾದ ಹಾಗಿದೆ. ಆದರೆ ಈ ಪ್ರತಿಯಲ್ಲಿ ಅಷ್ಟು ಭಾಗವೂ ಇರುವುದಲ್ಲದೆ ಮುಂದಿನ ಒಂದು ಅಧ್ಯಾಯದ ಸೂಚನೆಯ ಪದ್ಯವೂ ಇದೆ. ಇದರಿಂದ ಈ ಪ್ರತಿಯನ್ನು ಅಸಮಗ್ರವೆಂದು ಹೇಳಬೇಕಾಗುತ್ತದೆ. ಈ ಗ್ರಂಥವನ್ನೇ ಪ್ರಾಧಾನ್ಯವಾಗಿ ಎಣಿಸಿದರೆ ಹಿಂದಿನ ಪ್ರತಿಯನ್ನೂ ಅಸಮಗ್ರವೆನ್ನಲೇ ಬೇಕಾಗುವುದು. ಈ ಪ್ರತಿಯು ಸ್ವಲ್ಪ ಶಿಥಿಲ. ಅಕ್ಷರಗಳು ಚೆನ್ನಾಗಿವೆ ಉಳಿದ ವಿಷಯಗಳನ್ನು ಹಿಂದಿನ ನಂಬರಿನಲ್ಲಿ ನೋಡಿ ತಿಳಿಯುವುದು.

No. 202. ಕೈಶಿಕ ಪುರಾಣ.

KAIŚIKAPURĀNA.

Substance, palm leaf. Size, 16 × 1¼ inches. Pages, 18. Lines, 3 on a page. Character, Kanarese. Condition, slightly injured. Appearance, old. Mode of writing, good.

Begins on fol. 43*a*. The other works herein are :—(1) Gajēndrāmōksā 1*a*, (2) Nārāyanakavaca 52*a*.

Complete.

A prose rendering in Kanarese describing the story of Kaiśikapurana, which forms a portion of the Varāhapurāṇa. The name of the author is not given.

Beginning :

ಸಹಸ್ರಬಾಹು ಸಂಯುಕ್ತನಾಗಿ ಸರ್ವಾಭರಣಭೂಷಿತನಾಗಿ ಶಂಖಚಕ್ರಾದಿದಿವ್ಯಾಯುಧಧರನಾಗಿ ವರಾಹರೂಪಿಯಾದ ಸರ್ವೇಶ್ವರನಂ ನೋಡಿ ಸಂಹೃಷ್ಟೆಯಾಗಿ ಭೂದೇವಿ (ಯು) ಸಾಷ್ಟಾಂಗವಾಗಿ ದಂಡಪ್ರಣಾಮವಂ ಮಾಡಿ, ಒಂದುಮಾತಂ ಬಿನ್ನಹಮಾಡಿದಳು.

ಶ್ರೀಭೂಮಿರುವಾಚ :—ಸ್ವಾಮಿ ! ತಾನು ನಿಮ್ಮವಿಷಯದಲ್ಲಿ ಶಿಷ್ಯೆಯಾಗಿ ಭಕ್ತೆಯೂ ದಾಸಿಯೂ ಆದುದರಿಂದ ತನ್ನಕುರಿತು ಸಕಲ (ಜನ) ಪ್ರಾಣಿಗಳಿಗೂ ಸ್ವರ್ಗಾಪವರ್ಗ ಸಾಧನವಾದ ಲಘೂಪಾಯವನ್ನು ಬುದ್ಧಿಗಲಿಸತಕ್ಕದ್ದು.

ಶ್ರೀವರಾಹಉವಾಚ.—ಕೇಳು ! ಭೂದೇವಿಯೆ ! ಸ್ವರ್ಗಾಪವರ್ಗ ಸಾಧನವಾದ ಲಘೂಪಾಯವನ್ನು ಕೇಳು. ಹರಿವಾಸರದ ಜಾಗರಣದಲ್ಲಿ, ಆವನಾದೊಡಂ ತಮ್ಮಗುಣ ಕರ್ಮಾಂಕಿತಂಗಳಾದ ಸಂಕೀರ್ತನೆಯಂ ಮಾಡುತ್ತಲಿದ್ದಾನು ಆಕೀರ್ತನೆಯಲ್ಲಿ ಎಷ್ಟು ಅಕ್ಷರವಿದ್ದೀತು ಅಷ್ಟುಸಾವಿರವರ್ಷವೂ ಸ್ವರ್ಗಲೋಕದಲ್ಲಿ ವಾಸವಂ ಮಾಡಿಕೊಂಡು ಇರುವನು. ಅಂತು ಮಲ್ಲದೆ ಗುಣರೂಪಗಳಲ್ಲಿಯೂ ಶ್ರೇಷ್ಠನಾಗಿ ಸಕಲಧರ್ಮಜ್ಞಾನಿಯಾಗಿ ದೇವೇಂದ್ರನ

ಅರ್ಧಾಸನದಲ್ಲಿ ವಾಸವಂ ಮಾಡಿಕೊಂಡು ಇರುವನು. ಸ್ವರ್ಗಲೋಕದಲ್ಲಿರುವ [ವ] ನೂ (ಸ್ವರ್ಗದಲ್ಲಿದ್ದವರೂ) ತಮ್ಮಲ್ಲಿ ಭಕ್ತಿಯುಳ್ಳವನಾಗಿದ್ದರೆ, ಶೀಘ್ರದಲ್ಲಿ ಅದಂ ಬಿಟ್ಟು ನಾವಾ ಗಾನ ಪರಾಯಣನಾಗಿ ಸಾಯುಜ್ಯವನ್ನೈದುವನು.

End :

ಎಲೈ! ಪರಮ ಭಾಗವತನೆ! ನೀನು ಮಹಾತ್ಮನು. ನಿನ್ನ ಮಹಿಮೆಯಿಂದಲೂ, ನಿನ್ನ ಸಂಕೀರ್ತನೆಯ ಮಹಿಮೆಯಿಂದಲೂ, ಈಯೆನ್ನ ಶರೀರವಂ ಬಿಡಿಸಿ ರಕ್ಷಿಸುಯೆಂದು ಶರಣಾಗತನಾದನು. ಅದಂ ಕೇಳಿ ತಮ್ಮ ಭಕ್ತನು ದಯಾಳುವಾದುದರಿಂದ ಶರಣಾಗತನಾದುದೇ ಒಳ್ಳೆತೆಂದು ತಾನು ಸ್ವಾಮಿಯ ಸನ್ನಿಧಿಯಲ್ಲಿ ನಾರಾಯಣಂಗೆ ಪ್ರೀತಿಯಾಗಿ ಮಾಡಿದ ಸಂಕೀರ್ತನೆಯ ಕಡೆಯಲ್ಲಿ ಮಾಡಿದ ಕೈಶಿಕರಾಗವೆಂಬ ಗಾನದ ಫಲವನ್ನು ನಿನಗೆ ಕೊಡುತ್ತಲಿದೇನೆ ಅದರಿಂದ ನಿನ್ನ ಬ್ರಹ್ಮರಾಕ್ಷಸ ಸ್ವರೂಪವನ್ನು ಬಿಟ್ಟು ಎಂದಿನಂತೆ ಬ್ರಾಹ್ಮಣನಾಗು ಎಂದು ಅನುಗ್ರಹವಂ ಮಾಡಿದನು.' ಆತನ ಮಹಿಮೆಯಿಂದಲೂ, ಗಾನಪ್ರಭಾವದಿಂದಲೂ, ಆ ಕ್ಷಣವೇ ಮುಕ್ತನಾಗಿ ಆ ರಾಕ್ಷಸ ಸ್ವರೂಪ (ವನ್ನೂ) (ದಿಂದ) ಬಿಡಲ್ಪಟ್ಟು ಎಂದಿನಂತೆ ಬ್ರಾಹ್ಮಣನಾದನು.

ಕೇಳು! ಭೂದೇವಿಯೆ! ಆ ಬ್ರಾಹ್ಮಣನು ತಮ್ಮ ಭಕ್ತನಲ್ಲದೆ ಯಿದ್ದರೂ, ಆ ಬ್ರಾಹ್ಮಣನಿಗಿಂತಲೂ, ತಮ್ಮ ಭಕ್ತನಾದ ಶ್ವಪಚನಾದ ನೀಚನೇ ದೊಡ್ಡವನು ಎಂಬುದಕ್ಕೆ ಇದೇ ದೃಷ್ಟಾಂತವು. ಆ ಸಮಯದಲ್ಲಿ ಎಂದಿನಂತೆ ಬ್ರಾಹ್ಮಣನಾಗಿ ನಾರಾಯಣನ ಭಕ್ತನಾದನು. ಇಲ್ಲಿ ತಮ್ಮ ಭಕ್ತನು ಎಂದಿನಂತೆ ಪುತ್ರದಾರಾದಿಗಳೊಡನೆ ಸುಖದಲ್ಲಿದ್ದು ಮತ್ತು ಗಾನವ್ರತನಾಗಿಯೂ ಇದ್ದು ನಾರಾಯಣನ ಪದವನೆಯ್ದಿದನು—ಎಂದು ಭೂದೇವಿಗೆ ಆದಿವರಾಹಸ್ವಾಮಿ ಬುದ್ಧಿಗಲಿಸಿದ, ಎಂಬಲ್ಲಿಗೆ;

Colophon :

ವರಾಹಪುರಾಣದ ನಾಲ್ವತ್ತುನಾಲ್ಕನೆಯ ಅಧ್ಯಾಯ ಸಮಾಪ್ತಂ.

(ವಿ.ವಿ.) —

ವರಾಹ ಪುರಾಣಾಂತರ್ಗತ ಕೈಶಿಕ ಪುರಾಣ ಸಮಗ್ರ. ಸ್ವಲ್ಪ ಶಿಥಿಲ. ಲಿಪಿ ಉತ್ತಮ. ಕವಿ ಯಾರೆಂಬುದು ತಿಳಿದು ಬರುವುದಿಲ್ಲ. ಈ ಗ್ರಂಥವು ಸಂಸ್ಕೃತ ಗ್ರಂಥದ ಪರಿವರ್ತನವಾಗಿದೆ

No. 203. ಗಜೇಂದ್ರ ಮೋಕ್ಷ-

GAJĒNDRAMŌKṢA.

Substance, palm-leaf. Size, 16 × 2¼ inches. Pages, 84. Lines, 3 on a page. Character, Kanarese. Condition, slightly injured. Appearance, old. Mode of writing, good and free from mistakes.

Begins on fol. 1*a*. The other works here in are :—(1) Kaisikapurana 43a. (2) Nārāyanakavaca 52*a*.

Contains the Gajēndramōkṣa complete in three sandhis.

A poem in the Bhāminiṣatpadi metre describing the story of Gajēndramōkṣa, which forms a portion of Karnātaka Bhāgavata; by Nityātmaśukayogi. For other particulars see under No. 139 *ante*.

Beginning :

ಸೂ ॥ ಶಾಪವಶದಲಿ ಗಜವೆನಿಸಿ ವರ।
ಭೂಪ ನಿಂದ್ರದ್ಯುಮ್ನ ನೆಂಬ ಮ ।
ಹಾಪುರುಷ ನೆಸೆದನು ತ್ರಿಕೂಟ ಗಿರೀಂದ್ರ ಶಿಖರದಲಿ ॥
ಅರಸ ಕೇಳಾ ಪಾಂಡ್ಯದೇಶದ ।
ಧರಣಿಪತಿ ಧರ್ಮಾತ್ಮನೆಸೆದನು ।
ಧರೆಯು ಲಿಂದ್ರದ್ಯುಮ್ನ ನೆಂಬಬಿಧಾನವನು ಪಡೆದು ॥
ಪರಮ ವಿಷ್ಣುವ್ರತ ಪರಾಯಣ ।
ನುರುಗುಣಾಂಬುಧಿ ನಿಯಮಿತಾಂತಃ ।
ಕರಣ ನಚ್ಯುತ ಗೋತ್ರನಿರತ ನಮೋಘ ಚಾರಿತ್ರ ॥
ಒಂದುದಿವಸ ಕುಲಾಚಲಾಶ್ರಮ ।
ಮಂದಿರದಲಾ ಭೂಪ ಪರಮಾ ।
ನಂದದಲಿ ಗೋವಿಂದನಂಘ್ರಿಪರಾಗ ನಿಷ್ಠೆಯಲಿ ॥
ನಿಂದು ಪದದಲಿ ತತ್ಪದಾಬ್ಜ ।
ದ್ವಂದ್ವವನು ಪೂಜಿಸುತ ಮೌನದ ।
ಲಂದು ಕುಳ್ಳಿರ್ದನು ಜಟಾಧರ ನೇಕಚಿತ್ತದಲಿ ॥
ಬಂದನಲ್ಲಿ ಗಗಸ್ತ್ಯಮುನಿ ಭೂ ।
ಪೇಂದ್ರ ನಿದ್ದಾಶ್ರಮಕೆ ಶಿಷ್ಯರ ।
ವೃಂದದಲಿ ಸಂಪನ್ನ ಗುಣವಾರಿಧಿ ಯುದ್ವಚ್ಚೆಯಲಿ ॥
ವಂದಿಸದೆ ಪೂಜಿಸದೆ ನುಡಿಸದೆ ।
ವಂದ್ಯನನು ಕುಳ್ಳಿರಲು ಗರ್ವಿತ ।
ನೆಂದು ಕೋಪಾಟೋಪದಲಿ ಮುನಿನಾಥ ನಿಂತೆಂದ ॥

* * *

ಮಡದಿಯರ ಹಿಡಿಹಿಡಿದು ಸರಸಿಯು ।
ಮಡುವಿನೊಳ್ ಗದ್ಮತ್ತ ಜಲವನು ।
ಕುಡಿಯುಲಿರೆವುತ ಕೂಡೆ ಚಲುವಾಡುತ್ತ ವಿಹರಿಸುತ ॥
ನಡೆದು ನೆಲೆಯನು ತೋರಿಸುತ ಕೃತಿ ।
ವಿಡಿದು ನಡೆಸುವ ಸಾಧು ಶಿಷ್ಯರ ।
ಗಡಣವನು ಸದ್ಗುರು ವಿನಂತಿರ ಲೆಸೆದ ನೊಲವಿನಲಿ ॥
ಸರಸಿಜದ ಪರಿಮಳವನಾ ಮಧು ।
ಕರ ಮನೋಹರ ಗೀತವನು ಬಂ ।
ಧುರ ತಟಾಕದ ಲಕ್ಷ್ಮಿಯನು ತತ್ತೀರ ವನಲತೆಯು ॥
ಪರಮಶೋಭೆಯ ನಾಳಿಸುತ ಸುರ ।
ವರರು ಪೊಗಳಲು ವಿಹರಿಸಿದ ನಾ ।
ಸರಸಿಯಲಿ ನಿತ್ಯಾತ್ಮದಾಸನು ಕರಿಣಿಗಳು ಸಹಿತ ॥

Colophon :

ಸಂಧಿ ಸಮಾಪ್ತಂ.

ಶ್ರೀವರನು ಶಾಶ್ವತನ ಖಿಳ ವೇ ।
ದಾವಳೀ ಸಂಸ್ತುತ್ಯ ನಮಿತ ಗು ।
ಣಾವಲಂಬನ ನಂಬುಜೋದ್ಭವ ಮುಖ್ಯ ಸುರವಂದ್ಯ ॥
ದೇವದೇವ ವಿಶೇಷ ಧರಣೀ ।
ದೇವ ಗೋದ್ವಿಜ ರಕ್ಷಣಾರ್ಥ ಕೃ ।
ತಾವತಾರನು ಮಾಳ್ಕೆಯೋಗಕ್ಷೇಮವನು ಜಗಕೆ ॥

ನೆಗಳು ನುಂಗಿದ ಯೂಥಪತಿ ಪದ ।
ಯುಗವ ನೆನೆಯಲು ಪರಮ ಕರುಣಾ ।
ಳುಗಳ ದೇವನು ಕಾಯ್ದು ಮೆರೆದನು ಭಕ್ತ ವಶ್ಯತೆಯ ॥

End:

ಅವನಿಪತಿ! ಕೇಳಂತು ಕರುಣಾ ।
ರ್ಣವನ ಮಂಗಳಪುಣ್ಯ ಚಾರಿ ।
ತ್ರವನು ನಿನಗಭಿವರ್ಣಿಸಿದೆ ನಿಭರಾಜಮೋಕ್ಷವನು॥
ಶ್ರವಣ ಮಾತ್ರದ ಲಖಿಳ ಸುಖಸೌ ।
ಖ್ಯವನು ಪುಣ್ಯವ ನಾಯುವನು ಮಾ ।

ಡುವುದು ಸುಲಲಿತ ಭುಕ್ತಿ ಮುಕ್ತಿಯ ನೀವು ದೀಥರೆಗೆ ॥
ಕೇಳದಡೆ ದುಸ್ವಪ್ನನಾಶನ ।
ಪಾಲಿಸಿದ ಡೆಘಕುಲ ವಿನಾಶನ ।
ವೇಳದಿಟದಿಂದೊಮ್ಮೆ ಕೇಳಲು ಮನನ ಮಾಡಿದೊಡೆ ॥

ಆಲಯುವ ಮಾಡುವನು ಲಕ್ಷ್ಮೀ ।
ಲೋಲ ನವರೊಳಗೊಲಿದು ತ್ರಿಭುವನ ।
ಪಾಲಕನು ನಿತ್ಯಾತ್ಮ ಕೃಷ್ಣ ನಶೇಷಜನಬಂಧು ॥

Colophon:

ಸಂಧಿ ಸಮಾಪ್ತಂ.

(ವಿ.ವಿ.)—

ಕರ್ಣಾಟಕ ಭಾಗವತಾಂತರ್ಗತ ಗಜೇಂದ್ರ ಮೋಕ್ಷ ಸಮಗ್ರ. ಸ್ವಲ್ಪ ಶಿಥಿಲ. ಲಿಪಿ ಉತ್ತಮ. ತಪ್ಪುಗಳಿಲ್ಲ. ಗ್ರಂಥಪೋತವಿಲ್ಲ. ಕವಿ ನಿತ್ಯಾತ್ಮ ಶುಯೋಗಿಯು. ಅಗಸ್ತ್ಯ ಮುನಿಯ ಶಾಪದಿಂದ ಗಜರೂಪವನ್ನು ಧರಿಸಿದ ಇಂದ್ರದ್ಯುಮ್ನನೆಂಬರಾಜನು ಕರಿಣಿಗಳೊಳ ಗೂಡಿ ಸರಸ್ಸಿನಲ್ಲಿ ನೀರಾಟವನಾಡುತ್ತಿರುವ ಕಾಲದಲ್ಲಿ, ಬಂದು ಮೊಸಳೆಯು ಗಜರಾಜನ ಕಾಲುಗಳನ್ನು ಹಿಡಿದು ಒಳಕ್ಕೆ ಸೆಳೆಯುತ್ತಿರಲು, ಅದರಿಂದ ಬಿಡಿಸಿಕೊಳ್ಳಲಸಮರ್ಥನಾದ ಯೂಥಪತಿಯು ಅಚ್ಯುತನನ್ನು ಧ್ಯಾನಿಸಲು, ನಾರಾಯಣನು ಮೆಚ್ಚಿ, ಆತನ ಕಷ್ಟವನ್ನು ನಿವಾರಿಸಿ, ಆತನಿಗೆ ಮೋಕ್ಷವನ್ನು ಕೊಟ್ಟುದು ಕಥಾವಿಷಯವು.

No. 204. ಗಜೇಂದ್ರ ಮೋಕ್ಷ.

GAJENDRAMŌKSA.

Substance, Śrītaḷa. Size, $10\frac{3}{4} \times 1\frac{3}{4}$ inches. Pages, 8. Lines, 7 on a page. Character, Kanarese. Condition, slightly injured. Appearance, old. Mode of writing, not bad, but not free from mistakes.

Incomplete.

Same work as the above.

(ವಿ.ವಿ.)—

ಗಜೇಂದ್ರಮೋಕ್ಷ. ಅಸಮಗ್ರ. ಸ್ವಲ್ಪಶಿಥಿಲ. ಲಿಪಿ ಸಾಮಾನ್ಯ. ತಪ್ಪುಗಳೂ ಉಂಟು. ಕವಿ ನಿತ್ಯಾತ್ಮ ಶುಕಯೋಗಿ. ಹಿಂದೆ ವರ್ಣಿತವಾದ ಗ್ರಂಥವೇಸರಿ.

No. 205 ಗಜೇಂದ್ರ ಮೋಕ್ಷ.

GAJENDRAMŌKSA.

Substance, Śrītaḷa. Size, $7\frac{15}{16} \times 1\frac{3}{4}$ inches. Pages, 28. Lines, 9 on a page. Character, Kanarese. Condition, injured. Appearance, old. Mode of writing, not bad, and free from mistakes.

Contains the Gajēndramōkṣa complete.

Same work as the above.

(ವಿ.ವಿ.)—

ಗಜೇಂದ್ರಮೋಕ್ಷ ಸಮಗ್ರ. ಶಿಥಿಲ. ಲಿಪಿ ಸಾಮಾನ್ಯ. ತಪ್ಪುಗಳಿಲ್ಲವೆನ್ನಬಹುದು. ಕವಿ ನಿತ್ಯಾತ್ಮಶುಕಯೋಗಿ. ಹಿಂದೆ ವರ್ಣಿತವಾದ ಗ್ರಂಥವೇಸರಿ. ಉಳಿದ ವಿಷಯಗಳನ್ನು ಹಿಂದಣ ನಂಬರಿನಲ್ಲಿ ನೋಡಿ ತಿಳಿಯುವುದು.

No. 206. ಘೋರಾಸುರ ಯುದ್ಧ.

GHŌRĀSURAYUDDHA.

Substance, palm-leaf. Size, $12\frac{7}{16} \times 1\frac{5}{16}$ inches. Pages, 192. Lines, 8 on a page. Character, Kanarese. Condition, much injured. Appearance, old. Mode of writing, good but not free from mistakes.

Contains the Sandhis 39 to 45 complete and 38 and 46 incomplete.

A poem in Kanarese in the Vārdhakaṣaṭpadi metre describing the story of Ghōrāsura, son of Tvaṣṭṛ. At the end of each Sandhi the word 'Aviralasiddhalinga' is found. The name of the author is not given. It is stated in the Kavicaritre that this book contains only 8 Sandhis and 617 stanzas.

Beginning:

. . . .

. . . .

. . . .

ಚಿತ್ರವಿಪು ದಿಂತೊಪ್ಪ ತಿರ್ಪ . . . ಗೆ ॥

ಪ್ರೊತ್ತಿಡಿದು ಪರಭಾಗದಲಿ ತೋರುವ ಪಡೆಯು ।

ಸುತ್ತಿ . . . . ವೈರದೆ ॥

* * * *

. . . . ।

. . . . ।

. . . ತ್ರಿಯರ ಮಾನಭಂಗಂ ಗೊಂಡೆ ವಧು . . . ಗಳು ॥

. ರತೆ ಮುತ್ತಿ . . . . ವರಕೂಡೆ . . . . . . ।

. . . . ।

. ರಲತ್ತ ಲಿತ್ತಲವಿರಳ ಸಿದ್ಧಲಿಂ . . . . ಮುಂ ಕೂಲಿಷೆ ಭುಜನು ।

Colophon :

ಅಂತು ಸಂಧಿ 38 ಕ್ಕಂ ಸಮಾಪ್ತಂ.

. . . . . . ಂದೆ ಘೋರಾಸುರನ ಬಲ . ವಿ ।

ಹರಿ . ಷ ದಿಂಕುಲಿಷೆ ಭುಜನಾಲಿಸಿದ ಪ . ।

. ರಿ ಯನು . . . . ॥

* * * *

ಅಳಯಲೆರಡರ್ಬುದದ ದನುಜ ರರೆ ನಿಮಿಷದೊಳ್ ।

ಉಳದವರ್ ಬೆಂಗೊಟ್ಟು ಪೋಗುತಿರ ಲಂತದಂ ।

ತಿಳದೊಡನೆ ಗೃಧ್ರ ಮುಖನೆದೆಂಬ ದೈತ್ಯತಾಂ ಕ್ರಮವನಾರಿಸಿಕೊಳುತ್ತೆ ॥

ತಳುವದಲೆ ದಿವ್ಯೌಷಧಿಯನು ಗಾಯಂಗಳ್ಗೆ ।

ಬಳದು (ಸ) ಲೇಪವ ನೀರ ಮುಕ್ಕುಳಸು ತೊಲವಿನಿಂ ।

ಪಳುಕು ಬಿಳಯಲೆಯುಷ್ಟಭಾಗಂಗಳಂ ಸಪಿದು ಮಡಿವಸನಮಂ ಪೊದೆವುತೆ ॥

ಪದೆಪಿನಿಂ ಮತ್ತೊಂದು ನವವರೂಥವ ನೇರ್ದು ।

ಹದವಿಲ್ಲನಾಂತು ಜೇಗೆಯ್ವು ತತಿರಭಸದಿಂ ।

ಬೆದರ್ದು ಬಹದೈತ್ಯರ್ಗೆ ಯಭಯವನು ನೀಡುತ್ತೆ ತನ್ನದಹ ಸೇನೆ ಸಹಿತ ॥

ಕದುಬಿ ಮಿಗೆ ಹಂಸಕೇತುವ ನೈದೆ ತಾಗುತ್ತೆ ।

ಮದಮುಖನಹುಲು ನಿಶಾಚರರ ನೀರಣದಲ್ಲಿ ।

ಸದೆದೆನೆಂದೆಂಬ ಗರ್ವವ ನುಳವುತಿದಿರಾಗು ನಿನ್ನಡಗ ನರೆನಿಮಿಷದೊಳ್ ॥

End :

ಏನೆಂಬೆ? ನಮಮ! ಬಲ್ಪಿಡಿಲೆರಗೆ ಪೆರ್ಚ್ಚಿಟ್ಟು ।

ತಾನೆರಡು ಭಾಗಮಪ್ಪಂದದಿಂ ರಕ್ಕಸರ ।

ಸೇನೆಯುಂತದು ವುಭಯ ಪಾರ್ಶ್ವದೊಳ್ . . . ವಿಟ್ಟುದಾಂ ಪೊಡ

. . . . . ಲು ॥

ದಾನವರ್ ತನ್ಮಾರ್ಗವಿಡಿದು ಪಿಂದ್ಯತರ್ಪ ।

ನೂನಬಳನೌಭರಿಯ ನುರೆ ಮುಸುಂಕಲ್ ಹರಿಯ ।

ನಾನೆವಿಂಡಾ ವರಿಸಿ . . . . . ಕಟಕಟಾ ಬೇಳನೇನಚ್ಚರಿಯನು

ಅರರೆ ಸ್ೌಭಗಿಯು ತಾಂ ಸಿಂಹನಾದಂ ಗೆಯ್ದು ।

ದುರದೀರ . . . . ।

(ವಿ.ವಿ.)—

ಘೋರಾಸುರ ಯುದ್ಧದಲ್ಲಿ 39 ರಿಂದ 45 ಅಧ್ಯಾಯಗಳು ಪೂರ್ಣವಾಗಿಯೂ, 38, 46 ನೆಯ ಅಧ್ಯಾಯಗಳು ಅಪೂರ್ಣವಾಗಿಯೂ ಇವೆ. ಅತಿಶಿಥಿಲ. ಅಕ್ಷರಗಳು ಚೆನ್ನಾಗಿವೆ. ಗ್ರಂಥಪಾತವುಂಟು. ಸಂಧಿಗಳಕೊನೆಯಲ್ಲಿ ' ಅವಿರಳೇಶ್ವರ ಸಿದ್ಧಲಿಂಗೇಶ್ವರ ನಾಜ್ಞೆಯಿಂ ' ಎಂಬ ಅಂಕಿತವಿದೆ. ಕವಿ ಯಾರೆಂಬುದು ತಿಳಿಯದು. ಕವಿಚರಿತ್ರೆಯಲ್ಲಿ, " ಇದು ಸಂಧಿ 8, ಪದ್ಯ 617. ಕೊನೆಯ ಪದ್ಯದಲ್ಲಿ " ಧರೆಯೊಳೀಕಥೆಯ ನಿರದೋದಿಯಾಲಿಪ ಜನರಕರುಣದಿಂ ಪಾರ್ವತೀಶನು ಪಾಲಿಪನು " ಎಂದೂ " ಪರಮ ಭಕ್ತನು ಅವಿರಳಸಿದ್ಧಲಿಂಗೇಶನಾಣತಿಯೊಳ್ ವರ್ಣಿಸಿದನು " ಎಂದೂಹೇಳಿದೆ. ಇವನು ಸು. 1700 ರಲ್ಲಿ ಇದ್ದಿರಬಹುದು.

ಕಥಾಗರ್ಭ : " ವೃತ್ರನನ್ನು ಇಂದ್ರನು ಕೊಲ್ಲಲು ತ್ವಷ್ಟೃವಿಗೆ ಕೋಪಬಂದು ತನಗೆ ಇಂದ್ರನನ್ನು ಕೊಲ್ಲುವ ಮಗನಾಗ ಬೇಕೆಂದು ಮಾರಣ ಕೃತ್ಯದಲ್ಲಿ ಹೋಮಮಾಡಲು ಘೋರಾಸುರನು ಹುಟ್ಟಿದನು. ಇದನನ್ನು ಮಣಿಪುರದ ಕುಲಿಶಭುಜನೆಂಬ ಶಿವಭಕ್ತನು ನಾರದರ ಉಪದೇಶದಿಂದ ಜಯಿಸಿದನು."

ಈ ಕಥೆಯನ್ನು ಕೈಲಾಸದಲ್ಲಿ ಶಿವನ ಆಜ್ಞಾನುಸಾರವಾಗಿ ನಿರಂಜನಮುನಿ ಪಾರ್ವತಿಗೆ ಹೇಳಿದನು. ಇದನ್ನು ಪುಲಿಗೆರೆಯೂರ ಸೋಮೇಶನ ಕರುಣದಿಂದ ಕವಿಯು ಕನ್ನಡದಲ್ಲಿ ರಚಿಸಿದಂತೆ ಹೇಳುತ್ತಾನೆ. ಸಂಧಿಗಳ ಕೊನೆಯಲ್ಲಿ ಅವಿರಳೇಶ್ವರ ಸಿದ್ಧಲಿಂಗೇಶನ ಅಂಕಿತವಿದೆ. ಗ್ರಂಥಾವತಾರದಲ್ಲಿ ಗಣೇಶ ಸರಸ್ವತಿ ಇವರುಗಳಸ್ತುತಿಯಿದೆ, " ಎಂದಿದೆ.

No. 207. ದಶಾವತಾರ ಚರಿತ್ರೆ.

DASĀVATĀRA CARITRE.

Substance, palm-leaf. Size, $17\frac{1}{2} \times 1\frac{3}{8}$ inches. Pages, 154. Lines, 7 on a pεge. Charaster, Kanarese. Condition, very much injured. Appearance, old. Mode of writing, good.

Begins on fol. 7a. The other works herein are Bhikṣātanacaritre 78a, Ramacarite 84a Auṣadhagaḷu 89.

Wants a portiōn in the beginning ; otherwise complete.

A work in prose and verse describing the story of the ten incarnations of Lord Viṣṇu. The author Mallarasa was the son of Tippāmbikā and Timmarasa mantri who belonged to Śrīvatsagōtrā and Kamme sect of Smārta Brahmins and lived in Nāravangala. It is stated that the author was a disciple of Sadānanda.

Beginning :

ಹೃದಯಾಬ್ಜದ ಕರುಣ ರಸಾಂ ।
ಬುಧಿ ಮೆಲ್ಲನೆಸೆತ್ತನಲ್ಕೆ ಲಕ್ಷ್ಮೀ ರಮಣಂ ॥
ಮುದದಿಂದಜಮುನಿ ಸುರಪ ।
ಗೋದವಿಸಿ ಸಂತಸವ ಮಿಗೆ ನಿರೂಪಿಸುತಿರ್ದಂ ॥

ತಮೆನೆಂಬೊರ್ವ ಸುರ (ದ್ವಿಷಂ) ಸಕಲ ಲೋಕಾಧೀಶದಿಕ್ಪಾಲರೊಳ್ ।
ಮುನಿದು ಬಾಹ . ಶ ಶಕ್ತಿಯಿಂ ನೆ . . . . ॥
. . . . ।
. . . ರ್ದಂದದೆ ವೇದ ಶಾಸ್ತ್ರಚಯಮಂ ಕೊಂಡುಯ್ದನೈ ನಾರದಾ ॥
ಸುರರೆಲ್ಲರ್ ತಪಜಪದಿಂ ।
ಘುರಮಂ ಜಯಿಸುವರು ತಮ್ಮ ಮಂತ್ರಾದಿಯು ತ ॥
ಸ್ಮರಿಸುವೆನೆನುತಂ ಪೂರ್ವಾ ।
ಮಾರಹಿಯಿಂದಂ ವೇದಮಾತೆಯುಂ ಕಮಲಭವಾ ॥

ವ॥ ಇಂತೆಂದು ನಿ . . ಗೊಟ್ಟು . . . .

* * * *

ಧರಣೀ ಸೌಖ್ಯಕರಂ ಗದಾಯುಧಧರಂ ಶ್ರೀಶಾರ್ಙ್ಗ ಚಕ್ರೋದ್ಧರಂ ॥
ವರಪೀತಾಂಬರ [ದಿವ್ಯ] ಕೌಸ್ತುಭಧರಂ ಲಕ್ಷ್ಮೀಧರಂ ಭೂಧರಂ ॥
ಸುರಸಂದೋಹ ಪುರಂದರೋನ್ನತಪರಂ ಶೋಭಾಕರಂ ನಿರ್ಮಲಂ ।
ಪರಮಾಮೋದಕರಂ ಜಗತ್ಪ್ರಕರಮಂ ರಕ್ಷಿಕ್ಕೆ - ನಾರಾಯಣಂ ॥

Colophon :

ಇದು ವೃಂದಾರಕವೃಂದ ಮಣಿಖಚಿತ ಮಕುಟರಂಜಿತ ಶ್ರೀಮದಾದಿನಾರಾಯಣ ಶ್ರೀಚರಣ ಸರಸಿರುಹಮಕರಂದ ಷಟ್ಚರಣ ಸಲ್ಲಲಿತ ಮಲ್ಲರಸಾಂಕ ವಿರಚಿತಮಪ್ಪ ದಶಾವತಾರ ಚರಿತ್ರ ಮಹಾ ಪ್ರಬಂಧದೊಳ್ ಕ್ಷೀರಾಬ್ಧಿವರ್ಣನ . . . . . . ತಾರ ತಮಾಸುರ ವಿಜಯ (ಮಂ) ಸಮಸ್ತ ಸುರಸಂತೋಷಂ ದ್ವಿತೀಯಾ ಶ್ವಾಸಂ.—

ಶ್ರೀ ಲಕ್ಷ್ಮೀಕಾಂತಂ ನಾರದಾದಿ ಮುನಿನುತಿ . ಕ್ರ . . . . ।

* * * *

ತೀವಿದ ರಾತ್ರಿಯುಳ್ಳಿ ಧರಣೀತಳದಿಂ ಪೊರಮಟ್ಟು ಬಂದು ಮೈ ।
ರಾವಣನೆಂಬ ರಾವಣನ ಸೋ(ದರಿಗಂ ರಘುರಾಮಲಕ್ಷ್ಮಣ ॥
ಗರ್ಜವರಿಸಿರ್ದ ನಿದ್ರೆಯೊಳೆ ಬಂದು ವಿಭೀಷಣನಂದದಿಂದೆ ಬಂ ।
ದಾವಗ ಕೊಂಡು ಪೋದ ನಂದರಿಯದಂತಿರೆ ಕೊಂಡುಗ್ವುದುಂ ಮಹಾತ್ಮರಂ॥(?)

ವ ॥ ಅಂತು ಕೊಂಡುಯ್ಯಲಿತ್ತಲಂತಃಪುರದೊಳ್ ಗಜಬಜಂಪುಟ್ಟೆ ಬಾಂಧವರ್ಗಂದು ಹನುಮಂತನಂ ಕೇಳ್ಪುದುಂ ; ವಿಭೀಷಣನಲ್ಲದೆ ಬಂದವರಿಲ್ಲಮೆನೆ, ವಿಬೀಷಣನಿದೇನೆಂದು ವಿಚಾರಮಂಕೊಂಡು ಎನ್ನರೂಪಂ ಮೈರಾವಣಂಗೆ ಕೊಟ್ಟಪರ್ನದರಿಂ ಮೈರಾವಣನಲ್ಲಿಗೆ ಬೇಗಂ ಪೋಗವೇಳ್ಕುಮೆನೆ, ಹನುಮಂತಂ ಪೋಗಿ, ರಾವಣನ ಕ್ರೀಡಾಸರೋವರದ ಕಮಲನಾಳದಲಿಳದು ಪಾತಾಳಲಂಕೆಯಂ ಪೊಕ್ಕು ತೂಗಿ ಬಿಡುವ ಜಲಭಾಂಡದೊಳಡಗಿ ಪೋಗಿ ರಾಮಲಕ್ಷ್ಮಣರಂ ಬಲಿಗೆಯ್ಯಲಿರ್ದ ಮೈರಾವಣನಂ ಕೊಂದು ರಾಮಲಕ್ಷ್ಮಣರ ನಿದ್ರೆಕೆಡದಂತೆ ಹನುಮಂತಂ ಮಗುಳೆ ತಂದು ಅರಮನೆಯೊಳಳುಹ ಲನಿತರೊಳೆ ಸೂರ್ಯ ನುದಯಿಸುವುದುಂ ;

End ;

ಧರಿಣೀ ಸೌಖ್ಯಕರಂ ಗದಾಯುಧಧರಂ ಶ್ರೀಶಾರ್ಜ ಚಕ್ರೋದ್ಧರಂ ।
ವರಪೀತಾಂಬರ ದಿವ್ಯಕೌಸ್ತು . . . .

. . . . ಕೋಭಾಕರಂ ನಿರ್ಮಲಂ ॥
ಪರಮಾನಂದಕರಂ ಜಗತ್ಪ್ರಕರಮಂ ರಕ್ಷಿಕ್ಕೆ ನಾರಾಯಣಂ ॥

Colophon:

ಇದು ವೃಂದಾರಕ ವೃಂದ ಮಣಿಖಚಿತ ಮಕುಟರಂಜಿತ ಶ್ರೀಮದಾದಿ ನಾರಾಯಣ ಶ್ರೀಚರಣ ಸರಸಿರುಹಮಕರಂದ ಷಟ್ಚರಣ ಸಲ್ಲಲಿತ ಮಲ್ಲರಸಾಂಕ ವಿರಚಿತಮಪ್ಪ ದಶಾವತಾರ ಚರಿತ್ರ ಪ್ರಬಂಧದೊಳ್ ಕಲ್ಕ್ಯವತಾರೋದ್ಯೋಗಂ ಏಕಾದಶಾಶ್ವಾಸಂ.

ಕಂದವೃತ್ತ ವಚನಗಳು ೧೧೭೯.

(ವಿ.ವಿ.)—

ದಶಾವತಾರ ಚರಿತ್ರ 7 ನೆಯ ಪತ್ರದಿಂದ ಕೊನೆಯುವರೆಗೂ ಇದೆ. ಆದರೆ ಮಧ್ಯದಲ್ಲಿ ವಿಶೇಷವಾಗಿ ಓಲೆಗಳು ಮುರಿದುಹೋಗಿರುತ್ತವೆ. ಅತಿಶಿಥಿಲ. ಲಿಪಿ ಉತ್ತಮ. ಗ್ರಂಥಪಾತ ಹೇರಳವಾಗಿದೆ. ಕವಿ ಮಲ್ಲರಸ. ಬ್ರಾಹ್ಮಣಕವಿ. ಶ್ರೀವತ್ಸ ಗೋತ್ರದವನು. ಕಮ್ಮೆ ವಂಶದವನು. ಇವನತಂದೆ ತಿಮ್ಮರಸಮಂತ್ರಿ. ತಾಯಿ ತಿಪ್ಪಾಂಬಿಕೆ. ಗುರು ಸದಾನಂದ. ಸ್ಥಳ ನಾರವಂಗಲ. ಕಾಲ ಸು. 1680 (ಕ್ರಿ. ಶ.)

No. 208. ದುರ್ಗಾ ವಿಜಯ-
DURGĀVIJAYA.

Substance, palm-leaf. Size, $14\frac{1}{8} \times 1\frac{5}{8}$ inches. Pages, 85. Lines, 6 on a page. Character, Kanarese. Condition, injured. Appearance, old. Mode of writing, good.

Complete.

A poem in Kanarese describing the story of the Goddess Durgā The work is composed in the form of Yakṣagāna.

Date of transcription.—Twelfth day of the dark fortnight of the lunar month Mārgaśira in the year Yuva.

Name of the scribe.—Siddhalingaṇṇa of Ṭeṅkasāla.

Beginning:

. . . . ಶುಭಗಾತ್ರ । ಜೀಮೂತಶ್ಯಾಮ । ಜಿತಕಾಮ ಸ್ತುತಿಪ್ರೇಮ । ಸಾಮಗಾನ ವಿನೋದ ಸಜ್ಜನಾರ್ಚಿತಪಾದ । ಕಾಮಿತಾರ್ಥದ . . . . . . ಕ ರುಣಿಸುಭಕ್ತ ಕೃಪಾಂಗ ಕಾವೇರಿರಂಗ ॥

ಅರುಣಪಂಕಜಮಧ್ಯ ಅಖಿಳಾಗಮ ಸಾಧ್ಯ । ತರಣಿಕೋಟಿ ಪ್ರಕಾಶ . . . .

* * * *

॥ ಕಂದ ॥

ಕಟುಗರ ಕಳ್ವಸಿಗಾರರ ।
ಕುಟಿಲರ ಕುಲಟಿಗರ ಕ್ರೂರ ಕುತ್ಸಿತಗಾರರ ॥ ?
ಭಟರ‍್ಗಳ ಬಂಧನ ಗೃಹಘೋ ।
ಟಕಗಜಶಾಲೆಗಳ ಕೇರಿಕೇರಿಯು ಕಂಡಳ್ ॥ ?

॥ ಆದಿತಾಳ ॥

ಕಂಡಳು ಖಳಕುಲೋ । ದ್ದಂಡನೋಲಗದೊಳು ॥
ದಿಂಡೆಯು ದೈತ್ಯರ । ಖಂಡ ನಾಯಕರ ॥
ಪೊಗಳಲೆನ್ನಳವಲ್ಲ । ಪುರುಹೂತಗನಿತಿಲ್ಲ ॥
ವಿಗಡ ದಾನವನಿಪ್ಪ । ಸಿರಿಯು ವೈಖರಿಯು ॥

॥ ವಚನ ॥

ಎಲ್ವೈದೇಹ ರಾಜೇಂದ್ರಗೆ ಪರಬಲವಿಪಿನ ಪಾವಕ ರೂಪಿಣಿ, ಆ ದುರ್ಗಾಸುರನ ಓಲಗದಲ್ಲಿ ಕುಳ್ಳಿರ್ದ ಬಲವಂತ ನಿಶಾಚರರು ಆರಾರೆಂದೊಡೆ, ಪವಮಾನಗಮ್ಯ, ಪ್ರತಾಪವರ್ಧನ, ಪ್ರಳಯ ನಿರ್ಘೋಷ, ಉತ್ಪಾತವರ್ಷ, ಉನ್ಮತ್ತ ಪ್ರಭಂಜನ, ಊರ್ಧ್ವಕೇಶ, ವೃಂದಾರಕದಲ್ಲಣ, ಉಗ್ರ ನಿಗ್ರಹ, ವೃತ್ತಾಕ್ಷ, ರಕ್ತಾಕ್ಷ, ಪಿಂಗಳಾಕ್ಷ, ಪಿಶಂಗಾಕ್ಷ, ಹರಿದಕ್ಷ, ಧೂಮ್ರಾಕ್ಷ, ವಜ್ರದಂಷ್ಟ್ರ, ವಿಶಾಲವಕ್ತ್ರ, ವಿಸ್ತೀರ್ಣ ದಂತ, ಉಗ್ರಜಿಹ್ವ, ಬ್ರಹ್ಮಾಂಡ ಭಯಂಕರ, ಅಘೋರ ಶೈರ್ವಾಹ, ಅದ್ಭುತ ಗೋನಸ, ಕಿನ್ನರಕಿಲ್ಬಿಷ, ಕೇಸರಾನನರೆಂಬ ತಾಣ್ಯಾಸಾರರಲ್ಲದೆ, ಸಿರಿವ್ರೋಲೈಪ ರಕ್ಕಸರರಸರ ಲೆಕ್ಕಿಪಡೆ ಉಗ್ಗಡಣೆಗೆ ನಿಲ್ಲದು. ಇಂತಪ್ಪ ಸ್ತೋಮ ಅಸುರೇಂದ್ರ ನಿರುತ್ತಿರಲು, ಅಂತರಿಕ್ಷದಲ್ಲಿ ಬಂದು ಕಾಲರಾತ್ರಿ ಕಾಣಿಸಿಕೊಂಡಳದೆಂತೆನೆ.

॥ ದ್ವಿಪದೆ ॥

ಪೊನ್ನಪೊಸಪುತ್ಥಳಿಯೆ । ಪ್ರೂಗೋಲನರಗಿಳಿಯೆ ॥
ಸನ್ನಲಿಗೆ ಮೊಲೆಯ ಚಾಪಷಿಡ್ಡ ಸತ್ಕಲೆ ನೆಲೆಯ ॥
ಬಿನ್ನಾಣಿ ಕೇಳು ಬೆಗಳೆ ದುರ್ಗಾಸುರನಾಳು ।
ವನ್ನವಗೆಯನ ತಾಯುಜಸವಿಡಿದ ದೂರದಲೀಕೆಯ ॥

End :

॥ ಜಂಪೆ ॥

ಎಲ್ಲರಿಗೆ ಚೈತನ್ಯ ವೆಗ್ಗಳಿಸಿ ಬಹುಮಾನ
ದ . . . ದೊಳು ಕಲಿಹರು ಅಖಿಳಾಂಗದವರು
ಶಿಷ್ಟರಾಗಲಿಯೆಂದು ಬೆಟ್ಟದಲಿತಾನಿಂದು ।
ಕೊಟ್ಟಳಭಯದ ಕರವ ಕುಲರಾಜ್ಯಸ್ಥಿರವ ॥
ಇಂತು ದುರ್ಗಾವಿಜಯ ವಾರು ಬರೆದೋದಿದರು ।
ಸಂತಾನ ಬ್ರಹ್ಮಾಯು ಸಾಮ್ರಾಜ್ಯ ಸಿರಿಯು ॥
ಈ ಕಥಾಮೃತ ಪ್ರಸಂಗವ ಕೇಳ್ದ ಸುಜನರ್ಗೆ ।
ಶೋಕರುಜೆ ದುಸ್ಸ್ವಪ್ನ ಶತ್ರುಭಯ ವರ್ಜಿತವು ॥

॥ ಕಂದ ॥

ಕೆಂಗಬರ ಗೆಳೆಯ ಹೂವಿನ ।
ಸಿಂಗರ ಮೊಗದವಳೆ ಶ್ರೀಪರಮೇಶ್ವರಿ ॥
ಜಂಗಲಾರ್ಪಿತನ ಶಿಕ್ಷಿಸಿ । ?
ಮಂಗಳವುಚ್ಚಹಳ ಶಿವನ ಅಂಗಳ . ಚ್ಚಳು ॥ ?

Colophon :

ದುರ್ಗಾವಿಜಯ ಸಮಾಪ್ತಂ.

(ವಿ-ವಿ.)—

ದುರ್ಗಾವಿಜಯ ಸಮಗ್ರ. ಯಕ್ಷಗಾನ ರೂಪವಾದುದು. ಶಿಥಿಲ. ಅಕ್ಷರಗಳು ಚೆನ್ನಾಗಿವೆ. ಗ್ರಂಥಾದಿಯಲ್ಲಿ ಎರಡು ಓಲೆಗಳು ಮುರಿದು ಹೋಗಿವೆ. ಗ್ರಂಥಾಂತ್ಯದಲ್ಲಿ ; ಯುವ ನಾಮ ಸಂವತ್ಸರದ ಮಾರ್ಗಶಿರ ಬ ೧೦ ಲ್ಲೂ ಟೆಂಕನಾಲೆ ಸಿದ್ಧಲಿಂಗಣ್ಣನು ಬರೆದ ದುರ್ಗಾವಿಜಯದ ಪುಸ್ತಕಕ್ಕೆ ಮಂಗಳ ಮಹಾಶ್ರೀ.—ಎಂದಿದೆ.

No. 209. ನಂಜುಂಡೇಶ್ವರ ಚರಿತ್ರ-
NANJUṆḌEŚVARA CARITRE.

Substance, palm-leaf. Size, $13\frac{5}{16} \times 1\frac{3}{16}$ inches. Pages, 52. Lines, 5 on a page. Character, Kanarese. Condition, injured. Appearance, old. Mode of writing, good, but not free from mistakes.

Complete in five Sandhis.

A poem in the Bhāminiṣaṭpadi metre describing the story of God Nañjuṇḍēśvara worshipped in the well-known Śiva Shrine situated in Nanjungud on the bank of the river Kapila in state of Mysore. The name of the author is not given.

Beginning :

ಶ್ರೀರಜತಗಿರಿವಾಸ ವಾಸವ ।
ವಾರಿಜಾಸನ ಮುಖ್ಯಸನ್ನುತ ।
ಚಾರುಚರಣಾಂಭೋಜ ಗಂಗಾಜೂಟ ಶಶಿಮೌಳಿ ॥
ಭೂರಿ ಮಹಿಮೋದ್ಧಾರ ಶಂಕರ ।
ವಾರಣಾಸ್ಯನ ಜನಕ ಧೂರ್ಜಟಿ ।
ಮೇರುನಗಕೋದಂಡ ಜಯಜಯ ಸ್ವಾಮಿ ನಂಜುಂಡ ॥

*   *   *   *

ಈನವ್ಯ ಸತ್ಕೃತಿಯ ಕಥೆಗ ಭಿ ।
ಧಾನವೇನೆನೆ ಮುನ್ನ ಧೂರ್ಜಟಿ ।
ಮಾನಿನೀಮಣಿಯೆನಿಪ ತನ್ನಯ ರಮಣಿ ಗಿರಿಸುತೆಗೆ ॥
ಸಾನುರಾಗದೊಳೊಪ್ಪಿ ಪೇಳ್ದ ನ ।
ವೀನ ನಂಜುಂಡೇಶಚರಿತೆ ಮ ।
ಹಾನುಭಾವರು ಕೇಳ್ವುದು ಲಾಲಿಸಿ ಭಕ್ತಿಪೂರ್ವದಲಿ ॥
ವರತಪೋಧನ ನೆನಿಪಸೂತನು ।
ಪರಮ ಋಷಿಗಣ ಶೌನಕಾದ್ಯರಿ ।
ಗೊರೆದ ನೈಮಿಷವನದೊಳಷ್ಟಾದಶ ಪುರಾಣಗಳ ॥
ಮೆರೆವುದದರೊಳ್ ಸ್ಕಂದ ನಾಮದ ।
ಹೊರಿಗೆಯಲಿ ಪೌರಾಣ ಶಿವಕಥೆ ।
ತುರುಗಿ ರಾಜಿಸೆ ಬಹಳ ನಿರುಪಮ ಲಕ್ಷಗ್ರಂಥದೊಳು ॥

ಕೊಡೆಯಾಮೇಲಿಂ ಬಿಟ್ಟು ಸ್ಕಂದನ ।
ಮೃಡನು ಕೇಳಲು ಕಥೆಯ ಶೈಲಜೆ ।
ಯೊಡನೊಡನೆ ಶಿವಗರುಹೆ ಧೂರ್ಜಟಿ ಬಹಳ ಕಥೆಗಳನು ॥

ಬಿಡದೆ ಗ್ರಹಿಸಿದ ನಾರು ಮೊಗದಿಂ ।
ಗಡಣಿಸುವ ಬಾಲಕನು ಕಥೆಗಳ ।
ಪೊಡವಿಯೊಳು ಪೆಸರಾದುದರರಿಂ ಸ್ಕಂದ ಪೌರಾಣ.

ಆ ಕುಮಾರ ಸನತ್ಕುಮಾರಂ ।
ಗಾ ಕೆನಾಳತೆಯಿಂ ನಿರೂಪಿಸೆ ।
ಜೋಕೆ ಮಿಗಿಲರುಹಿದನು ಬಳಕಾ ಮೌನಿ ವ್ಯಾಸಂಗೆ ॥

ವೀಕೆಗೊಳುತವರಿಂದ ಸೂತನು ।
ಲೋಕಕತಿಶಯವಾಗೆ ಗ್ರಹಿಸಿದ ।
ಬೇಕೆನಿಸಿತೆಲ್ಲರ್ಗೆ ಜಗದೊಳು ಸ್ಕಂದ ಪೌರಾಣ ॥

ರಾಜಿಪಾ ಪೌರಾಣದೊಳ್ಮಗೆ ।
ತೇಜವಾಂತಿಹ ಸ್ಥಳದ ಮಹಿಮೆಯ ।
ಸೋಜಿಗವ ವಿಸ್ತರಿಪೆ ನುರುಷಟ್ಪದಿಯ ಮಾರ್ಗದಲಿ ॥

ಭೂಜನರು ನಲಿವಂತೆ ಸುಜನ ಸ ।
ಮಾಜವಂ ಸಂಧಿಸಲು ಮುದದಿಂ ।
ರಾಜಶೇಖರ ನೊಪ್ಪುಗೊಳ್ಳಲೀ ಕೃತಿಯ ಬಿನ್ನಣಕೆ ॥

* * * *

ಎಂದು ನಂಜುಂಡೇಶ ಚರಿತೆಯ ।
ನಿಂದುಶೇಖರ ನೊರೆದು ಹಿಮಗಿರಿ ।
ನಂದನೆಗೆ ವಿಸ್ತರಿಸೆ ಬಳಕಾ ಸೂತ್ರಮುನಿವರನು ॥
ಬೃಂದಮಾಗಿಹ ಶೌನಕಾದ್ಯರಿ ।
ಗಂದವಿಸೆ ಪೇಳಿದನು ಪರಮಾ ।
ನಂದಮಯ ಸಂಬಂಧಿ ರಾಜಿಸಲೊಂದನೆಯ ಸಂಧಿ ॥

Colophon:

ಪ್ರಥಮ ಸಂಧಿ ಸಮಾಪ್ತಂ.

ಎಂದು ಸಾತ್ಯವತೇಯ ಶಿಷ್ಯನು ।
ಹೊಂದಿ ಹೊಗಳಲು ಕೇಳಿ ಋಷಿಗಣ।
ವೆಂದರೆಲೆ ಸೂತಾಖ್ಯ ಮುಂದಣ ಕಥೆಯ ವಿಸ್ತರಿಸಿ ॥

ಇಂದು ಶೇಖರ ಶಿವನದಾರಾ ।
ಗಂದು ತಾ ಪ್ರತ್ಯಕ್ಷನಾದದ ।
ರಂದವನು ತಮಗುಸುರು ನೀನೆನೆ ಸೂತ ನಿಂತೆಂದ ।

End

ಪರಮಮುನಿ ಕೌಂಡಿನ್ಯ ನೇಳ್ಗಿಯು ।
ಧರೆಗೆ ತೋಷಂ ತೊಪ್ಪಿ ತೇಜದಿ ।
ಧರಿಸಿ ಕೌಂಡಿಣಿಯೆಂಬ ನಾಮಾಧಿಕ್ಯದೆಲ್ಲಿಯೊಳು ॥

ಗರಳಪುರ ದೆಡೆಗೈದಿ ಕಪಿಲೆಯು ।
ಬೆರೆದು ಕಾವೇರಿಯನು ಸಂಧಿಸಿ ।
ಶರಧಿಪನ ನೊಡವೆರೆಯು ಲೈದಿತು ತೀವ್ರ ತರವಾಗಿ ॥

ಎಂದು ಸೂತನು ನೈಮಿಷದ ಮುನಿ ।
ವೃಂದಗಳಿಗರುಹಿದನು ಶೈಲಜೆ ।
ಗಂದು ಧೂರ್ಜಟಿಯು ಸಿರ್ದ ನಂಜುಂಡೇಶ ಚರಿತ್ರೆಯನು ॥
ಕುಂದನೆಣಿಸದೆ ಭಕ್ತಿಪೂರ್ವಕ ।
ದಿಂದ ಲಾಲಿಸಿ ಸುಜನರಧಿಕಾ ।
ನಂದಮಯ ಸಂಬಂಧಿ ರಾಜಿಸಲೈದನೆಯ ಸಂಧಿ ॥

Colophon:

ಅಂತು ಸಂಧಿ ೫ ಕ್ಕಂ ಮಂಗಳಂ.

(ವಿ-ವಿ.)—

ಮೈಸೂರಿನ ಹತ್ತಿರ "ನಂಜನಗೂಡು" ಎಂಬುದಾಗಿ ಪ್ರಸಿದ್ಧವಾದ ಶಿವಕ್ಷೇತ್ರ ಮಾಹಾತ್ಮ್ಯವನ್ನು ತಿಳಿಸುವ ಕಾರಣ ಈ ಗ್ರಂಥಕ್ಕೆ ನಂಜುಂಡೇಶ್ವರ ಚರಿತ್ರೆ ಎಂಬ ಹೆಸರು. ಸವ: ಗ್ರ. ಶಿಥಿಲ. ಅಕ್ಷರಗಳು ಚೆನ್ನಾಗಿವೆ. ತಪ್ಪುಗಳು ಕಡಿಮೆ. ಕವಿಯಾರೆಂದು ಸ್ಪಷ್ಟವಾಗಿ ತಿಳಿಯುವುದಿಲ್ಲ. ಆದರೆ ಸಂಧಿಗಳ ಕೊನೆಯಲ್ಲಿ 'ಆನಂದಮಯ ಸಂಬಂಧಿ' ಎಂಬ ಅಂಕಿತವು ಮಾತ್ರ ಇದೆ.

No. 210, ನಾರಾಯಣ ಕವಚ.

NĀRĀYAṆA KAVACA.

Substance, palm-leaf. Size, 16 × 1¼ inches. Pages, 16. Lines, 3 on a page. Character, Kanarese. Condition, slightly injured. Appearance, old. Mode of writing, good, and free from mistakes.

The other works herein are.—(1) Gajēndramōkṣa *1a.* (2) Kiśikapurāṇa *43a.*

Complete.

A poem in Kanarese in the Bhāminiṣaṭpadi metre describing the story of Nārāyaṇa Kavaca, as taught by Viśvarūpa to Indra. This story forms part of the Bhāgavata, by Nityātmaśukayōgi. For other particulars see under No. 139 ante.

Beginning:

ಸೂ॥ ರಾಯ ಮುನಿಕರುಣಿಸಿದ ನಾ ನಾ ।
ರಾಯಣಾಹ್ವಯ ಕವಚವನು ಸುರ ।
ರಾಯ ಗಾಹವ ವಿಜಯ ಸಿದ್ಧಿಗೆ ಸಾಧನ ವಿದೆಸಲು ॥
ಪ್ರಣವ ರೂಪನೆ ಹೇಳು ನಾರಾ ।
ಯಣಕವಚವೆಂದೇನು ಯೋಗ್ಯರ ।
ಗಣನೆಗಾಬಹಡದರ ಸಾಂಗೋಪಾಂಗ ಮುದ್ರೆಯನು ॥
ರಣೆಯಲಾ ನಿಮ್ಮಡಿ ನಿಜಾಂಘ್ರಿ ।
ಪ್ರಣತರಿಗೆ ಸುರರಾಯ ನಸುರರ ।
ಹಣಿದವೆಂತೆನ ಲವನಿಪತಿಗೆ ಮುನೀಂದ್ರ ನಿಂತೆಂದ ॥
ಚಿತ್ತವಿಸು ನೃಪ ಸುರರ ಪೌರೋ ।
ಹಿತ್ಯವನು ಕೈಕೊಂಡು ವಿಪ್ರಕು ।
ಲೋತ್ತಮನು ಬೆಸಗೊಂಡೊಡಿಂದ್ರಂಗೆಂದ ನಿದನೊಲಿದು ॥
ಶತ್ರುವಿಜಯಕೆ ಸಾಧನವ ನೊರೆ ।
ವೃತ್ತಂ ನಾರಾಯಣಕವಚವೆಂ ।
ಬುತ್ತಮೋತ್ತಮ ಮಂತ್ರವನು ನೀನಿದನು ಧರಿಸೆಂದ ॥
ತೊಳೆದು ಕಾಲುಮೊಗಂಗಳನು ನಿ ।
ರ್ಮಳನೆನಿಸಿ ಕುಳ್ಳಿರ್ದು ನಿರ್ವ್ಯಾ ।
ಕುಲತೆಯಲಿ ಸುಪವಿತ್ರಕರ ನುತ್ತರ ದಿಶಾಮುಖದಿ ॥
ಸಲೆ ಕರಾಂಗನ್ಯಾಸ ಮಂತ್ರಂ ।
ಗಳಲಿ ರಕ್ಷಿತನಾಗಿ ಪೋಪುದು ।
ಬಲವದರಿಮಂಡಲವ ನೆಲೆ ಸುರನಾಥ ಕೇಳೆಂದ ॥

End

ಹೇಳಿದೆನು ನಾರಾಯಣಾಹ್ವಯ ।
ಮೂಲಮಂತ್ರದ ಕವಚವನು ರಿಪು ।
ಜಾಲ ದುರಿತಾಪನ್ನಿವಾರಣ ಕರಣವಿಧಿಗಳಿಗೆ ॥
ಹೇಳುವೆನು ಮೇಣಾವ ನರ್ಥಿಸಿ ।
ಕೇಳುವನು ರಿಪುರಾಜ ಚೋರಭ ।
ಯಾಳಿ ಯಾತನ ಮುಟ್ಟಲರಿಯದು ಶಕ್ರ ಕೇಳೆಂದ ॥
ಧರಿಸು ನೀನಿದ ತಂದೆ ! ನಿನ್ನನು ।
ಪರರಿ ಗೀಕ್ಷಿಸಲರಿದೆನುತ ಭೂ ।
ಸುರಕುಲೋತ್ತಮ ನಮರಪತಿ ಗುಪದೇಶಿಸಿದ ನಿದನು ॥
ಧರೆಯಲಾವನು ಧರಿಸುವನು ನರ ।
ವರನು ನಿರ್ಭಯ ನಾತನಗಣಿತ ।
ವರಮಹಿಮ ನಿತ್ಯಾತ್ಮಗೋಪೀನಾಥ ನೊಲವಿನಲಿ ॥

Colophon:

ನಾರಾಯಣ ಕವಚ ಸಂಧಿ ಸಮಾಪ್ತಂ.

(ವಿ.ವಿ.)—

ಸಮಗ್ರ. ಇದು ಭಾಗವತದ ಒಂದು ಸಣ್ಣ ಭಾಗವು. ಅಸುರರನ್ನು ಗೆಲ್ಲಲು ಇಂದ್ರನಿಗೆ ವಿಶ್ವರೂಪನು ನಾರಾಯಣ ಕವಚವೆಂಬ ಮಂತ್ರವನ್ನು ಉಪದೇಶಮಾಡಿದುದೇ ಈ ಸಂಧಿಯ ವಿಷಯವು. ಸ್ವಲ್ಪ ಶಿಥಿಲ. ಲಿಪಿ ಉತ್ತಮ. ತಪ್ಪುಗಳಿಲ್ಲ. ಕವಿ ನಿತ್ಯಾತ್ಮ ಶುಕಯೋಗಿ. ಉಳಿದ ವಿಷಯಗಳನ್ನು ೧೩೯ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

No. 211 ಪದ್ಮ ಪುರಾಣ.

PADMAPURĀṆA.

Substance, palm-leaf. Size, $12\frac{1}{2} \times 1\frac{5}{16}$ inches. Pages, 16. Lines, 4 on a page. Character, Kanarese. Condition, injured. Appearance, old. Mode of writing, good.

Begins on fol. 1 *a*. The other work herein is.—Paścimraṅga-māhātmye. 9*a*.

Contains 16th Adyāya in Vasiṣṭha Dilīpasamvāda in the Pādmapurāṇa.

A prose work in Kanarese narrating the greatness importance of chastity as taught by Vasiṣṭha to Dilīpa. The portion herein forms a part of the Padmapurāṇa. The name of the author is not given.

Beginning.

ವಸಿಷ್ಠ ಮುನೀಶ್ವರನು ದಿಳೀಪ ಚಕ್ರವರ್ತಿಗೆ ಪತಿವ್ರತೆಯರ ಧರ್ಮವನ್ನು ನಿರೂಪಿಸುತಲಿದ್ದಾರು—ಲೋಕದಲ್ಲಿ ಸ್ತ್ರೀಯರಿಗೆ ಪತಿಯು ಕುರೂಪಿಯಾದರೂ, ಆಚಾರವಿಲ್ಲದವನಾದರೂ ಒಳ್ಳೆಯ ನಡೆತೆಯಿಲ್ಲದವನಾದರೂ, ಕೋಪವುಳ್ಳವನಾದರೂ, ಕಾಮಪರನಾದರೂ ಆ ಪತಿಯನ್ನು ಯಾವಾಗಲೂ ದೇವತೆಯನ್ನು ಪೂಜಿಸುವ ಮರ್‍ಯಾದೆಯಲ್ಲಿ ಮನೋವಾಕ್ಕಾಯಗಳಿಂದ [ಲು] ಬಹುಮಾನವಂ ಮಾಡಬೇಕು. ಸ್ತ್ರೀಯು ಬಾಲೆಯಾದರೂ ಯೌವನಸ್ಥೆಯಾದರೂ, ವೃದ್ಧೆಯಾದರೂ ಪತಿಯ ಅಪ್ಪಣೆಯಿಂದಲೇ ಗೃಹಕೃತ್ಯ ಮಾಡಬೇಕು. ಮತ್ತು ಅಹಂಕಾರ ಆಶೆ ಕೋಪಗಳನ್ನು ಬಿಟ್ಟು ಪತಿಯ ಮನಸ್ಸಿಗೆ ಸಂತೋಷವ ಮಾಡಬೇಕು. ಪತಿಯಲ್ಲದೆ ಮಿಕ್ಕಿನವರು ಪ್ರೀತಿಯಿಂದ ನೋಡಿದರೂ, ಬೇಕಾದ ವಸ್ತುವ ಕೋಟ್ಟರೂ ಒಳ್ಳೆಯ ಮಾತನಾಡಿದರೂ ಅದನ್ನು ಸಡ್ಡೆ ಮಾಡದೆ ಪತಿಯನ್ನು ಮನೋವಾಕ್ಕಾಯಗಳಿಂದ [ಲು] ಆವ ಸ್ತ್ರೀಯು ಪೂಜಿಸುತ್ತಲಿದ್ದಾಳಿಯೋ ಅವಳು ಲೋಕಕ್ಕೆ ಭೂಷಣಳೆನಿಸಿ ಪತಿವ್ರತೆಯೆನಿಸುವಳು.

*　　*　　*　　*

ಪರರ ಗುಣಂಗಳಂ ಕೊಂಡಾಡುವುದು, ನಿಂದಿಸುವುದು, ಹೆಚ್ಚಾಗಿ ಮಾತಾಡುವುದು, ನಗುವುದು, ಕೋಪಿಸಿಕೊಂಬುದು ಮೊದಲಾದುವನ್ನು ಬಿಟ್ಟಿರಬೇಕು. ಪತಿಯಿಲ್ಲದೆ ಅನ್ನಪಾನಾದಿಗಳನ್ನು ಮನೆಯಲ್ಲಿ ಮಾಡಲಾಗದು. ಪತಿಯು ಊರಿಗೆ ಹೋಗಿದ್ದಲ್ಲಿ ತಾನು ಮಿಂಯಣ ಹೂ, ಗಂಧ, ಬಣ್ಣ, ಬಂಗಾರ ಮುಂತಾದುವನ್ನು ಪರಿಹರಿಸಿರಬೇಕು. ಸ್ತ್ರೀಯು ಮೈನೆರೆದಾರಭ್ಯ ತಿಂಗಳು ತಿಂಗಳು ಸೂತಕವಾದ ಮೂರು ದಿನದೊಳಗೆ ಮೊದಲು ದಿನ ಚಂಡಾಲಿಗೆ ಸಮಾನೆಯೆನಿಸುವಳು. ಎರಡನೆಯ ದಿನದಲ್ಲಿ ಬ್ರಹ್ಮಘಾತಿಯ ಮಾಡಿದ ವಳಗೆ ಸಮಾನೆಯೆನಿ

ಸುವಳು ಮೂರನೆಯ ದಿನದಲ್ಲಿ ಅದರಲ್ಲಿ ಅರ್ಧ ಪಾಪಹೋಗಿ ಇರುವಳು. ನಾಲ್ಕ ನೆಯ ದಿನದಲ್ಲಿ ಪರಿಶುದ್ಧೆಯಾಗುವಳು. ಈ ಸೂತಕವಾದ ಮೂರು ದಿನದೊಳಗೆ ಸ್ನಾನ ಶೌಚಗಳು, ಅಳುವುದು, ನಗುವುದು, ದಾರಿ ನಡೆವುದು, ಹೂ, ಗಂಧ, ಹಗಲುನಿದ್ದೆ, ಮಾನಸಿಕ ವಾಚಿಕ ದೇವಪೂಜೆ, ನಮಸ್ಕಾರ ಮುಂತಾದುವನ್ನು ಪರಿಹರಿಸಬೇಕು.

End :

ಪತಿಯು ಊರಿಗೆ ಬಂದಾಗ ತಾನು ಸಂತೋಷದಿಂದ ಮಿಾಮಣವನ್ನು ಮಾಡಿ ಉಚಿತವಾದ ಆಭರಣವನಿಟ್ಟು ಸಂತೋಷದಿಂದ ಪತಿಯು ಸಮೀಪಕ್ಕೆಯ್ದಿ ಉಪಚರಿಸುವುದು. ಈ ಪತಿವ್ರತೆಯು ಧರ್ಮದಲ್ಲಿ ಆವ ಸ್ತ್ರೀಯು ನಡೆಯುತ್ತಲಿದ್ದಾಳೆಯೋ ಅವಳಗೆ ಇಹಲೋಕದಲ್ಲಿಯೂ ಕೀರ್ತಿಯುಂಟಾಗಿ, ಪರಲೋಕದಲ್ಲಿಯೂ ಸದ್ಗತಿಯನ್ನೈದುವಳು (?) ತನ್ನ ಪತಿಯು ಸಂತೋಷಿಸಿದರೆ ತನಗೆ • ಸರ್ವಾಭೀಷ್ಟಗಳೂ ಉಂಟಾಗುವುವು. ಅವನು ಕೋಪಿಸಿದರೆ ಧರ್ಮಾರ್ಥಕಾಮಂಗಳು ಮೂರೂ ಇಲ್ಲದೇ ಹೋಗುವುವು ಆದುದರಿಂದ ಎಲ್ಲಾ ದೇವತೆಗಳಗಿಂತ ಪತಿಯೇ ಅತಿಶಯವಾಗಿರುವನು. ಆದುದರಿಂದ ಪತಿಯು ಸಂತೋಷಿಸಿದಲ್ಲಿ ಮಕ್ಕಳೂ ಸಕಲವಾದ ಭೋಗಗಳೂ, ಅತಿಶಯವಾದ ಬಣ್ಣ, ಭಂಗಾರ, ಹೂ, ಗಂಧ ಮೊದಲಾದ ಪರಿಮಳದ್ರವ್ಯ (ಗಳೂ) [ಮುಂತಾದ] ಸ್ವರ್ಗಭೋಗಗಳೂ ಇಹಲೋಕದಲ್ಲಿಯೇ, ಉಂಟಾಗಿ ಅತಿಶಯವಾದ ಕೀರ್ತಿಯುಂಟಾಗುವುದು. ಎಂದು ವಸಿಷ್ಠಮುನೀಶ್ವರನು ದಿಲೀಪ ಚಕ್ರೇಶ್ವರನಿಗೆ ಇಂಥಾ ಅತಿಶಯವಾದ ಸ್ತ್ರೀಧರ್ಮವನ್ನು ಹೇಳಲಾಗಿ ಆ ಅರಸು ಅದೇ ರೀತಿಗೆ ಸಂಸಾರದಲ್ಲಿ ಸುಖದಲ್ಲಿದ್ದು ಅನೇಕ ಯಜ್ಞಗಳನ್ನು ಮಾಡಿ, ಸುಖದಲ್ಲಿದ್ದನು.

Colophon :

ಇದು ಪದ್ಮಪುರಾಣದಲ್ಲಿ ವಸಿಷ್ಠದಿಲೀಪ ಸಂವಾದದಲ್ಲಿ ೧೬ ನೆಯ ಅಧ್ಯಾಯ.

(ವಿ.ವಿ.)—

ಪದ್ಮಪುರಾಣೋಕ್ತ ಪತಿವ್ರತಾಧರ್ಮ ಸಮಗ್ರ. ಇದನ್ನು ದಿಲೀಪನಿಗೆ ವಸಿಷ್ಠನು ಬೋಧಿಸುವನು. ಶಿಥಿಲ. ಅಕ್ಷರಗಳು ಚೆನ್ನಾಗಿವೆ. ಕನಿಯಾರೆಂಬುದು ತಿಳಿಯುವುದಿಲ್ಲ. ಸ್ತ್ರೀಯರು ಅವಶ್ಯವಾಗಿ ಕಲಿಯಬೇಕಾದ ಸದ್ಗುಣಗಳು ಚೆನ್ನಾಗಿ ಇದರಲ್ಲಿ ವರ್ಣಿತವಾಗಿದೆ.

No. 212 ಪದ್ಮಪುರಾಣ (ಉತ್ತರಖಂಡ)-
PADMAPURĀṆA (UTTARAKHAṆḌA).

Substance, plam-leaf. Size, 15 × $1\frac{1}{2}$ inches. Pages, 124. Lines, 7 on a page. Character, Kanarese. Condition, injured. Appearance, old. Mode of writing, good. Begins on fol. 10a. The other works herein are :—Bhārata. Araṇyaparva in Telugu. 1a. (2) Vēdantapadyagaḷu 8a.

This forms a part of the Padmapurāṇa and deals with the procedure to be adopted in branding the top of the arms of Śri-Vaiṣṇavas with heated metallic diagrams resembling Viṣṇu's conch and discus, and also deals with Ūrdhvāpuṇḍradhāraṇa. Mantrārthōpadēśa, and, etc. The name of the author is not known.

Beginning :

ದಿಲೀಪನು ಪ್ರಶ್ನೆಮಾಡುತ್ತಾನೆ :—ಪೂಜ್ಯನಾದಂಥ ವಸಿಷ್ಟನೆ! ಅಮೃತ ಸದೃಶವಾದಂಥ ಹರಿಭಕ್ತಿಯನ್ನು ಹೇಳು. ಸುಖವನ್ನು ಕೊಡುವಂಥ ವಿಷ್ಣು ಭಕ್ತಿಯನ್ನು ಕೇಳುವಂಥ ನನಗೆ ತೃಪ್ತಿಯಿಲ್ಲ. ತಾಪತ್ರಯಗಳೆಂಬ ವಡವಾವಹ್ನಿಯ ಜ್ವಾಲೆಗಳಿಂದ ನಿರಂತರವೂ ಸಂತಪ್ತರಾದಂಥ ಮನುಷ್ಯರುಗಳಿಗೆ ಮುನಿ ಶ್ರೇಷ್ಟನಾದಂಥ ವಸಿಷ್ಟನೆ! :ನಾರಾಯಣ ಭಕ್ತಿಯೆಂಬ ಅಮೃತ ಸದ್ರಸವನ್ನು ಹೊರತಾಗಿ ಭಯಂಕರವಾದಂಥ ಸಂಸಾರವೆಂಬ ಅಡವಿಯಲ್ಲಿ ರಕ್ಷಕವಾದಂಥಾದ್ದು ಮತ್ತೊಂದದಾವುದು. ಅದು ಕಾರಣವಾಗಿ ಶ್ರೀ ನಾರಾಯಣನ (ನ್ನು) ನಿರಂತರವೂ ಮುನೀಶ್ವರರಿಂದ ಸೇವೆ ಮಾಡಲ್ಪಟ್ಟಂಥ ಭಕ್ತಿ ಭೇದಗಳನ್ನು ವಿಸ್ತಾರವಾಗಿ ಮುನಿ ಶ್ರೇಷ್ಠಾ ಈಗ ಹೇಳು.

* * * * *

ವೈಷ್ಣವ ಲಕ್ಷಣ :—ಆಂತರ್ಯ, ಬಾಹ್ಯ, ಎಂದು ಎರಡು ಪ್ರಕಾರ. ಚಕ್ರ ಶಂಖ ವಿಧಾರಣೆ, ಬಾಹ್ಯ. ಸಂಸಾರದಲ್ಲಿ ವಿರಕ್ತಿ ಆಂತರ ಬಾಹ್ಯದಲ್ಲಿ ಆಂತರದಲ್ಲಿ ಸಮಸಾಗಿದ್ದವನು ಅದಾವನೋ ಅವನು ವೈಷ್ಣವನು. ಅದು ಕಾರಣವಾಗಿ ಚಕ್ರ ಶಂಖಧಾರಣೆ ಪ್ರಥಮ ವೈಷ್ಣವವು ಎಂದು ಹೇಳಲ್ಪಡುವುದು. (?) ಚಕ್ರ ಶಂಖ ಚಿಹ್ನೆ ರಹಿತವಾದುದು ಅ-ವೈಷ್ಣವ ಎಂದು ಹೇಳಲ್ಪಡುವುದು. ದೋಷ ರಹಿತವಾದ ಸ್ಮರಣೆಯಿಂದ ಯುಕ್ತವಾದಂಥ ತನ್ನ ಸ್ವಾಮಿಯನು ಕಾಣೋಣ. ಸಕಲ ಪ್ರಾಣಿಗಳಲ್ಲಿ ಹಿತವಿರೋಣ ಶಾಂತಗುಣವಿರೋಣ, ಇಂದ್ರಿಯಗಳಲ್ಲಿ ದ್ರವ್ಯಗಳಲ್ಲಿ ಆಸಕ್ತಿಯಿಲ್ಲದೆ ಇರೋಣ, ಹೆಂಡಿರು ಮಕ್ಕಳಲ್ಲಿ ಸಂಗ ರಹಿತನಾಗಿರೋಣ, ಯೋಗಾಭ್ಯಾಸದಲ್ಲಿ ರತನಾಗಿರೋಣ, ಅನ್ಯದೇವತಾ ಭಜನೆ ಮಾಡದೆ ಇರೋಣ, ಶ್ರೀ ನಾರಾಯಣನ ಸೇವೆ ಮಾಡೋಣ, ಇವೇ ಮೊದಲಾದುವು ಆಂತರ್ಯ ವೈಷ್ಣವ. ಅದು ಕಾರಣವಾಗಿ ಚಕ್ರ ಶಂಖಗಳ ತಪ್ತದಿಂದ ಅಂಕಿತನಾಗೋಣವು ವೈಷ್ಣವ ಎಂದು ಹೇಳಲ್ಪಡುವುದು. ಚಕ್ರಾದಿಚಿಹ್ನರಹಿತತ್ವ ದೆಸೆಯಿಂದ ವೈಷ್ಣವತ್ವವು ಎಯ್ದಲ್ಪಟ್ಟುದು.

Colophon :

ಇತಿ ಪದ್ಮಪುರಾಣೇ ಉತ್ತರಖಂಡೇ ಚಕ್ರ ಶಂಖಧಾರಣಾರ್ಥ ವಿಸ್ತಾರೋ ನಾಮ ತ್ರಿಂಶೋಧ್ಯಾಯಃ

ಶ್ರೀಶಂಕರ :—ಹೇ ಪಾರ್ವತಿಯೇ! ಊರ್ಧ್ವಪುಂಡ್ರದ ಮಾಹಾತ್ಮ್ಯೆಯನ್ನು ಹೇಳುತ್ತೇನೆ ಕೇಳು. ಬ್ರಾಹ್ಮಣನಾದಂಥವನು ಊರ್ಧ್ವಪುಂಡ್ರಧಾರಣೆ ಮಾತ್ರದ ದೆಸೆಯಿಂದಲೇ ಸಂಸಾರಬಂಧದ ದೆಸೆಯಿಂದ ಮುಕ್ತನಾಗುವನು.

End :

ತೇ ದೇವಾಃ = ಆ ದೇವತೆಗಳು. ಸತತಂ = ನಿರಂತರವುಂ. ಧನ್ಯಾಃ = ಕೃತಾರ್ಥರು. ಶಿವಾಃ = ಮಂಗಳರೂಪವಾದರು. ತತ್ರ = ಅಲ್ಲಿ. ವಿಮಾನಸ್ಥಾಃ = ವಿಮಾನದಲ್ಲಿದ್ದಂಥ. ದೇವಾಃ = ದೇವತೆಗಳು. ಸಿದ್ಧಾಃ = ಸಿದ್ಧರು. ಚಾರಣಾಃ = ಚಾರಣರು. ಕಿನ್ನರಾಃ = ಕಿನ್ನರರು. ಆನಂದಾಶ್ರುಜಲಾಪ್ಲುತಾಃ = ಆನಂದ = ಸಂತೋಷದ. ಆಶ್ರುಜಲ = ಆನಂದಭಾಷ್ಪಗಳಿಂದ. ಆಪ್ಲುತಾಃ = ತೋಯಲ್ಪಟ್ಟಂಥವರಾಗಿ. ಸತತಂ = ನಿರಂತರವು . . . .

(ವಿ.ವಿ.)—

ಪದ್ಮಪುರಾಣದ ಉತ್ತರಖಂಡದಲ್ಲಿ ೩೦ ರಿಂದ ೩೪ ಅಧ್ಯಾಯಗಳು ಪೂರ್ಣವಾಗಿಯೂ, ೩೫ ನೆಯದು ಅಪೂರ್ಣವಾಗಿಯೂ ಇರುವುದು. ಶಿಥಿಲ. ಲಿಪಿ ಉತ್ತಮ. ಕವಿಯಾರೆಂಬುದು ತಿಳಿಯುವುದಿಲ್ಲ. ಇದರಲ್ಲಿ ಚಕ್ರ ಶಂಖಧಾರಣೆ, ಊರ್ಧ್ವಪುಂಡ್ರಾರ್ಥ, ಮಂತ್ರಾರ್ಥೋಪದೇಶ ಇತ್ಯಾದಿ ವಿಷಯಗಳು ಸೂಚಿತವಾಗಿವೆ.

No. **213** ಪುಷ್ಕರಖಂಡ.

PUSKHARAKHAṆḌA.

Substance, paper. Size, $8\frac{1}{2} \times 6\frac{1}{4}$ inches. pages, 8. Lines, 25 on a page. Character, Kanarese. Condition, slightly injured. Appearance, old.

Begins on page 56. The other works herein are:—(1) Vidyāraṇyakālajñāna (1) (2) Bhaviṣyōttaranirṇaya 35. (3) Ānegondiśāsana 45. (4) Śrīśailakālajñāna 52. (5) Viparyayasthiti 53. (6) Saptaprabandha 67 (7) Arasugaḷaparampare 95. (8) Bhūtapāṇḍyarāyanavamśa 101. (9) Gērusoppeyasthalamāhātmye 103. (10) Prabhulingalīle 106. and (11) Vīraśaivatattva 113

Contains the Adhyāyas 3–25 complete in the Puṣkarakhaṇḍa.

A prose version narrating the story of the Puṣkarakhaṇḍa of the Pādmapurāṇa. The name of the author is not known.

Beginning :

ಈ ಪ್ರಕಾರ ಸಮುದ್ರಪರ್ಯಂತವಿರುವ ತೀರ್ಥ ದೇವತೆಗಳ ಹೇಳಿಯದೆ ಎಂಬಲ್ಲಿಗೆ, ದ್ವಿತೀಯೋಧ್ಯಾಯ :

ಅಥ ತೃತೀಯಾಧ್ಯಾಯದಲ್ಲಿ ಶೌನಕಋಷಿಗಳ ಸಂಗಡ ಶಾಕ್ತನೀಕನೆಂಬ ಅರಸು ಕೇಳಿದ್ದೇನೆಂದರೆ, ಈ ಕ್ರೋಡಕ್ಷೇತ್ರವು ಪ್ರಥಮ ಕ್ಷೇತ್ರ ಇರುವಂಥಾದ್ದು. ಪರಶುರಾಮ ಕ್ಷೇತ್ರವಾದುದು ಹೇಗೆಂದು ಕೇಳಲಾಗಿ. ಹೇಳಿದ ಕಥೆಯು, ಏನೆಂದರೆ :—ಈ ಕ್ಷೇತ್ರ ಮೊದಲಾದ ಅನೇಕ ಕ್ಷೇತ್ರವಿದ್ದವು. ಹಾಗಿರುತ್ತಿರಲಾಗಿ ಒಂದಾನೊಂದು ಕಾಲದಲ್ಲಿ ಈ ಸಮುದ್ರವನ್ನು ಅಗಸ್ತ್ಯರು ಪಾನಮಾಡಿರುತ್ತಿರಲಾಗಿ ಸಗರಮಹಾರಾಯನ ಪುತ್ರರು ಯಜ್ಞಾಶ್ವಾನ್ವೇಷಣ ನಿಮಿತ್ತವಾಗಿ ಭೂಮೇರಾಸಮಂತಾತ್‌ಸ್ಥಿತ ಸಮುದ್ರವಂ ಖನನಮಾಡಿ ಪಾತಾಳದಲ್ಲಿರುವ ಕಪಿಲ ಮಹಾಮುನಿಯ ನೇತ್ರಾಗ್ನಿಯಿಂದ ದಹನವಾದ ಪಿತೃಗಳ ಉದ್ಧರಣಾರ್ಥವಾಗಿ ಭಗೀರಥನು ಗಂಗಾದೇವಿಯನ್ನು ಸ್ವರ್ಗ ಸ್ಥಿತಳಾಗಿರುವಾಕೆಯನ್ನು ಭೂಲೋಕಕ್ಕೆ ತಂದುದರಲ್ಲಿ ಸಿಂಧೂ ಸಂಗಮವಾದ ಗಂಗೆಯಿಂದ ಸಮುದ್ರವು ಪೂರಿತವಾಗಿ ಪೂರ್ವದ ಮರ್ಯಾದಾತೀತವಾಗುತ್ತಿರಲಾಗಿ, ಅಲ್ಲಿರುವ ಸಮಸ್ತ ಋಷಿಗಳು ಪರಶುರಾಮನನ್ನು ಕಂಡು ಹೇಳಲಾಗಿ, ಆ ಪರಶುರಾಮನು ಸಮುದ್ರದ ಸಮೀಪಕ್ಕೆ ಬರಲಾಗಿ ಸಮುದ್ರನು ಭಯಚಿತ್ತನಾಗಿ ; ತ್ವದ್ಧಸ್ತಸ್ಥ ಪರಶು ನಿಕ್ಷೇಪಣ ಮಾಡಿದಲ್ಲಿ [ಯಾವಲ್ಲಿ] (ಎಲ್ಲಿ) ಪರ್ಯಂತ ಬೀಳುತ್ತದೆಯೊ ಅಲ್ಲಿ ಪರ್ಯಂತ ಮರ್ಯಾದೆ ಮಾಡಿಕೊಂಡು ಇರುತ್ತೇನೆಂದು ಹೇಳಲಾಗಿ ಅದೇ ಮೇರೆಗೆ

ಪರಶು ನಿಕ್ಷೇಪಣ ಮಾಡಿದಲ್ಲಿ ದಕ್ಷಿಣೋತ್ತರ ಆಯಾವು ಪಂಚಾಶದ್ಯೋಜನ. ಪೂರ್ವ ಪಶ್ಚಿಮ ವಿಸ್ತೀರ್ಣ ತ್ರಿವಿತ್ರಿಯೋಜನ ಭೂಮಿಯನ್ನು ಗೋಕರ್ಣಾದಿ, ಸೂರ್ಯಚಂದ್ರಾರ್ಕವಾಗಿ ಬಿಟ್ಟು ಹಿಂದಕ್ಕೆ ಹೋಗಲಾಗಿ ಪೂರ್ವದಲ್ಲಿರುವ ಕ್ಷೇತ್ರಗಳಿಗೆ ಭಾರ್ಗ(ವ)ದೇಶ (?) ಎಂದು ಹೆಸರಾಯಿತು ಎಂಬಲ್ಲಿಗೆ ತೃತೀಯೋಧ್ಯಾಯ ॥

End :

೨೩ ಗಾರಭ್ಯ 25 ರ ಪರ್ಯಂತ ಕಥೆಯೇನೆಂದರೆ ಶ್ರೀ ಶಂಕರನಾರಾಯಣದೇವರ. ದಶಾಕ್ಷರ ಮಂತ್ರಧಾರವ (ಧಾರಣೆಯ) ಹೇಳಿರುವ ಅಧ್ಯಾಯ ೧. ಬ್ರಾಹ್ಮಣಾದಿ ವರ್ಣ ಚತುಷ್ಟಯವು ನಡೆಯತಕ್ಕ ವಿಚಾರ ಸಂಕ್ಷೇಪದಿಂದ ಹೇಳಿರುವ ಅಧ್ಯಾಯ ೧. ಚತುರ್ವಿಧ ಮೋಕ್ಷಗಳ ಹೇಳಿರುವ ಅಧ್ಯಾಯ ೧. ಅಂತು ಅಧ್ಯಾಯ ೩.

Colophon :

ಅಂತು (೨೫) ಇಪ್ಪತ್ತೈದು ಅಧ್ಯಾಯವು ಪದ್ಮಪುರಾಣದಲ್ಲಿರುವ ಪುಷ್ಕರ ಖಂಡದೊಳಗಿನವು.

(ವಿ.ವಿ.) —

ಪದ್ಮಪುರಾಣದ ಪುಷ್ಕರ ಖಂಡದಲ್ಲಿನ ಅಧ್ಯಾಯಗಳು ೩ ರಿಂದ ೨೫ ಸಮಗ್ರ. ಇವು ಬಹಳ ಸಂಕ್ಷೇಪವಾಗಿ ವರ್ಣಿತವಾಗಿವೆ. ಸ್ವಲ್ಪ ಶಿಥಿಲ. ಕವಿ ಇತ್ಯಾದಿ ವಿಷಯಗಳೊಂದು ತಿಳಿಯುವುದಿಲ್ಲ.

No 214. ಬ್ರಹ್ಮೋತ್ತರ ಖಂಡ.

BRAHMŌTTARAKHAṆḌA.

Substance, Śrītāḷa. Size, $10\frac{1}{2} \times 2$ inches. Pages, 490. Lines, 8 on page. Character, Kanarese. Condition, slightly injured. Appearance, old. Mode of writing, good, but not free from mistakes.

Complete, in 31 Sandhis.

A rendering in the Bhaminiṣatpadi metre describing the story of Brahmōttarakhaṇḍa, as found in the Skāndapurāṇa. The author, whose name is not given herein, mentions Udbhaṭa, Kēśirāja, Harihara, etc.

Beginning :

ಶ್ರೀಮದಮೃತಮಯೂಖ ವಿಮಲ ।
ವ್ಯೋಮಗಂಗಾತುಂಗ ವೀಚೀ ।
ಸ್ತೋಮ ಶೀಕರ ಶೀತಕರ ಪಿಂಗಳ ಜಟಾಜೂಟ ॥
ಹೈಮಗಿರಿ ಕನ್ಯಾಸು ಮಂಗಲ ।
ಧಾಮ ಕೋಮಲ ವಾಮಗಾತ್ರದ ।
ರಾಮಣೀಯಕಮೂರ್ತಿ ಶಾಂತೀಶ್ವರ ನಮೋ ಎಂಬೆ ॥

* * * *

ಲೀಸೆನಿಪ ವಾಲ್ಮೀಕಿ ವೇದ।
ವ್ಯಾಸ ಸುದ್ಭಟ ಬಾಣ ನಗ್ಗದ
ಕೇಶಿರಾಜ ಮಯೂರ ಮಲುಹಣ ಕಾಳಿದಾಸಾಂಕ ॥
ಭೂಸುರಾಗ್ರಣಿಯೆನಿಪ ಪಂಪಾ।
ವಾಸ ಹರಿದೇವಾಂಕ ಕವಿಗಳ।
ಭಾಸುರಾಂಘ್ರಿಗೆ ನಮಿಪೆ ನೀವ್ರುದು ಮತಿಗೆ ಮಂಗಳವ ॥

* * * * *

ಕಥೆಗೆ ನಾಯಕ ನೀಶ್ವರನು ಸ।
ತ್ಕಥನ ಬ್ರಹ್ಮೋತ್ತರದ ಖಂಡ।
ಸ್ಥಿತ ಮಹಾದೇವಾಖ್ಯನಾತನ ಭಕ್ತಿವಿಸ್ತಾರ ॥
ಮತಿಯೊ ಳತಿಶಯ ಭಕ್ತಜನ ಸಂ।
ತತಿಗೆ ಸೇವ್ಯವೆನಲ್ಕೆ ವರ ಸಂ।
ಸ್ಕೃತವ ಕನ್ನಡಿಸಿದೆನು ಭಾಮಿನಿಯೆಂಬ ಷಟ್ಪದದಿ ॥
ಸರಸ ಮಧುರ ಧ್ವನಿಗಳಿಂ ಬಂ।
ಧುರದ ಸುಮನೋರಾಗ ದೇಳ್ಗೆಯ।
ಸುರುಚಿರಾಯತ ವರ್ಣಗಳಲಾಕೃತನೆನಿಸ ಪೆಸರಿಂ ॥
ಪೊರೆದ ಭಾಮಿನಿಷಟ್ಪದಿಗಳಾ।
ದರದೆ ವಿದ್ವತ್ಸಭೆಯ ಹೃತ್ಪುರ।
ಸಿರುಹ ಕೋರಕಗಳನಲರ್ಚಿಸಿ ನಲಿಯದಿರ್ದಪುವೆ ॥
ಯತಿಗಣಂಗಳ ನೇಮದನುಕೂ।
ಲತೆಯಿನಾ ಸುಮನೋನುರಾಗ।
ಸ್ಥಿತಿಯ ಸದಲಂಕಾರದಿಂ ಕುಮುದಪ್ರಲೀಢತೆಯಿಂ ॥
ಸತತ ದೋಷವಿಧೂತಪರಿ ನಿ।
ಶ್ಚಿತಪದಾರ್ಥಥೆ ಮೆರೆವ್ರು ದೆನ್ನಯ।
ಕೃತಿ ಚಮತ್ಕೃತಿಯಾಗಿ ಸೂರ್ಯೋದಯದ ಪ್ರೋಲ್ಸರೆಗೆ ॥

Colophon:

ಪೀಠಿಕಾಪದ.

ಸೂ ॥ ಸಕಲಮುನಿಜನಸಹಿತಲಾ ಶೌ।
ನಕನು ಕೇಳ್ವಡೆ ಸೂತ ಪೌರಾ।
ಣಿಕನು ವಿಸ್ತರಿಸಿದನು ಶೈವಷಡಕ್ಷರದ ಘನವ ॥

End:

ಎಲೆಜಗದ್ಗುರು ಬಾದರಾಯಣ।
ಕುಲಕುಮುದ ಪೂರ್ಣೇಂದು ನಿನ್ನೀ।
ಲಲಿತವಚನ ಮಯಾಮೃತಾತ್ಮಕವಾದ ಶಿವಕಥೆಯ ॥

ಒಲಿದು ಕೇಳೆ ಕೃತಾರ್ಥ ವೃತ್ತಿಯು ।
ತಳೆದೆವೆಂದರು ತಂದು ಮುನಿಕುಲ ।
ತಿಲಕರರ್ಚಿಸಿ ನಮಿಸಿದರು ಪೌರಾಣಿಕೋತ್ತಮನ ॥
ಆವ ನಿದ ನೋದುವನು ಕೇಳುವ ।
ನಾವ ನಿದ ಹೇಳುವನು ನಲ್ಮೆಯೊ ।
ಳಾವ ನಿದ ಬರೆಸುವನು ಪಠಿಸುವನಾ ಮಹಾತ್ಮಂಗೆ ॥

ದೇವದೇವಾರಾಧ್ಯ ನಾಶ್ರಿತ ।
ಜೀವ ನತಿಶಯ ಸೌಖ್ಯಮಂ ಸಂ ।
ಭಾವಿಸುವ [ನಿಹಪರದೊಳಗೆ ಸಲೆಶಾಂತನಾಥ ಶಿವ ॥]

Colophon :

ಅಂತು ಸಂಧಿ ೩೧ ಕ್ಕಂ ಪದನು ೧೮೫೩ ಕ್ಕಂ ಮಂಗಳಂ.

(ವಿ-ವಿ.)

ಬ್ರಹ್ಮೋತ್ತರಖಂಡ ಸಮಗ್ರ. ಸ್ವಲ್ಪ ಶಿಥಿಲ. ಲಿಪಿ ಉತ್ತಮ. ತಪ್ಪುಗಳು ಕಡಿಮೆ ಎನ್ನಬಹುದು. ಕವಿಯಾರೆಂಬುದು ತಿಳಿದು ಬರುವುದಿಲ್ಲ. ಉಳಿದವಿಷಯಗಳನ್ನು ಮೇಲೆ ಉದಾಹೃತವಾಗಿರುವ ಪದ್ಯಭಾಗದಿಂದ ತಿಳಿಯುವುದು.

No. 215. ಬ್ರಹ್ಮೋತ್ತರ ಖಂಡ.

BRAHMŌTTARAKHAṆḌA.

Substance, palm-leaf. Size, 16¾ × 1¼ inches. Pages, 252. Lines, 6 on a page. Character, Kanarese. Condition, slightly injured. Appearance, old. Mode of writing, good.

Complete.

Same work as the above.

Date of transcription:—Tenth day of the bright fortnight of the lunar month Māgha in the year Kīlaka.

Name of the scribe :—Nanjappa, son of Padumayya.

(ವಿ-ವಿ.)

ಸಮಗ್ರ. ಸ್ವಲ್ಪ ಶಿಥಿಲ. ಲಿಪಿ ಉತ್ತಮ. ಕವಿ ಗೊತ್ತಿಲ್ಲ. ಹಿಂದೆ ವರ್ಣಿತವಾದ ಗ್ರಂಥವೇ ಆಗಿದೆ. ಗ್ರಂಥಾಂತ್ಯದಲ್ಲಿ 'ಕೀಲಕ ಸಂವತ್ಸರದ ಮಾಘ ಶುದ್ಧ ೧೦ ವರೆಗೆ ದಂಡಿನ...ರಿ ಪದುಮಯ್ಯನವರ ಮಗ ನಂಜಪ್ಪನು ಬರೆದ ಬ್ರಹ್ಮೋತ್ತರಖಂಡ ಪುಸ್ತಕಕ್ಕೆ ಶುಭಮಸ್ತು' ಎಂದಿದೆ. ಹಿಂದೆ ವರ್ಣಿತವಾದ ಪ್ರತಿಗಿಂತಲೂ ಇದರಲ್ಲಿ ಈ ಎರಡು ಪದ್ಯಗಳು ಹೆಚ್ಚಾಗಿವೆ.

ಕಾಶಿ ರಾಮೇಶ್ವರ ಚಿದಂಬರ ।
ಶ್ರೀಶಯಿಲ ಗೋಕರ್ಣ ಮುಖ್ಯಮ ।
ಹಾಸಕಲ ತೀರ್ಥಗಳ ಮಿಂದಾ ದಿವ್ಯ ಲಿಂಗಗಳ ॥

ತೀಸೆನಿಪ ಶಿವರಾತ್ರಿಯೊಳಗುಣ ।
ವಾಸವಡೆದರ್ಚಿಸಿದ ಫಲ ಬಹು ।
ದೀ ಸದಾಶಿವ ಕಥೆಯ ಪೇಳ್ವರಿಗೆಂದನಾ ಸೂತ ॥

ಸಕಲತೀರ್ಥ ಸ್ನಾನ ಸತ್ಫಲ ।
ಸಕಲ ಯಜ್ಞವ್ರತಮಹಾಫಲ ।
ಸಕಲದೇವಾರ್ಚನೆಯ ಫಲ ನುತಿಜಪತಪದ ಪಲವ್ರ ।

ಸಕಲದಾನಾರಾಧನೆಯ ಫಲ ।
ಸುಕರದಿಂ ಶಿವಕಥೆ ಯನನ್ಯದ ।
ಭಕುತಿಯಿಂ ಕೇಳದರಿಗಾದಪುದೆಂದ ನಾ ಸೂತ ॥

ಉಳಿದ ವಿಷಯಗಳನ್ನು ಹಿಂದಣ ನಂಬರಿನಲ್ಲಿ ನೋಡಿ ತಿಳಿಯುವುದು.

No. 216. ಬ್ರಹ್ಮೋತ್ತರ ಖಂಡ (ವಚನ.)

BRAHMOTTARAKHANDA.

Substance, paper. Size 10½ × 9½ inches. Pages, 388. Lines, 20 on a page. Character, Kanarese. Condition, good. Appearance, new. Mode of writing, not good and not free from mistakes.

Begins on page 450. The other works herein are :—(1) Āditya purāṇa 1. (2) Nāgarāja or Śēṣa Mahime, 838. (3) Airāvata, 898.

Complete.

Same work as the above.

(ವಿ.ವಿ.)

ಸಮಗ್ರ. ಲಿಪಿ ಸಾಮಾನ್ಯ. ಗ್ರಂಥಪಾತವುಂಟು. ಕವಿ ಗೊತ್ತಿಲ್ಲ. ಹಿಂದೆ ವರ್ಣಿತವಾಗಿರುವ ಗ್ರಂಥವೇಸರಿ. ಉಳಿದ ಗ್ರಂಥಗಳಿಗೂ ಇದಕ್ಕೂ ಪದ್ಯ ಸಂಖ್ಯೆಯಲ್ಲಿ ವ್ಯತ್ಯಾಸವಿದೆ. ಮಿಕ್ಕ ವಿಷಯಗಳನ್ನು ಹಿಂದಿನ ನಂಬರಿನಲ್ಲಿ ನೋಡಿ ತಿಳಿಯುವುದು.

No. 217. ಬ್ರಹ್ಮೋತ್ತರ ಖಂಡ.

BRAHMŌTTARAKHANDA (prose.)

Substance, Śrītāla. Size, $13\frac{1}{16}$ × $2\frac{1}{16}$ inches. Pages, 138. Lines, 8 on a page. Character, Kanarese. Condition, slightly injured. Appearance, old. Mode of writing, bad and not free from mistakes.

Adhyāyas 2–8 complete ; wants the beginning of the 1st Adhyāya and the end of the 9th Adhyāya.

Similar to the above. The prose version contained herein is called Maṇiprakāsa. The author Chāmarāja son of Narasarāja ruled in Mysore from 1617 to 1637 A D.

Beginning:

ಸರ್ವಲಕ್ಷಣ ಸಂಪನ್ನನಾದ, ದಾಶಾರ್ಹರಾಯನು ಕಾಶೀಪಟ್ಟಣದ ಅರಸಿನ ಲಾವಣ್ಯಾಮಯವಾದ ಮುಖವನುಳ್ಳಂಥ ಕುಮಾರಕಿಯನ್ನು ವಿವಾಹವಾಗಿ ರೂಪಶೀಲಗುಣಗಳಿಂದ ಕೂಡಿದಂಥಕಲಾವತಿಯೆಂಬ ಸ್ತ್ರೀಯನ್ನು ತನ್ನ ಮನೆಗೆ ಕರೆತಂದು,

*   *   *   *

ಸೂತಪೌರಾಣಿಕರು ಮುನಿಗಳಿಗೋಸ್ಕರ ನಿರೂಪಿಸುತ್ತಿದ್ದಾರು. ಎಲೈ ! ಮುನಿಗಳಿರ ಸಮಸ್ತ ವೇದವು ಉಪನಿಷತ್ತು ಪುರಾಣ ವೇದಾಂತ ಶಾಸ್ತ್ರಗಳಿಗೆ ಶಿರೋಭೂಷಣವಾಗಿ ಸಮಸ್ತ ಪಾಪವ ಕಡಿಸುವಲ್ಲಿ ಸಮರ್ಥವಾದ ಪಂಚಾಕ್ಷರಿಯು ಮಹಾ ಪ್ರಭಾವವು ನಿನ್ನಿಂದ ಹೇಳಲ್ಪಟ್ಟಿತು, ಎಂದು ಮುನಿಗಳಗೋಸ್ಕರ ಸೂತ ಪೌರಾಣಿಕರು ನಿರೂಪಿಸಿದರು ಎಂಬಲ್ಲಿಗೆ ಅಧ್ಯಾಯ ;

Colophon :

ರಾಜಾಧಿರಾಜ ರಾಜಪರಮೇಶ್ವರ.

ಶ್ರೀ ಚಾಮುಂಡೇಶ್ವರೀ ವರಪ್ರಸಾದನಾದ ಮೈಸೂರಪುರವರಾಧೀಶ್ವರನಾದ ಶ್ರೀ ನರಸರಾಜಭೂವರ ತನೂಭವನಾದ ಶ್ರೀ ಚಾಮರಾಜ ಭೂಪಾಲನಿಂದ ವಿರಚಿತವಪ್ಪ ಬ್ರಹ್ಮೋತ್ತರಖಂಡ ಮಣಿಪ್ರಕಾಶದಲ್ಲಿ ಪಂಚಾಕ್ಷರೀ ಮಹಿಮೆಯು ಪ್ರಥಮಾಧ್ಯಾಯಂ ಸಂಪೂರ್ಣಂ.

ಸೂತಪುರಾಣಿಕರು ಮುನಿಗಳಿಗೆ ನಿರೂಪಿಸುತ್ತಿದ್ದಾರೆ. ಎಲೈ ಮುನಿಗಳರ ! ಅನಂತರದಲ್ಲಿ ಪರಮೇಶ್ವರನ ಮತ್ತೊಂದು ಮಾಹಾತ್ಮ್ಯೆಯನ್ನು ಹೇಳುವೆನು ಕೇಳಿ.

End :

ಪಿಂಗಳಿಯೆಂಬ ವೇಶ್ಯಾಸ್ತ್ರೀಯೂ ಮಂದರಭಟ್ಟನೂ ಆಮುನಿಯನ್ನು ಚೆನ್ನಾಗಿ ಪೂಜಿಸಿ ರತ್ನಗಂಬಳ ಸಹಿತವಾದ ಸಿಂಹಾಸನದಲ್ಲಿ ಕುಳ್ಳಿರಿಸಿ ಪಾದಪ್ರಕ್ಷಾಳನವಂ ಮಾಡಿ, ಪಾದೋದಕವನ್ನು ಶಿರಸ್ಸಿನಲ್ಲಿ ಧರಿಸಿ, ಕ್ಷೇಮವನ್ನು ಕೇಳಿ, ಗಂಧಪುಷ್ಪಾಕ್ಷತೆ ಮೊದಲಾದ ಉಪಚಾರಗಳಿಂದ ಪೂಜಿಸಿ, ಭೋಜನವನ್ನು ಮಾಡಿಸಿದರು. ಅನಂತರ ಹಸ್ತಪ್ರಕ್ಷಾಳನವನ್ನು ಮಾಡಿ, ಶುದ್ಧಾಚಮನವನ್ನು ಮಾಡಿ ಸಿಂಹಾಸನದಲ್ಲಿ ಕುಳಿತಂಥ ಶಿವಯೋಗಿಗೆ ತಾಂಬೂಲವನ್ನು ಕೊಟ್ಟು ಪಾದ ಸೇವೆಯಿಂದ ಶಿವಯೋಗಿಯನ್ನು ಸಂತೋಷಪಡಿಸಿದರು.

(ವಿ.ವಿ.)

ಬ್ರಹ್ಮೋತ್ತರಖಂಡ ವಚನ ಅಸಮಗ್ರ. ಆದಿಯಲ್ಲಿ ಎರಡು ಓಲೆಗಳಿಲ್ಲ. ಮುಂದಕ್ಕೆ ಎಂಟು ಅಧ್ಯಾಯಗಳು ಪೂರ್ಣವಾಗಿವೆ ಒಂಭತ್ತನೆಯದರಲ್ಲಿ ಸ್ವಲ್ಪಭಾಗವಿದೆ. ಇದಕ್ಕೆ ಮಣಿಪ್ರಕಾಶವೆಂಬ ಬೇರೆ ಹೆಸರೂ ಉಂಟು. ಸ್ವಲ್ಪ ಶಿಥಿಲ. ಗ್ರಂಥಪಾತ ಸ್ವಲ್ಪವುಂಟು. ಕವಿ ಮೈಸೂರರಸ ನಂಜರಾಜಭೂವರತನೂಭವನಾದ ಚಾಮರಾಜ ಭೂಪಾಲನು. ಉಳಿದ ವಿಷಯಗಳನ್ನು ಮೇಲೆ ಉದಾಹೃತವಾಗಿರುವ ಭಾಗಗಳಿಂದಲೂ, ಕವಿಚರಿತ್ರೆಯಿಂದಲೂ ತಿಳಿಯುವುದು.

No. 218. ಭಕ್ತವಿಲಾಸ ದರ್ಪಣ. BHAKTAVILĀSA DARPAṆA.

Substance Śrītāla. Size, $20\frac{7}{8} \times 2$ inches. Pages, 254. Lines, 8 on a page. Character, Kanarese. Condition, slightly injured. Appearance, old. Mode of writing, good.

Contains the chapters 21–90 complete and chapter 20 incomplete.

Similar to the above, by Kaḷale Nanjarāja.

Beginning :

ನ್ನೂ ಕೈಯಿಂದ ಹಿಡಿದು ಶಿವಸ್ಮರಣೆಯಂ ಮಾಡುತ್ತ, ಅಲ್ಲಿಂದ ಮನೆಗೆ ಹೋಗುತ್ತಿರಲು, ಆ ಮದ್ದಾನೆಯು ಬ್ರಾಹ್ಮಣರ ಸಮೀಪಕ್ಕೆ ಬಂದು ನಿಲ್ಲಲು ಆ ಶಿವಧರ್ಮನು ಮಹಾದೇವನನ್ನು ಮನಸ್ಸಿನಲ್ಲಿ ಸ್ಮರಿಸುತ್ತ ಓಡಿಹೋಗಲು, ಆ ಮದ್ದಾನೆಯು ಆತನನ್ನು ಅಟ್ಟಿಕೊಂಡು ಹೋಗಲು ಬಲವಂತದಿಂದ ಹೂವಿನ ಕರಡಿಗೆಯನ್ನು ಕಿತ್ತು ಹೂಗಳನ್ನು ಚೆಲ್ಲಿಹೂವಿನ ಕರಡಿಗೆಯನ್ನು ಹುಡಿಮಾಡಲು ಶಿವಧರ್ಮನು ಆನೆಯ ಮೇಲಿರುವ ಮಾವುತನನ್ನು ನೋಡಿ ಎಲೈ ! ಪಾಪಾತ್ಮನೆ ! ಈ ಮದ್ದಾನೆಯಿಂದ ಹೀಗೆ ಮಾಡಿಸಬಹುದೆ ? ಶಿವಾರ್ಚನೆಯಂ ಮಾಡಿಸುವುದಕ್ಕೋಸ್ಕರ ತಂದ ಹೂ ವ್ಯರ್ಥವಾಗಿ ಹೋಯಿತಲ್ಲ. ಇಂತಹ ಅನ್ಯಾಯ ಮಾಡಬಹುದೆ ? ನನ್ನ ಶಿವಪೂಜೆಗೆ ವಿಘ್ನವಂ ಮಾಡಬಹುದೆ ? ನಾನು ಏನು ಮಾಡಲಿ ? ಎಲ್ಲಿಗೆ ಹೋಗಲಿ ? ಯಾರ ಸಂಗಡಹೇಳಲಿ ? ಈ ಅನ್ಯಾಯವನ್ನು ವಿಚಾರಿಸುವಂಥ ಅರಸು ಇಲ್ಲದೇ ಹೋದನಲ್ಲ ! ಇಂತಹ ಪಟ್ಟಣದಲ್ಲಿರಬಾರದು—ಎಂದು ಗಟ್ಟಿಯಾಗಿ ನುಡಿಯುತ್ತಿರಲು, ದಾರುಕರು ಸ್ನಾನವಂ ಮಾಡುವುದಕ್ಕೋಸ್ಕರ ಅಲ್ಲಿಗೆ ಬಂದು ಆಬ್ರಾಹ್ಮಣನ ಮಾತುಗಳನ್ನು ಕೇಳಿ, ಆತನ ಸಮೀಪಕ್ಕೆ ಬಂದು, ಎಲೈ ! ಬ್ರಾಹ್ಮಣ ಶ್ರೇಷ್ಟರುಗಳಿರಾ ! ನಿಮ್ಮ ಶಿವಪೂಜೆಗೆ ವಿಘ್ನವಂ ಮಾಡಿದಂಥವನಾರು ? ಅವನನ್ನು ನನಗೆ ತಿಳುಹಿಸಿದರೆ ಶಿವದ್ರೋಹವನ್ನು ಮಾಡಿದ ಪಾಪಾತ್ಮನನ್ನು ಸಂಹರಿಸುತ್ತಲಿದ್ದೇನೆ—ಎಂದು ನುಡಿಯಲು,

* * * *

ಈ ಅಧ್ಯಾಯದಲ್ಲಿ ಹೇಳಿದ ಕಥೆಯನ್ನು ಓದಿದಂಥವರು ಕೇಳಿದಂಥವರು ಬರೆದಂತಹವರು ಈ ಪುಸ್ತಕವನ್ನು ಪೂಜಿಸಿದಂತಹವರು, ಪರಮೇಶ್ವರಸ್ವಾಮಿಯವರ ಅನುಗ್ರಹದಿಂದ ಭೂಲೋಕದಲ್ಲಿ ಪುತ್ರಪೌತ್ರರು ಧನಧಾನ್ಯಗಳು ವಿದ್ಯೆಯು ಐಶ್ವರ್ಯವು [ಇವುಗಳನ್ನು] ಉಳ್ಳಂತಹವರಾಗಿ ಸಕಲ ಭೋಗಂಗಳನ್ನೂ ಅನುಭವಿಸಿ ಅಂತ್ಯದಲ್ಲಿ ಈಶ್ವರಾನುಗ್ರಹದಿಂದ ಮುಕ್ತರಾಗಿ ಮಹಾಕೈಲಾಸದ ಮಧ್ಯದಲ್ಲಿ ಪರಮೇಶ್ವರ ಸ್ವಾಮಿಯ ಅಪ್ಪಣೆಯಿಂದ ಅವರ ಸನ್ನಿಧಿಯಲ್ಲಿ ಸಕಲ ಭೋಗಗಳನ್ನೂ ಅನುಭವಿಸುತ್ತ ಆನಂದ ಸಮುದ್ರದಲ್ಲಿ ಆಡುತ್ತಲಿರುವಂತಹವರಾಗಿ ಸುಖವಾಗಿರುವರು ಎಂದು ಉಪಮನ್ಯುಮುನೀಂದ್ರನು ಶಿಷ್ಯರಿಗೆ ಹೇಳಿದ ಅರ್ಥವನ್ನು ಅಗಸ್ತ್ಯ ಮುನೀಂದ್ರನು ಕಾಂಚೀಕ್ಷೇತ್ರವಾಸಿಗಳಾದ ಋಷಿಗಳಿಗೆ ತಿಳುಹಿಸಿದನು—ಎಂದು ಸೂತಪೌರಾಣಿಕನು ನೈಮಿಷಾರಣ್ಯವಾಸಿಗಳಾದ ಶೌನಕಾದಿ ಋಷಿಗಳಿಗೆ ನಿರೂಪಿಸಿದನು.

Colophon :

ಇಂತು ಕರ್ಣಾಟಕ ಭಾಷಾವಿರಚಿತವಾಗಿ ಶ್ರೀಮಹಿಶೂರ ಸೇನಾಧಿಪ ದೊಡ್ಡರಾಜಪೌತ್ರ ವೀರರಾಜತನೂಜ ದಳಪತಿ ದೇವರಾಜಾನುಜ ಕಳಲೆ ನಂಜರಾಜ ವಿರಚಿತವಾದ ಭಕ್ತವಿಲಾಸ

ದರ್ಪಣ ವೆಂಬ ಟೀಕೆಸಲ್ಲಿ ವ್ಯಾಸಕೃತಮಾದ ಸ್ಕಂದೋಪ ಪುರಾಣದಲ್ಲಿ ಶಿವಭಕ್ತಮಾಹಾತ್ಮ್ಯದಲ್ಲಿ ಏಣಾದಿನಾಥರ ಚರಿತ್ರೆಯೆಂಬ ಇಪ್ಪತ್ತನೆಯ ಅಧ್ಯಾಯದ ಅರ್ಥನಿರೂಪಣಕ್ಕೆ ಮಂಗಳಂ.

ವೃ ॥ ಗಂಡೂಷೋದಕಬಿಂದುಭಿಸ್ತನುತರೈ ಸ್ಪಂಸ್ಥಾಪ್ಯ ಶೂಲಾಯಿತೈಃ ।
ಸಂತಪ್ಯಾರ್ಗತ್ಮವಿಲೋಚನಾರ್ಪಣವಶಾತ್ ಸಂತೋಷ್ಯ ಭಕ್ತ್ಯಾಶಿವಂ ॥
ಕನ್ನಪ್ಪಾಭಿಧಯಾ ಪ್ರಸಿದ್ಧಿಮಗಮ ನ್ನೀಶಪ್ರಸಾದೇನ ಯೋ ।
ಪಶ್ಚಾನ್ಮುಕ್ತಿಮುಪಾಗತಾಶ್ಶಿವಸಮಾನಸ್ತಂ ಭಕ್ತವರ್ಯಂ ಭಜೇ ॥

ಅನಂತರದಲ್ಲಿ ಅಗಸ್ತ್ಯ ಮುನೀಂದ್ರನು ಕಾಂಚೀಕ್ಷೇತ್ರವಾಸಿಗಳಾದ ಋಷಿಗಳಂ ಕುರಿತು ಇಂತೆಂದನು. ಕೇಳಿರೈ ! ಋಷಿಗಳಿರಾ ! ಪರಮೇಶ್ವರಸ್ವಾಮಿಯವರ ಪಾದಗಳಲ್ಲಿ ಭಕ್ತಿಯಂ ಮಾಡಿದ ಪುರುಷರು ಸಂಸಾರಭಯವನ್ನು ಪರಿಹರಿಸಿಕೊಂಡು ಮುಕ್ತರಾಗುವರು.

End :

ಪರಮೇಶ್ವರ ಸ್ವಾಮಿಯವರನ್ನು ಸ್ತುತಿಸಿ ಅವರ ಅನುಗ್ರಹದಿಂದ ಉದಕದಲ್ಲಿ ಬಿದ್ದು ಮೊಸಳೆಯ ಹೊಟ್ಟೆಯಲ್ಲಿರುವಂತಹ ಬಾಲಕನನ್ನು ಬದುಕಿಸಿ ಕರೆದುಕೊಂಡುಬಂದು ಅವರ ತಾಯಿ ತಂದೆಗಳಿಗೆ ಒಪ್ಪಿಸಲು ತಾಯಿತಂದೆಗಳು ಬದುಕಿಬಂದ ಕುಮಾರನನ್ನು ನೋಡಿ ಸಂತೋಷಪಡುತ್ತಿರಲು ಅಲ್ಲಿರುವ ಜನರೆಲ್ಲರೂ ಆಶ್ಚರ್ಯಪಡುತ್ತ ಸುಂದರರನ್ನು ಅಧಿಕನಾಗಿ ಸ್ತುತಿಸಿ ಭಕ್ತರೊಳಗೆ ಶ್ರೇಷ್ಠರೆಂದೆಣಿಸಿ ಪೂಜಿಸಿದರೆಂದು ಉಪಮನ್ಯು ಮುನೀಂದ್ರನು ಶಿಷ್ಯರಿಗೆ ಹೇಳಿದ ಅರ್ಥವನ್ನು ಅಗಸ್ತ್ಯ ಮುನೀಂದ್ರನು ಕಾಂಚೀ ಕ್ಷೇತ್ರವಾಸಿಗಳಾದ ಋಷಿಗಳಿಗೆ ತಿಳಿಯಿಸಿದನೆಂದು ಸೂತಪೌರಾಣಿಕನು ನೈಮಿಶಾರಣ್ಯವಾಸಿಗಳಾದ ಶೌನಕಾದಿ ಋಷಿಗಳಿಗೆ ನಿರೂಪಿಸಿದನು.

Colophon :

ಇಂತು ಕರ್ಣಾಟಕ ಭಾಷಾವಿರಚಿತಮಾಗಿ ಶ್ರೀಮತು ಶೂರ ಸೇನಾಧಿಪ ದೊಡ್ಡರಾಜ ಪೌತ್ರ ವೀರರಾಜತನೂಜ ದಳಪತಿ ದೇವರಾಜಾನುಜ ವಿರಚಿತಮಾದ ಭಕ್ತಿವಿಲಾಸದರ್ಪಣವೆಂಬ ಟೀಕೆನಲ್ಲಿ ವ್ಯಾಸಕೃತಮಾದ ಸ್ಕಾಂದೋಪ ಪುರಾಣದಲ್ಲಿ ಶಿವಭಕ್ತ ಮಾಹಾತ್ಮ್ಯದಲ್ಲಿ ೯೦ ನೆಯ ಅಧ್ಯಾಯದ ಅರ್ಥ ನಿರೂಪಣಕ್ಕೆ ಮಂಗಳಂ.

ಇತಿ ಶ್ರೀಮದಮಿತ ನಮಿತಾಂಭೋಜ ಸಂಭವ (?) ಜಂಭಾರಿ ಪ್ರಮುಖ ನಿಖಿಲ ಸುರಾಸುರ ವಂದ್ಯಮಾನ ಗರಳ ಪುರಾಧಿನಾಥ ಚರಣಾರವಿಂದ ಸೇವಾಸಮಾಸಾದಿತ ಗೀರ್ವಾಣಾಂಧ್ರ ಕರ್ಣಾಟಕಾದಿ ನಾನಾಭಾಷಾ ವಿಶೇಷ ಕಾವ್ಯರಚನಾ ಚಾತುರೀಧುರೀಣ ಶ್ರೀಮನ್ಮಹಾರಾಜಾಧಿರಾಜ ರಾಜ ಪರಮೇಶ್ವರ ರಾಜಮಾರ್ತಾಂಡ ಪ್ರೌಢಪ್ರತಾಪಾ ಪ್ರತಿಮ ವೀರ ನರಪತಿ ಬಿರುದಂತೆಂಬರಗಂಡ ಬಿರುದಾಂಕಿತ ಶಂಖಚಕ್ರ ಮಕರಮತ್ಸ್ಯ ಹನುಮದ್ಗರುಡ ಗಂಡಭೇರುಂಡ ಸಿಂಹ ಶರಭ ಸಾಲ್ವ ಭೂವರಾಹಾದಿ ನಾನಾವಿಧ ದೈವಧ್ವಜ ಬಿರುದಾಂಕಿತ ಸಕಲ ದೇಶಾಧೀಶ ಕಿರೀಟಕೋಟಿ ಮಣಿ ಘೃಣಿ ನೀರಾಜಿತ ಚರಣಯುಗಳ ಯಾದವವಂಶ ತಿಲಕ ಮಹೀಸೂರ ಕೃಷ್ಣರಾಜ ಸೇನಾಧಿಪ ದೊಡ್ಡರಾಜ ಪೌತ್ರ ವೀರರಾಜತನೂಜ ದೇವರಾಜಾನುಜ ಕಳಲೆ ನಂಜರಾಜ ಪರರಾಜಮದೇಭ ಪಂಚಾನನ ದಾನಕ್ಷಾತ್ರಾಧೀಶ್ವರ ಹನುಮಧ್ವಜ ಬಿರುದಾಂಕಿತ ಶಿವಪೂಜಾಧುರಂಧರ ಭಾರದ್ವಾಜ ಗೋತ್ರಾಶ್ವಲಾಯನ ಸೂತ್ರ ಋಕ್ಶಾಖಾಧ್ಯಾಯಿಕ ವಿಬುಧವಿಧೇಯ ರಾಜಮಾನ್ಯ ರಾಜ

ರಾಜ ಶ್ರೀ ಕಳಲೆ ನಂಜರಾಜ ವಿರಚಿತವಾಗಿ ಕರ್ಣಾಟಕ ಭಾಷಾ ವಿರಚಿತವಾದ ವ್ಯಾಸಕೃತ ವಾದ ಸ್ಕಾಂದೋಪ ಪುರಾಣದಲ್ಲಿ ಶಿವಭಕ್ತ ಮಾಹಾತ್ಮ್ಯದಲ್ಲಿ ಭಕ್ತವಿಲಾಸ ಸಂಪೂರ್ಣವಾದುದಕ್ಕೆ ಮಂಗಳಂ.

(ವಿ.ವಿ.)—

ಇದರಲ್ಲಿ ೨೧ ರಿಂದ ೯೦ ಅಧ್ಯಾಯಗಳಿವೆ. ೨೦ ನೆಯದು ಅಸಮಗ್ರ. ಲಿಪಿ ಉತ್ತಮ. ಗ್ರಂಥಪಾತವುಂಟು. ಕವಿ ಕಳಲೆ ನಂಜರಾಜ.

No. 219. ರುಕ್ಮಾಂಗದ ಚರಿತ್ರೆ.

RUKMĀNGADA CARITRE.

Substance, Śrītāḷa. Size, $13\frac{3}{8} \times 2\frac{3}{16}$ inches. Pages, 260. Lines, 9 on a page. Character, Kanarese. Condition, slightly injured. Appearance, old.

Wants a portion in the beginning Otherwise complete.

A treatise illustrating the importance of fasting on Ekādaśi i.e., eleventh day of every fortnight in each of the lunar month. The author Cikkupādhyāya was a court poet in the court of Cikkadēvaraja, who ruled at Mysore from 1672—1704 A. D. The other works of the author are :—Amaruka, Sātvikabrahmavidyāvilāsa, Kamalācalamāhātmya. Kāmandakanītiṭīkā, Divyasūricaritre, etc. He was a Śrīvaiṣṇava Brahman and belonged to Purukutsa gōtra and Āpastambasūtra. For other particulars regarding the author and his patron see Vol. II of the 'Lives of Kannada poets.'

Beginning :

॥ ಕಂದ ॥

. . . . ।
. . . .
. . . ॥
. . . . ।
. . . . . . ಶಾಙ್ಗಾರ್ಖ್ಯೆಯೊಗೆ ನಿರ್ಮಳ ಸುಖಮಂ ॥
ಬಳವದಸುರೋತ್ತಮಾಂಗ ವಿ ।
ದಳನ ಗಳದ್ರಕ್ತ ಲೇಪದಿಂದನಲ ಶಿಖಾ ॥
ಮಿಳಿತ ನವಧೂಮ . . . . . ।
. . . . ಗೆ ಬಿಡದೆ ನಂದಕನಾಮಂ ॥

*   *   *   *

ಮಕರವಿಸಾರ ಚಕ್ರಧರಮುಖ್ಯ ಸುಲಾಂಛನದಿಂದೆನಿಂದು ಲೋ ।
ಕಕೆ ಪೆಸರಾಂತ ರಾಯಬಿರುದಂ ಮಿಗೆತಾಳ್ದು ನೆಗಟಿತ್ತೆವೆತ್ತ ಸಾ ॥
ತ್ವಿಕ ಜಯದಂಕಕಾಱನೆನಿಪಾಖ್ಯೆಯಿ ನೊಪ್ಪುವ ಚಂಡ ವಿಕ್ರಮಂ ।
ಪ್ರಕಟಸಮಾಖ್ಯೆಯಿಂ ಜಗಮನೆಲ್ಲಮನೋವುಗೆ ಸರ್ವಕಾಲಮುಂ ॥

Colophon:

॥ ಗದ್ಯ ॥

ಇದುವಿನಮದ್ಗೀರ್ವರ ಶರ್ವಪರ್ವತ್ಕರಿಪುಮುಖ ಸರ್ವಗೀರ್ವಾಣ ಮೌಳಿ ಮಾಲಾ ನೀಲಮಣಿ ಗಣ ಘೃಣಿ ಬಾಲರೋಲಂಬ ಜಾಲಾವೃತ ನೀಲೇಲಾ ಶ್ರೀಲಲನಾಕರ ಲಾಲಿತ ಶ್ರೀಮತ್ಕರಿವರದ ರಾಜ ಸುರುಚಿರ ಚರಣ ಸರಸಿಜ ಪರಮಭಕ್ತಿರಸ ಪರಿಲುಳಿತಾಂತರಂಗ ರಾಜಾಧಿರಾಜ ರಾಜಪರ ಮೇಶ್ವರಾ ಪ್ರತಿಮ ಪ್ರೌಢಪ್ರತಾಪ ಬಿರುದಂತೆಂಬರಗಂಡ ಯದುಕುಳ ಜಳಧಿಕಳಾನಿಧಿ ಸತ್ಯಪರಾ ಕ್ರಮ ವೀರಶ್ರೀ ನರಪತಿ ಚಿಕ್ಕದೇವ ಮಹಾರಾಜರಾಜಿತ ದಯಾಭಾಜನ ಶ್ರೀ ಚಿಕ್ಕುಪಾಧ್ಯಾಯ ವಿರಚಿತ ರುಕ್ಮಾಂಗದ ಚಾರಿತ್ರ ದೊಳ್ ಪೀಠಿಕಾ ಪ್ರಕರಣಂ ಸಮಾಪ್ತಂ.

ಶ್ರೀರಮಣಂ ಕರುಣಾನಿಧಿ ।
ವಾರಿಜಭವ ಭವ ಸುರೇಂದ್ರಮುಖ್ಯಸ್ತುತ್ಯಂ ॥
ಚಾರುತರ ಮೂರ್ತಿ ಯೋವುಗೆ ।
ಸಾರಂ ಶ್ರೀವರದರಾಜನನುಪಮ ತೇಜಂ ॥

End:

ಮಂಗಳವೆಂದುಮಿರ್ಕೆ ಬುಧಸೇವ್ಯಕೆ ವೈಷ್ಣವಭಾವಕೆಂದಿರಾ ।
ಸಂಗತಿಲೋಲ ವಿಷ್ಣುಪದಕಾರಣಕುತ್ಸವ ಪೂರಣಕ್ಕೆ ರು ।
ಕ್ಮಾಂಗದ ಭೂಮಿಪಾಲಚರಿತಕ್ಕೆನೀ ನಿತ್ಯಪವಿತ್ರ . ಪ್ರಿತಾ । (?)
ರ್ಥಂಗಳ ನೀವ ಪಾಪಶತಸಂಶ್ರಿತ ಜೀವ ರೊಳ್ಪಿಸಿಂ ॥ (?)

ಕವಿತಾ ಕಲ್ಪನೆಯಂ ಶ್ರೀ ।
ಧವ ಕೃಪಯಿಂ ಪಡೆದುದರ್ಕೆ ಫಲಮೇನೆನೆ ವೈ ॥
ಷ್ಣವ ಚರಿತೆಯನೇ ಪೇಳ್ವುದು ।
ವಿವೇಕಿಗಳ್ ಪಡೆವುದಿಳೆಯೊಳ್ಗುರುತರ ಯಶಮಂ ॥

ಶ್ರೀರಾಜಾನ್ವಯ ಭೂಪನ ಪ್ರತಿಮನುದ್ಯತ್ಕೀರ್ತಿ ರುಕ್ಮೋಲ್ಲಸ ।
ದ್ವೀರ ಶ್ರೀ ಚಿಕದೇವರಾಯ ನೊಲವಿಂ ಭೂಭಾಗದೊಳ್ ಸಂತತಂ ॥
ಸಾರತ್ವಂಬಡೆವಂತೆ ಮಾಡಿಸಲೊಡಂ ತೀವಿರ್ಕೆ ವಿದ್ವಾಂಸ ರಿಂ ।
ದೀ ರುಕ್ಮಾಂಗದ ಸಚ್ಚರಿತ್ರಕೆ ಜಯಂ ಭದ್ರಂ ಶುಭಂ ಮಂಗಳಂ ॥

Colophon:

ಇದುವಿನಮದ್ಗೀರ್ವರ ಶರ್ವಪರ್ವತರಿಪುಮುಖ ಸರ್ವಗೀರ್ವಾಣ ಮೌಳಿಮಾಲಾ ನೀಲಮಣಿ ಗಣ ಘೃಣಿ ಬಾಲರೋಲಂಬ ಜಾಲಾವೃತ ನೀಲೇಲಾ ಶ್ರೀಲಲನಾಕರಲಾಲಿತ ಶ್ರೀಮತ್ಕರಿವರದ ರಾಜ ಸುರುಚಿರ ಚರಣ ಸರಸಿಜ ಪರಮಭಕ್ತಿರಸ ಪರಿಲುಳಿತಾಂತರಂಗ ರಾಜಾಧಿರಾಜ ರಾಜ ಪರಮೇಶ್ವರಾ ಪ್ರತಿಮಪ್ರೌಢಪ್ರತಾಪ ಬಿರುದಂತೆಂಬರಗಂಡ ಯದುಕುಳಜಳಧಿ ಕಳಾನಿಧಿ ಸತ್ಯ ಪರಾಕ್ರಮ ವೀರ ಶ್ರೀ ನರಪತಿ ಚಿಕ್ಕದೇವ ಮಹಾರಾಜ ರಾಜಿತ ದಯಾಭಾಜನ ಶ್ರೀ ಚಿಕ್ಕುಪಾ

ಧ್ಯಾಯ ವಿರಚಿತ ರುಕ್ಮಾಂಗದ ಚರಿತ್ರದೊಳ್ ಹರಿದಿನಭೋಜನಂ ವಿಹಿತಮೆಂದು ನುಡಿದ ಮೋಹಿನೀ ವಿವಾದಾನಂತರಂ ತತ್ಸರ್ವ ನಿರ್ವ್ಯಾಹಾರ್ಥವಾಗಿ ಪುತ್ರಾರ್ಥಮಾಗಿ ಪುತ್ರಶಿರೋದಾನಮಂ ಮಾಳ್ಪ ವೇಳೆಯೊಳ್ ಶ್ರೀಮನ್ನಾರಾಯಣಂ ಪ್ರಸನ್ನನಾದ ಬಳಿಕ್ಕೆ ಸಪುತ್ರಕಳತ್ರ ರುಕ್ಮಾಂಗದಂ ವಿಷ್ಣುಸಾಯುಜ್ಯ ಪ್ರಾಪ್ತಿಕಥನಂ, ಮೋಹಿನಿಗೆ ವಿದ್ವೈಕಾದಶೀವ್ರತಫಲ ವಿವರಣಂ ಹರಿದಿನ ವ್ರತಾಚರಣಾದಿ ನಿರೂಪಣಂ ದಶಮಾಶ್ವಾಸಂ.

(ವಿ.ವಿ.)—

ಈ ಗ್ರಂಥದಾದಿಯಲ್ಲಿ ಒಂದು ಓಲೆ ಹೋಗಿದೆ. ಅನಂತರ ಕೊನೆಯವರೆಗೂ ಇದೆ ಇದು ಚಂಪೂಗ್ರಂಥ. ಆ ಶ್ವಾಸ 10, ಪದ್ಯ 2286 ಎಂದು ಹೇಳಿದೆ. ಮೊದಲ ೧೦, ೧೭ ಓಲೆಗಳು ಮುರಿದುಹೋಗಿವೆ. ಅಕ್ಷರಗಳು ಚೆನ್ನಾಗಿವೆ. ಕವಿ ಚಿಕ್ಕುಪಾಧ್ಯಾಯ. ಈತನು ಪ್ರಾಚೀನ ಕವಿಗಳಲ್ಲಿ ವ್ಯಾಸ ಮೊದಲಾದವರನ್ನು ಸ್ತುತಿಸುತ್ತಾನೆ. ಮೈಸೂರು ಧೊರೆಗಳಲ್ಲಿ ಪ್ರಸಿದ್ಧನಾದ ಚಿಕ್ಕ ದೇವರಾಯನು ಕವಿಯ ಪೋಷಕನು. ಆತನಪ್ಪಣೆಯಂತೆ ಕವಿಯು ಈ ಗ್ರಂಥವನ್ನು ಬರೆದುದಾಗಿ ತಿಳಿಯಿಸುವನು. ಅಲ್ಲದೆ ಈತನು ಚಿಕ್ಕದೇವರಾಯನ ಆಸ್ಥಾನದಲ್ಲಿ ಮಂತ್ರಿಯಾಗಿದ್ದಂತೆಯೂ ತಿಳಿಯಬರುತ್ತದೆ. ಈತನು ಇನ್ನೂ ಅನೇಕ ಗ್ರಂಥಗಳನ್ನೂ ಬರೆದಿರುತ್ತಾನೆ. ಆದರೆ ಈ ಗ್ರಂಥದಲ್ಲಿ ಅವುಗಳನ್ನು ಹೇಳುವುದಿಲ್ಲ. ಈ ಗ್ರಂಥವು ಏಕಾದಶೀ ವ್ರತದ ಮಹಿಮೆಯನ್ನು ಬೋಧಿಸುತ್ತದೆ. ಕವಿಯ ಕಾಲ ಚಿಕ್ಕ ದೇವರಾಯನ ಕಾಲವೇ, ಎಂದರೆ ಕ್ರಿ. ಶ. 1672. ಉಳಿದ ವಿಷಯಗಳನ್ನು ಮೇಲೆ ಉದಾಹೃತವಾಗಿರುವ ಭಾಗದಿಂದಲೂ, ಕವಿ ಚರಿತ್ರೆಯಿಂದಲೂ ತಿಳಿಯುವುದು.

No. 220. ರುಕ್ಮಾಂಗದ ಚರಿತ್ರೆ- RUKMĀṄGADA CARITRE.

Substance, paper. Size, $10\frac{1}{2} \times 9\frac{1}{2}$ inches. Pages, 562. Lines, 20 on a page. Character, Kanarese. Condition, good. Appearance, new. Mode of writing, good.

Wants 12 stanzas in the beginning, otherwise complete.

Same work as the above.

(ವಿ.ವಿ.)—

ಇದು ಹಿಂದೆ ವರ್ಣಿಸಿರುವ ಗ್ರಂಥದ ನಕಲೇ ಆಗಿದೆ. ಗ್ರಂಥ ಪೂರ್ತವುಂಟು. ಕವಿ ಇತ್ಯಾದಿ ಉಳಿದ ವಿಷಯಗಳನ್ನು ಹಿಂದಿನ ನಂಬರಿನಲ್ಲಿಯೇ ನೋಡಿ ತಿಳಿಯುವುದು.

No. 221. ರುಕ್ಮಾಂಗದ ಚರಿತ್ರೆ- RUKMĀṄGADA CARITRE.

Substance, Śrītāla. Size, $18\frac{7}{16} \times 1\frac{5}{8}$ inches. Pages, 34. Lines, 9 on a page. Character, Kanarese. Condition, much injured. Appearance, old. Mode of writing, good.

Contains the 5th Āsvāsa complete, and the 6th incomplete.

Same work as the above.

(ವಿ.ಪಿ.)—

ಇದರಲ್ಲಿ ಐದನೆಯ ಆಶ್ವಾಸವು ಪೂರ್ಣವಾಗಿಯೂ, ಆರನೆಯದು ಅಪೂರ್ಣವಾಗಿಯೂ ಇದೆ. ಅತಿ ಶಿಥಿಲ. ಲಿಪಿ ಉತ್ತಮ. ಹಿಂದೆ ವರ್ಣಿತವಾಗಿರುವ ಗ್ರಂಥವೇ ಸರಿ. ಉಳಿದ ವಿಷಯಗಳನ್ನು ೨೧೯ ನೆಯ ನಂಬರಿನಿಂದ ತಿಳಿಯುವುದು.

No. 222. ರುಕ್ಮಾಂಗದ ಚರಿತ್ರೆ. RUKMĀNGADA CARITRE.

Substance, paper. Size, $10\frac{1}{2} \times 9\frac{1}{2}$ inches. Pages, 74. Lines, 20 on a page. Character, Kanarese. Condition, good. Appearance, new. Mode of writing, good.

Contains the 5th Āsvāsa complete, and 6th incomplete.

Same work as the above.

(ವಿ.ವಿ.)—

ಇದು ಹಿಂದಿನ ನಂಬರಿನ ಉಪಪ್ರತಿಯಾಗಿದೆ. ಲಿಪಿ ಉತ್ತಮ. ಗ್ರಂಥ ಪೂತವಿದೆ. ಉಳಿದ ವಿಷಯಗಳನ್ನು ೨೧೯ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

No. 223. ರುಕ್ಮಾಂಗದ ಚರಿತ್ರೆ. RUKMĀṄGADA CARITRE.

Substance, Śrītāḷa. Size, $17\frac{3}{4} \times 1\frac{5}{3}$ inches. Pages, 150. Lines, 8 on a page. Character, Kanarese. Condition, good. Appearance, old. Mode of writing, good.

Contains the Sandhis 1 to 16 complete, and 17th incomplete.

Similar to the above. The work is written in the Vārdhikaṣaṭpadi metre by Lakṣmaṇa.

Beginning:

ಶ್ರೀ ಸಕಲಮುನಿಹೃದಯವಾಸ ವಂದಿತಜನಾ ।
ಧೀಶ ! ಕಾರುಣ್ಯಾಸರ್ವೇಶರ ವಿಕೋಟಿ ಸಂ ।
ಕಾಶ ತ್ರೈಲೋಕ್ಯಪ್ರಕಾಶ ವರಕೌಸ್ತುಭಸುಭೂಷ ಪರಿಪೂರ್ಣವೇಷ ॥
ಭಾಸುರತರಪ್ರಬಲ ಶೇಷನಿಜತಲ್ಪ ಸುದಿ ।
ನೇಶ ವಿಧುನೇತ್ರ ಕಮಲಾಸನನ ಪಡೆದ ಸುವಿ ।
ಲಾಸ ಖಗಪುರ ಚೆನ್ನಕೇಶವನು ನಮಗೆ ಸಂತೋಷ ಸಂಪದವೀಯಲಿ ॥

* * * *

ಲಕ್ಷಣ ವಲಂಕಾರ ಶಬ್ದ ಶಾಸ್ತ್ರಗಳಿಗ ।
ಧ್ಯಕ್ಷ ನಾನೆಂದಹಂಕಾರದಿಂ ಬರೆವನ ।
ಲ್ಲೀಕ್ಷಿಸಲು ಪರಮಯುಕ್ತಿಗಳ ರಸಭಾವನಿರ್ಣಯ ಚಮತ್ಕಾರಂಗಳ ॥

ಪಕ್ಷಿಪುರದರಸ ಕೃಪೆಯಿಂದ ಪರವಿತ್ತೆನ್ನ ।
ರಕ್ಷಿಸಿ ಮಹಾಪ್ರಬಂಧವ ಪೇೞಿತೆನಲ್ಕೆ ತಾ ।
ಸಾಕ್ಷಣವೆ ಪೇೞ್ದ ಸುಜ್ಞಾನಿಗಳ್ ತಪ್ಪಿರಲ್ ತಿದ್ದಿಯದಸರಿ ಮಾಳ್ಪುದು ॥
ಸುತವಾಂಛೆಯಿಂದೆಮ್ಮ ಪಿತೃಮಾತೆಯರ್ ಸುನಿ ।
ಷ್ಠಿತರಾಗಿ ಶ್ರೀಕಮಲೆಯಂ ಭಜಿಸಲೊಲಿದು ಸ ।
ಸ್ಮಿತದಿಂದ ಸಂತಾನವನ್ನಿತ್ತು ಸತ್ಕೃಪಾಂಭೋನಿಧಿಯೊಳೋಲಾಡಿಸಿ ।
ಚತುರ ಘನಕುಶಲ ಲಕ್ಷ್ಮಣನೆಂಬ ಪೆಸರನಿ ।
ತ್ತತುಳ ಗಾಂಭೀರ್ಯಯುಕ್ತ್ಯಾದಿ ಲಕ್ಷ್ಮಿಯುಪಾದ ।
ಶತಪತ್ರಕೆರಗಿ ವಂದಿಸುವೆನೀ ಕಾವ್ಯಕ್ಕೆ ಕರುಣರಸ ಪೂಪ್ರದೆಂದು ॥
ವ್ಯಾಸನಂಘ್ರಿಗೆ ಕಾಳಿದಾಸನಡಿಗಳ್ಗೆ ಸುವಿ ।
ಲಾಸದಿಂ ವಾಲ್ಮೀಕಿಮುನಿಯ ಚರಣಕ್ಕೆರಗಿ ।
ವಾಸುಕೇಂದ್ರನಿಗೆ ವಂದಿಸಿ ನಾರದಾದಿಮುನಿಮುಖರ್ಗೆ ಸಾಷ್ಟಾಂಗದಿಂದೆ ॥
ಪೊಸಲಳಿಯದ ಭಕ್ತಿಯಿಂ ನಮಿಸಿನಾಂ ಮಹೋ ।
ಲ್ಲಾಸದಿಂದೀ ಕಾವ್ಯಮಂ ರಸೋನ್ನತಮಾಗೆ ।
ವಾಸುದೇವಾರ್ಪಿತವೆನಲ್ ಪೇೞ್ವೆಶಾರದೆಯ ಬಲ್ಮೆಯಿಂನಲ್ಮೆಯಿಂದೆ ।
ತವೆ ತರ್ಕಶಾಸ್ತ್ರಾಧಿಕಂ ತಂದೆ ಯನುಜನೆಂ ।
ಬಾವನು ಪೌರಾಣಿಕಂ ವೇದಪಾಠಕ ನಗ್ರ ।
ಭವನು ಛಾಂದಸ ನಪುಂಸಕಪುತ್ರನೆಂದು ಕಾಮಿಸುವಳಾ ಕವಿ ಕಾಮಿನಿ ॥
ಸುವಿಲಾಸದಿಂದೆ ತಾನೊಲಿದವರ್ಗಲ್ಲದಾ ।
ಯುವತಿಯಂ ಕವಿತೆಯಂ ಬಲ್ಮೆಗೆಯ್ಯಲ್ ಹಾಸ್ಯ ।
ಬವಣೆಗೊಳಗಾಗದಿರರೆಂಬುದಿದು ಸಿದ್ಧಾಂತವೆಂದರಿಯರೇಂ ಮೂಢರೋ ॥

* * * *

ರಾಯ ಕೇಳೀಶನೋಲಗದೊಳೊಪ್ಪಿರಲು ಕಾ ।
ತ್ಯಾಯಿನಿ ವಿಲಾಸದಿಂ ಹರಿದಿನದ ಮಹಿಮೆಯಂ ।
ಪ್ರಿಯದಿಂ ಕೇಳಲಾ ಪಾರ್ವತಿಗೆ ಸೂಚಿಸಲ್ ದೇವಮುನಿ ಕೇಳ್ದು ನಲಿದು ॥
ಆಯತದೊಳಾಗಡಂ ಸೂತಂಗೆ ಪೇೞಿತೆ ಗುಣ ।
ಧೇಯ ನೈಮಿಷವನದಿ ಶೌನಕಾದಿಗಳಿಗೆ ಸ ।
ಹಾಯಮಾಗಿಯೆ ಪೇೞಲುಂ ಕೇೞ್ದು ಬಲ್ಲಿನೆಲೆ ಮಾಂಧಾತ ಚಕ್ರೇಶ್ವರ ॥
ಎಂದು ಮುನಿ ರುಕ್ಮಾಂಗದಾಖ್ಯಾನಮಂ ಮುದದಿ ।
ಮಾಂಧಾತನೃಪವರಗೆ ಪೇೞ್ದ ವೃತ್ತಾಂತಮಂ ।
ಮುಂದೆ ಮೋಕ್ಷದ ಪದವನೀವ ಸಿದ್ಧಾಂತಮಂ ವಿವಿಧ ದುರಿತಧ್ವಾಂತಮಂ ॥
ಕೊಂದಮಂದಾನಂದಮೀವ ಸದ್ಭಾಗವತ ।
ವೃಂದದೊಳು ಸತ್ಪುಣ್ಯರೂಪಾಗಿ ತೋರುವ ಮು ।
ಕುಂದ ಸೇವಕನ ಚಾರಿತ್ರಮಂ ವರ್ಣಿಸಿದೆ ಕರ್ಮಕಲ್ಮಷ ವಿಲ್ಲದೆ ॥

ಏಕಾದಶೀ ವ್ರತಾಚಾರಸಂಪನ್ನ ನಿ ।
ತ್ಯಾಕರಣಶುದ್ಧ ನಿರ್ಮಲ ಸತ್ಯಶೀಲ ರ ।
ತ್ನಾಕರ ಗಭೀರ ಸದ್ಗುಣನಿಲಯ ಸಕಲ ಚೌಷಷ್ಟಿ ವಿದ್ಯಾಪ್ರವೀಣ ॥
ಲೋಕ ನಾಥಾಂಘ್ರಿ ಕಮಲಭ್ರಮರ ಮನ್ಮಥ ಸ ।
ಮಾಕಾರ ಭಾಗವತ ಕುಲತಿಲಕ ರಾಜೋತ್ತಮ ।
ಹಾಕರುಣಾವಾರ್ಧಿ ರುಕ್ಮಾಂಗದನ ಚಾರಿತ್ರಮಂ ವರ್ಣಿಸಿದೆ ಶುಭದೊಳು ॥

ನಳನಿಂದಧಿಕ ಹರಿಶ್ಚಂದ್ರಗಿಮ್ಮಿಗಿಲುವೆ ।
ಗ್ಗಳನು ಪುರುಕುತ್ಸನಿಂ ಪುಣ್ಯಶೀಲಂ ಸುನಿ ।
ರ್ಮಳ ಪುರೂರವನಿಂದ ಸಗರರಾಜಂಗೆ ಸಾಸಿರಮಡಿ ವಿಶೇಷಯುತನು ॥
ಇಳೆಯಾಳ್ವ ಕಾರ್ತವೀರ್ಯಂಗೆ ಬಲಿ ಶಿಬಿ ರಾಮ ।
ಸಲೆ ಖಚರಪತಿ ದಧೀಚಿಗೆ ದಿಲೀಪಂಗೆ ವೆ ।
ಗ್ಗಳನೆನಿಪ ನುಭಯಕುಲದರಸು ವರ್ಗಂಗಳಿಂ ದತಿಪೂಜ್ಯ ನೆಂದೆನಿಸನು ॥

ಇದನೇಕಚಿತ್ತದಿಂ ಭಯಭರಿತ ಭಕ್ತಿಯಿಂ ।
ಸದಮಲಜ್ಞಾನಸಂಪೂರ್ಣದಿಂದೊಲಿದು ಕೇ ।
ಳಿದವರ್ಗ್ಗೆ ಯಿಹದೊಳತಿಸೌಖ್ಯಮಂ ಪರದಲ್ಲಿ ಘನಮುಕ್ತಿ ಸಂಪದವನು ॥
ಮುದದಿಂದಲಿತ್ತಪಂ ಮೂಲೋಕರಕ್ಷ ದಶ ॥
ವದನಸಂಹಾರಿ ಸಾಕ್ಷಾತ್ಪರಮಪುರುಷ ಸಿರಿ ।
ವದನ ಕಮಲಾರ್ಕ ಖಗಪುರವರಾಧೀಶ ಚೆನ್ನಿಗರಾಯ ನೀಲಕಾಯ ॥

Colophon :

ಪ್ರಥಮ ಸಂಧಿ ಸಂಪೂರ್ಣಂ.

ಭಾನುಕುಲ ತಿಲಕ ರುಕ್ಮಾಂಗದಮಹೀವರ ನಿ ।
ಧಾನ ಕೋವಿದನ ಸುಜ್ಞಾನದ ವಿಚಿತ್ರಮಂ ।
ತಾನರಿದ ರೀತಿಯಿಂದಂ ಪೇಳ್ವೆ ಶಾರದೆಯ ನಲ್ಮೆಯಿಂಬಲ್ಮೆಯಿಂದೆ ॥

End ;

ಇಂತುವಂದಿಪ ಜನರ್ಗಳಿಗೆ ದಯಮಂ ಸೂಸೆ ।
ಕಂತುಪಿತ ಧರ್ಮಾಂಗದನ ಮೆಯ್ಯಾತಡವಿ ತದ ।
ನಂತರದೆ ರುಕ್ಮಾಂಗದನನು ಪಿಡಿದೆತ್ತಿ ಸಂಧ್ಯಾವಳಿಯು ಸಂತೈಸುತ ..
ಸಂತೋಷದಿಂದವರ್ಗಳಿಗೆ ಕೈವಲ್ಯಪದ ।
ಮಂ ತಾನೆಯಿತ್ತು ತವೆ ಭೂತಳವ ನೀವಾಳು ।
ವಂತು ದಿನವನುಭವಿಸಿ ವೈಕುಂಠ ಪುರಕೆ ಬಹುದೆಂದು ಹರಿಕರುಣಿಸಿದನು ॥
ನಿಮ್ಮ ಸತ್ಯಾಚಾರಕಾರು ಯಿದಿರಿಲ್ಲ ವೀ ।
ಬ್ರಹ್ಮಕಲ್ಪಂಗಳೊಳಗಾದ ಮನುಜರೊಳೆಂದು ।
ಕರ್ಮ್ಮ ಗಣೆಯನಪಿತಂ ಕೊಂಡಾಡಿ ಹರುಷಸಾಗರದೊಳೋಲಾಡಿಬಳಿಕ ॥

ಸುಸ್ನಾನದಿಂದ ಮತ್ಸ್ಯಂದನೀ ಹರಿದಿನವ ।
ನೆಮ್ಮಿ ಮಾಳ್ಪರಿಗಕಿಳ ಸೌಭಾಗ್ಯ ಸಂಪದದೆ ।
ನೆಮ್ಮಕೃಪೆಯಿಂ ಪರದೆ ಮೋಕ್ಷವಾಗಲಿಯೆಂದು ಕರುಣಿಸಿದನಾ ನೃಪತಿಗೆ ॥
ಪದಿ ನಾಲ್ಕು ಭಾಗವತರೊಳು ಮಿಗಿಲು ನೀನು ನಿ ।
ನ್ನಧಿಕ ಚರಿತೆಯನು ಕೇಳ್ವರ್ಗೆ ಯಿಹದಲ್ಲಿ ಸಂ ।
ಪದ ಪರದೆ . . . .

(ವಿ.ವಿ.)—

ಇದು ವಾರ್ಧಿಕ ಷಟ್ಪದಿ ರೂಪದಲ್ಲಿದೆ. ಇದರಲ್ಲಿ ಮೊದಲಿಂದ ಹದಿನಾರು ಸಂಧಿಗಳು ಪೂರ್ಣವಾಗಿಯೂ ಹದಿನೇಳನೆಯದು ಅಪೂರ್ಣವಾಗಿಯೂ ಇದೆ. ಕವಿ ಲಕ್ಷ್ಮಣ ನೆಂಬುವನು ಇವನ ಕಾಲವು ತಿಳಿಯುಬರುವುದಿಲ್ಲ. ಈತನು ಈಗ್ರಂಥವನ್ನು ಪ್ರೌಢವಾದ ಶೈಲಿಯಿಂದಲೂ ಹೃದಯಂಗಮವಾದ ವರ್ಣನೆಗಳಿಂದಲೂ ರಚಿಸಿರುವನು. ಹಿಂದಿನ ಗ್ರಂಥಗಳಲ್ಲಿ ಹೇಳುವ ಕಥೆಯೇ ಇದಕ್ಕೂ ವಿಷಯವಾದುದು. ಲಿಪಿ ಉತ್ತಮ ವಾಗಿದೆ. ಉಳಿದ ವಿಷಯಗಳನು ಮೇಲ್ಕಿ ಉದಾಹೃತ ಭಾಗಗಳಿಂದ ತಿಳಿಯುವುದು.

No. 224. ರುಕ್ಮಾಂಗದ ಚರಿತ್ರೆ.

RUKMĀNGADA CARITRE.

Substance, palm-leaf. Size, $13\frac{5}{16} \times 1\frac{1}{2}$ inches. Pages, 182. Lines, 6 on a page. Character, Kanarese. Condition, injured. Appearance old. Mode of writing, good.

Complete.

Similar to the above.

The story contained herein is based on the version of the Nāradīya-purāna. The author Sōmanātha of Madavaḷḷi lived in 1650 A.D.

Beginning :

ಹರಿಯ ನೆನೆದು ಸುಖಿಯಾಗು ಮನವೆ ನರ ।
ಹರಿಯ ನೆನೆದು ಧನ್ಯನಾಗು ॥
ಹರಿಯ ನೆನೆದು ಸುಖಿಯಾದ ಮನುಜರಿಗೆ ।
ಮರಳಿ ಜನ್ಮದ ಬಾಧೆಯಿಲ್ಲ ॥
ನರಲೋಕದೊಳಗೆಲ್ಲ ಹರಿ ಸರ್ವೋತ್ತಮನೆಂದು ॥
ಕರುಣಿಸಿ ಸಕಲ ಸಜ್ಜನರ ॥
ಪೊರೆವ ಪರಮಹಂಸ ಪರಿವೃಢ ಗುರು ಸುರ ।
ತರು ಮಧ್ವಮುನಿಗೆರಗುವೆನು ॥

* * *

ಮಾವನ ಮಡುಹಿ ಮೈದುನಗೆ ಸಾರಥಿಯಾಗಿ ।
ಗೋವರ ಕೆಳೆಯ ನೆಂದೆನಿಸಿ ॥
ದೇವ ನಾಗಿಹೆನೆಂದು ಮಡವಳ್ಳಿಯಲಿ ನಿಂತ ॥
ದೇವರದೇವ ನೃಸಿಂಹಾ ॥

* * *

ಈ ಕೃತಿಗಧಿಪತಿ ಶ್ರೀ ನಾರಸಿಂಹನು ।
ಈ ಕಥೆಯೊಳು ಮೋಕ್ಷಪದವು ॥
ಬೇಕಾದ ಹರಿಭಕ್ತರಿಗಿದು ಸಾಧನ ।
ಶ್ರೀಕಾಂತ ಮೆಚ್ಚುವ ಕೃತಿಯು ॥
ವರ್ಣಾದಿ ಪಾಡುವರಾರು ಬರೆವರಿದ .
ನಿರ್ಣಯ ಗತಿ ತಪ್ಪದಂತೆ ॥
ಕನ್ನಡ (ಕರ್ಣಾಟ) ಕವಿಕುಮುದವಸ್ತು ಸುಖೋದಯ
ಪೂರ್ಣಸೋಮನು ವಿರಚಿಸಿದ ॥
ಬಲ್ಲವರೀ ಕೃತಿಯೊಳು ಮರದೆಡಹಿದ ।
ಸೊಲ್ಲುಗಳನು ತಿದ್ದುವುದು ॥
ಅಲ್ಲದಿದ್ದರೆ ಸುಖದಿಂದ ಕೇಳುವುದಿದು ॥
ಖುಲ್ಲರ ಮತಿಗಗೋಚರವು ॥
ಧೀರ ವಶಿಷ್ಟಮುನಿಪ ಮಾಂಧಾತ ಮ ।
ಹೇರಮಣಗೆ ವಿಸ್ತರಿಸಿದ ॥
ನಾರಾಧಿಸಿ ರುಕುಮಾಂಗದ ಚರಿತೆಯ ।
ಸೂರಿಜನರು ಚಿತ್ತೈಸಿ ॥
ಅಂತು ಪೇಳಿದ ನಾರದೀಯ ಪುರಾಣವ ।
ಇಂತು ಪೇಳಿದೆನು ಕನ್ನಡದಿ ॥
ಶಾಂತರು ಭಜಿಸಿ ಕೇಳುವುದು ಯೀಕೃತಿ ಕೃ ।
ತಾಂತರ ಬಗೆಗಳವಲ್ಲ ॥
ಸನಕಾದಿಗಳು ಕೇಳದರು ಸೋಮನಾಥನ ।
ಅನುವಿನ ಭಕುತಿಗೆ ಮೆಚ್ಚಿ ॥
ಮನದಲಿ ಕರುಣಿಸಿ ಮಡವಳ್ಳಿಯಲಿ ನಿಂದು ।
ನೆನೆವವರನು ಪಾಲಿಸುವ ॥
ಏಕಾದಶಿಯ ಮಹಾ ಮಹಿಮೆಯ ಮೆರೆ ।
ದಾಕಲಿ ರುಕುಮಾಂಗದನು ॥
ಬೇಕಾದ ಮಗನ ಮಾಡುಹಿ ಮುಕುತಿಯ ಸಂದ ।
ಆಕಥೆಯನು ಬಣ್ಣಿಸುವೆ ॥

* * *

ಭೂಮಿಪ ರುಕುಮಾಂಗದಗೆ ಮುಕುತಿಯಿತ್ತು ।
ಗೋಮಿನಿಸಹಿತ ಭೂದಳದ ॥
ಸೀಮೆಗುತ್ತಮವೆಂದು ಮಡವಳ್ಳಿಗೈತಂದ ।
ಶ್ರೀಮಂತರಾಜ ನೊಪ್ಪಿದನು ॥

ಏಕಾದಶಿಯ ವ್ರತದ ಮಹಿಮೆಯ ಮೆರೆ ।
ದಾಕಲಿ ರುಕುಮಾಂಗದನು ।
ಲೋಕದ ಮನುಜರು ಸುರರರಿವಂದದಿ ।
ಶ್ರೀಕಾಂತ ಶರಣೆನುತಿರ್ದ ॥
ಈಪರಿ ಹರಿಕಥೆಯನು ಕೇಳಿ ಹೇಳುವ ।
ದ್ವೀಪಾಂತರದಲ್ಲಿದ್ದವರ ॥
ಪಾಪಕ್ಷಯವ ಮಾಡಿ ಮುಕುತಿಪದವನಿತ್ತು ।
ಶ್ರೀಪತಿ ರಕ್ಷಿಸುತಿರ್ದ ॥

Colophon :

ಅಂತು ಪ್ರಥಮ ಸಂಧಿ ಸಮಾಪ್ತಂ ।

ದಾನವಗಿರಿವಜ್ರ ತಿಮಿರ ಮಾರ್ತಾಂಡನು ।
ಗಾನಲೋಲುಪ ಸುರರಕ್ಷ ॥
ಮಾನಿನಿಯನುರದಲಿ ತಾಳ್ದ ದೇವನೆ .
ಮಾನಸದಲಿ ನೆಲಸೆನ್ನ ॥

End ;

ಎಲ್ಲ ದೇವರ ವಲ್ಲಭ ಕಮಲಾ ।
ವಲ್ಲಭ ವರದ ನೃಸಿಂಹ ॥
ಬಲ್ಲಿದ ರುಕುಮಾಂಗದನ ಸಲಹಿದ ಮಡೆ ।
ವಳ್ಳಿಯಲೊಪ್ಪಿ ತೋರಿದನು ॥
ತ್ರಾಹಿ ಸಕಲ ಜೀವರ ರತ್ನವೆ ತ್ರಾಹಿ ।
ತ್ರಾಹಿ ವಿಶ್ವರೂಪ ಹರಿಯೆ ॥
ತ್ರಾಹಿ ಮಂಗಳಮಹಿನಮಿತ ವಸ್ತುವೆ ತ್ರಾಹಿ
ತ್ರಾಹಿಯೋ ಭಕ್ತಕುಟುಂಬಿ ॥
ವೀರ ವಸಿಷ್ಟ ಮುನಿಪ ಮಾಂಧಾತ ಮ ।
ಹೀರಮಣಗೆ ವಿಸ್ತರಿಸಿದ ॥
ನಾರದೀಯದ ರುಕ್ಮಾಂಗದ ಚರಿತೆಯ ।
ಸೂರಿಗಳೆಲ್ಲ ಚಿತ್ತೈಸಿ ॥

Colophon :

ಅಂತು ಸಂಧಿ ೯ ಕ್ಕಂ ಪದನು ೧೧೫೪ ಕ್ಕಂ ಮಂಗಳಂ.

(ವಿ.ವಿ.)—

ಸಮಗ್ರ. ಶಿಥಿಲ. ಲಿಪಿ ಉತ್ತಮ. ಕವಿ ಸೋಮನಾಥನೆಂಬುವನು. ಈತನು ಬ್ರಾಹ್ಮಣ ಕವಿಯು. ಈತನ ಕಾಲ ಸು. ಕ್ರಿ. ಶ. 1650 (ಕ ಚ.) ಇರಬಹುದು. ಈ ಗ್ರಂಥದಲ್ಲಿ ಮಡವಳ್ಳಿಯೆಂಬ ಊರಿನ ಹೆಸರನ್ನು ಅಲ್ಲಲ್ಲಿ ಹೇಳುವುದರಿಂದ ಕವಿಯ ಸ್ಥಳವೂ ಅದೇ ಆಗಿರ ಬಹುದೆಂದು ತೋರುವುದು. ಕಥಾಗರ್ಭ ಇತ್ಯಾದಿ ವಿಷಯಗಳನ್ನು ಮೇಲೆ ಉದಾಹೃತವಾಗಿರುವ ಪದ್ಯಭಾಗಗಳಿಂದ ತಿಳಿಯುವುದು.

No. 225. ರುಕ್ಮಾಂಗದ ಚರಿತ್ರೆ.

RUKMĀṄGADA CARITRE.

Substance, palm-leaf. Size, $12\frac{3}{8} \times 1^{3}$ inches. Pages, 192. Lines, 5 on a page. Character, Kanarese. Condition, injured. Appearance, old. Mode of writing, good.

Complete.

Same work as the above.

Date of transcription :—Twelfth day of the dark fortnight of the lunar month Phālguna in the year Sādhāraṇa.

Name of the scribe :—Tirumala Upādhya, son of Tirumaladēva of Māṇikanahalli, who copied for Lakṣuvamma.

(ವಿ.ವಿ.)—

ಈ ಗ್ರಂಥವು ಎಂಟುಸಂಧಿಗಳಿಂದ ಸಮಗ್ರವಾಗಿದೆ. ೧೦೧೭ ಪದ್ಯಗಳಿವೆ. ಸಂಧಿಮತ್ತು ಪದ್ಯಗಳ ಸಂಖ್ಯೆಯಲ್ಲಿ ಹಿಂದಿನ ನಂಬರಿನಲ್ಲಿ ವರ್ಣಿತವಾಗಿರುವ ಪ್ರತಿಗಿಂತ ಇದು ವ್ಯತ್ಯಸ್ತವಾಗಿದ್ದರೂ ಆದ್ಯಂತಗಳಲ್ಲಿ ಅದರಂತೆಯೇ ಇದೆ. ಈ ಪ್ರತಿಯು ಶಿಥಿಲ. ಅಕ್ಷರಗಳು ಚೆನ್ನಾಗಿವೆ. ಕವಿ ಇತ್ಯಾದಿ ವಿಷಯಗಳನ್ನು ಹಿಂದಿನ ನಂಬರಿನಲ್ಲಿ ನೋಡಿ ತಿಳಿಯುವುದು. ಗ್ರಂಥಾಂತ್ಯದಲ್ಲಿ :—« ಸಾಧಾರಣ ಸಂವತ್ಸರದ ಫಾಲ್ಗುಣ ಬ. ೧೨ ರಲ್ಲು ಮಾಣಿಕನ ಹಳ್ಳಿಯ ತಿರುಮಲದೇವರ ಮಕ್ಕಳು ತಿರುಮಲ ಉಪಾಧ್ಯರು ಬರೆದ ಪುಸ್ತಕಕ್ಕೆ ಭದ್ರಂ ಭೂಯಾತ್.

ತಪ್ಪಂ ಬರೆದಂ ಕಡುಜಡ .
ನೆಪ್ಪಾತಂ ತಾಂಗಡೆಂದು ಬಯ್ಯಲ್ವೇಡಿಂ .
ತಪ್ಪಂ ಶುದ್ಧಮು ಮಕ್ಕುಂ .
ತಪ್ಪಿಲ್ಲದೆ ಪ್ರತಿಸಮಾನವಾಗಿಯೆ ಬರೆದಂ ..

ಲಕ್ಷುವಮ್ಮ (ಲಕ್ಷ್ಮಿಯಮ್ಮ) ನವರಿಗೆ ಬರೆದ ರುಕುಮಾಂಗದ ಚರಿತೆಯ ಪುಸ್ತಕವು. ಎಂದಿದೆ.

No. 226. ರುಕ್ಮಾಂಗದಚರಿತ್ರೆ.

RUKMĀṄGADACARITRE.

Substance, palm-leaf. Size, $12 \times 1\frac{1}{8}$ inches. Pages, 172. Lines, 7 on a page. Character, Kanarese. Condition, injured. Appearance, very old. Mode of writing, good.

Begins on fol. 1 a. The other works herein are.—(1) Narasimhastōtra 86 b (2) Hāḍugaḷu 93 a. (3) Alankāra. 120 a.

Complete.

Same work as the above.

(ವಿ.ವಿ.)—

ಸಮಗ್ರ. ಶಿಥಿಲ. ಲಿಪಿ ಉತ್ತಮ. ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ. ಆದರೆ ಪದ್ಯ ಸಂಖ್ಯೆ ಗಳಲ್ಲಿ ಇದು ಹಿಂದಿನ ಗ್ರಂಥಗಳಿಗೆ ವ್ಯತ್ಯಾಸವುಳ್ಳದಾಗಿದೆ.

No. 227. ರುಕ್ಮಾಂಗದಚರಿತ್ರೆ.
RUKMĀNGADACARITRE.

Substance, paper. Size, $10\frac{1}{2} \times 9\frac{1}{2}$ inches. Pages, 201. Lines, 8 on a page. Character, Kanarese. Condition, good. Appearance, new. Mode of writing, good.

Complete.

Same work as the above.

Date of transcription.—Seventh day of the bright fortnight of the lunar month Māgha, in the year Yuva.

Name of the Scribe.—Ananta Śānubhōga who copied it for Padumaṇayya.

(ವಿ.ವಿ.)—

ಈ ಗ್ರಂಥವು ಸಮಗ್ರ. ಲಿಪಿ ಉತ್ತಮ. ಹಿಂದೆ ವರ್ಣಿತವಾದುದೇ ಆಗಿದೆ. ಕವಿ ಇತ್ಯಾದಿ ವಿಷಯಗಳನ್ನು ೨೧೯ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು. ಗ್ರಂಥಾಂತ್ಯದಲ್ಲಿ 'ಯುವ ಸಂವತ್ಸರದ ಮಾಘ ಶು ೭ ರಲ್ಲು ಪದುಮಣಯ್ಯನವರಿಗೆ ಅನಂತಶೇನ ಭೋವನು ಬರೆದ ರುಕ್ಮಾಂಗದ ಚರಿತ್ರೆಗೆ ಶುಭಮಸ್ತು.' ಎಂದಿದೆ.

No. 228. ರುಕ್ಮಾಂಗದಚರಿತ್ರೆ.
RUKMĀNGADACARITRE.

Substance, palm-leaf. Size, $10\frac{1}{2} \times 1\frac{1}{2}$ inches. Pages, 237. Lines, 7 on a page. Character, Kanarese. Condition, injured. Appearance, old. Mode of writing, good.

Complete.

Same work as the above.

Date of transcription.—Seventh day of the bright fortnight of the lunar month Māgha, in the year Yuva.

Name of the scribe.—Ananta Sanubhoga who copied for Padumaṇayya.

(ವಿ.ವಿ.)—

ಇದು ಸಮಗ್ರ. ಶಿಥಿಲ. ಲಿಪಿ ಉತ್ತಮ. ಹಿಂದೆ ವರ್ಣಿತವಾದ ಗ್ರಂಥವೇ ಸರಿ. ಕವಿ ಇತ್ಯಾದಿ ವಿಷಯಗಳನ್ನು ೨೧೯ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು. ಗ್ರಂಥಾಂತ್ಯದಲ್ಲಿ 'ಯುವ ಸಂವತ್ಸರದ ಮಾಘ ಶು ೭ ರಲ್ಲು ಪದುಮಣಯ್ಯನವರಿಗೆ ಅನಂತಶೇನ ಬೋವನು ಬರೆದ ರುಕ್ಮಾಂಗದ ಚರಿತ್ರೆಗೆ ಶುಭಮಸ್ತು' ಎಂದಿದೆ.

No. 229. ರುಕ್ಮಾಂಗದಚರಿತ್ರೆ.
RUKMĀNGADACARITRE.

Substance, palm-leaf. Size, $12\frac{1}{4} \times 1\frac{1}{2}$ inches, Pages, 217. Lines, 5 on a page. Character, Kanarese. Condition, injured. Appearance, old. Mode of writing, good,

Complete.

Same work as the above.

Name of the scribe.—Timmaṇṇa, pupil of Siṅgarācārya.

(ವಿ.ವಿ.)—

ಈ ಗ್ರಂಥವು ಹಿಂದಿನ ಪ್ರತಿಗೆ ಸಮಾನವಾದುದು. ಶಿಥಿಲ. ಲಿಪಿ ಉತ್ತಮ. ಕವಿ ಇತ್ಯಾದಿ ವಿಷಯಗಳನ್ನು ೨೧೯ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು. ಗ್ರಂಥಾಂತ್ಯದಲ್ಲಿ ಈ ಕೆಳಗೆ ಬರೆದಿರುವ ಪದ್ಯವು ಹಿಂದಿನ ಪ್ರತಿಯಲ್ಲಿರುವುದಕ್ಕಿಂತಲೂ ಹೆಚ್ಚಾಗಿದೆ.

ದೇವ ರಕ್ಷಾಮಣಿ ದೇವ ದುರಿತದೂರ ।
ದೇವರೆಲ್ಲರಿಗತಿ ಚಲುವ ॥
ದೇವೇಶ ಮಡಹಳ್ಳಿಯ ನರಹರಿ ತನ್ನ ।
ಸೇವಕ ಜನರ ಸಲಹುವ ॥

ಈ ಪ್ರತಿಯನ್ನು ಬರೆದವನ ಹೆಸರು—ಶ್ರೀ ಸಿಂಗರಾಚಾರ್ಯರಯ್ಯನವರಿಂದು ಪದೇಶ್ಯಮಾನನಾದ ತಿಮ್ಮಣ್ಣನ ಬರಹ ಎಂದೂ, ಶ್ರೀ ಸಿಂಗರಾಚಾರ್ಯ ಗುರವೇ ನಮಃ ಎಂದೂ ಹೇಳಿರುವುದರಿಂದ ಸಿಂಗರಾಚಾರ್ಯರ ಶಿಷ್ಯ ತಿಮ್ಮಣ್ಣನೆಂದು ವ್ಯಕ್ತವಾಗುವುದು.

No. 230. ರುಕ್ಮಾಂಗದಚರಿತ್ರೆ.
RUKMĀNGADACARITRE.

Substance, palm-leaf. Size, $14\frac{3}{4} \times 1\frac{1}{4}$ inches. Pages, 172. Lines, 5 on a page. Character, Kanarese. Condition, much injured. Appearance, old. Mode of writing, not bad.

Almost complete, but wants some portion in the middle.

Same work as the above.

(ವಿ.ವಿ.)—

ಇದರಲ್ಲಿ ಆದ್ಯಂತ ಭಾಗಗಳು ಸರಿಯಾಗಿವೆ. ಆದರೆ ಮಧ್ಯೆ ಮಧ್ಯೆ ಕೆಲವು ಓಲೆಗಳು ಮುರಿದು ಹೋಗಿರುತ್ತವೆ. ಶಿಥಿಲ. ಲಿಪಿ ಸಾಮಾನ್ಯ. ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 231. ರುಕ್ಮಾಂಗದಚರಿತ್ರೆ.
RUKMĀṄGADACARITRE.

Substance, palm-leaf. Size, $11\frac{1}{16} \times 1\frac{1}{8}$ inches. Pages, 156. Lines, 7 on a page. Character, Kanarese. Condition, injured. Appearance, old. Mode of writing, not bad.

Contains the Sandhis 1 to 7 complete.

Same work as the above.

Date of transcription.—Wednesday the first day of dark fortnight of the lunar month Ásvayuja, in the year Vikārin.

Name of the scribe.—Rājayya of Kallūru who copied for Cikka-cauḍa, son of Cauḍayya.

(ವಿ.ವಿ.)—

ಇದರಲ್ಲಿ ೧ ರಿಂದ ೭ ಸಂಧಿಗಳು ಸಮಗ್ರ. ಶಿಥಿಲ. ಲಿಪಿ ಸಾಮಾನ್ಯ. ಹಿಂದೆ ವರ್ಣಿತವಾಗಿರುವ ಗ್ರಂಥವೇ ಸರಿ. ಗ್ರಂಥಾಂತ್ಯದಲ್ಲಿ 'ವಿಕಾರಿ ಸಂವತ್ಸರದ ಆಶ್ವಯುಜ ಬಹುಳ ೧ ಬುಧವಾರ ಚೌಡಯ್ಯನ ಮಗ ಚೌಡಗೆ ಕಲ್ಲೂರ ರಾಜಯ್ಯ ಬರೆದುಕೊಟ್ಟ ರುಕುಮಾಂಗದ ಚರಿತೆ ಪುಸ್ತಕಕ್ಕೆ ಸುಬಮಸ್ತು,' ಎಂದಿದೆ.

No. 232. ರುಕ್ಮಾಂಗದಚರಿತ್ರೆ-
RUKMĀṄGAḌACARITRE.

Substance, palm-leaf. Size, 11½ × 1¼ inches. Pages, 18. Lines, 5 on a page. Character, Kanarese. Condition, very much injured. Appearance, old.

Begins on fol. 1. The other works herein are.—(1) Misragrantha. (2) Śripādacaritre. (3) Varamōhanataraṅgiṇi.

Contains a portion in the first Sandhi of the Rukmāṅgadacaritre.

Same work as the above.

(ವಿ.ವಿ.)—

ಇದರಲ್ಲಿ ಮೊದಲನೆಯ ಸಂಧಿ ಮಾತ್ರವಿದೆ. ಅದರಲ್ಲಿಯೂ ಕೊನೆಯ ಭಾಗವಿಲ್ಲ. ಅತಿ ಶಿಥಿಲ. ಹಿಂದೆ ವರ್ಣಿತವಾದ ಗ್ರಂಥವೇ ಆಗಿದೆ.

No. 233. ರುಕ್ಮಾಂಗದಚರಿತ್ರೆ-
RUKMĀṄGAḌACARITRE.

Substance, palm-leaf. Size, 15 × 1¾ inches. Pages, 28. Lines, 2 on a page. Character, Kanarese. Condition, much injured. Appearance, old. Mode of writing, good.

Begins on fol. 1 a. The other work herein is.—Bharata 15 a

Complete.

Similar to the above. The work is written in the Sāṅgatya metre. The author Śēṣakavi lived about 1650. A.D.

Beginning:

ಶ್ರೀರಮಣ ವಕ್ಷಾಂಕಿತ ಕುಂಕುಮಸಾರ ।

......

ಕಾರುಣ್ಯನಿಧಿ ಮುದ (ವೆತ್ತು) ವೆಂಕಟರಾಯ ।
ಚಾರು ಸಜ್ಜನರ ರಕ್ಷಿಪುದು ॥

ಸಾಮಜವದನನ ಕಾಮಿತವರದನ ।
ಸೋಮಶೇಖರನ ನಂದನನ ॥
ಭೂಮಿಗನಾಥರಿಗೆ ಯಧಿನಾಥನ ।
ಸ್ವಾಮಿ ಗಣಪಗೆ ವಂದಿಸುವೆ ॥
ಅಂಬಿಕೆಯರಸಗೆ ಯಂಬಗಕೇಶಗೆ ।
ಶಂಬರರಿಪು ಭಂಜನಗೆ ॥
ಅಂಬೊಂದರಿಂದ ತ್ರಿಪುರವ ನುರಪಿದ ತ್ರಿ ।
ಯಂಬಕನಿಗೆ ನಮೋ ಎಂಬೆ ॥

* * *

ಹರಿವಾಸರದ ನಿಷ್ಠೆಯ ನುಗಿದೀಡಾಡಿ ।
ಹುರುಳು ಗೆಡಿಸಿ ಗಾರುಮಾಡಿ ॥
ಹಿರಿಯ ಮಗನ ಕೊಲೆ ಮುಂತಾಗಿ ಚಿತ್ತವ ।
ಮರುಳು ಮಾಡೆಂದು ನೇಮಿಸಿದ ॥
ಎಂದು ಮೋಹಿನಿ ಬೇಗದಿಂದ ನಡೆಯೆನೆ ।
ಚಂದ್ರವದನೆ ನಸುನಗುತ ॥
ಮಂದರ ಗಿರಿಯ ತಪ್ಪಲಿಗೆ ತೆರಳಿ ಹೋದ ।
ಳೆಂದಲ್ಲಿ ಸಂಧಿ ಸಂಪೂರ್ಣ ॥

Colophon:

ಅಂತು ಪ್ರಥಮ ಸಂಧಿ ಸಮಾಪ್ತಂ

ಮುಂದಣ ಸಂಧಿಯ ವೃತ್ತಾಂತವನೇ ।
ನೆಂದರೆ ರುಕುಮಾಂಗದನು ॥
ಮಂದರ ಗಿರಿಯ ತಪ್ಪಲಲಿ ಮೋಹಿನಿಯೊಳು ।
ಸಂದೇಹವಿಲ್ಲದೆ ಸಿಕ್ಕಿದನು (?) ॥

* * *

ಸುದತಿಯರೊಳಗಗ್ರಗಣ್ಯೆ ಮೋಹಿನಿಯೆಮ್ಮ ।
ಹೃದಯಕ್ಕೆ ಪರಿಣಾಮ ಕಾರಿ ॥
ಮದನಕೇಳಿಯಲಿ ಹೇವರಿಸದಂತಿರು ನೀನು ।
ತ್ರಿದಶ ವಿಕ್ರಮರಾಯ ನೊಡನೆ ॥
ಅಲಸದೆ ದೇಶದೇಶಕೆ ಹೋಗಿ ನಮ್ಮಾಜ್ಞೆ ।
ಚಲಿಸದಿರ್ಪಂತೆ ಮಾಡುವುದು ॥
ಕಲಿಗಳ ಗೆಲಿದು ಕಪ್ಪವ ತಹುದೆಲೆ ರವಿ ।
ಕುಲಧರ್ಮ ಕೇಳು ನೀತಿಗಳ ॥

End:

ಗರುವೆ ನನಗೆ ಗತಿಯಾವುದೆಂದಲ್ಲೀಗ ।
ಹರಿವಾಸ ತಪ್ಪಿ ಪಾರಣೆಯ ॥

ಸ್ಫುರದಿಂದ ನಿದ್ರೆಗೈದವರೆಲ್ಲರ ಫಲ ।
ತರುಣಿ ಮೋಹಿನಿ ನಿನಗೆಂದ ॥
ಹರಿಕಥೆಯು ಲೋಕದೊಳ್ ಗರಿಯು ಬೇಕೆಂದೀಗ ।
ಕರುಣಾಳು ತಿಪ್ಪೇಂದ್ರ ಶೇಷ ॥
ತಕೆಂದು ವಿರಚಿಸಿದನು ಸರ್ವ (?)
ರರಿದು ಯಿಹುದು ಪ್ರೀತಿಯಿಂದ ॥

ಹಳಕಥೆಯಾಗಿ ಕೇಳುವ ವಿಷ್ಣು ಚರಿತವ ।
ಇಳೆಯೊಳುತ್ತಮ ಭಕ್ತಜನಕೆ ॥

ಪ್ರಳಯುವ ನುಳಿವಂತೆ ಕಣ್ಣು ಅಚ್ಚುಪ ।
ಚಲುವ ನಾಟಕವ ಸೃಜಿಸಿದ ॥
ತಿಪ್ಪೇಂದ್ರ ತನಯ ರಾಘವ ಭೂವರನನುಜ ।
ನಪ್ಪ್ರತಿ ವರದ ಶೇಷ ॥

ಒಪ್ಪುವ ರುಕುಮಾಂಗದ ಚರಿತೆಯು ಲೋಕ ।
ಕ ಪ್ರ್ಯತಿಯೆನೆ ವಿರಚಿಸಿದ ॥
ಅಭಿನವ ಮೋದಾ ದರದಿಂದ ಹರಿಯನು ।
ಅಭಿವರ್ಣಿಸಿದ ನಾಟಕವ ॥
ವಿಭವ ದೇವೇಂದ್ರ ತಿಪ್ಪೇಂದ್ರ . . ಶೇಷ ।
ಶುಭಲಗ್ನದಿಂದರ್ಥಿಯಲಿ ॥
ಧರೆ ಚಂದ್ರ ಸೂರ್ಯರೀ ಚರಿತೆಯುಳ್ಳನ್ನ ॥
ಸಿರಿ ಸಂತಾನ ಶುಭಕೀರ್ತಿ ॥
ಪೆರೆದು ಬಾಳಲಿ ಶೇಷ ನುದಯದ ಹರಕೆಯು ।
ಹರಿವೆಂಕಟಾದ್ರಿ ಗೋವಿಂದ ॥

Colophon :

ಅಂತು ಸಂದಿ ೭ ಕ್ಕಂ ಪದನು ೩೧೩ ಕ್ಕಂ ಮಂಗಳಂ.

(ವಿ.ವಿ.)—

ಇದು ಸಾಂಗತ್ಯ ರೂಪವಾದುದು. ಸಮಗ್ರ. ಅತಿ ಶಿಥಿಲ. ಲಿಪಿ ಉತ್ತಮ. ಶೈಲಿ ಚೆನ್ನಾಗಿದೆ. ಕವಿ ಶೇಷನೆಂಬುವನು. ಈತನ ಕಾಲವು ಸು 1650 (ಕ್ರಿ. ಶ.) ಇರಬಹುದೆಂದು ಕವಿ ಚರಿತ್ರೆಯಲ್ಲಿ ಸೂಚಿತವಾಗಿದೆ. ಹಿಂದೆ ವರ್ಣಿತವಾಗಿರುವ ಗ್ರಂಥದ ಕಥೆಯೇ ಇದಕ್ಕೂ ವಿಷಯವಾದುದು. ಉಳಿದ ವಿಷಯಗಳನ್ನು ಉದಾಹೃತವಾಗಿರುವ ಪದ್ಯಭಾಗದಿಂದ ತಿಳಿಯುವುದು.

No. 234. ಲಿಂಗಪುರಾಣ.

LINGAPURĀNA.

Substance, Śrītāla. Size, 15 × 2⅛ inches. Pages, 843. Lines, 8 on a page. Character, Kanarese. Condition, injured. Appearance, old.

Contains the Adhyāyas 1 to 108 complete in the first part, and 1 to 50 complete in the second part. The 51st Adhyāya of the second part is incomplete.

A free rendering in prose of the Sanskrit Lingapurāṇa: by Kaḷale Nañjarāja. For other particulars regarding the author and his other works see under No. 218 *ante*.

Beginning:

ಅನಂತರದಲ್ಲಿ ಸೂತಪೌರಾಣಿಕನಿಂತೆಂದನು. ಕೇಳಿರೈ ! ಋಷಿಗಳಿರ ! ಈ ಲಿಂಗ ಪುರಾಣದಲ್ಲಿರುವ ಕಥೆಗಳನ್ನೆಲ್ಲವನ್ನೂ ಸಂಕ್ಷೇಪವಾಗಿ ವಿವರಿಸುತ್ತಲಿದ್ದೇನೆ. ಪೂರ್ವದಲ್ಲಿ ಬ್ರಹ್ಮದೇವನು ನೂರುಕೋಟಿ ಗ್ರಂಥ ಸಂಖ್ಯೆಯುಳ್ಳ ಪುರಾಣಗಳಲ್ಲಿ ಕೋಟಿ ಗ್ರಂಥ ಸಂಖ್ಯೆಯುಳ್ಳ ಪುರಾಣವನ್ನು ನಿರ್ಮಿಸಿದನು. ಆ ಬಳಿಕ ವ್ಯಾಸ ಮುನೀಂದ್ರನು ದ್ವಾಪರಯುಗದಲ್ಲಿ ನೂರುಕೋಟಿ ಗ್ರಂಥ ಸಂಖ್ಯೆಯುಳ್ಳ ಪುರಾಣಗಳಲ್ಲಿ ಸಾರವಾದ ಗ್ರಂಥಗಳಂ ತೆಗೆದು ನಾಲ್ಕು ಲಕ್ಷಗಳ ಗ್ರಂಥ ಸಂಖ್ಯೆಯಿಂದ ಸಂಕ್ಷೇಪವಾಗಿ ಬ್ರಹ್ಮಾಂಡ ಪುರಾಣ ಮೊದಲಾದ ಹದಿನೆಂಟು ಪುರಾಣಗಳಂ ಮಾಡಿ, ಆ ಪುರಾಣಗಳ ಮಧ್ಯದಲ್ಲಿ ಹನ್ನೊಂದನೆಯ ಪುರಾಣವಾದ ಲಿಂಗಪುರಾಣವನ್ನು ಹನ್ನೊಂದುಸಾವಿರ ಶ್ಲೋಕಗಳಿಂದ ರಚಿಸಿದರು. ಆ ಲಿಂಗಪುರಾಣವನ್ನು ವ್ಯಾಸ ಮುನೀಂದ್ರರ ಸನ್ನಿಧಾನದಲ್ಲಿ ಅವರ ಅನುಗ್ರಹದಿಂದ ಸಂಪೂರ್ಣವಾಗಿ ಕೇಳಿದ್ದೇನೆ. ವಿಸ್ತಾರವಾಗಿ ಕೇಳಲ್ಪಟ್ಟ ಈ ಲಿಂಗಪುರಾಣವನ್ನು ನಿಮಗೆ ಸಂಕ್ಷೇಪವಾಗಿ ತಿಳುಹಿಸುತ್ತಲಿದ್ದೇನೆ.

ಈ ಪುರಾಣದಲ್ಲಿ ಲಿಂಗಸಂಭವಪ್ರಧಾನದಿಂದ ಪ್ರಾಕೃತ ಸೃಷ್ಟಿ, ವೈಕೃತ ಸೃಷ್ಟಿ, ಬ್ರಹ್ಮಾಂಡದ ಉತ್ಪತ್ತಿ, ಅಂಡದ ಎಂಟು ಆವರಣಗಳ ಲಕ್ಷಣ, ರಜೋಗುಣವ ನಾಶ್ರೈಸಿರುವುದರಿಂದ ಸಮಸ್ತವೂ ಬ್ರಹ್ಮಾಂಡದ ದೆಸೆಯಿಂದ ಹುಟ್ಟಿದ್ದು, ವಿಷ್ಣುತ್ವ, ಕಾಲರುದ್ರತ್ವ, ಆತನಿಗೆ ಉದಕಶಯನ ಪ್ರಜೆಗಳಿಗೆ ಪತಿಗಳಾದ ಬ್ರಹ್ಮರ ಸೃಷ್ಟಿ, ಭೂಮಿಯ ಉದ್ಧರಣ ಪ್ರತಾರಣ ಪ್ರಕಾರ, ಬ್ರಹ್ಮದೇವನ ದಿವಾರಾತ್ರಪ್ರಮಾಣ, ಆತನ ಆಯುಷ್ಯಪ್ರಮಾಣ, ಬ್ರಹ್ಮಸವನವು, ಯುಗಗಳು, ಯುಗಕಲ್ಪಗಳು, ದಿವ್ಯವರ್ಷಂಗಳು, ಮಾನುಷ್ಯ ವರ್ಷಗಳು, ಋಷಿ ವರ್ಷಗಳು, ಸಾವನ ವರ್ಷಗಳು, ಪಿತೃ ವರ್ಷಗಳು, ಪಿತೃಗಳ ಉತ್ಪತ್ತಿ, ಅ . . . . . ಗಳು, ಲೋಕನಾಶನ, ತಿರು ಯೂ ಶಕ್ತಿಯ ಉತ್ಪತ್ತಿ, ಬ್ರಹ್ಮದೇವನ ಸ್ತ್ರೀಪುರುಷಭಾವ, ಆ ಸ್ತ್ರೀಪುರುಷರಿಂದ ಉಂಟಾದ ಸೃಷ್ಟಿ, ರೋದನಾನಂತರದಲ್ಲಿ ರುದ್ರನಿಗೋಸ್ಕರ ಪೂರ್ವ ಕಥಾ ವೃತ್ತಾಂತವನ್ನು ತಿಳುಹಿಸಿದ್ದು, ಬ್ರಹ್ಮವಿಷ್ಣುವಿವಾದ, ತಿರುಗಿಯೂ ಲಿಂಗೋತ್ಪತ್ತಿ, ಶಿಲಾದನ ತಪಸ್ಸು. ಇಂದ್ರದರ್ಶನ, ಶಿವದರ್ಶನ, ಆಚಾರ್ಯ ಶಿಷ್ಯ ಲಕ್ಷಣ,

* * * * *

ಸುದರ್ಶನೋತ್ಪತ್ತಿ, ವಿಷ್ಣುವಿಗೆ ಚಕ್ರಪ್ರಾಪ್ತಿ, ರುದ್ರ ಚರಿತ ವರ್ಣನ ಪ್ರಕಾರ, ಪಾತಾಳದಲ್ಲಿರುವ ಹಾಟಕೇಶ್ವರ ವರ್ಣನಪ್ರಕಾರ, ಬ್ರಾಹ್ಮಣಮಹಿಮಾತಿಶಯ, ಸಕಲ ಮೂರ್ತಿಗಳೊಳಗೆ ಶಿವಮೂರ್ತಿಗೆ ಆಧಿಕ್ಯ, ಇವು ಮೊದಲಾದ ಕಥೆಗಳನ್ನೆಲ್ಲವನ್ನೂ ಈ ಲಿಂಗಪುರಾಣ

ದಲ್ಲಿ ಹೇಳಿರುವರು. ಈ ಅಧ್ಯಾಯವನ್ನು ಯಾವ ಪುರುಷನು ಭಕ್ತಿಯಿಂದ ಕೇಳುವನೋ ಆತನು ಶಿವಲೋಕವ ನೆಯ್ದುವನೆಂದು ಸೂತಪೌರಾಣಿಕನು ನೈಮಿಷಾರಣ್ಯವಾಸಿಗಳಾದ ಶೌನಕಾದಿ ಋಷಿಗಳಿಗೆ ವಿವರಿಸಿದನು.

Colophon:

ಇಂತು ಮಹಿಶೂರ ಸೇನಾಪತಿ ದೊಡ್ಡರಾಜ ಪೌತ್ರ ವೀರರಾಜ ನಂದನ ದಳವತಿ ದೇವ ರಾಜಾನುಜ ಕಳಲೆ ನಂಜರಾಜವಿರಚಿತಮಾದ ನಂಜರಾಜ ವಾಣೀವಿಲಾಸವೆಂಬ, ಕರ್ಣಾಟಕ ಭಾಷಾ ವಿರಚಿತಮಾಗಿ(ರುವ) ಮಹಾಪುರಾಣವಾದ ಲಿಂಗಪುರಾಣದಲ್ಲಿ ಪ್ರಥಮಾಧ್ಯಾಯದರ್ಥ ನಿರೂಪಣ(ವು).

ಅನಂತರದಲ್ಲಿ ಸೂತಪೌರಾಣಿಕನು ಮತ್ತು ಇಂತೆಂದನು. ಕೇಳಿರೈ ! ಋಷಿಗಳಿರ ! ಆ ಲಿಂಗವು ಲಿಂಗಕ್ಕೆ ಕಾರಣವಾಗಿರುವುದು. ಅವ್ಯಕ್ತಲಿಂಗವೆನಿಸಿಕೊಂಬುದು. ಶಿವನು ಆ ಲಿಂಗ ವೆನಿಸಿಕೊಂಬುವನು. ಲಿಂಗವು ಶೈವಸಂಬಂಧವಾಗಿರುವುದು. ಆ ಲಿಂಗ(ವು) ಪ್ರಧಾನ ವೆನುತಲೂ ಪ್ರಕೃತಿಯೆನುತಲೂ ಎರಡು ಪ್ರಕಾರವಾಗಿರುವುದು.

End:

ಕೇಳಿರೈ ! ಋಷಿಗಳಿರ ! ಸನಾತನನಾದ ವಾಸುದೇವನಾದ ಕೃಷ್ಣನು ಒಂದು ದಿವಸದಲ್ಲಿ ಮನುಷ್ಯದೇಹವಂ ನಿಂದಿಸಿ, ದೇಹಶುದ್ಧಿಯಂ ಮಾಡುವುದಕ್ಕೆ ಪುತ್ರಲಾಭಕ್ಕೋಸ್ಕರ ಉಪ ಮನ್ಯು ಮುನೀಂದ್ರನ ಆಶ್ರಮಕ್ಕೆ ಹೋಗಿ, ಆತನಿಗೆ ಮೂರು ಪ್ರದಕ್ಷಿಣೆಗಳಂ ಮಾಡಿ ಪಾದ ಗಳಿಗೆರಗಿ ಆತನ ದರ್ಶನಮಾತ್ರದಿಂದಲೇ ಮಲತ್ರಯವಂ ಪರಿಹರಿಸಿ ಭಸ್ಮೋದ್ಧೂಳಿತ ವಿಗ್ರಹ ನಾಗಿರಲು ಮುನೀಂದ್ರನು ಕೃಷ್ಣನಿಗೆ ಮಂತ್ರೋಪದೇಶವಂ ಮಾಡಿ ಪಾಶುಪತಜ್ಞಾನವಂ ಕೊಡಲು ಕೃಷ್ಣನು ಉಪಮನ್ಯು ಮುನೀಂದ್ರನನುಗ್ರಹದಿಂದ ಪಾಶುಪತವ್ರತವಂ ಮಾಡಿ, ವ್ರತ ನಿಷ್ಠರಾದ ಬ್ರಾಹ್ಮಣ ಲಿಂಗ ಪೂಜಿತನಾಗಿ (?)ಒಂದು ವರ್ಷ ವ್ರತವಂ ಮಾಡಿ, ವರ್ಷಾಂ ತ್ಯದಲ್ಲಿ ದೇವದೇವರಾದ ಮಹೇಶ್ವರರಾದ ಅಂಬಾಸಮೇತರಾದ, ಗಣಸಹಿತರಾದ ಪರಮೇಶ್ವರರಂ ನೋಡಿ ಅವರ ಪ್ರಸಾದದಿಂದ ಪುತ್ರರಂ ಪಡೆದನು.

ಕೇಳಿರೈ ! ಋಷಿಗಳಿರ ! ಪಾಶುಪತ ವ್ರತ ನಿಷ್ಠರಾದ ಬ್ರಾಹ್ಮಣರೆಲ್ಲರೂ ಆ ಹೊತ್ತು ಮೊದಲುಗೊಂಡು ಕೃಷ್ಣನಂ ಸುತ್ತಿಕೊಂಡು ಹೊಗಳುತ್ತಿದ್ದರು. ಕೇಳಿರೈ ! ಋಷಿಗಳಿರ ! ಈ ಕಥೆಯನ್ನು ಸಂಕ್ಷೇಪವಾಗಿ ವಿವರಿಸಿದೆ. ಈ ಅಧ್ಯಾಯವನ್ನು ಓದಿದವನು, ಕೇಳಿದವನು, ಕೇಳಿಸಿದವನು. ವಿಷ್ಣುಲೋಕವನೆಯ್ದುವನೆಂದು ಸೂತಪೌರಾಣಿಕನು ನೈಮಿಷಾರಣ್ಯವಾಸಿ ಗಳಾದ ಶೌನಕಾದಿಋಷಿಗಳಿಗೆ ನಿರೂಪಿಸಿದನು.

Colophon:

ಇಂತು ಮಹಾಪುರಾಣವಾದ ಲಿಂಗಪುರಾಣದಲ್ಲಿ ಮಹಿಶೂರ ಸೇನಾಧೀಶ ದೊಡ್ಡರಾಜ ಪೌತ್ರ, ವೀರರಾಜ ನಂದನ ಕಳಲೆ ನಂಜರಾಜ ವಿರಚಿತಮಾದ ಕರ್ಣಾಟಕ ಟೀಕೆಸಲ್ಲಿ ನೂರೆಂಟನೆ ಯ ಅಧ್ಯಾಯದರ್ಥ.

"ಉತ್ತರಭಾಗ"

ಅನಂತರದಲ್ಲಿ ಸೂತಪೌರಾಣಿಕನಂ ಕುರಿತು ಋಷಿಗಳಿಂತೆಂದರು. ಎಲೈ ! ಸೂತ ಪುತ್ರನೆ ! ಸುವ್ರತನೆ ! ನೀನು ಸರ್ವಜ್ಞನಾದುದರಿಂದ ಒಂದು ಅರ್ಥವನ್ನು ಕೇಳುತಲಿದ್ದೇವೆ.

ನೀನು ತಿಳುಹಿಸಬೇಕು. ಸರ್ವದೇವೇಶ್ವರನಾದ ಕೃಷ್ಣನು ಯಾವಕಾರ್ಯದಿಂದ ತೃಪ್ತಿಯು ನೆಯ್ದುವನು। ಎಂದು ಕೇಳಲು ಸೂತಪೌರಾಣಿಕನಿಂತೆಂದನು.

ಎಲೈ ! ವಿಪ್ರೇಂದ್ರರುಗಳಿರ ! ಪೂರ್ವದಲ್ಲಿ ಅಂಬರೀಷರಾಯನು ಮಾರ್ಕಂಡೇಯ ಮುನೀಂದ್ರನಂ ಕರೆದು. ಎಲೈ ! ಮುನೀಂದ್ರನೆ ! ನೀವು ಬಹುಕಾಲದಿಂದಿರುವಂತಹವರು. ಪುರಾಣಂಗಳಲ್ಲಿರುವರ್ಥವನ್ನು ತಿಳಿದಂತಹವರು. ಅವರಿಂದ ಒಂದು ಸಂಶಯಮಂ ಕೇಳುತ್ತಲಿದ್ದೇನೆ. ಆ ಸಂಶಯಮಂ ಪರಿಹರಿಸಬೇಕು. ಎಲೈ ! ಮುನೀಂದ್ರನೆ ! ನಾರಾಯಣಸ್ವಾಮಿಯವರಿಗೆ ಪ್ರೀತಿಯಾದ ಕಾರ್ಯ ಯಾವುದು ? ಆವಕಾರ್ಯದಿಂದ ಪ್ರಸನ್ನರಾಗುವರು ? ವಿಷ್ಣುಧರ್ಮಗಳೊಳಗೆ ಭಕ್ತರಿಗೆ ಅಭೀಷ್ಟ ಪ್ರದವಾದ ಉತ್ತಮವಾದ ಧರ್ಮವಾವುದು ? ಅದನ್ನು ನನಗೆ ತಿಳುಹಿಸಬೇಕೆನಲು ;

* * * * *

ನಾರಾಯಣಸ್ವಾಮಿಯವರು ತಪವನೋಡಿ ಸಂತೋಷಪಟ್ಟು ನಾರದಮುನೀಂದ್ರನಿಗೆ ಬೇಕಾದ ವರಗಳಂ ಕೊಟ್ಟರೆಂದು ಮಾರ್ಕಂಡೇಯ ಮುನೀಂದ್ರನು ಅಂಬರೀಷಮಹಾರಾಯನಿಗೆ ತಿಳುಹಿಸಿದನೆಂದು ಸೂತಪೌರಾಣಿಕನು ನೈಮಿಷಾರಣ್ಯವಾಸಿಗಳಾದ ಶೌನಕಾದಿಋಷಿಗಳಿಗೆ ನಿರೂಪಿಸಿದನು.

Colophon :

ಇಂತು ಮಹಾಪುರಾಣವಾದ ಲಿಂಗಪುರಾಣದಲ್ಲಿ ಮಹೀಶ್ವರಸೇನಾಧೀಶ ದೊಡ್ಡ ರಾಜಸುತ ವೀರರಾಜನಂದನ ಕಳಲೆ ನಂಜರಾಜವಿರಚಿತಮಾದ ಕರ್ಣಾಟಕ ಟೀಕೆನಲ್ಲಿ ಉತ್ತರಭಾಗದಲ್ಲಿ ಪ್ರಥಮಾಧ್ಯಾಯದರ್ಥ ನಿರೂಪಣಂ.

ಅನಂತರದಲ್ಲಿ ಮಾರ್ಕಂಡೇಯ ಮುನೀಂದ್ರನಿಂತೆಂದನು. ಎಲೈ ! ಅಂಬರೀಷರಾಯನೆ ! ಆ ಬಳಿಕ ನಾರಾಯಣಸ್ವಾಮಿಯವರು ನಾರದಮುನೀಂದ್ರನಿಗೆ ಬೇಕಾದ ವರಗಳ ನೆಲ್ಲವನ್ನು ಕೊಟ್ಟು ತುಂಬುರನಿಗೆ ಸಮಾನನಾಗುವ ಹಾಗೆ ಮಾಡಿದರು.

End :

ದೇವದೇವನಾದ ತ್ರಿಯಂಬಕನನ್ನು ಪೂಜಿಸಿ ಈ ಮಂತ್ರವನು (ತ್ರಿಯಂಬಕ ಮಂತ್ರವನ್ನು) ಜಪಿಸಿದವನು ಸಪ್ತಜನ್ಮಕೃತಪಾಪವಿನಿರ್ಮುಕ್ತನಾಗಿ ಯುದ್ಧದಲ್ಲಿ ಜೆಯವನೆಯ್ದಿ ಸಕಲೈಶ್ವರ್ಯ ಸಂಪನ್ನನಾಗಿ ಸಕಲಭೋಗಗಳನ್ನೂ ಅನುಭವಿಸುವನು. ಮೂರು ಲೋಕಗಳಿಗೆ ಮೂರು ಗುಣಂಗಳಿಗೆ ಮೂರು ಮೂರ್ತಿಗಳಿಗೆ ಮೂರು ವರ್ಣದವರಿಗೆ ಮೂರು ಅಕ್ಷರಂಗಳಿಗೆ ಮೂರು ಮಂತ್ರಗಳಿಗೆ ಮೂರು ತೇಜಸ್ಸುಗಳಿಗೆ ಮೂರು ಅಗ್ನಿಗಳಿಗೆ ಪತಿಯಾದ್ದರಿಂದ ಪರಮೇಶ್ವರನಿಗೆ ತ್ರಿಯಂಬಕನೆಂಬ ಹೆಸರು ಪ್ರಸಿದ್ಧಮಾಯಿತು. ಎಂದು ಈ ಪ್ರಕಾರದಿಂದ ಮಂತ್ರಾರ್ಥವನ್ನು ತಿಳಿದು ತ್ರಿಯಂಬಕನಂ ಪೂಜಿಸಿ ಮಂತ್ರವನ್ನು ಜಪಿಸಬೇಕು. ತ್ರಿಯಂಬಕನಿಗೆ ಸಮಾನನಾದ ದೇವನಿಲ್ಲ. ಪ್ರಸಾದದಲ್ಲಿ, ಪ್ರೀತಿಯಲ್ಲಿ ಅನುಗ್ರಹದಲ್ಲಿ ದಯೆಯಲ್ಲಿ ಭಕ್ತ ರಕ್ಷಣದಲ್ಲಿ ಶೀಲದಲ್ಲಿ ತ್ರಿಯಂಬಕ ಸಮಾ . . . .

(ವಿ.ವಿ.)—

ಇದರಲ್ಲಿ ಪೂರ್ವೋತ್ತರಭಾಗಗಳೆಂದು ಎರಡುಭಾಗಗಳವೆ. ಪೂರ್ವಭಾಗದಲ್ಲಿ ೧೦೮ ಅಧ್ಯಾಯಗಳವೆ. ಉತ್ತರಭಾಗದಲ್ಲಿ ೫೦ ಅಧ್ಯಾಯಗಳು ಸಮಗ್ರ. ೫೧ ನೆಯದು ಅಸಮಗ್ರ. ಕವಿ ಕಳಲೆ ನಂಜರಾಜ. ಉಳಿದ ವಿಷಯಗಳನ್ನು ಮೇಲೆ ಉದಾಹೃತವಾಗಿರುವ ಭಾಗಗಳಿಂದ ತಿಳಿಯುವುದು.

No. 235. ಲಿಂಗಪುರಾಣ.
LIṄGAPURĀNA.

Substance, paper. Size, $12\frac{3}{16} \times 7\frac{1}{2}$ inches. Pages, 870. Lines, 20 on a page. Character, Kanarese. Condition, good. Appearance, old.

The 1st part contains 108 Adhyāyas, and second part, contains 50.

Same work as the above

(ವಿ.ವಿ.)—

ಈ ಪುರಾಣದ ಪೂರ್ವಭಾಗದಲ್ಲಿ ೧೦೮ ಅಧ್ಯಾಯಗಳಿವೆ ಉತ್ತರಭಾಗದಲ್ಲಿ ೫೦ ಅಧ್ಯಾಯಗಳು ಮಾತ್ರ, ಇವೆ. ಕವಿ ಕೆಳಲೆ ನಂಜರಾಜ. ಹಿಂದೆ ವರ್ಣಿತವಾದ ಗ್ರಂಥವೇ ಆಗಿದೆ.

No. 236. ವಿಷ್ಣುಧರ್ಮೋತ್ತರ (ವಚನ).
VIṢNUDHARMŌTTARA (PROSE).

Substance, Śrītāla. Size, $18\frac{3}{4} \times 1\frac{3}{4}$ inches. Pages, 226. Lines, 5 on a page. Character, Kanarese. Condition, injured. Appearance, old. Mode of writing, good.

Contains the Adhyāyas 1 to 24 complete, and the 25th incomplete.

A portion of the Gāruḍapurāṇa, purporting to establish the supremacy of Lord Viṣṇu. The author whose name is not given has written this work in simple prose.

Beginning :

ಶ್ರೀರಾಮಚಂದ್ರ ರಘುಪುಂಗವ ರಾಜವರ್ಯ।
ರಾಜೇಂದ್ರಚಂದ್ರ ರಘುನಾಯಕ ರಾಘವೇಶ ॥
ರಾಜಾಧಿರಾಜ ರಘುನಂದನ ರಾಮಭದ್ರ ।
ದಾಸೋಽಹಮದ್ಯ ಭವತಃ ಶರಣಾಗತೋಽಸ್ಮಿ ॥

ಶುಕ್ಲಾಂಬರಧರಂ ವಿಷ್ಣುಂ । ಶಶಿವರ್ಣಂ ಚತುರ್ಭುಜಂ ॥
ಪ್ರಸನ್ನ ವದನಂ ಧ್ಯಾಯೇತ್ । ಸರ್ವ ವಿಘ್ನೋಪ ಶಾಂತಯೇ ॥
ಯಸ್ಯ ದ್ವಿರದ ವಕ್ತ್ರಾದ್ಯಾಃ । ಪಾರಿಷದ್ಯಾಃ ಪರಶ್ಶತಂ ॥
ವಿಘ್ನಂ ನಿಘ್ನಂತಿ ಭಜತಾಂ । ವಿಷ್ವಕ್ಸೇನಂ ತಮಾಶ್ರಯೇ ॥

ಸ್ವಸ್ತ್ಯಸ್ತು. ನಿಖಿಲ ಸನ್ಮಂಗಳಾನಿ ಭವಂತು ವಃ ಶ್ಲೋಕೈಕ ಶ್ರವಣಮಾತ್ರದಿಂದ ಸಕಲ ಕಲ್ಮಷಾಪನೋದನ ಪಟುತರವಾದ ಧರ್ಮಾರ್ಥಕಾಮಮೋಕ್ಷಂಗಳೆಂಬ ಚತುರ್ವಿಧ ಫಲ ಪುರುಷಾರ್ಥಸಾಧನವಾದ ಭಗವತ್ಪ್ರೋಕ್ತವಾದ ಗಾರುಡ ಪುರಾಣದಲ್ಲಿ ವಿಷ್ಣುಧರ್ಮೋತ್ತರ ಶಾಸ್ತ್ರ ಕಥಾ ಪ್ರಸಂಗವೆಂತೆನೆ :—

ಸಮ್ಯಗ್ಜ್ಞಾನಾತ್ಮ ಸಂತುಷ್ಟಂ । ಭಗವತ್ಪ್ರಿಯ ವಾಹನಂ ॥
ವಿನತಾ ತನಯಂ ಶಾಂತಂ । ಮರೀಚಿಃ ಪರ್ಯ ಪೃಚ್ಛತ ॥

ಸಮ್ಯಗ್‌ಜ್ಞಾನಾತ್ಮನಾಗಿ ಭಗವತ್ಪ್ರಿಯ ವಾಹನನಾಗಿ ವಿನತಾ ತನೆಯನಾಗಿ ಶಾಂತ ನಾಗಿರುವ ಗರುತ್ಮಂತನಂ ಕುರಿತು ಮರೀಚಿಯೆಂಬ ಮುನೀಂದ್ರನು ಪ್ರಶ್ನೆಯಂ ಮಾಡಿದ ಪ್ರಕಾರ :—ಎಲೈ ! ವಿನತಾ ಪುತ್ರನೆ ಸಮಸ್ತ ಲೋಕಂಗಳಿಗು ಪೂಜ್ಯನಾಗಿರುವಂಥವನು ಹರಿಸೇವೆಯಿಂದ ಭಕ್ತಿವಿನಮ್ರನಾಗಿರುವಂಥವರಿಗೆ ನಿನ್ನ ಪ್ರಸಾದದಿಂದ ವಾಂಛಿತವನ್ನು ಕೊಡು ವಂಥವನು.

* * * *

ನಾರಾಯಣನಲ್ಲಿ ದೃಢಭಕ್ತಿಯುಳ್ಳಂಥವರಿಗೆ ಪುಣ್ಯಫಲಗಳುಂಟಾಗಿರುವುವು. ಅದು ಕಾರಣ ಪ್ರಾಜ್ಞನಾದವನು ಶುಶ್ರೂಷೆಯಂ ಮಾಡಬೇಕು. ಅದರಿಂದ ಸಂತುಷ್ಟನಾಗಿ ಜನಾ ರ್ದನನು ಸರ್ವ ಕಾಮುಗಳನ್ನು ಕೊಡುವನು. ಹರಿಸಂತೋಷವಾಗುವಹಾಗೆ ನಾನಾವಿಧವಾದ ಅನೇಕ ಧರ್ಮಂಗಳುಂಟು. ಎಲೈ ! ಮುನೀಂದ್ರನೆ ! ಸುಕಾರ್ಯನಾದ ನಿರ್ಧನನಿಗಾದರೂ ಆವ ಕರ್ಮವಂ ಮಾಡುವನು. ಭಕ್ತಿಯಲ್ಲಿ ಮಾಡುವ ನರರಿಗೆ ತತ್ಫಲವಂ ಕೊಡುವನು. ಸಮಸ್ತ ವಾದವರಿಗೆ ಭಕ್ತಿ ತಾಯಿ. ಭಕ್ತಿಯಿಂದ ಸರ್ವೇಶ್ವರನು ಸಂತೋಷವನೆಯ್ದುವನು. ಭಕ್ತಿ ಯಿಂದ ಉತ್ತಮವಾದ ಮುಕ್ತಿಯನ್ನು ಕೊಡುವನು. ಅದು ಕಾರಣ ಭಕ್ತಿ ಪರನಾದವನೆ ಅಧಿಕನು, ಎಂದು ಹೇಳುವರು ಎಂದು ಗರುತ್ಮಂತನು ಮರೀಚಿಗೆ ಹೇಳಿದ ಪ್ರಕಾರ ಎಂಬಬಳಿಗೆ :

Colophon :

ಇತಿ ಗಾರುಡಪುರಾಣೇ ಶ್ರೀ ವಿಷ್ಣು ಧರ್ಮೋತ್ತರೇ ಪ್ರಥಮಾಧ್ಯಾಯಃ ;—

ಎಲೈ ! ಗರುತ್ಮಂತನೆ ! ವೈಷ್ಣವ ಧರ್ಮಂಗಳಿಗೆ ಪ್ರಧಾನವಾವುದು ? ಯಾವುದರಿಂದ ವಿಷ್ಣುವು ಪೂಜಿತನಾಗುವನು ? ಯಾವ ಫಲವನ್ನು ಕೊಡುವನು ಎಂದು ಕೇಳಿದ ಮರೀಚಿಗೆ ಗರುತ್ಮಂತನು ಹೇಳಿದ ಪ್ರಕಾರ :—

End.

ಎಲೈ ! ಮುನೀಂದ್ರನೆ ! ಮೋಕ್ಷಾಪೇಕ್ಷೆಯಿಂದ ಲಕ್ಷ್ಮೀವಲ್ಲಭನ ಭಜಿಸುವಂಥವರಿಗೆ ಜ್ಞಾನವು ಅಕ್ಷಯವಾಗುವುದು. ಕುಕ್ಷಿಂಭರರಾಗದ ಮನುಷ್ಯರಿಗೆ ಅಕ್ಷಯವಾಗುವುದು. ಎಲೆ ! ಮುನೀಂದ್ರನೆ ! ಯಜ್ಞಗಳು ಎಷ್ಟು ಮಾಡಿದರೂ ಸುಜ್ಞಾನವಿಲ್ಲದೆ ಯಿದ ವನು ಮೂರ್ಖನಾಗುವನು. ಸುಜ್ಞಾನಿಯಾದವನು ಎಲ್ಲದರಲ್ಲಿ (ಯಾ) ಪ್ರಾಜ್ಞನಾಗಿ ಪರಮಪ(ದ) [ಉಂಟಾಗುವುದು] (ಪಡೆಯುವನು) ಯೋಗಾಗ್ನಿ ಯಿಂದ ಕರ್ಮವೆಂಬ ಮಹಾ ಗಹನವನ್ನು ದಹಿಸದಿದ್ದರೆ ಅಕಲ್ಪವಾಗಿ ಅಧಿಕ ದುಸ್ತರವಾದ ಪಾಪಗಳು ಯಾವ ಗತಿ(ಯ)ಲಿ ಕಡೆ ತೇ [ರು] (ಲು) ವುದು. ಮೇಲೆ ಯಾವ ಗತಿಯುಂ ಟಾಗುವುದು. ಭಕ್ಷಿತವಾದ ವಿಷವು ಮಂತ್ರೌಷಧಗಳಿಂದ ನಾಶವಾಗುವುದು ಹೀಗೆ ಸಮಸ್ತ ಪಾಪಗಳು ಜ್ಞಾನಿಗಳಿಗೆ ಕ್ಷಣಮಾತ್ರದಿಂದ ಪರಿಹಾರವಾಗುವುವು. ಜ್ಞಾನವನ್ನು . . . .

(ವಿ.ವಿ.)—

ಇದರಲ್ಲಿ ೧ ರಿಂದ ೨೪ ಅಧ್ಯಾಯಗಳು ಪೂರ್ಣವಾಗಿವೆ. ೨೫ ನೆಯದು ಅಪೂರ್ಣ ವಾಗಿದೆ. ಶಿಥಿಲ. ಅಕ್ಷರಗಳು ಚೆನ್ನಾಗಿವೆ. ಕವಿಯಾರೆಂಬುದು ತಿಳಿಯುವುದಿಲ್ಲ. ಈ ಗ್ರಂಥದಲ್ಲಿ ವೈಷ್ಣವಧರ್ಮ, ಅತಿಥಿಸತ್ಕಾರಗಳು, ತತ್ಫಲಗಳು, ಬ್ರಹ್ಮಾದಿ ವರ್ಣಾಶ್ರಮಗಳ ಆಚಾರಗಳು ಇವೇ ಮೊದಲಾದ ಅನೇಕ ವಿಷಯಗಳು ವರ್ಣಿತವಾಗಿವೆ.

No 237. ವಿಷ್ಣು ಧರ್ಮೋತ್ತರ (ವಚನ.)

VIṢNUDHARMŌTTARA (PROSE.)

Substance, palm-leaf. Size, $14\frac{1}{8} \times 1\frac{5}{8}$ inches. Pages, 200. Lines, 6 on a page. Character, Kanarese. Condition, injured. Appearance, old.

Contains the Adhyāyas 1 to 24 complete and 25 incomplete.

Same work as the above

(ವಿ-ವಿ.)—

ಹಿಂದೆ ವರ್ಣಿತವಾದ ಗ್ರಂಥದಲ್ಲಿ ಎರಡು ಭಾಗವಿದೆಯೋ ಇದರಲ್ಲಿಯೂ ಅಷ್ಟೇ ಇದೆ. ಶಿಥಿಲ. ಉಳಿದ ವಿಷಯಗಳನ್ನು ಹಿಂದಿನ ನಂಬರಿನಲ್ಲಿ ನೋಡಿ ತಿಳಿಯುವುದು.

No. 238. ವಿಷ್ಣು ಪುರಾಣ.

VIṢNUPURĀṆA.

Substance, Srītāla. Size, $13\frac{3}{4} \times 1\frac{7}{8}$ inches. Pages, 566. Lines, 10 on a page. Character, Kanarese. Condition, Slightly injured. Appearance, old. Mode of writing, good.

Complete.

A free rendering in prose and verse of the Sanskrit Viṣṇupurāṇa as narrated by Parāśara to Maitrēya : by Cikka Upādhyāya.

Beginning ;

ಶ್ರೀಮತ್ಪಶ್ಚಿಮರಂಗಧಾಮ ನಮರೇಂದ್ರಾಂಭೋಜ ಭೂರುದ್ರುಮ ।
ಖ್ಯಾಮತ್ಯಾರ್ಗವಳಿ ಮೌಳಿರತ್ನಘೃಣಿ ದೀವ್ಯತ್ಪಾದಪದ್ಮಂ ರಮಾ ॥
ವಾಮಾಲಿಂಗನ ನಿತ್ಯಜಾತಪುಳಕಾಂಕೂರಾಂಚದಂಗಂ ಮಹಾ ।
ಕ್ಷೇಮಾರ್ಥಂಗಳನಿತ್ತು ಮಾಣದೊಗೆದೆಮ್ಮಂ ಪಾಲಿಕಾನಂದದಿಂ ॥

*　　　*　　　*

ಇದು ವಿಷ್ಣು ಪುರಾಣದ ಕಥೆ ।
ಯಿದರ್ಕೆ ಪತಿ ರಂಗಧಾಮನೆನೆ ಲಾಲಿಸಿ ಕೇ ॥
ಳ್ದ ರಸಿಕರೊಳರೆ ಲಭಿಸಿದ ।
ಸೊದೆಯಂ ಮಾಣ್ದಾಪರಾಂಬುವಂ ಕಾಮಿಪರೇ ॥
ವಿಮಳ ಮತಿಯಿಂದೆ ಸೊಲ್ಲಿಪೆ ।
ನಮಿತಾದ್ಭುತ ಮಹಿಮನನುಪಮಂ ಸರ್ವಂ ವಿ ॥
ಷ್ಣುಮಯಂ ಜಗತ್ತೆನಿಪ ವಚ ।
ನಮೆ ನಿಖಿಲೋತ್ತರಮದಾಗ ಲೊಡವಿೂ ಕಥೆಯಂ ॥

*　　　*　　　*

ಋತುಷಟ್ಕಕ್ಕನುರೂಪಮಾದ ಫಲಪುಷ್ಪಾಳ್ಯಾದಿ ತತ್ಪರ್ವಮಂ ।
ಮತಿಗೆಯ್ದಂತು ಚತುರ್ಯುಗಾದಿಗಳೊಳಾ ಮನ್ವಾದಿ ತತ್ತತ್ಸ್ವಮಂ ॥

ಚಿತ ವೃತ್ತಂಗಳನೆಲ್ಲಮಂ ಪಡೆದು ಕರ್ಮಾಧೀನ ಶಕ್ತ್ಯಾಶ್ರಯಾಂ ।
ಚತುರಾಸ್ಯಂ ಸ್ಫುರಿಪಂತೆ ನಿರ್ಮಿಸಿದನಂತೊಳ್ಪಿಂ ತಪತ್ಪುಂಗವಾ ॥

Colophon :

ಇದು ಶಿವ, ಕಮಲಭವ ದಿವಿಜಧವ ಮುಖ ಸಕಲಸುರನಿಕರ ಹೃದಯಸದನ ನಿರುಪಾಧಿಕ ಚಿಜ್ಯೋತಿಃ ಪ್ರಭಾಯಮಾನ ನಾರಾಯಣ ಪದಸಾರಸಮರಂದ ನಿತ್ಯಾಭಿಷಿಕ್ತ ರಾಜಾಧಿರಾಜ ರಾಜಪರಮೇಶ್ವರಾ ಪ್ರತಿಮ ಪ್ರೌಢಪ್ರತಾಪ ಬಿರುದಂತೆಂಬರಗಂಡ ಸತ್ಯಪರಾಕ್ರಮ ಯಾದವ ಕುಲಾಂಬರದ್ಯುಮಣಿ ವೀರ ಶ್ರೀಪತಿ ಚಿಕ್ಕದೇವ ಮಹಾರಾಜಕಟಾಕ್ಷ ರುಚಿಸಾಂದ್ರ ಚಂದ್ರಿಕಾ ಚಕೋರ ಸಚಿವತಿಲಕ ಶ್ರೀ ಚಿಕ್ಕುಪಾಧ್ಯಾಯ ಪ್ರಣೀತಮಪ್ಪ ವಿಷ್ಣುಪುರಾಣ ನಾಮ ಪ್ರಬಂಧದೊಳ್ ಮೈತ್ರೇಯ ಪರಾಶರ ಸಂವಾದದ ಪ್ರಥಮಾಂಶದೊಳ್ ಪೀಠಿಕಾ ಪ್ರಕರಣದೊಳ್ ಜಗತ್ಸಕಲ ಸೃಷ್ಟ್ಯಾದಿವರ್ಣನಂ ಪ್ರಥಮಾಶ್ವಾಸಂ ಸಮಾಪ್ತಂ.

ಶ್ರೀಮೈತ್ರೇಯಂ ವಾಸಿ ।
ಷ್ಠಾಮಳ ಗರ್ಭಾಬ್ಧಿಚಂದ್ರನಿಂತಱಿಪಲೊಡಂ ॥

ಪ್ರೇಮದಿನಾಲಿಸಿ ಕೈಮುಗಿ ।
ದಾಮುನಿಪಂ ಗೆಱಗಿ ಭಕ್ತಿಯಿಂದಿಂತೆಂದಂ ॥

* * *

ರಾಮಂಗೆ ಸೀತೆಯೊಳ್ ನಿ ।
ಸ್ಸೀಮರ್ ಕುಶಲವರೆನಿಪ್ಪ ಸೂನುಗಳೊಗೆದರ್ ॥

ಸೌಮಿತ್ರಿಗಂಗದಂ ರಿಪು ।
ಭೀಮೋಪಮ ಚಂದ್ರಕೇತು ವೀರ್ರರ್ ತನುಜರ್ ॥

ಭರತಂಗೆ ತಕ್ಷಪುಷ್ಕಳ ।
ರುರು ವಿಕ್ರಮರೀರ್ವರಣುಗರಾ ಶತ್ರುಘ್ನಂ ॥

ಗರಿ ಕರಿಹರಿಗಳ್ ಗುಣಭಾ ।
ಸುರರೆಸೆವ ಸುಬಾಹು ಶೂರಸೇನರ್ ತನುಜರ್ ॥

* * *

ಭವದಂಗಕೆ ಸೋಕಿತೊ ಕೂ ।
ರ್ಪ ವಾಯುವೇಂ ದುಷ್ಟ ದೃಷ್ಟಿದೋಷಂ ನಿನ್ನೊಳ್ ॥

ಸವನಿಸಿದುದೊ ಪೆಱರ ನಖಾಂ ।
ಬುವುಮಾದ್ರಾಂಬರದ ಸಲಿಲಮುಂ ತಾಗಿದುದೋ ॥

ಕಂ॥ ಎಂದು ಬೆಸಗೊಂಡ ಮುನಿಪಂ
ಗಂದುರೆ ಬಿಸುಸುಯ್ಯುಕಣ್ಗಳೊಳ್ ಭಾಷ್ಪಪಯೋ
ಬಿಂದುಗಳಡಿಗಡಿಗುಣ್ಮೆ ಪು
ರಂದರ ಭವನಿಂತು ಗದ್ಗದಿಸುತ್ತುಂ ನುಡಿದಂ ;
ಎಮಗೆ ಬಲಮುಂ ಮಹಾತೇ।
ಜಮು ಮಧಿಕ ಶ್ರೀಯುಮುರು ಪರಾಕ್ರಮಮುಂ ವೀ ॥
ರ್ಯಮು ಮತಿಕಾಂತಿಯು ಮೆನಿಸಿದ ।
ಕಮಲಾಂಬಕ ನೆಮ್ಮನುಳಿದು ಬಿಜಯಂ ಗೆಯ್ದಂ ॥

End :

ಇಳೆಯುಂ ಬಾನ್ ಜ್ವಲನಂ ಮರುತ್ತು ನಭಮುಂ ಸೋಮಾರ್ಕರುಂ ತಾರಕಾ ।
ವಳಿಯುಂ ಹೇಮಮಹೀಧರಾಬ್ಧಿಗಳುಮಾ ಭೌಮಾದ್ಯರುಂ ದೇವತಾ ॥
ಕುಳಮುಂ ದಿಗ್ವರರುಂ ಸುವೈಷ್ಣವ ಮಹಾಚಾರಿತ್ರಮುಂ ಪೆಂಪಿನಿಂ ।
ಬಳೆದಿರ್ಪನ್ನಮುಮೀ ಲಸತ್ಕೃತಿಯು ಮೊಪ್ಪುತ್ತಿರ್ಕೆ ಸರ್ವೋರ್ವಿಯೊಳ್ ॥

Colophon :

ಇದು ಶಿವ ಕಮಲಭವ ದಿವಿಜಧವಮುಖ ಸಕಲ ಸುರನಿಕರ ಹೃದಯಸದನ ನಿರುಪಾಧಿಕ ಚಿಜ್ಯೋತಿಃ ಪ್ರಭಾಯಮಾನ ನಾರಾಯಣ ಪದಸಾರಸಮರಂದ ನಿತ್ಯಾಭಿಷಿಕ್ತ ರಾಜಾಧಿರಾಜ ರಾಜಪರಮೇಶ್ವರಾ ಪ್ರತಿಮ ಪ್ರೌಢಪ್ರತಾಪ ಬಿರುದಂತೆಂಬರಗಂಡ ಸತ್ಯಪರಾಕ್ರಮ ವೀರ ಶ್ರೀ ನರಪತಿ ಚಿಕ್ಕದೇವಮಹಾರಾಜ ರಾಜಿತ ಕರುಣಾ ಕಟಾಕ್ಷ ರುಚಿಸಾಂದ್ರ ಚಂದ್ರಿಕಾಲೋಲಚಕೋರ ಶ್ರೀಚಿಕ್ಕುಪಾಧ್ಯಾಯ ವಿರಚಿತ ಮಪ್ಪ ಶ್ರೀವಿಷ್ಣುಪುರಾಣ ನಾಮ ಪ್ರಬಂಧ ಷಷ್ಠಾಂಶದೊಳ್ ಖಾಂಡಿಕ್ಯ ಮಹೀಪಾಲಂಗೆ ಕೇಶಿಧ್ವಜರಾಜಂ ವಿಸ್ತರಿಸಿಪೇಳ್ದ ಯೋಗ ಮಹಿಮಾ ವಿವರಣಂ ವಿಷ್ಣುಸರ್ವೋತ್ಕರ್ಷ ವರ್ಣನಂ ಪುರಾಣ ಶ್ರವಣ ಮಹಾಫಲಪ್ರಾಪ್ತಿ ದ್ವಿತೀಯಾಶ್ವಾಸಂ.

(ವಿ-ವಿ.)—

ಇದು ಚಂಪೂರೂಪವಾಗಿದೆ ; ಅಂಶ ೬ ಆಶ್ವಾಸನ ೩೦, ಪದ್ಯ 6255. ಗ್ರಂಥಾವತಾರದಲ್ಲಿ ಪಶ್ಚಿಮ ರಂಗನಾಥಸ್ತುತಿ ಇದೆ. ಬಳಿಕ ಕವಿ ರಂಗನಾಯಕಿ, ಭೂದೇವಿ ಮೊದಲಾದವರನ್ನು ಕ್ರಮವಾಗಿ ಹೊಗಳಿದ್ದಾನೆ. ಗ್ರಂಥಾರಂಭಕ್ಕೆ ಮೊದಲು ೨ ಓಲೆಗಳಲ್ಲಿ ಗ್ರಂಥದ ವಿಷಯ ಸೂಚಿಕೆಯು ಇದೆ. ಕವಿ ಚಿಕ್ಕುಪಾಧ್ಯಾಯನೆಂಬುವನು. ಈತನು ಅನೇಕ ಗ್ರಂಥಗಳನ್ನು ಬರೆದಿರುತ್ತಾನೆ. ಆದರೆ ಅವುಗಳ ಹೆಸರನ್ನು ಇದರಲ್ಲಿ ಹೇಳಿಲ್ಲ. ಈತನ ವಿಷಯಗಳನ್ನು ಹಿಂದೆ ವರ್ಣಿತವಾಗಿರುವ 219 ನೇ ... ಬರಿನಲ್ಲಿಯೂ, ಕವಿಚರಿತ್ರೆಯಲ್ಲಿಯೂ ನೋಡಿ ತಿಳಿಯುವುದು.

No. 239. ವೈರಾಗ್ಯ ಪುರಾಣ.
VAIRĀGYAPURĀṆA.

Substance, paper. Size, $10\frac{1}{2} \times 9\frac{1}{2}$ inches. Pages, 276 Lines, 15 on a page. Character, Kanarese. Condition, good. Appearance, new.

Complete in elev Sandhis.

A poem in Kanarese in the Vārdhika ṣatpadi metre describing the story of Vairāgyapurāna or Suyōgacaritre, as narrated by Bhāradvāja to Suyōga, who was the son of Yauvanāsva and Prabhāvati. The author Guruprasāda was a Brahmin and lived in the, 7th century.

Beginning :

ಧರ್ಮಸ್ವರೂಪ ನಿಜಧರ್ಮವೆ ಧರಿತ್ರಿಯೊಳ್ ।
ಧರ್ಮರಾಜೆನಿಸಿ ಚಲಿಸದೆ ಧರ್ಮಪೊಂಡುವರ ।
ಧರ್ಮಭಾರತವರ್ಮ ಧರ್ಮೆವ್ವನಿಷ್ವ ಕೇಳ್ ಧರ್ಮತಪನನಕೆ ನಡೆದ ॥

ಆಲಿಪುದು ಮಹಭಾರತದ ಕಥೆಯ ಪೊಂಡುವರ ।
ಮೇಲಾದ ಸಂಗತಿ ಸುಯೋಗನಿಗೆ ಯೊಲಿದಂದು !
ಲೋಲ ಭಾರದ್ವಾಜ ! ಸುಲಭದಲಿ ತಿಳುಹಿಸಿದ ಮೂಲದನುಸಾರದಲ್ಲಿ ॥

. . . . ಮಂತ್ರ ಚಿತ್ರ ಬೆಂಚಲಹಾರಗೊಡದೇಕ । ?
ಸಲುವೇನು ಬುದ್ಧಿಯಲಿ ಫಲವ ಪಡೆವರೆ ನಿಮಗೆ ।
ಜಲಜಾಕ್ಷ ಕೈವಲ್ಯ ಕುಡುವ ಜಂಜಡಹರಿಸಿ ಪಾಲಿಸುವನೆಂದ ಸೂತ ॥

* * * *

ಮಾರನ ಪಡೆದ ಮನೋಹರಮೂರ್ತಿ ದುರಿತಹರ ।
ಶ್ರೀರಮಣ ಭೂಭಾರ ನಿಳುಹಿ ಸಂಹಾರ ಮುರ । (?)
ವೈರಿ ಮುಚುಕುಂದರಕ್ಷಕ ದ್ವಾರಕಾಪುರಾವಾಸ ಯದುಕುಲಲಲಾಮ ॥

ವರ ಯಶೋದೆಯ ದೇವಕಿಯು ವಸುದೇವ ಪ್ರಿಯ ?
ಕರ ಕಂದ ಗೋಕುಲದೆ ಗೋವುಗಳ ಕಾಯ್ದ ನಿಜ ।
ಅರಸಿ ರುಕ್ಮಿಣಿ ಸತ್ಯಭಾಮಾದಿ ಗೋಪಿಯರ ಪರಮ ಪುಣ್ಯಂದಳಹಿಳಿ ॥ ?

ನಿರ್ಣೈಸಿ ಪಿಂಡಪತನದ ಗರ್ಭಸ್ಥಿತಿಯಗತಿ ।
ವರ್ಣಭೇದವನೆಲ್ಲ ತಿಳುಪಿದೈ ಭವದ ಮ ।
ಹಾರ್ಣವಂದೆ ರಾಜಸುತ ನೀನೆಂದು ಮುಗಿಸಿ ಕರವಂ ಕರವ ಮುಗಿದು ?

ಕರ್ಣಕ್ಕೆ ಭರಣಂ ಕಥಾಶ್ರವಣ ಮುಂದಿನಾ ।
ತೆರ್ಣ ಪಾಲಿಪುದೆಂದು ಬಿನ್ನೈಸಿ ಹರುಷದಿ ಸು ।
ಪರ್ಣವಾಹನ ಲಕ್ಷ್ಮಿವೆಂಕಟೇಶನು ನಿಮಗೆ ವಿಸ್ತೀರ್ಣ ಮಾಡುವನು ?

Colophon :

ಇತಿ ಶ್ರೀ ವೈರಾಗ್ಯ ಪುರಾಣೇ ಸೂತ ಶೌನಕ ಸಂವಾದೇ ಶ್ರೀಮದ್ಗುರು (ಪ್ರಸಾದ) ವಿರಚಿತೇ ಗರ್ಭ ಪಿಂಡೋದಯ ವಿವರಣ ಯೋಗೋ ನಾಮ ಸಂಧಿ ೧ ಕ್ಕಂ ಮಂಗಳಂ.

ಅತಿ ಶಿಶುವನಾಗಿ ಬವಣೆಯ ಪಟ್ಟು ಜೀವನಂ ।
ಪ್ರತಿದಿನಕೆ ವರ್ಧಿಸುತ ನಾನಾ ವಿಕಾರವಂ ।
ಗತಿಯ ಮುಂದಣ ಮಹಾಶ್ಚರ್ಯಮಂ ಪೇಳಲನುವಾದ ಸೂತನು ಮುದದೊಳು ॥

End :

ಜನರರಕ್ಷಕ ಜಾಹ್ನವಿಯ ಪಡೆದ ಜಗಭರಿತ ।
ಸನಕಾದಿವಂದ್ಯ ಸಾಕ್ಷಾತ ಭೂವೈಕುಂಠ ।
ಯೆನಿಪ ಶೇಷಾಚಲನಿವಾಸ ಮೂಡಲಗಿರಿಯ ಧಾ. ರಭಿಲಾಷನೆನಿಸಿ ॥ (?)

ಜ್ಞಾನಂದವರಿಗೆ ಮಿಗೆ ಒಲಿದು ಬಯಕೆಯ ಸಲಿಸಿ ।
ಭೂನಾಥ ಸುಯೋಗಚರಿತ ವಿಸ್ತಾರವನು ?
ನ್ಯೂನಮಾಡದೆ ಲಕ್ಷ್ಮಿವೆಂಕಟೇಶನೆ ಸಾಗಿಸಿದನೇನ ಬಣ್ಣಿಸುವೆನು ॥
ಆನೇನು ಬುದ್ಧಿಯರಿತವನಲ್ಲ ನೆಂಬುದಕೆ
ನೀನೆ ವ್ಯಾಪಿಸಿ ಮುಖದಿ ವೈರಾಗ್ಯ ಶಿರೋಮಣಿ ?
ಪಾನವಾಮೃತದಂತೆ ಮಂಗಳ ತರಂಗದಲಿ ಲೇಸಾಗಿ ಕಡೆಗಾಣಿಸಿ ॥
ದೀನರಿಗೆ ಬಂಧು ವಭಿಮಾನಿ ನಿನ್ನದುದಾನಿ । ?
ಹೀನಗುಣದಲಿ ಸಲಹೊ ಮುದ್ಗಲ ಸುತನ ನೋಡ ।
ಲಾನು ಬೇಡುವುದಿಲ್ಲ ನಾಮ ನಾಲಗೆಗಿತ್ತು ಪೊರೆಯೊ ಲಕ್ಷ್ಮಿವೆಂಕಟೇಶ ?

Colophon :

ಇತಿ ಶ್ರೀವೈರಾಗ್ಯ ಪುರಾಣೇ ಸೂತ ಶೌನಕ ಸಂವಾದೇ ಶ್ರೀಮದ್ಗುರುಪ್ರಸಾದ ವಿರಚಿತೇ ಸುಯೋಗ ಸುಚರಿತ್ರೇ ಸಂಧಿ ೧೧ ಕ್ಕಂ ಪದನು ೩೫೫ (?) ಕ್ಕಂ ಮಂಗಳಂ.

(ವಿ.ವಿ.)—

ಸಮಗ್ರ. ವಾರ್ಧಿಕ ಷಟ್ಪದಿಯಲ್ಲಿ ಬರೆಯಲ್ಪಟ್ಟಿದೆ. ಇದರ ಕಡೆಯಲ್ಲಿ ಕೊಟ್ಟಿರುವ ಪದ್ಯ ಸಂಖ್ಯೆಯು ತಪ್ಪಾಗಿದೆ. ಇದರಲ್ಲಿ ಯೌವನಾಶ್ವ ಪ್ರಭಾವತಿ ಇವರ ಮಗನಾದ ಸುಯೋಗನಿಗೆ ಭಾರದ್ವಾಜನು ವೈರಾಗ್ಯ ಸ್ಥಿತಿಯನ್ನು ಬೋಧಿಸಿದ ಕಥೆ ಹೇಳಿದೆ. ಇದಕ್ಕೆ ಸುಯೋಗ ಚರಿತ್ರೆಯೆಂಬ ಹೆಸರೂ ಉಂಟು. ಕವಿ ಗುರುಪ್ರಸಾದ. ಬ್ರಾಹ್ಮಣಕವಿ. ಸುಮಾರು ೧೭ ನೆಯ ಶತಮಾನದಲ್ಲಿ ಜೀವಿಸುತ್ತಿದ್ದಿರಬಹುದು.

No. 240. ವೈರಾಗ್ಯ ಪುರಾಣ.

VAIRĀGYAPURĀṆA.

Substance, paper. Size, $11\frac{1}{8} \times 5\frac{1}{8}$ inches. Pages, 148. Lines, 13 on a page. Character, Kanarese. Condition, much injured. Appearance, old. Mode of writing, not bad.

Wants 11 stanzas in the beginning, otherwise complete.

Same work as the above.

(ವಿ.ವಿ.)—

ಇದರಲ್ಲಿ ಆದಿಯಲ್ಲಿ ೧೧ ಪದ್ಯಗಳು ಹೋಗಿವೆ. ಆದರೆ ಹಿಂದೆ ವರ್ಣಿತವಾಗಿರುವ ಗ್ರಂಥವು ಇದರ ಉಪ ಪ್ರತಿಯೇ ಆಗಿದೆ. ಇದನ್ನು ಉಪಪ್ರತಿಗೆ ಬರೆಯುವ ಕಾಲದಲ್ಲಿ ಇದು ಸಮಗ್ರವಾಗಿದ್ದಿರಬೇಕು. ಅತಿ ಶಿಥಿಲ. ಕವಿ ಇತ್ಯಾದಿ ವಿಷಯಗಳನ್ನು ಹಿಂದಿನ ನಂಬರಿನಲ್ಲಿ ನೋಡಿ ತಿಳಿಯುವುದು.

No. 241. ಶಿವಗೀತೆ.

ŚIVAGĪTE.

Substance, Śrītāla. Size, 11¼ × 2⅜ inches. Pages, 190. Lines, 8 on a page. Character, Kanarese. Condition, slightly injured. Appearance, old. Mode of writing, good.

Complete.

A rendering in prose of the Sanskrit Śivagīta forming part of the Padmapurāṇa ; by Kaḷale Nañjarāja. For other particulars regarding the author, and his works see under No. 28 *ante*.

Beginning:

ಮಾತಾಮಹ ಮಹಾಶೈಲಂ । ಮಹಸ್ತದ ಪಿತಾಮಹಂ ॥
ಕಾರಣಂ ಜಗತಾಂ ವಂದೇ । ಕಂಠಾದುಪರಿ ವಾರಣಂ ॥

ಗಿರಿರಾಜನಾದ [ಪಿತಾಮಹ] ಹಿಮವತ್ಪರ್ವತನೇ ಮಾತಾಮಹನಾಗಿಯುಳ್ಳ ಪಿತಾಮಹನಿಲ್ಲದ ಕಂಠದಿಂದುಪರಿಭಾಗದಲ್ಲಿ ಜಗತ್ಪತಿರೂಪನಾದ ಜಗತ್ತಿಗೆ ಕಾರಣನಾದ ತೇಜಸ್ಸನ್ನು ವಂದಿಸುವೆ. ಈ ರೀತಿಯಲ್ಲಿರುವ ವಿಘ್ನೇಶ್ವರನಿಗೆ ನಮಸ್ಕಾರವೆಂಬರ್ಥ.

* * * *

ಆಮ್ನಾಯಾಚಲಮಂಚಸ್ಥ । ಮಾನನೈಃಷಡ್ಭಿರನ್ವಿತಂ ॥
ಹಿಮಾದ್ರಿ ತನಯಾ ಸ್ತನ್ಯ । ಕುಕ್ಷಿಂಭರಿಮಹಂಶಿಶುಂ ॥

ವೇದಾಂತಗಳೆಂಬ ಮಂಚದಲ್ಲಿ ಆರು ಮುಖಗಳಿಂದ ಸಮೇತನಾದ ಹಿಮವತ್ಪರ್ವತ ಸುತೆಯಾದ ಗೌರೀ ದೇವಿಯ ಮೊಲೆ ಹಾಲಿನಿಂದುದರಪೋಷಕನಾದ ಶಿಶುವನಾಶ್ರೈಸುವೆನುಂ.

ಮಂಗಳವನೆಮಗೀವುದಿಂದು ತ ।
ರಂಗಿಣೀಧರ ವೃಷಭರಾಜ ತು ।
ರಂಗಜಿತ ಸಾರಂಗದಾನವ ಸರ್ವಮಂಗಳೆಯು ॥
ತುಂಗಕುಚತಟ ಕುಂಕುಮಾಂಕಿತ ।
ಮಂಗಳಾಂಗ ! ಮಹೇಶ ! ಪರಶು ಕು ।
ರಂಗ ವರದಾಭಯಕರಾಬ್ಜ ! ಸುಮೇರು ಕೋದಂಡ ! ॥

ಬೆಟ್ಟ ದರಸನಕುವರಿ ಗಿರಿಶನ ।
ಪಟ್ಟದರಸಿ ಚರಾಚರಂಗಳ ।
ಸೃಷ್ಟಿಯನು ನಿಜಪೃಷ್ಟಿ ಲೀಲಾಮಾತ್ರದಿಂದೆಸಗಿ ॥
ಕಷ್ಟಮಂ ಪರಿಹರಿಸಿ ಬೇಡಿದ ।
ಭೀಷ್ಟ ವರಗಳ ನೀವ ನಿಪುಣೆಮ ।
ಗಿಷ್ಟಸಿದ್ಧಿಯನಿತ್ತು ಸಲಹು ಗಣೇಶಗುಹ ಜನನಿ ! ॥
ಇತರ ಮತಗಳ ನೆಲ್ಲಮಂ ನಿಜ ।
ಮತಿಯ ವೈಭವದಿಂದ ಭಂಗಿಸಿ ।
ಶ್ರುತಿಪುರಾಣ ಶಿವಾಗಮಂಗಳ ಬಗೆಯನಾರೈದು ॥

ಮತವಿದೊಂದೇ ವ್ಯಾಸಮುನಿ ಸ ।
ಮ್ಮತ ಶಿವವಿಶಿಷ್ಟಾದ್ವಯಿತ ವೆಂ ।
ಬತಿಮತಿ ಶ್ರೀಕಂಠದೇಶಿಗರಡಿಗೆ ಪೊಡಮಡುವೆ ॥

ವಿಮತ ಸಭೆಯೊಳು ಶಿವನೆ ಕಮಲಾ ।
ರಮಣ ಮೊದಲಾದಮರ ವಂದ್ಯನು ।
ಸಮರಧಿಕರವಗಿಲ್ಲ ಸತ್ಯಮಿದೆಂದು ತಿಳಿವಂತೆ ॥
ಕುಮತಿ ಕೋಲಾಹಲವ ಖಂಡಿಸಿ ।
ಗಮಕದಿಂ ಪಾಷಾಣ ವೃಷಭಗೆ ।
ಸುಮತಿ ತೃಣವಮಂ ಮೆಲಿಸಿದಾ ಹರದತ್ತ ಸಲಹೆಮ್ಮ ॥

* * * *

ಪಾಶುಪತ ಶಾಸ್ತ್ರಾರ್ಥ ತತ್ವವ ।
ದೇಶಿಕೋತ್ತಮರಂಘ್ರಿ ಸೇವೆಯು ।
ಲೇಸಿನಿಂದಲೆ ತಿಳಿದು ನಂಜನರೇಂದ್ರ ನಾನೀಗ ॥
ವ್ಯಾಸಕೃತ ಪೌರಾಣ ಸೂಕ್ತಿಗ ।
ಳಾಶಯುವ ಸರಿದಚ್ಚ ಕನ್ನಡ ।
ಭಾಷೆಯಿಂ ದುಸುರುವೆನು (ವರ) ಶಿವಗೀತೆಯರ್ಥಗಳ ॥

ಸನಕಾದಿ ಮುನಿಧ್ಯೇಯಂ । ಸಚ್ಚಿದಾನಂದ ವಿಗ್ರಹಂ ॥
ಸಮಸ್ತ ಜಗದಾಧಾರಂ । ಸದಾಶಿವ ಮಹಂ ಭಜೇ ॥

ಅನಂತರದಲ್ಲಿ ಸೂತಪೌರಾಣಿಕನು ನೈಮಿಶಾರಣ್ಯವಾಸಿಗಳಾದ ಶೌನಕಾದಿ ಋಷಿಗಳಂ ಕುರಿತು ಇಂತೆಂದನು. ಎಲೈ ! ಮುನಿಶ್ರೇಷ್ಠರುಗಳಿರಾ ! ಬಾಧಕ ರಹಿತವಾದ ಕೈವಲ್ಯ ಮುಕ್ತಿ ಪ್ರದವಾದ ಸಂಸಾರ ದುಃಖ ನಿವರ್ತಕವಾದ ಜ್ಞಾನವನ್ನು ಪರಮೇಶ್ವರ ಸ್ವಾಮಿಯು ವರ ಅನುಗ್ರಹದಿಂದ ನಿಮಗೆ ತಿಳುಹಿಸುತ್ತಲಿದ್ದೇನೆ.

* * * *

ಎಲೈ ! ಮುನಿಶ್ರೇಷ್ಠರುಗಳಿರಾ ! ಪೂರ್ವದಲ್ಲಿ ಅಗಸ್ತ್ಯ ಮುನೀಂದ್ರರು ದಂಡಕಾರಣ್ಯ ದಲ್ಲಿ ರಾಮಚಂದ್ರನಿಗೆ ಯಾವ ಪಾಶುಪತ ವ್ರತವನ್ನು ಉಪದೇಶಮಾಡಿದರೋ ಅದನೆಲ್ಲವಂ ನಿಮಗೆ ತಿಳುಹಿಸುತ್ತಲಿದ್ದೇನೆ. ಭಕ್ತಿಯಿಂದ ಕೇಳಿ-ಎಂದು ಸೂತಪೌರಾಣಿಕನು ನೈಮಿಷಾರ ಣ್ಯವಾಸಿಗಳಾದ ಶೌನಕಾದಿ ಋಷಿಗಳಿಗೆ ತಿಳುಹಿಸಿದರು.

Colophon:

ಇಂತು ಕರ್ಣಾಟಕ ಭಾಷಾ ವಿರಚಿತವಾಗಿ ಶ್ರೀಮಹಿಶೂರ ಸೇನಾಧಿಪ ದೊಡ್ಡರಾಜ ಪೌತ್ರ ವೀರರಾಜ ತನೂಜ ದಳಪತಿ ದೇವರಾಜಾನುಜ ಕಳಲೆ ನಂಜರಾಜ ವಿರಚಿತವಾದ ನಂಜರಾಜ ವಾಣೀವಿಳಾಸವೆಂಬ ಶಿವಗೀತಾ ತಾತ್ಪರ್ಯ ಟೀಕೆನಲ್ಲಿ ವ್ಯಾಸಕೃತಮಾದ ಪದ್ಮಪುರಾಣ ದಲ್ಲಿ ಶಿವಗೀತೆಯಲ್ಲಿ ಪ್ರಥಮಾಧ್ಯಾಯದ ಅರ್ಥನಿರೂಪಣಕ್ಕೆ ಮಂಗಳಂ.

ಅನಂತರದಲ್ಲಿ ಋಷಿಗಳೆಲ್ಲರೂ ಸೂತಪೌರಾಣಿಕನಂ ಕುರಿತು — ಇಂತೆಂದರು. ಎಲೈ ! ಸೂತಪುತ್ರನೆ ! ಅಗಸ್ತ್ಯ ಮುನೀಂದ್ರರು ಯಾವ ನಿಮಿತ್ತವಾಗಿ ರಾಮಚಂದ್ರನ ಸಮೀಪಕ್ಕೆ ಬಂದರು. ರಾಮಚಂದ್ರನಿಗೆ ವಿರಜಾದೀಕ್ಷೆಯನ್ನು ಹೇಗೆ ಮಾಡಿಸಿದರು. ವಿರಜಾದೀಕ್ಷೆಯಿಂದ ರಾಮಚಂದ್ರನು ಯಾವ ಫಲವ ನೈದ್ದಿದನು. ಇದನೆಲ್ಲವಂ ತಿಳುಹಿಸಬೇಕೆಂದು ನುಡಿಯಲು, ಸೂತಪೌರಾಣಿಕನಿಂತೆಂದನು.

End :

ನಿರತಿಶಯಾನಂದವನ್ನು ಕೊಡುವಂಥ ಬ್ರಹ್ಮವಿದ್ಯೆಯನ್ನು ನಮಗೆ ಉಪದೇಶಮಾಡಿದವನಾದುದರಿಂದ ನಿನಗಿಂತಲೂ ಶ್ರೇಷ್ಠನಾದ ಗುರುವು ಬೇರೊಬ್ಬನೂ ಇಲ್ಲ. ಎಂದು ಅಧಿಕವಾಗಿ ಸೂತಪೌರಾಣಿಕನಂ ಸ್ತುತಿಸಿ, ಋಷಿಗಳೆಲ್ಲರೂ ಸಂತೋಷವುಳ್ಳವರಾಗಿ ಸಾಯಂಕಾಲದಲ್ಲಿ ಸಂಧ್ಯಾವಂದನೆಯ ಮಾಡಲೋಸ್ಕರ ಗಂಗಾನದಿಗೆ ಉತ್ತರಭಾಗದಲ್ಲಿರುವ ಗೋಮತೀ ನದೀ ತೀರವನ್ನು ಕುರಿತು ನಡೆದರು.

Colophon :

ಇಂತು ಕರ್ಣಾಟಕ ಭಾಷಾವಿರಚಿತವಾಗಿ ಶ್ರೀಮಹಿಶೂರ ಸೇನಾಧಿಪ ದೊಡ್ಡರಾಜ ಪೌತ್ರ ವೀರರಾಜತನೂಜ ದಳಪತಿ ದೇವರಾಜಾನುಜ ಕಳಲೆ ನಂಜರಾಜ ವಿರಚಿತವಾದ ನಂಜರಾಜ ವಾಣೀವಿಳಾಸವೆಂಬ ಶಿವಗೀತಾ ತಾತ್ಪರ್ಯ ಟೀಕಿನಲ್ಲಿ ವ್ಯಾಸಕೃತವಾದ ಪದ್ಮಪುರಾಣದಲ್ಲಿ ಶಿವಗೀತೆಯಲ್ಲಿ ಹದಿನಾರನೆಯ ಅಧ್ಯಾಯದರ್ಥ ನಿರೂಪಣಕ್ಕೆ ಮಂಗಳಂ.

(ವಿ.ವಿ.)—

ಸಮಗ್ರ. ಸ್ವಲ್ಪ ಶಿಥಿಲ. ಲಿಪಿ ಉತ್ತಮ. ಕವಿ ಕಳಲೆ ನಂಜರಾಜ ಉಳಿದ ವಿಷಯಗಳನ್ನು ಮೇಲೆ ಉದಾಹೃತವಾಗಿರುವ ಭಾಗಗಳಿಂದ ತಿಳಿಯುವುದು.

No. **242**. ಶಿವಧರ್ಮೋತ್ತರ-
ŚIVADHARMŌTTARA.

Substance, Śrītāla. Size, $21\frac{1}{4} \times 2\frac{1}{4}$ inches. Pages, 238. Lines, 10 on a page. Character, Kanarese. Condition, injured. Appearance, old. Mode of writing, good.

Complete.

A rendering in prose of the Sanskrit Śivadharmōttara forming part of the Skāndapurāṇa ; by Kaḷale Nañjarāja.

Beginning :

ಅನಂತರದಲ್ಲಿ ನೈಮಿಷಾರಣ್ಯ ವಾಸಿಗಳಾದ ಶೌನಕಾದಿ ಋಷಿಗಳು ಸೂತಪೌರಾಣಿಕನಂ ನೋಡಿ. ಸ್ವಾಮಿ ! ಮಹಾನುಭಾವನೆ ! ಪೂರ್ವದಲ್ಲಿ ಕಿವಿಗಳಿಗೆ ಪ್ರಿಯವಾದ ವೈಷ್ಣವ ಧರ್ಮಗಳಂ ಕೇಳಿದೆವು. ಈಗ ಶ್ರೇಷ್ಠವಾದ ಶೈವ ಧರ್ಮಗಳಂ ಕೇಳಬೇಕೆಂದು ಇಚ್ಛೈಸುತ್ತಲಿ

ದ್ದೇವೆ. ಆ ಶಿವ ಧರ್ಮಗಳ ನಮಗೆ ತಿಳುಹಿಸಬೇಕೆಂದು ಬೇಡಿಕೊಳ್ಳಲು ಸೂತಪೌರಾಣಿಕನಿಂತೆಂದನು. ಕೇಳಿರೈ ! ಋಷಿಗಳಿರ ! ಕೇಳತಕ್ಕಂಥ ಅರ್ಥವನ್ನೇ ಕೇಳಿದಿರಿ. ನೀವು ಮಾಡಿದ ಪ್ರಶ್ನೆಯು ಪವಿತ್ರವಾಗಿ ಸಕಲ ಪಾಪಂಗಳ ಪರಿಹರಿಸುವಂಥಾಧ್ದಾಗಿ ಪರಮೇಶ್ವರರ ಚರಿತ್ರೆಯನ್ನು ಆಶ್ರೈಸಿರುವಂಥಾದ್ದಾಗಿ ಲೋಕಸಮ್ಮತವಾಗಿರುವುದು. ಪರಮೇಶ್ವರನ ಶಿರಸ್ಸಿನಲ್ಲಿರುವಂಥಾದ್ದಾಗಿ ಉದಕರೂಪವಾದ ಗಂಗಾನದಿಯು ಯಾವ ಪ್ರಕಾರದಿಂದ ಮೂರು ಲೋಕಗಳಲ್ಲಿಯೂ ಇರುವಂಥ ಪಾಪಾತ್ಮರ ಪಾಪಗಳಂ ಪರಿಹರಿಸಿ ಪುಣ್ಯಾವಂತರಂ ಮಾಡುವುದೋ ಆ ಪ್ರಕಾರದಿಂದ ಶಿವ ಮಹಿಮೆಯನ್ನು ಹೇಳುವಂಥಾದ್ದಾಗಿ ದಿವ್ಯವಾದ ಶಿವಕಥೆಯು ಮೂರು ಲೋಕಂಗಳಲ್ಲಿಯೂ ಇರುವಂಥ ಪತಿತರಾದ ಪಾಪಾತ್ಮಕರ ಪಾಪಂಗಳಂ ಪರಿಹರಿಸಿ ಪವಿತ್ರರಂ ಮಾಡುವುದು.

*   *   *   *

ಶಿವತೀರ್ಥ ಪ್ರಸಾದಗಳ ಮಹಿಮೆಯನ್ನು ಹೇಳುವುದಕ್ಕೆ ಬ್ರಹ್ಮದೇವನೂ ಸಮರ್ಥನಲ್ಲದೇ ಇರುವಾಗ ಮನುಷ್ಯರು ಹೇಗೆ ಸಮರ್ಥರಾಗುವರು. ಶಿವನಿರ್ಮಾಲ್ಯವಾದ ಗಂಗಾನದಿಯೊಂದೆ ಮೂರು ಲೋಕಗಳನ್ನು ಪ್ರತ್ಯಕ್ಷವಾಗಿ ಪವಿತ್ರಮಾಡುತ್ತಲಿದೆ. ಈ ಪ್ರಕಾರದಿಂದ ಶಿವತೀರ್ಥ ಪ್ರಸಾದಗಳು ಮೂರು ಲೋಕಗಳನ್ನೂ ಪವಿತ್ರಮಾಡುತ್ತಲಿವೆಯೆಂದು ಸೂತಪೌರಾಣಿಕನು ನೈಮಿಷಾರಣ್ಯ ವಾಸಿಗಳಾದ ಶೌನಕಾದಿ ಋಷಿಗಳಿಗೆ ನಿರೂಪಿಸಿದನು.

Colophon :

ಇಂತು ಕರ್ಣಾಟಕ ಭಾಷಾ ವಿರಚಿತವಾಗಿ ಶ್ರೀ ಮಹಿಶೂರ ಸೇನಾಧಿಪ ದೊಡ್ಡರಾಜ ಪೌತ್ರ ವೀರರಾಜತನೂಜ ದಳಪತಿದೇವರಾಜಾನುಜ ಕಳಲೆ ನಂಜರಾಜ ವಿರಚಿತವಾದ ನಂಜರಾಜ ವಾಣೀವಿಲಾಸವೆಂಬ ಟೀಕೆಯಲ್ಲಿ ವ್ಯಾಸಕೃತವಾದ ಸ್ಕಾಂದಪುರಾಣದಲ್ಲಿ ಶಿವಧರ್ಮೋತ್ತರದಲ್ಲಿ ಪ್ರಥಮಾಧ್ಯಾಯದ ಅರ್ಥನಿರೂಪಣಕ್ಕೆ ಮಂಗಳಂ.

ಅನಂತರದಲ್ಲಿ ಸೂತಪೌರಾಣಿಕನು ನೈಮಿಷಾರಣ್ಯವಾಸಿಗಳಾದ ಋಷಿಗಳನ್ನು ನೋಡಿ. ಇಂತೆಂದನು. ಕೇಳಿರೈ ! ಋಷಿಗಳಿರ ! ಕೇಳುವಂಥವರ ಪಾಪಗಳಂ ಪರಿಹರಿಸಿ ಚಿತ್ತಶುದ್ಧಿಯಂ ಮಾಡುವಂಥ ಶಿವಪ್ರಸಾದ ಮಹಿಮೆಯನ್ನು ವಿವರಿಸುತ್ತಲಿದ್ದೇನೆ.

End :

ರಾಮಚಂದ್ರನು ಸಾಯಂಕಾಲ ಸಮಯದಲ್ಲಿ ಸಂಧ್ಯಾವಂದನೆಯನ್ನೂ, ಅಗ್ನಿ ಹೋತ್ರಗಳನ್ನೂ, ಮಾಡಿ ; ಹುಲ್ಲುಗಳನ್ನೂ, ಎಲೆಗಳನ್ನೂ, ಹಾಸಿಕೊಂಡು ಮಲಗುತ್ತ ಈ ಪ್ರಕಾರದಿಂದ ಬಹು ದಿವಸಗಳು ಅಲ್ಲಿ ವಾಸಮಾಡಲು, ಲಕ್ಷ್ಮಣನು ಸಾಯಂಕಾಲ ಪರ್ಯಂತವೂ ರಾಮಚಂ . . . . ಸಾಯಂಕಾಲವಾದ ಬಳಿಕ ಧನುರ್ಬಾಣಗಳನ್ನು ತೆಗೆದುಕೊಂಡು ಹೆದೆಯನ್ನೇರಿಸಿ ಪರ್ಣಶಾಲೆಯ ಬಾಗಿಲಲ್ಲಿ ಕುಳಿತುಕೊಂಡು ದುಷ್ಟಮೃಗಗಳು ರಾಕ್ಷಸರು ಬಾರದಿರುವ ರೀತಿಗೆ ನಿದ್ರೆಯಿಲ್ಲದೆ ಎಚ್ಚರದಿಂದ ನೋಡುತ್ತಿರುವನು. ಆ ಲಕ್ಷ್ಮಣನನ್ನು . . . . ದ್ದೆ ನಿಲ್ಲಲಾರದೆ ಭಯಪಟ್ಟು ಆವನದಲ್ಲಿಯೇ ಇರದೆ ಓಡಿಹೋಗಲು ರಾಮಚಂದ್ರನು ರಾತ್ರಿಯಲ್ಲಿ ಸುಖವಾಗಿ ನಿದ್ರೆಮಾಡಿ ಉಷಃಕಾಲದಲ್ಲಿ ಎದ್ದು ಸ್ನಾನಸಂಧ್ಯಾವಂದನ ಮೊದಲಾದ ನಿತ್ಯಕರ್ಮಗಳನ್ನು ಮಾಡಿದನೆಂದು ಸೂತಪೌರಾಣಿಕನು ನೈಮಿಷಾರಣ್ಯವಾಸಿಗಳಾದ ಶೌನಕಾದಿ ಋಷಿಗಳಿಗೆ ನಿರೂಪಿಸಿದನು.

Colophon:

ಇಂತು ಕರ್ಣಾಟಕ ಭಾಷಾ ವಿರಚಿತಮಾಗಿ ಶ್ರೀಮಹಿಶೂರ ಸೇನಾಧಿಪ ದೊಡ್ಡರಾಜಪೌತ್ರ ವೀರರಾಜತನೂಜ ದಳವತಿ ದೇವರಾಜಾನುಜ ಕಳಲೆ ನಂಜರಾಜ ವಿರಚಿತಮಾದ ನಂಜರಾಜ ವಾಣೀವಿಳಾಸವೆಂಬ ಟೀಕೆಯಲ್ಲಿ ವ್ಯಾಸಕೃತ ಸ್ಕಾಂದಪುರಾಣದಲ್ಲಿ ಶಿವಧರ್ಮೋತ್ತರದಲ್ಲಿ ೧೯ ವತ್ತ್ಯದನೆಯ ಅಧ್ಯಾಯದ ಅರ್ಥ ನಿರೂಪಣಕ್ಕೆ ಮಂಗಳಂ.

(ವಿ.ವಿ.)—

ಸಮಗ್ರ. ಶಿಥಿಲ. ಲಿಪಿ ಉತ್ತಮ. ಕವಿ ಕಳಲೆ ನಂಜರಾಜ. ಉಳಿದ ವಿಷಯಗಳನ್ನು ಮೇಲೆ ಉದಾಹೃತವಾಗಿರುವ ಭಾಗಗಳಿಂದ ತಿಳಿಯುವುದು.

No. 243. ಶಿವಧರ್ಮೋತ್ತರ.
ŚIVADHARMŌTTARA.

Substance, Śrītāla. Size, 21 × $2\frac{3}{8}$ inches. Pages, 254. Lines, 10 on a page. Character, Kanarese. Condition, injured. Appearance, old. Mode of writing, good.

Contains the Adhyāyās 1 to 47 complete, and 48th incomplete.

Same work as the above.

(ವಿ.ವಿ.)—

ಇದರಲ್ಲಿ ೧ ರಿಂದ ೪೭ ಅಧ್ಯಾಯಗಳು ಸಮಗ್ರ. ೪೮ ನೆಯದು ಅಸಮಗ್ರ. ಶಿಥಿಲ. ಲಿಪಿ ಉತ್ತಮ. ಕವಿ ಕಳಲೆ ನಂಜರಾಜ. ಹಿಂದೆ ವರ್ಣಿತವಾದ ಗ್ರಂಥವೇ ಆಗಿದೆ.

No. 244. ಶಿವಧರ್ಮೋತ್ತರ.
ŚIVADHARMŌTTARA.

Substance, Śrītāla. Size, 21 × $11\frac{5}{8}$ inches. Pages, 244. Lines, 7 on a page. Character, Kanarese. Condition, much injured. Appearance, old. Mode of writing, good.

Contains the Adhyāyās 1 to 26 complete, and 27th incomplete.

Same work as the above.

(ವಿ.ವಿ.)—

ಇದರಲ್ಲಿ ಮೊದಲಿಂದ ೨೬ ಅಧ್ಯಾಯಗಳು ಸಮಗ್ರ. ೨೭ ನೆಯದು ಅಸಮಗ್ರ ಅತಿ ಶಿಥಿಲ. ಲಿಪಿ ಉತ್ತಮ. ಕವಿ ಕಳಲೆ ನಂಜರಾಜ. ಹಿಂದೆ ವರ್ಣಿತವಾದ ಗ್ರಂಥವೇ ಆಗಿದೆ.

No. 245. ಶಿವಧರ್ಮೋತ್ತರ.

ŚIVADHARMŌTTARA.

Substance, Śrītāla. Size, $21\frac{1}{8} \times 2\frac{7}{16}$ inches. Pages, 52. Lines, 9 on a page. Character, Kanarese. Condition, injured. Appearance, old. Mode of writing, good.

Contains the Adhyāyas 1 to 12 complete, and 13th incomplete.

Same work as the above.

(ವಿ.ವಿ)—

ಇದರಲ್ಲಿ ಮೊದಲಿನಿಂದ ೧೨ ಅಧ್ಯಾಯಗಳು ಸಮಗ್ರ. ೧೩ ನೆಯದು ಅಸಮಗ್ರ. ಶಿಥಿಲ. ಕವಿ ಕಳಲೆ ನಂಜರಾಜ. ಹಿಂದೆ ವರ್ಣಿತವಾದ ಗ್ರಂಥವೇ ಆಗಿದೆ.

No. 246. ಶಿವಧರ್ಮೋತ್ತರ.

ŚIVADHARMŌTTARA.

Substance, Śrītāla. Size, $21\frac{3}{16} \times 2^{3}$ inches. pages, 156. Lines, 9 on a page, Character, Kanarese. Condition, slightly injured. Appearance, old.

Contains the Adhyāyas 16 to 45 complete, and the 15th and 46th incomplete.

Same work as the above.

(ವಿ.ವಿ)—

ಇದರಲ್ಲಿ ೧೬ ರಿಂದ ೪೫ ಅಧ್ಯಾಯಗಳು ಪೂರ್ಣವಾಗಿವೆ. ೧೫ ಮತ್ತು ೪೬ ನೆಯವು ಅಪೂರ್ಣವಾದುವುಗಳು. ಸ್ವಲ್ಪ ಶಿಥಿಲ. ಕವಿ ಕಳಲೆ ನಂಜರಾಜ. ಹಿಂದೆ ವರ್ಣಿತವಾದ ಗ್ರಂಥವೇ ಆಗಿದೆ.

No. 247. ಶೇಷಧರ್ಮ.

ŚĒṢADHARMA.

Substance, palm-leaf. Size, $13\frac{7}{8} \times 1\frac{1}{4}$ inches. Pages, 288. Lines, 5 on a page. Character, Kanarese. Condition, injured. Appearance, old.

Contains the Adhyāyas 1 to 23 complete, and 24th incomplete.

A rendering in prose of the Sanskrit Śēṣadharma which is a supplement to the Āśvamēdhikaparva in Harivamśa; by Chikka-upādhyāya who wrote the work for the gratification of Cikkadēvarāja, who was the king of Mysore. For other particulars regarding the author, his works and patron see under No. 219 *ante*.

Beginning:

"ಶಾರ್ದೂಲ ವಿಕ್ರೀಡಿತ"

ಶ್ರೀನಾರೀನಯನಾಬ್ಜಲಾಲಿತದಿನಾಧೀನಂ ಜಗತ್ಪಾವನಂ ।
ನಾನಾಭೀಷ್ಟ ಫಲಪ್ರದಂ ನಿರುಪಮಂ ನಿತ್ಯಂಪರಂ ಶಾಶ್ವತಂ ॥
ಜ್ಞಾನಾನಂದಮಯಂ ಶಿವಾದಿ[ದೇವತತಿ] (ಸುರ)ವಂದ್ಯಂ ಸರ್ವಲೋಕೇಶ್ವರಂ ।
ಭೂನಾಥಾಗ್ರಣಿ ಚಿಕ್ಕದೇವ ನೃಪನಂ ರಕ್ಷಿಕ್ಕೆ ಕಾರುಣ್ಯದಿಂ ॥

ಕಂ ॥ ಶೇಷಧರ್ಮಕ್ಕೆಟೀಕಿನ ।
ಶೇಷಜನಂ ತಿಳಿವತೆರದೆ ಚಿಕುಪಾಧ್ಯಾಯಂ ॥
ತೋಷಿಸೆ ಚಿಕದೇವೇಂದ್ರಂ ।
ಭಾಷಾಭೂಷಣದ ಕನ್ನಡದೆ ವಿರಚಿಸಿದಂ ॥

* * * *

ಸ್ವಸ್ತ್ಯಸ್ತು ! ಸಕಲ ಸನ್ಮಂಗಳಾನಿ ಭವಂತು ! ವಃ ! ಶ್ಲೋಕೈಕ ಶ್ರವಣ ತಾವನ್ಮಾತ್ರದಿಂದ ಸಕಲ ಕಲಿಕಲ್ಮಷಾಪನೋದನ ಪಟುತರವಾದ ಧರ್ಮಾರ್ಥ ಕಾಮಮೋಕ್ಷಂಗಳೆಂಬ ಚತುರ್ವಿಧ ಫಲ ಪುರುಷಾರ್ಥ ಸಾಧನಂಗಳಾದ ಕಥಾಮೃತ ಸಾರವಾದ ಹರಿವಂಶಕಲಿತವಾದ ಆಶ್ವಮೇಧಿಕ ಪರ್ವದಲ್ಲಿ ಶೇಷಧರ್ಮಂಗಳ ಕಥಾ ಕ್ರಮವೆಂತೆನೆ :—

ಪುಣ್ಯ ತಮವಾಗಿರುವಂಥ ನೈಮಿಷಾರಣ್ಯದಲ್ಲಿ ಶೌನಕಾದಿ ಮುನೀಶ್ವರರು ದೀರ್ಘ ಸತ್ರಯಾಗವಂ ಮಾಡಿ ಸೂತ ಪೌರಾಣಿಕರಂ ಕುರಿತು ಸರ್ವಶಾಸ್ತ್ರ ವಿಶಾರದನಾದಂಥ ಸೂತ ಕುಮಾರನೆ ! ವ್ಯಾಸ ಪ್ರಸಾದದಿಂದ ಸಮಸ್ತವನ್ನೂ ತಿಳಿದು ಅಶೇಷ ಧರ್ಮಂಗಳನ್ನೂ ಅನೇಕ ಪುಣ್ಯ ಫಲಂಗಳ(ನ್ನೂ) ಕೊಡುವಂಥ ಭಾರತದ ಕಥೆಗಳನ್ನೆಲ್ಲವನ್ನೂ ನಮಗೆ ಹೇಳಿದಿರಿ ! ಕರ್ಣಶ್ರಾವ್ಯವಾಗುವ ಹಾಗೆ ಶ್ರೀಕೃಷ್ಣ ಚರಿತಾಭಿಷೇಕವಾದ ಹರಿವಂಶದಲ್ಲಿ ಅದ್ಭುತಂಗಳಾದಂಥ ಧರ್ಮಗಳುಂಟು. ಅವೆಲ್ಲವನ್ನೂ ವಿಸ್ತಾರವಾಗಿ ಹೇಳಿ ಮುನಿಗಳ ಮನಸ್ಸಿಗೆ ವಿಕಾಸಮಂ ಮಾಡುವುದು ನಿಮ್ಮಂಥ ಶಿಷ್ಟಜನರಿಗೆ ಅರ್ಹವಲ್ಲವೆ ? ಎಂದು ಕೇಳಿದ ಮುನಿಗಳಿಗೆ ಸೂತ ಪೌರಾಣಿಕನು ಹೇಳಿದ ಪ್ರಕಾರ :—

* * * *

ಗಂಗಾನಂದನನಿಗೆ ದೇವಕೀನಂದನನು ಹೇಳಿದ ಪ್ರಕಾರ :—ಎಲೈ ! ಭೀಷ್ಮನೆ ! ಬಲ ದಯಾ ಸತ್ಯನಿಧಿಗಳಾದ ಪಾಂಡು ಪುತ್ರರಿಗೆ ನೀನು ಜ್ಞಾನ ಭಕ್ತಿಗಳನ್ನು ತಿಳಿಯಹೇಳು. ಚಿತ್ತ ಯಾವಾಗಲೂ ನನ್ನಲ್ಲಿ ಹೊಂದಿ ಇರುವ ರೀತಿಗೆ ಭಯ—ಒಂದಿಷ್ಟೂ ಇಲ್ಲ, ಎಂದು ಹೇಳಲಾಗಿ ಶಂತನು ತನುಜನಾದ ಭೀಷ್ಮನು ಭಕ್ತಲೋಕವರದನಾದಂಥ ಕೃಷ್ಣಸ್ವಾಮಿಯನ್ನು ಹೃದಯ ಕಮಲದಲ್ಲಿ—ಇರಿಸಿಕೊಂಡು ವಂದನೆಯಂ ಮಾಡಿ ವಿನಯ ಪೂರ್ವಕವಾಗಿ ಧರ್ಮರಾಯನು ಕೇಳುವ ಹಾಗೆ ಹೇಳಿದ ಪ್ರಕಾರ !

Colophon:

ಇತಿ ಆದಿಪರ್ವ ಶ್ರೀಹರಿವಂಶೇ ಪ್ರಥಮಾಧ್ಯಾಯಃ ॥

ಗಂಗಾ ಪುತ್ರನಾದ ಭೀಷ್ಮನು ಕೃಷ್ಣಸ್ವಾಮಿಯ ಆಜ್ಞೆಯನ್ನು ವಹಿಸಿ ಆ ಸ್ವಾಮಿಗೆ ನಮಸ್ಕಾರವನ್ನು ಮಾಡಿ ಧರ್ಮರಾಯನಂ ಕುರಿತು ಒಂದು ವಾಕ್ಯವನ್ನು ಹೇಳುತ್ತಲಿದ್ದಾನೆ !

* * * *

ಸುಮತಿಯೆಂಬುವನು ಅಗ್ನಿಹೋತ್ರ ಗೃಹಕ್ಕೆ ಹೋಗಿ ಅಗ್ನಿಯಂ ಪ್ರಜ್ವಲಿತವಂ ಮಾಡಿ ಅತಿ ಹರ್ಷದಿಂದ ನಮಸ್ಕಾರವಂ ಮಾಡಿ, ಆ ಅಗ್ನಿಯಂ ಆತ್ಮಸಮಾರೋಪಣ ಮಾಡಿಕೊಂಡು, ಅನಂತರದಲ್ಲಿ ಪುತ್ರವತಿಯಾಗಿ ಪತಿವ್ರತೆಯಾಗಿ ಪ್ರಿಯಭಾಷಿಣಿಯಾಗಿ—ಇರುವ ತನ್ನ ಭಾರ್ಯೆಯನ್ನು ಕಂಡು, ಎಲೌ ! ಅತಿಥಿಪ್ರಿಯೆಯಾದ ರಮಣಿಯೆ ! ಕೇಳು. ನೀನು ಧರ್ಮದಿಂದ ಪುತ್ರರಂ ರಕ್ಷಿಸಿಕೊಂಡು—ಇದ್ದರೆ ನಿನಗೆ ಅಧಿಕ ಶ್ರೇಯಸ್ಸುಗಳು ಆದೀತು. ಸದಾ ಧರ್ಮವನ್ನೇ ಭಜಿಸು. ಭೂತ ಹಿಂಸೆಗಳಂ ಬಿಟ್ಟು ನಿನ್ನ ದೇಹದಲ್ಲಿರುವ ಕಾಮವನೆಲ್ಲವಂ ಬಿಟ್ಟು ನಿರಂತರ ಸತ್ಸಂಗ ಸಮಾಗಮವನ್ನೇ ಮಾಡು. ಎಲೌ ! ಭದ್ರೆ ! ನೀನು ಶ್ರೀಪತಿಯಾದ ಜನಾರ್ದನನಂ ಅರ್ಚಿಸಿ ಸತ್ಯಶೀಲೆಯಾಗು. ಬುದ್ಬುದಾಕಾರವಾದ ಈ ದೇಹದಲ್ಲಿ ಮಮತೆಗಳೆಲ್ಲವನ್ನೂ ಬಿಟ್ಟು ಇರು, ಎಂದು ಹೇಳಿದ ಪತಿಯ ವಾಕ್ಯವಂ ಕೇಳಿ, ಪ್ರಿಯಪತ್ನಿಯಾಗಿರುವಾಕೆಯು ಮಕುಳಿತ ಹಸ್ತೆಯಾಗಿ ದುಃಖಾನ್ವಿತೆಯಾಗಿ, ತನ್ನ ಪತಿಯಂ ಕುರಿತು ಎಲೈ ! ಪರಮಹಿತನಾದ ಪ್ರಿಯರಮಣನೆ ! ಮೊದಲು ನಿಮ್ಮಿಂದ ಇಂತಹ ವಾಕ್ಯವನ್ನು ಕೇಳಿದ್ದಿಲ್ಲ, ನೀವು ಶಂಕೆಯಿಲ್ಲದೆ ಹೇಳುತ್ತಲಿದ್ದೀರಿ ! ಇದೇನು ಕಾರಣವೆಂದು ಕೇಳಿದ ತನ್ನ ಪತ್ನಿಯಂ ಕುರಿತು ಸುಮತಿಯೆಂಬುವನು ಹೇಳಿದ ಪ್ರಕಾರ :—

ಎಲೌ ! ಪ್ರಿಯರಮಣಿಯೆ ! ಕೇಳು. ನಾನು ಸಮಿತ್ಪುಷ್ಪ ಕುಶಾರ್ಥವಾಗಿ ವನಕ್ಕೆ ಹೋಗಿದ್ದ ಬಳಿಯಲ್ಲಿ ಒಂದು ವ್ಯಾಘ್ರವು ತನ್ನ ಆಹಾರಾರ್ಥವಾಗಿ ನನ್ನಂ ಕಂಡೋಡಿ ಬಂದು ನನ್ನ ದಕ್ಷಿಣ ಹಸ್ತವನ್ನು ಹಿಡಿದು ಕೊಂಡಿರಲಾಗಿ ನಾನು ಆಶ್ರಮಕ್ಕೆ ಹೋಗಿ ತಿರುಗಿ ಬಂದು ದೇಹವನ್ನು ಕೊಡುವೆನು ಎಂದು ಅನೇಕ ಶಪಥಂಗಳಂ ಮಾಡಿಕೊಟ್ಟು ಬಂದೆನು. * * * * ಎಲೈ ! ಪುಂಡರೀಕನೆ ! ನೀನು ಹಸಿದು ಬಳಲಿದ್ದೀಯೆ. ಈಗ ನೀನು ನ್ನನ್ನನು ಭಕ್ಷಿಸು—ಎಂದು ಹೇಳಿದ ಬ್ರಾಹ್ಮಣನ ವಾಕ್ಯವಂ ಕೇಳಿ ದೇವತೆಗಳೆಲ್ಲರೂ ವಿಸ್ಮಿತರಾಗಿ ಸರ್ವಶಾಸ್ತ್ರ ವಿಶಾರದನಾದ ಸುರಶ್ರೇಷ್ಠನಾದ ದೇವೇಂದ್ರನಂ ಕುರಿತು, ಎಲೈ ! ತ್ರಿದಶೇಶ್ವರನೆ ! ನಮಸ್ಕಾರ. ಮಹಾತ್ಮನಾದ ಬ್ರಾಹ್ಮಣನಿಗೋಸ್ಕರ ಈ ವ್ಯಾಘ್ರಕ್ಕೆ ಸ್ವರ್ಗವನ್ನು ಕೊಡು ಎಂದು ಹೇಳಿದ ದೇವತೆಗಳ ವಾಕ್ಯವಂ ಕೇಳಿ, ದೇವೇಂದ್ರನು ಬ್ರಾಹ್ಮಣನಂ ಕರೆದು ಎಲೈ ! ಭೂಸುರೋತ್ತಮನೆ ! ನಿನಗೆ ಸ್ವರ್ಗವನ್ನು ಕೊಡುವೆನು. ಸತ್ಯ ಪ್ರತಿಜ್ಞೆಯನ್ನು ಕೊಡಲು ನೀನಲ್ಲದೆ. ಮನುಷ್ಯರಲ್ಲಿ ಯಾರೂ ಇಲ್ಲ * * * * ಎಂದು ಹೇಳಿದ ದೇವೇಂದ್ರನ ವಾಕ್ಯವಂ ಕೇಳಿ ಸುಮತಿಯೆಂಬುವನು * * * * ಆಶ್ಚರ್ಯಪಟ್ಟಂಥವನಾಗಿ ಶಿಷ್ಯಗಣ ಪರಿವೃತನಾಗಿ ಆಶ್ರಮವನೆಯ್ದಿ ಧರ್ಮಿಷ್ಠೆಯಾದ ಭಾರ್ಯೆಗೆ ಹೇಳಿ ಕರ್ಮಕಾಂಡವಂ ಮಾಡಿ ಶಿಷ್ಯರುಗಳೊಡನೆ ಯಥೇಷ್ಟ ಭೋಗಂಗಳ ನನುಭವಿಸಿ ಶಿಷ್ಯಗಣ ಪರಿವೃತನಾಗಿ ಸ್ವರ್ಗ ವನೆಯ್ದಿದನು.

End:

ಮಂದರ ಪರ್ವತಕ್ಕೆ ಅಭಿಷೇಕವನ್ನು ಅಂಗೀಕಾರ ಮಾಡಿದರೆಂಬ ಈ ವೃತ್ತಾಂತವಂ ನಾರದಮುನೀಶ್ವರನಿಂದ ಕೇಳಿ, ವಿಂಧ್ಯ ಪರ್ವತನು ಕೋಪದಿಂದ ವೃದ್ಧಿಯನೆಯ್ದಿದನು. ಆ ವಿಂಧ್ಯ ಪರ್ವತದಿಂದ [ಲು] ಸೂರ್ಯನ ರಥವು ನಿವಾರಿಸಲ್ಪಟ್ಟಿತು. ಸೂರ್ಯನು ಮೇರು ಪರ್ವತವನ್ನು ಪ್ರದಕ್ಷಿಣೆ ಮಾಡುವುದಕ್ಕೆ ಅಸಮರ್ಥನಾದನು. ಒಂದು ಪಾರ್ಶ್ವದಲ್ಲಿ ಸೂರ್ಯಕಿರಣ

ಗಳಿಂದ ಮನುಷ್ಯರು ನಿರಂತರವಾಗಿ ಪೀಡಿತರಾದರು. ಮತ್ತೊಂದು ಪಾರ್ಶ್ವದಲ್ಲಿ ದೇವತೆಗಳು ಅಂಧಕಾರಾಕ್ರಾಂತರಾಗಿ ಸಿಕ್ಕಿಬಿದ್ದರಾದರು. * * * *

ಆ ದೇವತೆಗಳು ಬ್ರಹ್ಮದೇವರು ಸಹಿತರಾಗಿ ಕಾಶೀಪಟ್ಟಣವನೈದ್ದಿ ಚಕ್ರತೀರ್ಥದಲ್ಲಿ ಸ್ನಾನವಂ ಮಾಡಿ ವಿಶ್ವೇಶ್ವರನ ದರ್ಶನವಂ ಮಾಡಿ ಅಗಸ್ತ್ಯಮುನೀಶ್ವರನಿರುವ ಸ್ಥಳವನೈದ್ದಿದರು. ಆ ಮುನೀಶ್ವರನು ಬಂದಂಥ ದೇವತೆಗಳನ್ನು ಶಾಸ್ತ್ರೋಕ್ತ ರೀತಿಯಲ್ಲಿ ಅಗ್ರಪೂಜೆಯ ಮಾಡಿ, ಅವರು ಸುಖೋಪವಿಷ್ಟರಾದ ನಂತರದಲ್ಲಿ ಅವರ ಕ್ಷೇಮವಾರ್ತೆಯನ್ನು ಕೇಳಿದನು. ಅದೆಂತೆಂದರೆ:—ನಿಮ್ಮ ಸ್ವರ್ಗ ಪರಿಣಾಮವಾಗಿದ್ದೀತೊ? ರಾಕ್ಷಸರಿಂದ ನಿಮಗೆ ಉಪದ್ರವವಿಲ್ಲವಲ್ಲ? ಬೃಹಸ್ಪತಿಯ ಬುದ್ಧಿಯಲ್ಲಿ ನಡೆಯುತ್ತಾ—ಇದ್ದೀರಲ್ಲ? ಆವಕಾರಣ ನೀವು ಇಲ್ಲಿಗೆ ಬಂದಿರಿ? ನಾವು ಬ್ರಾಹ್ಮಣರು. ನೀವು ದೇವತೆಗಳು.

(ವಿ ವಿ.)—

ಇದು ಗದ್ಯರೂಪವಾಗಿದೆ. ಇದರಲ್ಲಿ ಮೂರನೆಯ ಅಧ್ಯಾಯವಾದ ಮೇಲೆ ಎಂಟನೆಯ ಅಧ್ಯಾಯವೆಂದು, ನಾಲ್ಕನೆಯ ಅಧ್ಯಾಯವನ್ನು ಗುರುತಿಸಬೇಕಾದ ಸ್ಥಳದಲ್ಲಿ ಬರೆದಿರುತ್ತಾನೆ. ಈ ಪುಸ್ತಕದ ಅಧ್ಯಾಯಾಂತ್ಯದ ಸಂಖ್ಯೆಗಳನ್ನು ನೋಡುತ್ತ ಹೋದರೆ ೪, ೫, ೬, ೭ ಹೊರತು ಮೊದಲಿಂದ ಇಪ್ಪತ್ತೇಳು ಅಧ್ಯಾಯಗಳು ಪೂರ್ಣವಾಗಿಯೂ, ಇಪ್ಪತ್ತೆಂಟನೆಯದು ಅಪೂರ್ಣವಾಗಿಯೂ ಇರುವಂತೆ ಕಂಡು ಬರುತ್ತದೆ. ಆದರೆ ಮೇಲೆ ಹೇಳಿರುವಂತೆ ಅಧ್ಯಾಯ ಸಂಖ್ಯೆಗಳನ್ನು ವ್ಯತ್ಯಾಸವಾಗಿ ಗುರುತಿಸಿರುವುದರಿಂದ, ನ್ಯಾಯವಾಗಿ, ಇದರಲ್ಲಿ ಒಂದರಿಂದ ಇಪ್ಪತ್ತು ಮೂರು ಅಧ್ಯಾಯಗಳು ಪೂರ್ಣವಾಗಿಯೂ ಇಪ್ಪತ್ತು ನಾಲ್ಕನೆಯದು ಅಪೂರ್ಣವಾಗಿಯೂ ಇರುವುದಾಗಿ ತಿಳಿಯಬೇಕು. ಕವಿ ಚಿಕ್ಕುಪಾಧ್ಯಾಯ. ಹರಿವಂಶ ಕಲಿತವಾದ, ಆಶ್ವಮೇಧಿಕ ಪರ್ವದಲ್ಲಿ ಉಕ್ತವಾದ ಶೇಷಧರ್ಮವನ್ನು; ತಾನು, ಚಿಕದೇವರಾಜನ ಸಂತೋಷಾರ್ಥವಾಗಿ ಕನ್ನಡಿಸಿದಂತೆ ಹೇಳುತ್ತಾನೆ.

No. 248. ಶೇಷಧರ್ಮ.
ŚĒṢADHARMA.

Substance, palm-leaf. Size, $13\frac{3}{8} \times 1\frac{7}{16}$ inches. pages, 96. Lines, 5 on a page. Character, Kanarese. Condition, very much injured. Appearance, old.

Begins on fol. 27*a*. The other work herein is:—Śrīvaiṣṇavāhnika. 1*a*.

Contains the Adhyāyas 1 to 9 complete. and 10th incomplete.

Same work as the above.

(ವಿ.ವಿ.)—

ಇದು ಹಿಂದೆ ವರ್ಣಿತವಾದ ಗ್ರಂಥವೇ ಆಗಿದೆ. ಇದರಲ್ಲಿಯೂ ಮೂರನೆಯ ಅಧ್ಯಾಯವಾದ ಮೇಲೆ ಎಂಟನೆಯ ಅಧ್ಯಾಯವೆಂದು, ನಾಲ್ಕನೆಯ ಅಧ್ಯಾಯವನ್ನು ಗುರುತಿಸಬೇಕಾದ

ಸ್ಥಳದಲ್ಲಿ ಬರೆದಿರುತ್ತಾನೆ. ಈ ಪುಸ್ತಕದ ಅಧ್ಯಾಯಾಂತ್ಯಗಳ ಸಂಖ್ಯೆಯನ್ನು ನೋಡಿದರೆ ೪, ೫, ೬, ೭ ಹೊರತು ಮೊದಲಿನಿಂದ ಹದಿಮೂರು ಅಧ್ಯಾಯಗಳು ಪೂರ್ಣವಾಗಿಯೂ ಹದಿನಾಲ್ಕನೆಯದು ಅಪೂರ್ಣವಾಗಿಯೂ ಇರುವಂತೆ ಕಂಡು ಬರುತ್ತದೆ. ಆದರೆ ಮೇಲೆ ಹೇಳಿರುವಂತೆ ಅಧ್ಯಾಯ ಸಂಖ್ಯೆಗಳನ್ನು ವ್ಯತ್ಯಾಸವಾಗಿ ಗುರುತಿಸಿರುವುದರಿಂದ, ನ್ಯಾಯವಾಗಿ ಇದರಲ್ಲಿ ಒಂದರಿಂದ ಒಂಭತ್ತು ಅಧ್ಯಾಯಗಳು ಪೂರ್ಣವಾಗಿಯೂ ಹತ್ತನೆಯದು ಅಪೂರ್ಣವಾಗಿಯೂ ಇರುವುದಾಗಿ ತಿಳಿಯಬೇಕು. ಕವಿ ಚಿಕ್ಕುಪಾಧ್ಯಾಯ. ಉಳಿದ ವಿಷಯಗಳನ್ನು ಹಿಂದಿನ ನಂಬರಿನಿಂದ ತಿಳಿಯುವುದು.

No. 249. ಸಂಕಷ್ಟಹರಚತುರ್ಥೀವ್ರತ.

SAṄKAṢṬAHARACATURTHĪVRATA.

Substance, Śrītāla. Size, 10½ × 1¾ inches. Pages, 23. Lines, 8 on a page. Character, Kanarese. Condition, slightly injured. Appearance, old. Mode of writing, good.

Begins on fol. 22*a*. The other works herein are :—Syamantakōpākhyāna 1*a*. (2) Dhuṇḍivināyakacāritra, 14*b*.

Complete.

A rendering in prose of the Sanskrit Sañkaṣṭaharacaturthivrata-māhātmya forming part of the Skāñdapurāṇa ; by Kaḷale Nanjaraja.

Beginning:

ಪೂರ್ವದಲ್ಲಿ ಹನ್ನೆರಡು ವರ್ಷ ಮಾಡತಕ್ಕ ಸತ್ರಯಾಗವೆಂಬ ಯಜ್ಞಶಾಲೆಯಲ್ಲಿ, ನೈಮಿಷಾರಣ್ಯದಲ್ಲಿರುವ ಶೌನಕಾದಿ ಋಷಿಗಳು ಕುಮಾರಸ್ವಾಮಿಯವರು ಆ ಯಜ್ಞಶಾಲೆಗೆ ಚಿತ್ತೈಸಲಾಗಿ ಸಕಲವನ್ನೂ ತಿಳಿದವರಾದ್ದರಿಂದ ಆ ಕುಮಾರಸ್ವಾಮಿಯವರನ್ನು ಸಾಷ್ಟಾಂಗವಾಗಿ ನಮಸ್ಕರಿಸಿ, ಮಧುಪರ್ಕ ಮೊದಲಾದ ಪೂಜೆಗಳಿಂದ ಸತ್ಕರಿಸಿ ಸಕಲ ಕಷ್ಟಗಳನ್ನೂ ಪರಿಹರಿಸಿ, ಇಷ್ಟಾರ್ಥಗಳನ್ನು ಕೊಡುವ ಆ ವಿಘ್ನೇಶ್ವರ ಪ್ರೀತಿಕರವಾದ ಒಂದಾನೊಂದು ವ್ರತವನ್ನು ಕೇಳಲುಪಕ್ರಮಿಸಿದರು. ಬ್ರಹ್ಮಚಾರಿ ರೂಪವನ್ನು ಧರಿಸಿರುವ ಕುಮಾರಸ್ವಾಮಿಯೆ ! ಲೋಕದಲ್ಲಿ ದಾರಿದ್ರ್ಯ ಶೋಕ ಕಷ್ಟಗಳಿಂದಲೂ, ಶತ್ರುಗಳಿಂದಲೂ ಪೀಡಿತರಾವಂಥ, ತಮ್ಮ ರಾಜ್ಯವನ್ನು ಬಿಟ್ಟು ದೇಶಾಂತರದಲ್ಲಿದ್ದುಕೊಂಡು ತಮ್ಮ ರಾಜ್ಯವು ತಮಗೆ ಕೈಸೇರಬೇಕೆಂದೂ, ಸಕಲ—ಇಷ್ಟಾರ್ಥಗಳೂ ಬರಬೇಕೆಂದೂ ಅಪೇಕ್ಷಿಸುವ ಅರಸುಗಳಿಂದ ಯಾವ ವ್ರತವು ಮಾಡ(ಲ್ಪಡ) ತಕ್ಕದ್ದು. ಧನವಿಲ್ಲದೆ ಸಕಲೋಪದ್ರಗಳಿಂದ ಪೀಡಿತರಾಗಿ ಮನೆಯಿಲ್ಲದೆ ಬಹು ರೋಗಗಳಿಂದ ಯುಕ್ತವಾಗಿರುವ ಸಮಯದಲ್ಲಿ ಕಷ್ಟಗಳೆಲ್ಲ ಪರಿಹಾರವಾಗಿ ಸಮಸ್ತ ಶ್ರೇಯಸ್ಸುಗಳೆಲ್ಲ ಆಗಬೇಕೆಂದು ಪ್ರಾರ್ಥಿಸುತ್ತಾ—ಇರುವ ಮನುಷ್ಯರಿಂದ ಯಾವ ವ್ರತವು ಆಚರಿಸ(ಲ್ಪಡ)ತಕ್ಕದು ಎಂಬದಾಗಿ ಶೌನಕಾದಿ ಋಷಿಗಳು ಕೇಳಲಾಗಿ ಕುಮಾರಸ್ವಾಮಿಯವರು ಕಟ್ಟು ಮಾಡಿಸಿದರು.

End:

ದಮಯಂತಿಯು ನಳಚಕ್ರವರ್ತಿಯನ್ನು ಅರಸುವ ಕಾಲದಲ್ಲಿ—ಈ ವ್ರತವನ್ನು ಮಾಡಿ ನಿಷಧದೇಶಕ್ಕೆ ಪತಿಯಾದ, ಪುಣ್ಯಶ್ಲೋಕನಾದ ನಳಚಕ್ರವರ್ತಿಯನ್ನು ಹೊಂದಿದಳು. ಅಹ

ಲ್ಯೆಯು ಶಿಲಾರೂಪವನ್ನು ತಾಳಿದ್ದ ಕಾಲದಲ್ಲಿ ಈ ವ್ರತವನ್ನಾಚರಿಸಿ ಪ್ರಾಣವಲ್ಲಭನಾದ ಗೌತಮ ಮಹಾಮುನೀಶ್ವರನನ್ನು ಹೊಂದಿದಳು. ಸಕಲ ವಿದ್ಯೆಗಳು, ದ್ರವ್ಯಗಳು ಪ್ರಾಪ್ತಿಯಾಗುವುದು. ಪುತ್ರ ಪ್ರಾಪ್ತಿಯಾಗುವುದು. ಸಕಲ ರೋಗ ನಿವೃತ್ತಿಯಾಗಬೇಕೆಂಬದಾಗಿ ಈ ವ್ರತಾಚರಣೆಯಂ ಮಾಡಲು ಸಕಲ ರೋಗ ನಿವೃತ್ತಿಯಾಗುವುದು. ಸಕಲ—ಇಷ್ಟಾರ್ಥಗಳೂ ಶ್ರೀ ವಿಘ್ನೇಶ್ವರ ಪ್ರಸಾದದಿಂದ ಸಕಲ ಮಂಗಳಗಳುಂಟಾಗುವು ವೆಂಬದಾಗಿ ಸ್ಕಾಂದಪುರಾಣೋಕ್ತವಾದ ಸಂಕಷ್ಟಹರ ಚತುರ್ಥೀವ್ರತ ಮಹಿಮೆಯನ್ನು ಸಕಲ ಋಷೀಶ್ವರರನ್ನೂ ಕುರಿತು ಸೂತ ಪೌರಾಣಿಕರು ನಿರೂಪಿಸಿದರ್ಥವನ್ನು,

Colophon :

ಕರ್ಣಾಟಕ ಭಾಷೆಯಿಂದ ವಿರಚಿಸಲ್ಪಟ್ಟ ಶರಭಧ್ವಜ ಹನುಮಧ್ವಜ ಸಿಂಹಲಲಾಟಾಂಕಿತ ಶಿಬಿಕಾದಿ ಬಿರುದಾನ್ವಿತ ಕಳಲೆ ದೊಡ್ಡ ರಾಜಪೌತ್ರ ವೀರರಾಜ ತನೂಭವ ಶ್ರೀನಂಜರಾಜ ವಿರಚಿತವಾದ ಸಂಕಷ್ಟ ಹರಚತುರ್ಥೀವ್ರತ ವನ್ನು ಪೇಳ್ದಲ್ಲಿಗೆ ಮಂಗಳ ಮಹಾ.

(ವಿ.ವಿ.)—

ಸಮಗ್ರ. ಸ್ವಲ್ಪ ಶಿಥಿಲ. ಕವಿ ಕಳಲೆ ನಂಜರಾಜ. ಗ್ರಂಥಾಂತ್ಯದಲ್ಲಿ 'ಜೇವನಾಗಿದ್ದ ಆನೆಯ ಬಲದ ಕೊಂಬಿನಲ್ಲಿ ವಿಘ್ನೇಶ್ವರನಂ ಮಾಡಿ ಪೂಜಿಸಿದರೆ ಕುರಿತ ಕಾರ್ಯಗಳು ಕ್ಷಿಪ್ರದಲ್ಲಿ ಆಗುವುದು * * * * ಮೃತ್ತಿಕೆಯಿಂದ ಮಾಡಿದ ವಿನಾಯಕನು ಯಾವ ಜಾತಿಯವರಿಗಾದರೂ ಪ್ರಮಾಣಕ್ಕೆ ಕೆಲಸವಿಲ್ಲ. ಎಷ್ಟು ಪ್ರಮಾಣದಲ್ಲಿ ಮಾಡಿದ ವಿನಾಯಕನಾಗಲಿ ಪೂಜಿಸಬಹುದು.' ಎಂದಿದೆ.

No. 250. ಸಂಕಷ್ಟಹರಚತುರ್ಥೀವ್ರತ.

SAṄKAṢṬAHARACATURTHĪVRATA.

Substance, Śrītāla. Size, $10\frac{5}{8} \times 1\frac{5}{8}$ inches. Pages, 5. Lines, 8 on a page. Character, Kanarese. Condition, slightly injured. Appearance, old.

Incomplete.

Same work as the above.

Date of transcription :—Tenth day of the bright fortnight of the lunar month Śrāvaṇa in the year Vijaya.

Name of the scribe :—Kappaṇṇa.

(ವಿ.ವಿ.)—

ಅಸಮಗ್ರ. ಸ್ವಲ್ಪ ಶಿಥಿಲ. ಕವಿ ಕಳಲೆ ನಂಜರಾಜ. ಹಿಂದೆ ವರ್ಣಿತವಾದ ಗ್ರಂಥವೇ ಆಗಿದೆ. ಒಂದು ಓಲೆಯಲ್ಲಿ 'ವ್ಯಯ ಸಂ । ಶ್ರಾವಣ ಶು ೧೦ ಲ್ಲೂ ಕಪ್ಪಣ್ಣ ಬರೆದ ಪ್ರತಿ' ಎಂದಿದೆ. ಅಲ್ಲದೆ, ವ್ರತ ಮತ್ತು ಕಥೆಗೆ ಸಂಬಂಧವಾದ ಕೆಲವು ಓಲೆಗಳು ಹೆಚ್ಚಾಗಿವೆ. ಆದರೆ ಈ ಓಲೆಗಳು ಕ್ರಮವಾಗಿಲ್ಲ.

No. 251. ಸ್ಯಮಂತಕೋಪಾಖ್ಯಾನ-
SYAMAÑTAKŌPĀKHYĀNA.

Substance, Śrītāla. Size, $10\frac{1}{3} \times 1\frac{3}{4}$ inches. Pages, 27. Lines, 8 on a page. Character, Kanarese. Condition, slightly injured. Appearance, old.

Begins on fol. 1 *a*. The other works herein are.—(1) Dhuṇḍivināyakacaritra 14 *b*, (2) Sankaṣṭaharacaturthivrata, 22*a*.

Complete.

A rendering of the Sanskrit Symantakōpākhyāna forming part of the Bhaviṣyōttarapurāṇa, by Kaḷale Nanjarāja.

Beginning :

ಪೂರ್ವ್ವದಲ್ಲಿ ಕೈಲಾಸದಲ್ಲಿ ಪರಮೇಶ್ವರನ ದರುಶನಾರ್ಥವಾಗಿ ಬಂದಿದ್ದ ಸನತ್ಕುಮಾರ ಮುನೀಶ್ವರನು ನಂದಿಕೇಶ್ವರರಂ ಕಂಡು ಸಾಷ್ಟಾಂಗನಮಸ್ಕಾರಂಗಳಂ ಮಾಡಿ, ಸರ್ವ್ವಲೋಕೋಪಕಾರಾರ್ಥವಾಗಿ ಸರ್ವ್ವ ವಿಘ್ನವನ್ನೂ ಪರಿಹರಿಸುವಂಥ, ಶೀಘ್ರದಲ್ಲಿ ಸಮಸ್ತೈಶ್ವರ್ಯಗಳನ್ನೂ ಕೊಡುವಂಥ, ಉತ್ತಮವಾದ ವಿನಾಯಕಪ್ರೀತಿಕರವಾದ ವ್ರತವನ್ನು ಬುದ್ಧಿಗಲಿಸಬೇಕೆಂದು ಕೇಳಿದಲ್ಲಿ ದಯೆಯಿಂದೆ ಆಸನತ್ಕುಮಾರ ಮಹಾಮುನೀಶ್ವರನಂ ಕುರಿತು ಲೋಕೋಪಕಾರಾರ್ಥವಾಗಿ ನಂದಿಕೇಶ್ವರರು ನಿರೂಪಿಸಿದರು.

ಎಲೈ ! ಯೋಗಿಗಳಲ್ಲಿ ಶ್ರೇಷ್ಠನಾಗಿರುವಂಥ ಸನತ್ಕುಮಾರಮಹಾಮುನೀಶ್ವರನೆ ! ನಿರ್ಮ್ಮಲಾಂತಃಕರಣನಾಗಿ ಕೇಳು. ಮಂಗಳಕರವಾಗಿರುವಂಥ ವಿಘ್ನೇಶ್ವರ ವ್ರತವನ್ನು ಹೇಳುತ್ತಾ ಇದ್ದೇನೆ. ಸಾರ್ವಕಾಲದಲ್ಲಿಯೂ ಶುಕ್ಲಪಕ್ಷದ ಚತುರ್ಥೀ ದಿನದಲ್ಲಿ ಪ್ರಯತ್ನಪೂರ್ವಕವಾಗಿ ಈ ವ್ರತವು ಮಾಡಲ್ಪಡತಕ್ಕಂಥಾದ್ದು. ಯಾವ ಪುರುಷನಾದರೂ ಯಾವ ಸ್ತ್ರೀಯಾದರೂ ತಮಗೆ ಶುಭವನ್ನು ಬಯಸಿದಂಥವರಾಗಿ ಉತ್ತಮವಾಗಿರುವಂಥ ಈ ವ್ರತವನ್ನು ಮಾಡುತ್ತಾ ಇದ್ದಾರೆಯೋ, ವ್ರತಶೀಲರಾದವರನ್ನು ಎಲೈ ! ಬ್ರಾಹ್ಮಣ ಶ್ರೇಷ್ಠನಾಗಿರುವಂಥ ಸನತ್ಕುಮಾರನೆ ! ಎಲ್ಲ ಸಂಕಟಗಳ ದೆಸೆಯಿಂದಲೂ ಬಿಡಿಸುವುದು.

*   *   *   *

ಜಾಂಬವಂತನನ್ನು ಇಪ್ಪತ್ತೊಂದು ದಿವಸಗಳ ಮೇಲೆ ಯುದ್ಧದಲ್ಲಿ ಜಯಿಸಿ, ಅವನನ್ನು ಸಂತೋಷಪಡಿಸಲು, ಆ ಜಾಂಬವಂತನು ಮಹಾಪರಾಕ್ರಮಶಾಲಿಯಾದ ಕೃಷ್ಣನನ್ನು ಕುರಿತು ಪೂರ್ವ ವೃತ್ತಾಂತವನ್ನು ಸ್ಮರಿಸಿದವನಾಗಿಂತೆಂದನು. ಎಲೈ ! ದೇವನೆ ! ಸಮಸ್ತ[ವಾದ] ದೇವತತೆಗಳಿಂದಲೂ ಜಯಿಸುವುದಕ್ಕೆ ಅಶಕ್ಯನಾದ ನನ್ನನ್ನು ನೀನು ಜಯಿಸಿದೆ· ನಿನ್ನ ಪರಾಕ್ರಮಕ್ಕೆ ಸಂತೋಷಪಟ್ಟೆನು. ನೀನು ಮಹಾಪುರುಷನು ಎಂದು ಸ್ತುತಿಸಿ, ಆ ರತ್ನವನ್ನೂ, ಜಾಂಬವತಿಯೆಂಬ ತನ್ನ ಮಗಳನ್ನೂ ಕೊಟ್ಟು, ಆ ಜಾಂಬವತಿಯನ್ನು ವಿವಾಹಮಾಡಿಸಿದನು.

*   *   *   *

ಭಾದ್ರಪದ ಶುದ್ಧ ಚತುರ್ಥಿಯಲ್ಲಿ ಯಾರು ಈ ಚಂದ್ರದರ್ಶನವನ್ನು ಮಾಡುತ್ತಾ ಇದ್ದಾರೆಯೋ, ಅದು ಪರಿಹಾರಕ್ಕೋಸ್ಕರ ಅವಶ್ಯವಾಗಿ ಈ ಕಥಾ ಶ್ರವಣವನ್ನು ಅವರು ಮಾಡತಕ್ಕದು. ಯಾವಾಗ ಕಷ್ಟತೋರುತ್ತಾ ಇದೆಯೋ, ಆಗ (ಯಾರು) ಈ ಕಥಾ ಶ್ರವಣವ

ನ್ನು ಮಾಡುತ್ತಾ ಇದ್ದಾರೆಯೋ [ಆ] (ಅವರ) ಕಷ್ಟವೆಲ್ಲ ಪರಿಹಾರವಾಗಿ ಸಮಸ್ತ ಇಷ್ಟಸಿದ್ಧಿಗಳೂ ಸ್ವಾಧೀನವಾಗಿರುವುವು. ಎಂದು ಸನತ್ಕುಮಾರಯೋಗೀಶ್ವರರನ್ನು ಕುರಿತು ನಂದಿಕೇಶ್ವರರು ನಿರೂಪಿಸಿದರು.

Colophon :

ಇಂತೆಂಬ ಭವಿಷ್ಯೋತ್ತರ ಪುರಾಣವಾದ ಸ್ಯಮಂತಕೋಪಾಖ್ಯಾನವನ್ನು ಕರ್ಣಾಟಕ ಭಾಷೆಯಿಂದ ವಿರಚಿಸಲ್ಪಟ್ಟ ಶರಭಧ್ವಜ ಹನುಮದ್ಧ್ವಜ ಸಿಂಹಲಾಟಾಂಕಿತ ಶಿಬಿಕಾದಿ ಬಿರುದಾನ್ವಿತ ಕಳಲೆ ದೊಡ್ಡರಾಜಪೌತ್ರ ವೀರರಾಜತನೂಭವ ಶ್ರೀನಂಜರಾಜ ವಿರಚಿತಮಾದ ವಿಘ್ನೇಶ್ವರ ಮಹಿಮೆಪ್ರೂಜಾಪ್ರಕರಣವುಂ ಹೇಳ್ವಲ್ಲಿಗೆ ಅಧ್ಯಾಯು ೦ (?) ಕ್ಕೆ ಮಂಗಳಂ.

(ವಿ.ವಿ.)—

ಇದು ಸಮಗ್ರ. ಸ್ವಲ್ಪ ಶಿಥಿಲ. ಲಿಪಿ ಉತ್ತಮ. ಕವಿ ಇತ್ಯಾದಿ ವಿಷಯುಗಳನ್ನು ಮೇಲೆ ಉದಾಹೃತವಾಗಿರುವ ಭಾಗಗಳಿಂದ ತಿಳಿಯುಬಹುದು.

No. 252. ಹರಿಹರಚಾರಿತ್ರ.

HARIHARACĀRITRA.

Substance, palm-leaf. Size, 15 × 1¼ inches. Pages, 10. Lines, 5 on a page. Character, Kanarese. Condition, slightly injured. Appearance, old.

Begins on fol. 89 *a*. The other works herein are.—(1) Viduranīti 1 *a*, (2) Airāvata 18 *a*, (3) Rājanīti 34*a*, (4) Chandōmbudhi 44*a*, (5) Kālinganīti 64*a*, (6) Sanatsujātanīti 77*a*, (7) Syāmalādandaka 94*a*, (8) Vibhīṣāṇabuddhi 98*a*, (9) Sakunaśāstra 108*a*.

Complete.

A peom in Kanarese in the Bhāminiṣatpadi metre describing the story of Hariharacāritra found in Sanskrit Bhāgavata, by Nityātmasukayōgi.

Beginning :

ಸೂ ॥ ಒಂದು ನಿಜವೆರಡೆನಿಸಿ ಹರಿಹರ ।
ರೆಂದುಪಾಧಿಸಿ ಭೇದದಲಿ (ತೋ) ।
ಕ್ಕೆಂದು ಸುರಮುನಿವರರಿಗಸುರಾರಾತಿ ನೇಮಿಸಿದ ॥
ಕೃತ್ಯವಾವುದು ತನಗೆ ದೇವರು ।
ಚಿತ್ತವಿಸಿದುದು ಬರವಿದೇನು ನಿ ।
ಮಿತ್ತ ಭೃತ್ಯಾನುರುವ ಭೃತ್ಯನೆನಿಪ್ಪ ತನ್ನೆಡೆಗೆ ॥
ಅತ್ಯಧಿಕ ವಿಸ್ಮಯದ ಬೀಜವ ।
ಬಿತ್ತಿದೆಯಲಾ ! ತನ್ನ ಸದಮಲ ।
ಚಿತ್ತದಲಿ ನಿತ್ಯಾತ್ಮಸುಖವಿಗ್ರಹನೆ ! ಹೇಳೆಂದ ॥

ಒಂದು ನೆವವನು ಮಾಡಿ ತನ್ನಯ ।
ಮಂದಿರಕೆ ಮನವೊಲಿದು ದೇವ ! ಮು ।
ಕುಂದ ! ಬಿಜಯಂಗೆಯ್ದು ಭಕ್ತಾನುಗ್ರಹಾರ್ಥದಲಿ ॥

ಕಂದಣಿಯೆ ನಿನ್ನಂಘ್ರಿಕಮಲ ।
ದ್ವಂದ್ವವನು ತಾಕಾಣಪಡೆದೆನು ।
ಕುಂದದೀ ಸಂಸಾರ ಸಾರ್ಥಕವಾಯಿತೆನಗೆಂದ ॥

* * *

ಆನು ನೀನಜ ನೀನು ಸುರಪತಿ ।
ನೀನು ಪಾವಕ ಯಮ ಕುಬೇರರು ।
ನೀನು ನೈರುತಿ ವರುಣ ವಾಯುಗಳೆಂಬುವರು ನೀನೆ ॥
ಭಾನು ಶಶಿ ತಾರಾಗ್ರಹಾವಳಿ ।
ನೀನು ಗುಹಗಣಪತಿಗಳೆಂಬರು ।
ನೀನು ನೀನೇ ಮಾಟ್ಪಿದೀ ಸಚರಾಚರವಿದೆಂದ ॥

ನೀನು ತಾನೆಂದೇನು ಬೇದವೆ ।
ಹೀನವಲ್ಲೈ ನಾನು ನಿನ್ನೊಳ ।
ಗಾನು ನೀನೆಂಬೆರಡು ಪಾಧಿಕ ಭೇದವಿಲ್ಲವಲೆ ॥
ತಾನಲಾ ಶ್ರೀಯೆನಿಸಿ ನಿಜವ ।
ಕ್ಷೋನಿವಾಸಿಯೆನಿಪ್ಪೆ ನಿಜಗಾ ।
ತ್ರಾನುಮತ ಗೌರೀಶ ರೂಪನು ನೀನಲಾ- ಎಂದ ॥

ಕೇಳುವುದು ನಿಜಶ್ರದ್ಧೆಯುಲಿ ನೆರೆ ।
ಹೇಳುವುದು ಹರಿಬುದ್ಧಿಯುಲಿ ಹರಿ ।
ಲೀಲೆಯನು ಸಲೆ ಭಕ್ತಿಮುಕ್ತಿ ಸುಖಪ್ರದವಿದೆಂದು ॥

ಈಾಲುಮದ್ವಾದಂತೆ ಕರ್ಣ ವಿ ।
ಶಾಲ ಸುಖಭವದುಃಖಹರ ಕರು ।
ಣಾಳು ನಿತ್ಯಾತ್ಮಕ ಮುಕುಂದ ಚರಿತ್ರವೀಥರೆಗೆ ॥
ಜನಪ ಕೇಳ್ ದುಷ್ಕರ್ಮ ನಿರ್ಮೂ ।
ಲನವಿದಖಿಳಾಭ್ಯುದಯ ಸುಖಸಾ ।
ಧನ ವಿದಚ್ಯುತ ತುಷ್ಟಿಕರವಘಹರ ಪವಿತ್ರಕರ ॥

ಜನನ ಮರಣ ವಾ ಧಿ ಭಯ ಭಂ ।
ಜನ ವಿದುತ್ತಮ ಜನಮನೋರಂ ।
ಜನಮಹಾಭಾಗವತ ನಿತ್ಯಾತುಮನ ಚಾರಿತ್ರ ॥

Colophon :

ಇದು ಭಾಗವತದಲ್ಲಿ ಹರಿಹರ ಚಾರಿತ್ರ.

(ವಿ-ವಿ.)—

ಭಾಗವತಾಂತರ್ಗತ ಹರಿಹರ ಚಾರಿತ್ರ ಸಮಗ್ರ. ಸ್ವಲ್ಪ ಶಿಥಿಲ. ಕವಿ ನಿತ್ಯಾತ್ಮಶುಕ ಯೋಗಿ. ಕಥಾಗರ್ಭ :—‘ ಸುರಮುನಿಗಳಿಗೆ ಶ್ರೀಹರಿಯು ಹರಿಹರರ ಭೇಧವನ್ನು ತಿಳಿಯಿಸುವ ವಿಷಯವು.’

No. 253. ಗರಳಪುರೀ ಮಾಹಾತ್ಮ್ಯೆ.

GARAḶAPURĪMĀHĀTMYE.

Substance, Śrītāla. Size, $10\frac{5}{8} \times 1\frac{5}{8}$ inches. Pages, 100. Lines, 7 on a page. Character, Kanarese. Condition, slightly injured. Appearance, old.

Complete in 12 Adhyāyas.

A rendering in prose of the Garaḷapurimāhātmye forming part of the Sanskrit Skāndapurāṇa; by Kaḷale Nanjarāja. Garaḷapuri, which is now called Nanjungud is near Mysore on the bank of the river Kapila.

Beginning:

ಶ್ಲೋ॥ ಶುಕ್ಲಾಂಬರಧರಂ ವಿಷ್ಣುಂ ।
ಶಶಿವರ್ಣಂ ಚತುರ್ಭುಜಂ ॥
ಪ್ರಸನ್ನ ವದನಂ ಧ್ಯಾಯೇತ್ ।
ಸರ್ವವಿಘ್ನೋಪ ಶಾಂತಯೇ ॥

*   *   *

॥ ಭಾ ॥ ಷ ॥

ಮಂಗಳವನೆಮಗೀವುದಿಂದು ತ ।
ರಂಗಿಣೀ ಧರ ವೃಷಭರಾಜ ತು ।
ರಂಗ ಜಿತಸಾರಂಗದಾನವ ಸರ್ವಮಂಗಳೆಯು ॥

ತುಂಗ ಕುಚಗಳ ಕುಂಕುಮಾಂಕಿತ ।
ಮಂಗಳಾಂಗ ಮಹೇಶ ಪರಶು ಕು ।
ರಂಗ ವರದಾಭಯ ಕರಾಬ್ಜನು ಮೇರು ಕೋದಂಡ ॥

*   *   *

ಚಂದ್ರ ವಂಶದ ರಾಯರೊಳು ಗುಣ ।
ಸಾಂದ್ರ ಭಾರದ್ವಾಜ ಗೋತ್ರಜ ।
ಇಂದ್ರ ವಿಭವನುದಾರ ಯುಕ್ಷಾಭಾನು ವರ್ತನನು (?)

ಅಂದದಿಂದೆಸೆದಿರ್ದ ತಿಮ್ಮನ ।
ರೇಂದ್ರ ನಾ ಕಳಲೇ ಮಹಾಕುಲ ।
ನಂದ ನೋದ್ಯಾನದೊಳು ರಾಜಿಪ ಕಲ್ಪತರುವಂತೆ ॥

* * *

ಪಾಶುಪತ ಶಾಸ್ತ್ರಾರ್ಥ ತತ್ವವ ।
ದೇಶಿಕೋತ್ತಮ ರಂಗ ಸೇವೆಯ ।
ಲೇಸಿನಿಂದಲೆ ತಿಳಿದು ನಂಜನರೇಂದ್ರ ನಾನೀಗ ॥
ವ್ಯಾಸಕೃತ ಪೌರಾಣ ಸೂಕ್ತಿಗ ।
ಳಾಶಯವನರಿದಚ್ಚ ಕನ್ನಡ ।
ಭಾಷೆಯಿಂದು ಸುರುವೆನು ಗರಳ ಪುರೀಶ ಮಹಿಮೆಯನು ॥

ಇಂತು ತುಹಿನಕರವಂಶ ವಾರಿಧಿ ಸುಧಾಕರ ಕಳಲೆ ಕುಲಜಲಧಿ ಕೌಸ್ತುಭ ಮಹಿಶೂರ ಸೇನಾಪತಿ ದೊಡ್ಡ ಧರಣಿಪತಿ ಸುತ ವಿಬುಧನುತ ವೀರವಸುಧಾಧಿಪ ಸುಕುಮಾರ ನಂಜ ಧರಣಿಪತಿ ಸ್ಕಂದ ಪುರಾಣೋಕ್ತವಾದ ಗರಳಪುರೀ ಮಹಿಮೆಯಂ ಸಕಲರರಿವಂತೆ ಕರ್ಣಾಟ ಭಾಷೆಯಿಂದ ವಿರಚಿಸ ಲುದ್ಯುಕ್ತನಾಗಿ ನಿರ್ವಿಘ್ನದಿಂ ಗ್ರಂಥ ಸಮಾಪ್ತಿಯಾಗುವಂತೆ ವಿಘ್ನರಾಜನಂ ಪಶುಪತಿಯಂ ಸರ್ವಮಂಗಳೆಯಂ ಸತ್ಯವತೀಸುತನಂ ಭಜಿಸಿ ಮೇಲ್ಗತೆಯ ಪೇಳುತ್ತಿಹನು.

ನೈಮಿಷಾರಣ್ಯವಾಸಿಗಳಾದ ಶೌನಕಾದಿ ಮುನಿಗಳು ದ್ವಾದಶ ವರ್ಷ ಸತ್ರಯಾಗವಂ ಮಾಡಲುಪಕ್ರಮಿಸಿದರು. ಅದಂ ಕೇಳಿ ಬಳಿಕ ಪೌರಾಣಿಕೋತ್ತಮನಾದ ಸೂತ ಮುನೀಶ್ವರನು ಅಲ್ಲಿಗೆ ಬರಲಾಗಿ ಅಲ್ಲಿರುವ ಸಕಲ ಮುನೀಶ್ವರರು ಜಡೆಗಳನ್ನೂ, ನಾರು ವಸ್ತ್ರಗಳನ್ನೂ ಧರಿಸಿರುವರು ; ರುದ್ರಾಕ್ಷಮಾಲಾಭರಣನಾದ ತ್ರಿಂಪುಂಡ್ರಾಂಕಿತ ಮಸ್ತಕನಾದ ಕಮಂಡಲವಂ ಧರಿಸಿರ್ದ ಸದಾ ಬ್ರಹ್ಮಧ್ಯಾನ ಪರನಾದ ಸೂತಮುನಿಯಂ ಕಂಡು ಎದ್ದು ಇದಿರಾಗಿ ಬಂದು ವಂದಿಸುತ್ತಿರಲಾಗಿ, ಆ ಸೂತನು ಅಂಜಲಿ ಬಂಧವಂ ಮಾಡಿರ್ದ ಮುನಿಗಳಂ ನೋಡಿ ನಮಸ್ಕರಿಸಿ ನುಡಿದನು· ಎಲೈ ! ಮುನಿಗಳಿರಾ ! ನೀವು ನನಗೆ ಏನುಕಾರಣ ಪ್ರತ್ಯುತ್ಥಾನವಂ ಮಾಡುವಿರಿ, ಕುಳ್ಳಿರಿ. ಎಂದು ನುಡಿದು ಆ ಮುನಿಗಳತ್ತ ಅರ್ಘ್ಯಪಾದ್ಯಾಸನಂಗಳ ನಂಗೀಕರಿಸಿ, ಆ ಮುನಿಗಳ ಯೋಗಕ್ಷೇಮವಂ ಕೇಳಿದನು. ಆಗ ಮುನಿಗಳು ಆ ಸೂತಪೌರಾಣಿಕನಂ ಕುರಿತು ಪ್ರತ್ಯುತ್ತರವಂ ನುಡಿದರು. ಎಲೈ ಭಗವಂತನಾದ ಸೂತನೆ ! ಈ ಲೋಕದಲ್ಲಿ ವಿಶೇಷವಾಗಿ ಭುಕ್ತಿಮುಕ್ತಿಗಳನೀವ ಉತ್ತಮವಾದ ಕ್ಷೇತ್ರಮಹಿಮೆಯಂ ಕೇಳಲಿಚ್ಛೈಸುವೆವು. ಹೇಳು, ವಾಸವಮಾಡಿದ ಜನರ ಕರ್ಮಬಂಧವ ಪರಿವ ಕ್ಷೇತ್ರರಾಜನೆಂಬ ಪೆಸರುಳ್ಳ ಕ್ಷೇತ್ರವೆಲ್ಲಿರುವುದು, ಎಂಬ ಋಷಿಗಳವಾಕ್ಯವಂ ಕೇಳಿ ಸೂತಪೌರಾಣಿಕಂ ನುಡಿದನು.

* * * *

ಕೇಶಿಯೆಂಬ ಪೆಸರುಳ್ಳ ದುರಹಂಕಾರಿಯಾದ ದುರುಳ ರಕ್ಕಸನು ಲೋಕಂಗಳನ್ನು ಬಾಧಿಸುವನು. ಅದು ಕಾರಣ ನಾನು ಮುನಿಗಳಿಂದಲೂ ಬ್ರಹ್ಮನಿಂದಲೂ ಪ್ರಾರ್ಥಿಸಲ್ಪಟ್ಟವನಾಗಿ ಆ ರಾಕ್ಷಸನಂ ಸಂಹರಿಸಲೋಸ್ಕರ, ಆ ಉತ್ತಮವಾದ ಯೆನ್ನ ಕ್ಷೇತ್ರವನ್ನು ಕುರಿತು ಹೋಗುವೆನು ಎಲೌ ! ದೇವಿ ! ನೀನು ಆ ಕ್ಷೇತ್ರವನ್ನೂ ನೋಡುವೆ. ಈ ಪ್ರಕಾರ ಸಂತೋಷಕರವಾದ ವಾಕ್ಯವನ್ನು ನುಡಿದು ತ್ವರೆಯಿಂದ ದೇವಿಯಂ ಕರೆದು ವೃಷಭವನೇರಿ, ಅಲ್ಲಿ ಮನೋರಥಂಗಳಂ ಪಡೆನು ಶಂಕರನು ದೇವಿಯೊಡನೆ (ಸಮೇತನಾಗಿ) ವೇಗದಿಂದ ತನ್ನ ಗೃಹವನ್ನೈದಿದನು.

ಸೂತಮುನಿಯ ವಚನ.—ಈ ಪ್ರಕಾರ ಗೌರೀಪ್ರಿಯನಾದ ಶಿವನಿಂದ ಗಿರಿಜೆಗೆ ಗರಳ ಪ್ರ. ಮೆಂದೀ ಕ್ಷೇತ್ರ (ರಾಜ) ವು ವಿವರಿಸಲ್ಪಟ್ಟಿತು. ಎಲೈ ! ಮುನಿಶ್ರೇಷ್ಠರುಗಳಿರಾ ! ನಾನು ನಿಮಗೆ ಈ ಕ್ಷೇತ್ರದಲ್ಲಿ ನಡೆದ ಕೇಶಿ ಸಂಹಾರವೆಂಬ ರಹಸ್ಯಮಾದ ದಿವ್ಯಮಾದ ಶಿವ ಚರಿತೆ ಯಂ ಪೇಳುವೆನು.—

Colophon:

ಇಂತು ಮಹಿಶೂರ ದಳಪತಿ ದೊಡ್ಡರಾಜ ಗರ್ಭಾಬ್ಧಿ ಚಂದ್ರ ವೀರರಾಜ ತನೂಭವ ನಂಜರಾಜ ವಿರಚಿತ ಸ್ಕಂದ ಪುರಾಣೋಕ್ತ ಗರಳಪುರೀ ಮಹಿಮಾದರ್ಶನ ಮೆಂಬೀ ಕರ್ಣಾಟಕ ಭಾಷಾ ವಿರಚಿತ ಟೀಕಿನಲ್ಲಿ ಉಮಾಮಹೇಶ್ವರ ಸಂವಾದವೆಂದು ಪ್ರಥಮಾಧ್ಯಾಯದರ್ಥವು.—

ಶೌನಕಾದಿ ಋಷಿಗಳು ಸೂತ ಪುರಾಣಿಕರಂ ಕುರಿತು ಹೇಳುತ್ತಿಹರು.—ಗೌರೀ ದೇವಿ ಗೋಸ್ಕರ ಶಿವನಿಂದ ಕೇಶಿ ರಾಕ್ಷಸನ ಸ್ಥಾನಮಾದ ಗರಳಕ್ಷೇತ್ರಕ್ಕೆ ಹೋಗುವೆನು ಎಂದು ನುಡಿಯಲ್ಪಟ್ಟಿತು. ಈಗ ಕಥೆಯ ನಮಗೆ ಪೇಳು. ಆವಾಗ ಶಿವನಲ್ಲಿಗೆ ಬಂದನು ? ಯಾ ವಾಗ ರಾಕ್ಷಸ ಸಂಹಾರಮಾದುದು ? ಎಲೈ ! ಮುನಿಯೆ ! ಆ ಕ್ಷೇತ್ರಕ್ಕೆ ಗರಳ ಕ್ಷೇತ್ರವೆಂಬ ಹೆಸರು ಹೇಗಾದುದು ? ಈ ಪ್ರಕಾರ ಮುನಿಗಳ ವಾಕ್ಯವಂ ಕೇಳಿ ಮುನಿಶ್ರೇಷ್ಠನಾದ ಸೂತ ಪೌರಾಣಿಕನು ನುಡಿದನು.

End:

ಯಾರು ಈ ಕಪಿಲಾ ಕೌಂಡಿನೀ ತೀರದಲ್ಲಿ ವಾಸವಂ ಮಾಡುವರೋ ಅವರಿಗೆ ಕಲಿಭಾಧೆ ಯಿಲ್ಲ. ನಾನು ಸತ್ಯವನ್ನು ಹೇಳುವೆನು. ಭೂ ಕೈಲಾಸದೊಳು ಯಾವ ನರರು ವಾಸವಂ ಮಾಡುವರೋ ಅವರು ದೇವತೆಗಳಗೆ ಸಮಾನರು. ಪಾಷಾಣಂಗಳು ಶಿವಲಿಂಗ ಸಮಾನಂಗಳು. ಸತ್ಯವಂ ಹೇಳುವೆನು. ಯಾರು ಈ ಶಿವ ಸ್ಥಳದ ಅತ್ಯದ್ಭುತವಾದ ಮಹಿಮೆಯನ್ನು. ಇಲ್ಲಿದ್ದು ಕೊಂಡಾದರೂ ಕೇಳುವರೋ, ಪಠಿಸುವರೋ, ಪುಸ್ತಕದಲ್ಲಿ ಬರೆವರೋ, ಬರೆದ ಪುಸ್ತಕವನ್ನಾದ ರೂ ಪೂಜಿಸುವರೋ, ಅನುಮೋದಿಸುವರೋ, ಆ ಜನರೆಲ್ಲರೂ ಮುಕ್ತಿಯಂ ಪಡೆವರು, ಸತ್ಯ ಮಿದು. ಈ ಪ್ರಕಾರ ನೀಲಕಂಠನಿಂದ ಭವಾನಿಯಂ ಕುರಿತು ನಿರೂಪಿಸಲ್ಪಟ್ಟಿದ್ದ ನಿಮಗೆ ಎ ನ್ನಿಂದ ಹೇಳಲ್ಪಟ್ಟಿತು. ಅದುಕಾರಣ ಋಷಿಗಳಿರ ! ನೀವು ಶ್ರೀ ಭೂಕೈಲಾಸಪುರದಲ್ಲಿ ಸುಖ ದಿಂದ ವಾಸವಂ ಮಾಡುವುದು [ಎಂದು] ಸೂತಪುರಾಣಿಕರು ಶೌನಕಾದಿ ಋಷಿಗಳಂ ಕುರಿತು ಗರಳಪುರದ ಮಹಿಮೆಯಂಪೇಳಿದರು.

Colophon:

ಶ್ರೀಮನ್ಮಹಿಶೂರ ಸೇನಾಪತಿ ಕಳಲೆ ದೊಡ್ಡ ರಾಜಸುತ ವೀರರಾಜನಂದನ ದಳಪತಿ ದೇವ ರಾಜಾನುಜ ನಂಜರಾಜಯ್ಯನು ಸೌರಮಾನದಿಂದ ಕಾರ್ತಿಕ ಶುಕ್ಲಪಕ್ಷದ . . ನ ಜನ ನಕ್ಷತ್ರಮಾತ ಅಶ್ವಿನೀ ನಕ್ಷತ್ರದಲ್ಲಿ ಶ್ರೀ ಮದ್ಗರಳ ಪುರಾಧೀಶರಾದ ಶ್ರೀ ನಂಜುಂಡೇಶ್ವರ ಸ್ವಾ ಮಿಯವರಿಗೆ ದೇವಯಾಗ ಪೂರ್ವಕವಾಗಿ ಶ್ರೀಮನ್ಮಹಾರಥೋತ್ಸವವನ್ನು ನೆರವೇರಿಸಿ, ಈ ಗರ ಳಪುರೀ ಕ್ಷೇತ್ರದಲ್ಲಿ ವೃಶ್ಚಿಕ ಮಾಸದಲ್ಲಿ ನಂಜುಂಡೇಶ್ವರ ಸ್ವಾಮಿಯವರ ಸನ್ನಿಧಿಯಲ್ಲಿ ಕಪಿ ಲಾ ಸ್ನಾನವಂಮಾಡಿ, ಅತಿಶಯ ಫಲಪ್ರದಮಾಗಿರುವ ಈ ಮಾಸದಲ್ಲಿ ಕೃತ್ತಿಕಾ ನಕ್ಷತ್ರ ಯು ಕ್ತಮಾದ ಪೌರ್ಣಮಾಶಿಯು ಈ ಕ್ಷೇತ್ರದಲ್ಲಿ ಮಣಿಕರ್ಣಿಕಾಸ್ನಾನ ಫಲಮತ್ಯಂತಾತಿಶಯ . . . . ಪುರಾಣದಲ್ಲಿ ಯೇಳನೆಯ ಅಧ್ಯಾಯದಲ್ಲಿ ಹೇಳಿರುವುದರಿಂದಲೂ, ಶೈವಾಗಮಂ

ಗಳಲ್ಲಿ ಶಿವರಥೋತ್ಸವಾನಂತರದಲ್ಲಿ ಅವಭೃಥಸ್ನಾನವನತಿಶಯವಾಗಿ ಹೇಳಿರುವುದರಿಂದಲೂ ವಿಚಾರಿಸಿ, ಕೃತ್ತಿಕಾನಕ್ಷತ್ರದಲ್ಲಿ ಅವಭೃಥ ಸ್ನಾನಮಾಡುವಂತ ಈ ನಂಜರಾಜತಿರುನಾಳು ಎಂಬ ಮಹೋತ್ಸವ [ವ]ಂ ಮಾಡಿಸಿ ಇದರಲ್ಲಿ ಶ್ರೀ ನಂಜುಂಡೇಶ್ವರ ಸ್ವಾಮಿಯವರ ಸನ್ನಿಧಿಯಲ್ಲಿ ಒಪ್ಪಿಸಿದ ಕರ್ಣಾಟಕ ಭಾಷಾವಿರಚಿತವಾದ ಸ್ಕಂದ ಪುರಾಣೋಕ್ತ ಪ್ರತಿಪಾದಿತ ಗರಳಪುರೀಮಹಿಮೆಯಾದ ದ್ವಾದಶಾಧ್ಯಾಯಂಗಳಿಗೆ ಮಂಗಳಂ—

(ವಿ.ವಿ.)—

ಗರಳಪುರೀ ಮಾಹಾತ್ಮ್ಯ ಅಥವಾ ಗರಳಪುರೀ ಮಹಿಮಾದರ್ಶ. ಸಮಗ್ರ. ಸ್ವಲ್ಪ ಶಿಥಿಲ. ಅಕ್ಷರಗಳು ಚೆನ್ನಾಗಿವೆ. ತಪ್ಪುಗಳು ಹೆಚ್ಚಾಗಿಲ್ಲ. ಗ್ರಂಥಪಾತ ಸ್ವಲ್ಪವುಂಟು. ಕವಿ ಕಳಲೆಯ ನಂಜರಾಜ.

No. 254. ಗರಳಪುರೀ ಮಾಹಾತ್ಮ್ಯ (ವಚನ). GARAḶAPURĪMĀHĀTMYE (PROSE).

Substance, palm-leaf. Size, $11\frac{3}{4} \times 1\frac{1}{3}$ inches. Pages, 134. Lines, 5 on a page. Character, Kanarese. Condition, slightly injured. Appearance, old. Mode of writing, good but not free from mistakes.

Contains the Garaḷapurimāhātmye complete.

Same work as the above.

(ವಿ.ವಿ.)—

ಗರಳಪುರೀ ಮಾಹಾತ್ಮ್ಯ ಅಥವಾ ಗರಳ ಪುರೀ ಮಹಿಮಾಧರ್ಶ ಸಮಗ್ರ. ಸ್ವಲ್ಪ ಶಿಥಿಲ. ಬರೆವಣಿಗೆ ಚೆನ್ನಾಗಿದೆ. ತಪ್ಪುಗಳುಂಟು. ಕವಿ ಕಳಲೆ ನಂಜರಾಜನೆಂಬುವನು. ಹಿಂದೆ ವರ್ಣಿತವಾದ ಗ್ರಂಥವೇ ಸರಿ.

No. 255. ತುಳಸೀಮಾಹಾತ್ಮ್ಯ. TULASIMĀHĀTMYE.

Substance, palm-leaf. Size, $14\frac{1}{4} \times 1\frac{1}{8}$ inches. Pages, 30. Lines, 4 on a page. Character, Kanarese. Condition, slightly injured Appearance, old. Mode of writing, good but not free from mistakes.

Wants one fol. in the beginning, otherwise complete.

A poem in Kanarese in the Bhāminiṣaṭpadi metre describing Tulasīmāhātmya, by Acyutadāsa. The poet was a Brāhmin and he lived in 1650 A.D.

Beginning :

. . . . ।
. . . . ।
. . . . ॥

. . . ವದಾನವರನೆಲ್ಲರ ।
ಕಾ . ಕೊಂದನು ಮಂದರಾದ್ರಿಯೊ ।
ಳೊಲ್ದಧಿಯ(ಾ)ಲಮೃತವನು ಮಥಿಸಿದನಸುರ ಸುರರೊಡನೆ ॥
ಅಲ್ಲಿ ಜನಿಸಿದಳಮಳ ಚೆಲುವಿನ ।
ಸಲ್ಲಲಿತ ಸೌಗಂಧ ಗಂಧಿನಿ ।
ಫುಲ್ಲವಿಸೆ ವಿಮಲಾಂಗಿ ಕೋಮಲೆ ಕಮಲ ವರ ವದನೆ ॥
ನಲ್ಲ ಸೌಭಗೆ ಸಕಲ ಲೋಕಗ ।
ಳೆಲ್ಲವನು ಮೋಹಿಸುವ ಲಕ್ಷ್ಮೀ ।
ವಲ್ಲಭನ ಭ್ರುಮೆಗೊಳಿಸ ಲೆಸೆದಳು ತೊಳಸಿಯೊಲವಿನಲಿ ॥
ಕಮಲ ಮಿತ್ರ ಸಹಸ್ರ ಕಿರಣದ ।
ಲಮಲ ತನು ಕಾಂತಿಗಳ ಲೊಪ್ಪುವ ।
ಸಮ ಚರಣದುಂಗುಟದ ನಖದ ದ್ಯುತಿಯುಲುಜ್ವಲಿಸೆ ॥
ವಿಮಲ ಕೆಂದಾವರೆಯ ಹೋಲುವ ।
ಕ್ರಮದಲಿಹ ಶ್ರೀಪಾದ ಚಲುವಿನ ।
ಸುಮನೆ ಮೆಱೆದಳು ತೊಳಸಿ ಕ್ಷೀರಾರ್ಣವದ ಮಧ್ಯದಲಿ ॥
ಕಾಲಲಂಗುಲಿಗಳಲಿ ಬೆಳಗುವ ।
ಸಾಲ ಮಂಟಿಕೆ ಮುದ್ರೆಯುಂಗುರ ।
ಕೀಲ(ಕ)ದ ನವರತ್ನ ಹೊ(ದ್ದಿ)ದ ಪಾಲ ಕಾಖೆಗಳ ॥
ಮೇಲೆ ಮೆಱೆವಂದುಗೆಯು ಪಳುಕಿನ ।
ಸಾಲೆಸೆವ ಕಿಱುಗೆಜ್ಜೆ ಪೆಂಡೆಯು ।
ದಾಲಲಿತ ಶ್ರೀ ಚರಣ ಕಮಲದಲೆಸೆದಳಾ ದೇವಿ ॥

* * *

ತರತರದ ಮಂಟಪದ ಮಧ್ಯದಿ ।
ವರ ಮಹಾ ತೊಳಸಿಯನು ಬಿಜಯಂ ।
ಗೈಸಿ ಭಕ್ತಿಯ ಭಾವ ರಸದಲಿ ನಿಜ ಭಾವ ಶುದ್ಧಿಯಲಿ ॥ ?
ವರ ಸುಗಂಧಾಕ್ಷತೆಯ ಪುಷ್ಪದ ।
ಸುರಭಿ ಘೃತವನು ಧೂಪ ದೀಪಾ ।
ದರದಿ ನೈವೇದ್ಯಗಳ ನರ್ಚಿಸುವುದು ಸುಧಾತ್ಮಜೆಯ ॥
ಮಾಸ ನಾಲ್ಕರೊಳಬುಜ ವದನೆಯ ।
ವಾಸದಲಿ ನೆಲೆಯಾಗಿ ಕಾರ್ತಿಕ ।
ಮಾಸ ಶುದ್ಧವೆನಿಪ್ಪ ದ್ವಾದಶಿ ಪುಣ್ಯಕಾಲದಲಿ ॥

ಕೇಶವನು ವೃಂದಾವನಾಂತನಿ ।
ವಾಸದಲಿ ಕೊಡಿಹನು . . . . ।
ಬೇಸರದೆ ಕ್ಷೀರಾಬ್ಧಿ ಶಯನನ ಪೂಜಿಪುದೆಂದನಾ ಮುನಿಪ (?)
ತನ್ನ ಮೊದಲಲಿ ಸಕಲ ತೀರ್ಥಗ ।
ಳುನ್ನತವು (ನೆಲೆಯಾಗಿ) ನೆಲಸಿಹವು ಚೆಲುವಿನ ।
ಚೆನ್ನ ಮಂಗಳೆ ಮಹಿಮ ಋಷಿಗಳು ದಿವಿಜರೊಡಗೂಡಿ ॥
ಮುನ್ನ ತುದಿಯಲಿ (ಸಕಲ) ವೇದದೆಸೆಯಿಂ ।
. ನ್ನ ವೃತ್ತತಿಸುವುದು ಕೃಷ್ಣನ ।
ಮನ್ನಣೆಯ ನಿಜರಾಣಿಯಾದಳು ತೊಳಸಿ ಕೇಳೆಂದ ॥

End :

ಶಾಸ್ತ್ರವೇನೆಂದರಿಯೆ ಲಕ್ಷಣ । (?)
ಧಾತು ವೇನೆಂದರಿಯೆ ಕಾವ್ಯದ ।
ನೀತಿ ಯೇನೆಂದರಿಯೆ ನಜ್ಞರಿಗಜ್ಞ ತಾನಾಗಿ ॥
ಮಾತನರಿಯೆನು ಗರುಡ ದೇವಸು ।
ಕೇತನನ ಕರುಣದಲಿ ತೊಳಸಿಯ ।
ಖ್ಯಾತಿಯನು ಬಲ್ಲಂತೆ ಹೊಗಳದೆನಚ್ಯುತನ ದಾಸ ।
. . . . ಬೆಳೆಯಲಿ ।
ಕ್ಷಿತಿಯ ವಲ್ಲಭ ಕರುಣ್ಯೆಯಾಗಲಿ ।
ಸತತ ಶ್ರೀಹರಿ ಭಕುತ ಜನಗಳು ಸುಖಿಗಳಾಗಿರಲಿ ॥
(ಪತಿಕರಿಸಿ) ಶ್ರೀತೊಳಸಿ ದೇವಿಯು ।
ಮತಹಲವ ಬಿಟ್ಟೊಲಿದು ಸಲಹುವ ।
ಮತಿಯುತರಿಗಿಷ್ಟಾರ್ಥ ವೀಯಲಿ ವೀರ ನಾರಯಣ ॥
ಮಂಗಳವ ಶ್ರೀಕೃಷ್ಣ ನೀಯಲಿ ।
ಮಂಗಳವ ಶ್ರೀಕೃಷ್ಣ ಕರುಣಿಕೆ ।
ಮಂಗಳವ ಶ್ರೀಕಾಂತ ನೀವನು ಕರುಣ ಭಾವದಲಿ ॥
ಮಂಗಳವ ಲಕ್ಷ್ಮೀಶ ನೀಯಲಿ ।
ಮಂಗಳವ ಲಕ್ಷ್ಮೀಶ ಕರುಣಿಕೆ ।
ಮಂಗಳವ ಶ್ರೀಗರುಡವಾಹನ ಕುಡುವುದನವರತ ॥

Colophon :

ತೊಳಸೀ ಮಾಹಾತ್ಮ್ಯ ಸಮಾಪ್ತಂ.

(ವಿ-ವಿ.)—

ತೊಳಸೀ ಮಾಹಾತ್ಮ್ಯ ಸಮಗ್ರ. ಸ್ವಲ್ಪಮಟ್ಟಿಗೆ ಶಿಥಿಲ. ಅಕ್ಷರಗಳು ಚೆನ್ನಾಗಿವೆ. ತಪ್ಪುಗಳಿವೆ. ಗ್ರಂಥ ಪಾತವುಂಟು. ಕವಿ 'ತೊಳಸಿಯ ಖ್ಯಾತಿಯನು ಬಲ್ಲಂತೆ ಹೊಗಳದ ನಚ್ಯುತನ ದಾಸ' ಎಂದು ಮಾತ್ರ ಹೇಳಿಕೊಂಡಿರುವುದರಿಂದ ಅಚ್ಯುತದಾಸನೆಂದು ಬರೆಯಲಾಗಿದೆ. ಕವಿ ತನ್ನ ಹೆಸರನ್ನು ಎಲ್ಲಿಯೂ ಸ್ಪಷ್ಟವಾಗಿ ಹೇಳಿಲ್ಲ. ಈತನ ಕಾಲವು ಸು 1650 (ಕ್ರಿ. ಶ.) ಇರಬಹುದೆಂದು ಕವಿ ಚರಿತ್ರೆಯಲ್ಲಿ ಹೇಳಿದೆ :

No. 256. ತುಲಾಕಾವೇರೀಮಾಹಾತ್ಮ್ಯೆ.

TULĀKĀVĒRĪMĀHĀTMYE.

Substance, Śrītāla. Size, $10\frac{3}{8} \times 1\frac{5}{16}$ inches. Pages, 207. Lines, 9 on a page. Character, Kanarese. Condition, slightly injured. Appearance, old. Mode of writing, good, but not free from mistakes.

Complete in 30 Adhāyās.

A rendering in prose of the story of Tulākāvērīmāhātmye as found in the Sanskrit Āgnēyapurāṇa; by Caluvāmbike, the wife of Krishṇarāja, who was the son of Kanṭhīravanarasarāja, King of Mysore. She was a daughter of Kāntarāja and the grand daughter of Doddarāja of Kaḷale.

Beginning:

" ಸ್ರಗ್ಧರೆ "

ಲಕ್ಷ್ಮೀನಾರಾಯಣಸ್ಸ್ವಾಮವತು ಚಿರತರಂ ದೇವತಾ ಸಾರ್ವಭೌಮಃ ।
ಶ್ರೀಮಾನ್ವೇದಾಂತ ವೇದ್ಯಃ ಪದನಳಿನಜುಷಾಂ ಕಲ್ಪಶಾಖೀ ಜನಾನಾಂ ॥
ವಾಮಾಂಕೋತ್ತಂಸ ಭೂಷಾವನಿತರ ಸುಲಭಾಮಿಂದಿರಾಮಂಜನಾಭಃ ।
ಪಶ್ಯನ್ಪ್ರೇಮ್ಣಾ ಕಟಾಕ್ಷೈಸ್ಸುಮಶರ ಸದೃಶಶ್ಚಕ್ರ ಶಂಖಾಬ್ಜ ಪಾಣಿಃ ॥

ಶ್ರೀಮದ್ರಾಜಾಧಿರಾಜ ರಾಜಪರಮೇಶ್ವರ ರಾಜಮಾರ್ತಾಂಡ ಪ್ರೌಢ ಪ್ರತಾಪನಪ್ರತಿಮ ವೀರನರಪತಿ ಬಿರುದಂತೆಂಬರಗಂಡ ಶಂಖ ಚಕ್ರ ಮಕರ ಶರಭ ಸಾಳ್ವ ಗಂಡಭೇರುಂಡ ಧರಣಿ ವರಾಹ ಹನುಮದ್ಗರುಡಾಂಕುಶ ಕುಠಾರ ಸಿಂಹ ಮೊದಲಾದ ನಾನಾ ಬಿರುದಾಂಕಿತನಾಗಿ ಯಾದವಕುಲ ತಿಲಕನಾಗಿ ಆತ್ರೇಯ ಗೋತ್ರ ಆಶ್ವಲಾಯನ ಸೂತ್ರಾನುವರ್ತಿತ ಋಕ್ಶಾಖಾ ಧ್ಯಾಯಿಗಳಾದ ವಿನತಾಶೇಷ ದೇಶಾಧೀಶ್ವರ ಕೋಟೀರ ಘಟಿತ ಪದ್ಮರಾಗ ಮಣಿಕಿರಣ ಕಿಂಜಲ್ಕಿತ ಪಾದಾರವಿಂದನಾಗಿ ಸತ್ಯದಲ್ಲಿ ಹರಿಶ್ಚಂದ್ರನಾಗಿ ಸೌಂದರ್ಯದಲ್ಲಿ ಕಮಲಬಾಣನಾಗಿ ಪರಾಕ್ರಮದಲ್ಲಿ ಪರಶುರಾಮನಾಗಿ, ಪ್ರಜಾರಂಜನೆಯಲ್ಲಿ ರಾಮಭದ್ರನಾಗಿ, ನಿಖಿಲ ಗಂಧರ್ವ ವಿದ್ಯಾಧರ ವರ ವರ್ಣನೀಗಣಾಗೀಯಮಾನ ಕೀರ್ತಿ ವಿರಾಜಿತನಾಗಿ ಅನುಸ್ಮೃತ ನಳ ನಹುಷ ಭಗೀರಥ ಮಾಂಧಾತೃ ಯಯಾತಿ ದಿಲೀಪ ದಶರಥ ಚಕ್ರವರ್ತಿಚರಿತ್ರನಾಗಿ ಸಕಲ ಸದ್ಗುಣಾಭರಣ ಭೂಷಿತನಾಗಿ ಸಕಲ ಮಹಾದಾನ ಕರಣ ಚಾತುರೀ ಧುರೀಣನಾಗಿ ನಿಖಿಲಧರ್ಮ ಪ್ರಜಾಸಂರಕ್ಷಣವಿಚಕ್ಷಣನಾಗಿರುವ ಚಿಕದೇವಭೂ ಸಾಮ್ರಾಜ್ಯಾಧಿಪತಿಗೆ ಪೌತ್ರನಾಗಿ ಸಂಗ್ರಾಮದಲ್ಲಿ ಸುಭದ್ರಾ ವಲ್ಲಭನಾಗಿ ತೇಜಸ್ಸಿನಲ್ಲಿ ಸೂರ್ಯನಾಗಿ ಆಹ್ಲಾದಕರಣದಲ್ಲಿ ಪೂರ್ಣಚಂದ್ರನಾಗಿರುವ ರಣಕಂಠೀರವನರಸರಾಜ ಧರಣಿಪಾಲನಿಗೆ ಪುತ್ರನಾಗಿ ನಿಖಿಲ ವಿಬುಧ ಜೇಗೀಯಮಾನ ನಿರುಪಮ ಗುಣರತ್ನಾಕರನಾಗಿ ದಾನಕ್ಷಾತ್ರಾಧಿಶ್ವರನಾಗಿ ಸೌಶೀಲ್ಯ ವಾತ್ಸಲ್ಯ ಸೌಜನ್ಯ ಸತ್ಯವ್ರತ ಸಂಪನ್ನನಾಗಿ ಧೈರ್ಯ ಸ್ಥೈರ್ಯ ಶೌರ್ಯೋದಾರ್ಯ ಗಾಂಭೀರ್ಯ ಶಾಲಿಯಾಗಿ ನಿಖಿಲ ದೇವತಾ ದ್ವಿಜ ಪೂಜಾಧುರಂಧುರನಾಗಿ ಸೌಂದರ್ಯ ಜಿತ ಕಮಲಸಾಯಕನಾಗಿ ಅಂಗ ವಂಗ ಕಳಿಂಗ ಕಾಶ್ಮೀರಕೇರಳ ಚೋಳ ಪಾಂಡ್ಯ ಸೌವೀರ ಗುರ್ಜರ ನೇಪಾಳ ಸೌರಾಷ್ಟ್ರಾದಿ ಸಕಲ ದೇಶ ಸಮಾಗತ ನರಪತಿ ಕಿರೀಟ ನವರತ್ನ ಪ್ರಭಾ ನೀರಾಜಿತ ಚರಣ ರಾಜೀವನಾಗಿ ಸಕಲ ಜನ ಸಂರಕ್ಷಣಾರ್ಥವಾಗಿ ಅವತರಿಸಿದ ಶ್ರೀಕೃಷ ನೋಪಾದಿಯಲ್ಲಿರುವ ಶ್ರೀಕೃಷ

ಮಹಾ ರಾಜಾಧಿರಾಜ ಮಹೀ ಮಹೇಂದ್ರನಿಗೆ ಧರ್ಮಕಾಂತೆಯಾಗಿ ಪತಿ ದೇವತಾ ವ್ರತದಲ್ಲಿ ವಿದೇಹರಾಜ ನಂದಿನಿಯಾಗಿ ಭಕ್ತಿಯಲ್ಲಿ ಶಬರಿಯಾಗಿ ಪಾವನ ಚರಿತ್ರದಲ್ಲಿ ಭಾಗೀರಥಿಯಾಗಿ ಆಶ್ರಿತ ಮನೋರಥ ವಿತರಣದಲ್ಲಿ ಮಹಾಲಕ್ಷ್ಮಿಯಾಗಿ ಸೇನಾಧ್ಯಕ್ಷ ಕಳಲೆ ದೊಡ್ಡ ಮಹಾ ರಾಜನಿಗೆ ಪೌತ್ರಿಯಾಗಿ ಕಾಂತಮಹಾರಾಜನಿಗೆ ಪುತ್ರಿಯಾಗಿರುವ ಚೆಲುವಾಂಬಿಕೆಯು ಕರ್ಣಾಟಕ ಭಾಷೆಯಿಂದ ವಿರಚಿಸಿದ ಆಗ್ನೇಯ ಪುರಾಣೋಕ್ತವಾದ ತುಲಾಕಾವೇರೀ ಮಾಹಾತ್ಮ್ಯದ ಅರ್ಥಕ್ಕೆ ಮಂಗಳ ಮಹಾ.

ಪೂರ್ವದಲ್ಲಿ ನೈಮಿಷಾರಣ್ಯವಾಸಿಗಳಾದ ಶೌನಕಾದಿ ಮಹಾ ಋಷಿಗಳು ಕೃತಾಗ್ನಿ ಹೋತ್ರರಾಗಿ ಬ್ರಹ್ಮನಿಷ್ಠಾಗರಿಷ್ಠರಾಗಿ ಸಕಲ ವೇದ ವೇದಾಂತಗಳನ್ನು ತಿಳಿದವರಲ್ಲಿ ಶ್ರೇಷ್ಠರಾಗಿ ವಿಷ್ಣುಕಥಾಮೃತಾಸ್ವಾದನ ಲಾಲಸರಾಗಿ ಪರಮದಯಾಳುವಾಗಿರುವ ಸೂತಪೌರಾಣಿಕರನ್ನು ಕುರಿತು ಪ್ರಶ್ನೆಮಾಡಿದರು ಬನ್ನಿರೈ ! ಮಹಾತ್ಮರಾದ ಸೂತಪೌರಾಣಿಕರೆ ! ಸಕಲ ಧರ್ಮಗಳು ಸಕಲ ಕ್ಷೇತ್ರ ಮಾಹಾತ್ಮ್ಯೆಗಳು ಸಕಲ ದೇವತಾ ಪ್ರಭಾವಗಳು ಮೊದಲಾದ ಪುಣ್ಯ ಕಥೆಗಳನ್ನು ಕೇಳಿ ಕೃತಾರ್ಥರಾದೆವು. ಈಗ ತುಲಾ ಕಾವೇರೀ ಮಾಹಾತ್ಮ್ಯವನ್ನು ನಿರೂಪಿಸಬೇಕೆಂದು ಕೇಳಲಾಗಿ ಸೂತ ಪೌರಾಣಿಕರು ಇಂತೆಂದರು.

* * * *

ಸಕಲ ಧರ್ಮಗಳಲ್ಲಿಯೂ ತುಲಾ ವೈಶಾಖ ಮಾಸಗಳಲ್ಲಿ ಅಧಿಕ್ಯವು. ಬನ್ನಿರೈ ! ಮುನಿಶ್ರೇಷ್ಠರಾದ ಬ್ರಾಹ್ಮಣರುಗಳಿರ ! ಇದಕ್ಕೆ ದೇವತೆ ಯಾವುದು ಧ್ಯಾನವಾವುದು. ಸಕಲವನ್ನೂ ವಿಸ್ತಾರವಾಗಿ ನನಗೋಸ್ಕರ ಹೇಳಬೇಕೆಂದು ಹರಿಶ್ಚಂದ್ರ ಮಹಾರಾಯನು ನಾರದಾಗಸ್ತ್ಯರನ್ನು ಕುರಿತು ಪ್ರಶ್ನೆಮಾಡಿದನು ಎಂದು ಸೂತ ಪೌರಾಣಿಕರು ಶೌನಕಾದಿ ಮಹಾ ಋಷೀಶ್ವರರಿಗೆ ನಿರೂಪಿಸಿದ ಸ್ಥಳದಲ್ಲಿ,

Colophon :

ಶ್ರೀಮದ್ರಾಜಾಧಿರಾಜ ರಾಜಪರಮೇಶ್ವರ ರಾಜಮಾರ್ತಾಂಡ ಪ್ರೌಢಪ್ರತಾಪ ಅಪ್ರತಿಮ ವೀರನರಪತಿ ಬಿರುದಂತೆಂಬರಗಂಡ ಶಂಖ ಚಕ್ರ ಮಕರ ಶರಭ ಸಾಳ್ವ ಗಂಡಭೇರುಂಡ ಧರಣಿವರಾಹ ಹನುಮದ್ಗರುಡಾಂಕುಶ ಕುಠಾರ ಸಿಂಹ ಮೊದಲಾದ ನಾನಾ ಬಿರುದಾಂಕಿತನಾಗಿ, ಆತ್ರೇಯಗೋತ್ರದ ಆಶ್ವಲಾಯನ ಸೂತ್ರದ ಅನುವರ್ತಿತ ಋಕ್ಶಾಖಾಧ್ಯಾಯಿಗಳಾದ ಶ್ರೀ ಚಿಕದೇವ ಭೂಪನಿಗೆ ಪೌತ್ರನಾಗಿ ರಣ ಕಂಠೀರವ ನರಸರಾಜ ಭೂಪಾಲನಿಗೆ ಪುತ್ರನಾಗಿರುವ ಕೃಷ್ಣ ಮಹಾರಾಜಾಧಿರಾಜ ಮಹೀ ಮಹೇಂದ್ರನಿಗೆ ಧರ್ಮಕಾಂತೆಯಾಗಿ ಸೇನಾಧಿನಾಥ ಕಳಲೆ ದೊಡ್ಡ ಮಹಾರಾಜನಿಗೆ ಪೌತ್ರಿಯಾಗಿ ಕಾಂತ ಭೂಕಾಂತನಿಗೆ ಪುತ್ರಿಯಾಗಿರುವ ಚಲುವಾಂಬಿಕೆಯಿಂದ ಕರ್ಣಾಟಕ ಭಾಷಾರೂಪವಾಗಿ ವಿರಚಿತವಾದ ಚಲುವಾಂಬಿಕಾವಾಣೀ ವಿಲಾಸದಲ್ಲಿ ಆಗ್ನೇಯ ಪುರಾಣೋಕ್ತವಾದ ತುಲಾ ಕಾವೇರೀ ಮಾಹಾತ್ಮ್ಯೆಯಲ್ಲಿ ಪ್ರಥಮಾಧ್ಯಾಯಂ.

ಮತ್ತು ದಾಲ್ಭ್ಯ ಮಹಾ ಋಷೀಶ್ವರರು ಧರ್ಮವರ್ಮರಾಯನನ್ನು ಕುರಿತಿಂತೆಂದರು.

End :

ಶ್ರೀಮನ್ನಾರಾಯಣನ ಕಥಾಶ್ರವಣದಲ್ಲಿ ಕುತೂಹಲವುಳ್ಳವರಾಗಿ ಮುಮುಕ್ಷುಗಳಾಗಿರುವ ಶೌನಕಾದಿ ಮಹಾ ಋಷಿಗಳು ಗಂಧಾಕ್ಷತೆ ಪುಷ್ಪಾದಿಗಳಿಂದ ಸೂತಪುರಾಣಿಕರನ್ನು ಪುನಃ ಆರಾಧನೆಮಾಡಿದರು ಎಂದು ;

Colophon:

ಶ್ರೀಮದ್ರಾಜಾಧಿರಾಜ ರಾಜಪರಮೇಶ್ವರ ರಾಜಮಾರ್ತಾಂಡ ಪ್ರೌಢಪ್ರತಾಪ ಅಪ್ರತಿಮ ವೀರನರಪತಿ ಬಿರುದಂತೆಂಬರಗಂಡ ಶಂಖ ಚಕ್ರ ಮಕರ ಮತ್ಸ್ಯ ಶರಭ ಸಾಳ್ವ ಗಂಡಭೇರುಂಡ ಧರಣಿ ವರಾಹ ಹನುಮದ್ಗರುಡಾಂಕುಶ ಕುಠಾರ ಸಿಂಹ ಮೊದಲಾದ ನಾನಾ ಬಿರುದಾಂಕಿತನಾಗಿರುವ ಶ್ರೀಕೃಷ್ಣರಾಜ ಮಹೀ ಮಹೇಂದ್ರನಿಗೆ ಧರ್ಮಕಾಂತೆಯಾಗಿ ಸೇನಾಧಿನಾಥ ಕಳಲೆ ದೊಡ್ಡ ಮಹಾರಾಜನಿಗೆ ಪೌತ್ರಿಯಾಗಿ ಕಾಂತ ಭೂಕಾಂತನಿಗೆ ಪುತ್ರಿಯಾಗಿರುವ ಚಲುವಾಂಬಿಕೆಯಿಂದ ಕರ್ಣಾಟಕ ಭಾಷಾರೂಪವಾಗಿ ವಿರಚಿತ ಆಗ್ನೇಯ ಪುರಾಣೋಕ್ತವಾದ ತುಲಾ ಕಾವೇರೀ ಮಹಿಮೆಯಲ್ಲಿ ಚಲುವಾಂಬಿಕಾವಾಣೀ ವಿಲಾಸದಲ್ಲಿ ಮೂವತ್ತನೆಯ ಅಧ್ಯಾಯಕ್ಕೆ ಮಂಗಳ ಮಹಾ.

(ವಿ-ವಿ.)—

ತುಲಾ ಕಾವೇರೀ ಮಾಹಾತ್ಮ್ಯ ಸಮಗ್ರ. ಸ್ವಲ್ಪ ಶಿಥಿಲ. ಲಿಪಿ ಉತ್ತಮ. ತಪ್ಪುಗಳು ಇಲ್ಲವೆನ್ನಬಹುದು. ಕಬ್ಬಿಗಿತಿ ಚಲುವಾಂಬಿಕೆ. ಗ್ರಂಥದ ಕಡೆಯ ಒಂಭತ್ತು ಓಲೆಗಳಲ್ಲಿ ಆಶ್ವಾಸಾಂತ್ಯಗಳ ಕೆಲವು ಗದ್ಯಗಳಿವೆ. ಉಳಿದ ವಿಷಯಗಳನ್ನು ಮೇಲೆ ಉದಾಹೃತವಾಗಿರುವ ಗದ್ಯಭಾಗಗಳಿಂದ ನೋಡಿ ತಿಳಿಯುವುದು.

No. 257. ಪಶ್ಚಿಮರಂಗಧಾಮ ಮಾಹಾತ್ಮ್ಯ- PAŚCIMARAṄGADHĀMAMĀHĀTMYE.

Substance, palm-leaf. Size, 11¾ × 1⅛ inches. Pages, 64. Lines, 5 on a page. Character, Kanarese. Condition, very much injured. Appearance, old.

Begins on fol. 115*a*. The other works herein are;—Paścima raṅgasvāmisāṅgatya 1*a*. (2) Paścimaraṅgasvāmi Kakārādisāṅgatya 20*a*. (3) Raṅgadhāmastutisāṅgatya 37*a*. (4) Śṛṅgāraśatakadasāṅgatya 53*a*. (5) Puruṣavirahsāṅgatya 68*a*. (6) Nītiśatakadasāṅgatya 87*a*. (7) Citraśatakasāṅgatya 100*a*. (8) Raṅgasvāmivaśṛṅgārasūtragaḷu 147*a*.

Complete.

A poem in the sāṅgatya metre describing the story of Paścimaraṅgadhāmamāhātmye of the Sanskrit Brahmāṇḍapurāṇa by Cikkupādhyāya. The place Paścimaraṅga or Srīrangapaṭṭana is near Mysore, on the banks of the river, Kāvēri.

Beginning:

ಶ್ರೀಮದಬ್ಜೋದ್ಭವ ಭವ ಮುಖ್ಯ ವಿಬುಧ ।
ಸ್ತೋಮ ವಂದಿತ ಪಾದಪದ್ಮ ॥
ಕಾಮಜನಕ ಕರಿವರದ ರಕ್ಷಿಸು ರಂಗ ।
ಧಾಮ . . . . ॥

* * *

ಇದು ವೀರ ಚಿಕದೇವ ರಾಜೇಂದ್ರನ ಕಾರ್ಯ ।
ವಿದ ಚಿಕ್ಕು ಪಾಧ್ಯಾಯ ಮಂತ್ರಿ ॥
ಮುದದಿ ಪೇಳ್ದ ಪಶ್ಚಿಮರಂಗ ಮಹಾ ।
ತ್ಮ್ಯ ದೊಳದು(ಮೊದಲನೆ) ಸಂಧಿ ॥

Colophon:

ಮೊದಲನೆಯ ಸಂಧಿ ಸಮಾಪ್ತಂ.

ಸೂ ॥ ವರಗೋದಾವರಿಯಿಂದ ಕಾವೇರಿಗೆ ।
ಭರದಿ ಬಂದನು ಗೌತಮನು ॥

* * *

ಸರಸಿಜೋದ್ಭವನ ಸ್ತೋತ್ರಕೆ ಮೆಚ್ಚಿ ರಂಗೇಶ ।
ನುರುತರ ಕಾರುಣ್ಯದಿಂದ ॥
ತರುಣ ನಿನಗೆ ತಪವೇನು ನಿಮಿತ್ತ ಗೋ ।
ಚರಿಸಿದು ದಭಿಲಾಷೆಯೇನು ॥
ಎಂದು ಕೇಳದ ರಂಗನಾಥನ ಮಹಿಮೆಗಾ ।
ನಂದದಿಂದಾಪರಮೇಷ್ಠಿ ॥
ಎಂದನು ದಿವ್ಯವಿಮಾನವೆರಸಿ ನೀ ।
ಬಂದೆನ್ನ ಸತ್ಯಲೋಕದೊಳು ॥
ವಾಸವಾಗಿರು ದಿವ್ಯಮೂರುತಿಸಹಿತವೆಂ ।
ದಾಸರಸಿಜ ಸೂನು ಪೇಟೆ ॥
ಶ್ರೀಸತಿಯಾಣ್ಮನಾತನ ಭಕ್ತಿಗೆ ಸಂ ।
ತೋಷದಿಂ ಕೃಪೆಯೊದ ನಂದು ॥

End:

ಶ್ರೀಪುರುಕುತ್ಸ ಯಜುರ್ವೇದ ವೇದಿಯಾ ।
ಲಾಪಸ್ತಂಭ ಸೂತ್ರನನು ॥
ಶ್ರೀಪುಣ್ಯಚರಿತವ ಚಿಕ್ಕುಪಾಧ್ಯಾಯ ಲ ।
ಕ್ಷ್ಮೀಪತಿಯುಸಿರ್ದನಟಿಬ್ರಿಯೊಳು ॥
ಇದು ವೀರ ಚಿಕದೇವರಾಜೇಂದ್ರನ ಕಾರ್ಯ ।
ವಿದ ಚಿಕ್ಕುಪಾಧ್ಯಾಯ ಮಂತ್ರಿ ॥

ಮುದದಿ ಪೇಳಿದ ಪಶ್ಚಿಮರಂಗ ಮಾಹಾ ।
ತ್ಮ್ಯದೊಳದೈದನೆಯ ಸಂಧಿ ॥
ಶ್ರೀ ಪಶ್ಚಿಮರಂಗರಾಜ ಚಾರಿತ್ರಮ ।
ನೇಪೊಟ್ಟಿಂ ಹರಿಯನೆ ಭಜಿಪ ॥
ಶ್ರೀಪತಿ ಪದಪದ್ಮಭೃಂಗ ಚೆಲ್ವನು ಲ ।
ಕ್ಷ್ಮೀಪತಿಯೊರೆಯೆ ಬರೆದೆನು ॥

Colophon:

ಅಂತು ಸಂಧಿ ೫ಕ್ಕಂ ಪದನು ೩೧೭ಕ್ಕಂ ಮಂಗಳಂ.

(ವಿ.ವಿ.)—

ಇದು ಸಾಂಗತ್ಯ ರೂಪವಾದುದು. ಇದರಲ್ಲಿ ಬ್ರಹ್ಮಾಂಡಪುರಾಣದೊಳಗಣ ಶಂಕರನಾರದ ಸಂವಾದ ರೂಪವಾದ ಶ್ರೀರಂಗಪಟ್ಟಣದ ಮಾಹಾತ್ಮ್ಯವು ಹೇಳದೆ. ಗ್ರಂಥಾದಿಯಲ್ಲಿ ವರದರಾಜ ಸ್ತುತಿಯಿದೆ. ಅನಂತರ ಕವಿ ರಂಗನಾಯಕಿ, ಅನಂತ, ಗರುಡ, ವಿಷ್ವಕ್ಸೇನ, 12 ಆಳ್ವಾರುಗಳು, ರಾಮಾನುಜ, ಕಡಾಂಬಿ, ಸಿಂಗರಾಚಾರ್ಯ ಇವರುಗಳನ್ನು ಸ್ಮರಿಸಿದ್ದಾನೆ. ಗ್ರಂಥಕರ್ತ, ಚಿಕ್ಕುಪಾಧ್ಯಾಯ.

219 ನೆಯನಂಬರಿನಲ್ಲಿ ನೋಡಿ ತಿಳಿಯುವುದು.

No. 258. ಪಶ್ಚಿಮರಂಗಮಾಹಾತ್ಮ್ಯ (ಟೀಕೆ). PAŚCIMARANGAMĀHĀTMYE ṬĪKE.

Substance, palm-leaf. Size, 12½ × 5 inches. Pages, 98. Lines, 4 on a page. Character, Kanarese. Condition, injured. Appearance, old.

Begins on fol. 9. The other work herein is.—Padmapurāṇa.

Contains the Adhyāyas 1 to 4 complete, and 5th incomplete.

Similar to the above, written in prose. The name of the author is not given.

Beginning:

ಪೂರ್ವದಲ್ಲಿ ನೈಮಿಷಾರಣ್ಯದಲ್ಲಿ ದ್ವಾದಶವಾರ್ಷಿಕ ಯಾಗವನ್ನು ಮಾಡುತ್ತಿರಲಾಗಿ ಅಲ್ಲಿಗೆ ಸರ್ವ ಶಾಸ್ತ್ರಾರ್ಥ ತತ್ವಜ್ಞರಾಗಿ, ಜಿತೇಂದ್ರಿಯರಾಗಿ ಸಮಸ್ತ ಪ್ರಾಣಿಗಳಲ್ಲಿಯೂ ದಯೆಯುಳ್ಳವರಾಗಿ ಜಟಾವಲ್ಕಲಧಾರಿಗಳಾಗಿ ಇರುವ ಸೂತಪೌರಾಣಿಕರು ಸಕಲ ದೇಶಗಳ ತೀರ್ಥಯಾತ್ರೆಯನ್ನೂ ಮಾಡಿಕೊಂಡು ಬಂದಾನೊಂದು ದಿನದಲ್ಲಿ ಆ ಯಜ್ಞಶಾಲೆಗೆ ಬಂದರು ಆ ಯಜ್ಞಶಾಲೆಯಲ್ಲಿರುವಂಥ ವಿಷ್ಣು, ವಿಶಾಲಾಕ್ಷ, ವತ್ಸ, ಕೌಂಡಿನ, ಆರುಣಿ, ಜಾಬಾಲಿ, ಜಮದಗ್ನಿ, ಭಾರದ್ವಾಜ, ಬೋಧಾಯನ, ಉದ್ದಾಲಕ, ಶೌನಕ, ಕೌಶಿಕ, ಭಾರ್ಗವ, ಶ್ವೇತಬಾಹು, ಕಣ್ವರು ಮೊದಲಾದ ಮಹರ್ಷಿಗಳಿಗೆ ನಮಸ್ಕಾರವನ್ನು ಮಾಡಿ ಸತ್ಕಥಾಸಲ್ಲಾಪದಿಂದ ಕುಳಿತಿರುವಸಮಯದಲ್ಲಿ ಆ ಋಷಿಗಳೆಲ್ಲರೂ ಸೂತಪೌರಾಣಿಕರನ್ನು ಬಹುವಿಧದಲ್ಲಿ ಸ್ತೋತ್ರಮಾಡಿ ನಮಗೆ ಪುರಾಣಕಥೆಗಳನ್ನು ಪೇಟು ಯೆಂದು ಪ್ರಾರ್ಥಿಸಲಾಗಿ, ಆನಂದಯುಕ್ತರಾಗಿ ಸೂತಪೌರಾಣಿಕರು ಆ ಪ್ರಕಾರದಲ್ಲಿಯೇ ನಿರೂಪಿಸುತ್ತಲಿದ್ದಾರೆ ;

ಬ್ರಹ್ಮಾಂಡ ಪುರಾಣ, ಪದ್ಮಪುರಾಣ, ವಿಷ್ಣುಪುರಾಣ, ಶೈವಪುರಾಣ, ಭಾಗವತ, ಭವಿಷ್ಯತ್ಪುರಾಣ, ನಾರದೀಯ ಪುರಾಣ, ಮಾರ್ಕಂಡೇಯ ಪುರಾಣ, ಆಗ್ನೇಯ ಪುರಾಣ, ಬ್ರಹ್ಮವೈವರ್ತ ಪುರಾಣ, ಲಿಂಗ ಪುರಾಣ, ವರಾಹ ಪುರಾಣ, ಸ್ಕಾಂದ ಪುರಾಣ, ವಾಮನ ಪುರಾಣ, ಕೂರ್ಮ ಪುರಾಣ, ಮತ್ಸ್ಯಪುರಾಣ, ಗರುಡ ಪುರಾಣ, ಬ್ರಾಹ್ಮ ಪುರಾಣಗಳೆಂದು ಅಷ್ಟಾದಶ ಪುರಾಣಗಳು ಹೇಳಲ್ಪಟ್ಟವು. ಈ ಅಷ್ಟಾದಶ ಪುರಾಣಗಳಲ್ಲಿಯೂ, ಬ್ರಹ್ಮಾಂಡ ಪುರಾಣವು ಪುಣ್ಯದೇಶ, ಪುಣ್ಯನದಿ, ಪುಣ್ಯಕ್ಷೇತ್ರಗಳ ಮಾಹಾತ್ಮ್ಯವನ್ನು ಪ್ರತಿಪಾದಿಸುವಂಥದಾದ ಕಾರಣ ಸಮಸ್ತರಿಗೂ ಅಪೇಕ್ಷಿತವಾಗಿರುವುದು. ಈ ಪುರಾಣದಲ್ಲಿ ಪೂರ್ವಾರ್ಧ್ಯಾಯಗಳಲ್ಲಿ ನಾರದಮುನೀಶ್ವರನು ಪರಮೇಶ್ವರನಿಂದ ಪುಣ್ಯನದಿ, ಪುಣ್ಯಕ್ಷೇತ್ರಗಳ ಮಾಹಾತ್ಮ್ಯಗಳನ್ನು ಕೇಳಿ ತೃಪ್ತಿಯಿಲ್ಲದೆ ರಂಗಕ್ಷೇತ್ರಗಳ ಮಾಹಾತ್ಮ್ಯಗಳನ್ನು ಕೇಳಬೇಕೆಂಬ ಇಚ್ಛೆಯಿಂದ ಪರಮೇಶ್ವರನನ್ನು ಕುರಿತು ಬಿನ್ನಹಮಾಡುತ್ತಲಿದ್ದಾನೆ.

*　　*　　*　　*

ಒಂದಾನೊಂದು ದಿನ ಈ ಕ್ಷೇತ್ರವು ಮಹಾಜ್ಞಾನಪ್ರದವಾಗಿರುವಂಥಾದ್ದು. ಇಲ್ಲಿಗೆ ದೈವಾಧೀನದಿಂದ ಬಂದೆವು. ಇಲ್ಲಿಯೇ ವಾಸಮಾಡಿಕೊಂಡಿರಬೇಕೆಂದು ನಿರ್ಣೈಸಿ ಬಹು ಸಂತೋಷಯುಕ್ತರಾಗಿ, ಅಲ್ಲಿ ಮೊದಲೆ ತಪಸ್ಸುಮಾಡಿಕೊಂಡಿರುವಂಥ ಶಂಬು ಋಷೀಶ್ವರನು, ಬೋಧಾಯನ ರುಷೀಶ್ವರನು, ಭೃಗು ರುಷೀಶ್ವರನು, ಸತಿಯೆಂಬ ರುಷೀಶ್ವರನು, ಪರಾಶರ ಋಷೀಶ್ವರನು, ಶುಕ ಋಷೀಶ್ವರನು, ಚಂದ್ರ ಋಷೀಶ್ವರನು ಇವರೇ ಮೊದಲಾದ ಮಹರ್ಷಿಗಳೊಡನೆ ಸತ್ಕಥಾಸಲ್ಲಾಪದಿಂದ ಪುರಾಣಪುಣ್ಯ ಕಥೆಗಳನ್ನು ಹೇಳಿಕೊಂಡು ಕಾವೇರಿಯನ್ನು ಕುರಿತು ಉಗ್ರವಾದ ತಪಸ್ಸುಮಾಡಿ [ಪಶ್ಚಿಮವಾಹಿನಿಯಾಗಿ ಪ್ರವಾಸವನ್ನು ಮಾಡಿ] ಆ ಪಶ್ಚಿಮವಾಹಿನಿಯ ತೀರದಲ್ಲಿ ಆಶ್ರಮವನ್ನು ಮಾಡಿಕೊಂಡು ಸುಖದಲ್ಲಿ ಶಿಷ್ಯರುಗಳು ಸಹವಾಗಿ ಇದ್ದರು. ಇದೀಗ ಗೋದಾವರೀ ನದೀ ತೀರದಿಂದ ಗೂಢವಾದಂಥ ಪಶ್ಚಿಮ ರಂಗಕ್ಷೇತ್ರಕ್ಕೆ ಗೌತಮ ರುಷೀಶ್ವರನು ಬಂದ ವೃತ್ತಾಂತವೆಂದು ನಾರದ ರುಷೀಶ್ವರನನ್ನು ಕುರಿತು ಪರಮೇಶ್ವರನು ನಿರೂಪಿಸಿದನು.

Colophon:

ಇದು ಬ್ರಹ್ಮಾಂಡ ಪುರಾಣದ ಪಶ್ಚಿಮರಂಗ ಮಾಹಾತ್ಮ್ಯೆಯಲ್ಲಿ ಮೊದಲನೆಯ
ಅಧ್ಯಾಯವು.

ಈ ಬಗೆಯಲ್ಲಿ ಪೂರ್ವಾರ್ಧ್ಯಾಯವನ್ನು ಕೇಳಿ ನಾರದಮುನೀಶ್ವರನು ರುದ್ರನಂ ಕುರಿತು ಬಂದು ಮಾತಾಡುತ್ತಲಿದ್ದಾನೆ. ಬಿನ್ನಿರೈ ! ತ್ರಿಲೋಚನನಾದಂಥ ಪರಮೇಶ್ವರನೆ ! ಗೌತಮ ರುಷೀಶ್ವರನು ಆಶ್ಚರ್ಯಕರವಾದ, ಗೂಢವಾದ, ಪಶ್ಚಿಮ ರಂಗಸ್ಥಾನವನ್ನು ಎಯ್ದಿದ ವೃತ್ತಾಂತ ಶ್ರವಣದಿಂದೆನ್ನ ಕಿವಿಗಳು ಧನ್ಯವಾದುವು.

End:

ಸರ್ವಾಭೀಷ್ಟಪ್ರದವಾದಂಥ ಗೌತಮ ಕ್ಷೇತ್ರದ ಪಶ್ಚಿಮ ರಂಗನಾಥಸ್ವಾಮಿಯವರ ಮಾಹಾತ್ಮ್ಯವನ್ನು ಆರು ಭಕ್ತಿಯಿಂದ ಕೇಳುತ್ತಲಿದ್ದಾರೋ, ಅವರೆಲ್ಲರಿಗೂ ಸಮಸ್ತಭಯ ನಿವಾರಣವಾಗುವುದು. ಸರ್ವಾಭೀಷ್ಟವು ಕೈಸೇರುವುದು. ಈ ಪಶ್ಚಿಮರಂಗನಾಥ ಸ್ವಾಮಿಯವರ ಮಾಹಾತ್ಮ್ಯವನ್ನು ಆರು ಒಂದು ಅಕ್ಷರವ ಕೇಳುತ್ತಲಿದ್ದಾರೋ, ಓದುತ್ತಲಿದ್ದಾರೋ, ಅವರಿಗೆ ಜ್ಯೋತಿಷ್ಟೋಮಯಾಗದ ಫಲ . . . .

(ವಿ-ವಿ.)—

ಇದರಲ್ಲಿ 1 ರಿಂದ ೪ ಅಧ್ಯಾಯಗಳು ಸಮಗ್ರ. ೫ ನೆಯದು ಅಸಮಗ್ರ. ಹಿಂದಿನ ನಂಬರಿನ ವರ್ಣನಾ ವಿಷಯವೇ ಇದಕ್ಕೂ ವಿಷಯವಾದುದು. ಶಿಥಿಲ. ಕವಿ ಇತ್ಯಾದಿ ವಿಷಯ ಗಳೊಂದೂ ಈ ಗ್ರಂಥದಿಂದ ತಿಳಿದುಬರುವುದಿಲ್ಲ.

No. 259 ಭದ್ರಗಿರಿ ಮಾಹಾತ್ಮ್ಯೆ.
BHADRAGIRĪMĀHĀTMYE.

Substance, Śrītāla. Size, $10\frac{1}{4} \times 2\frac{1}{8}$ inches. Pages, 190. Lines, 8 on a page. Character, Kanarese. Condition, much injured. Appearance, old.

Complete.

A rendering in prose of the Sanskrit Bhadragirimāhātmye forming part of the Brahmāṇḍapurāṇa by Kaḷale Nañjarāja.

Beginning:

॥ ಶ್ಲೋಕ ॥

ವಂದೇಹಂ ಗಿರಿಜಾಸೂನುಂ | ಗಿರಿಜಾಂ ಗಿರಿಜಾಪತಿಂ ॥
ಲಕ್ಷ್ಮೀಂ ಲಕ್ಷ್ಮೀಪತಿಂ ವಾಣೀಂ । ವಾಣೀಶಂಚ ಗುರೂನ್ ಶ್ರಿಯೈ ॥
ಮಂಗಳವನೆ ಮಗೀವುದಿಂದುತ ॥

ರಂಗಿಣೀಧರ ವೃಷಭರಾಜ ತು ।
ರಂಗ ಜಿತಸಾರಂಗದಾನವ ಸರ್ವಮಂಗಳೆಯು ॥

ತುಂಗ ಕುಚಗಳ ಕುಂಕುಮಾಂಕಿತ ।
ಮಂಗಳಾಂಗ ಮಹೇಶ ಪರಶು ಕು ।
ರಂಗ ವರದಾಭಯಕರಾಬ್ಜ ಸುಮೇರುಕೋದಂಡ ॥

*   *   *   *

ಪೂರ್ವದಲ್ಲಿ ಸರ್ವಸುಜನ ಮನೋಹರವಾದ ನೈಮಿಷಾರಣ್ಯದಲ್ಲಿ ಭಕ್ತಿಜ್ಞಾನ . . . . ನಿಗಮಾಗಮೋದಿತ ಸತ್ಕರ್ಮಾನುಷ್ಠಾನವಿಶ್ವರಾರಾಧ . . . .

*   *   *   *

ದೇವಮುನಿಯಾದ ನಾರದನಿಂದ ಕೇಳಲ್ಪಟ್ಟ ಈ ಸಕಲ ವೃತ್ತಾಂತಮಂ ಬ್ರಹ್ಮದೇವಂ ಕೇಳಿ ಕುಮಾರನಾದ ನಾರದನಂ ಶಿರದೊಳಾಘ್ರಾಣಿಸಿ ಬಾಹುಗಳಿಂದಡಿಗಡಿಗೆ ಪ್ರೀತಿಯಿಂದ ತಕ್ಕೈಸಿ ದನು. ಲೋಕಕ್ಕೆ ಪಿತಾಮಹನಾದ, ಪ್ರೀತಿಯಿಂದಾರ್ದ್ರಚಿತ್ತವುಳ್ಳ ತಂದೆಯಿಂದ ದೃಢವಾಗಿ ಆಲಿಂಗಿಸಲ್ಪಟ್ಟ ದೇವರ್ಷಿಯಾದ ನಾರದನು ಆನಂದ ಸಮುದ್ರದಲ್ಲಿ ಅತಿಶಯವಾಗಿ ಮುಳುಗಿದ ವನಾಗಿ ತಿರುಗಿ ಬ್ರಹ್ಮನಂ ಕುರಿತು ನುಡಿದನು.

Colophon:

ಇಂತು ಮಹಿಶೂರ ಸೇನಾಪತಿ ಕಳಲೆ ದೊಡ್ಡಮಹಾ(ರಾಜ)ಸುತ ವಿಬುಧನುತ ವೀರಧರಣೀಪತಿ ಸುತ ನಂಜರಾಜ ವಿರಚಿತವಾದ ಬ್ರಹ್ಮಾಂಡ ಪುರಾಣದೊಳ್ ಬ್ರಹ್ಮನಾರದ ವಿವಾದವಾದ ಬದರಿರಾಚಲಮಾಹಾತ್ಮ್ಯಗೆ, ಕರ್ಣಾಟಕಭಾಷೆಯಿಂದ ವಿರಚಿಸಿದ ನಂಜರಾಜ ವಾಣೀ ವಿಲಾಸವೆಂಬ ಟೀಕೆಯಲ್ಲಿ ಕ್ಷೇತ್ರವರ್ಣನೆಯೆಂದು ಪ್ರಥಮಾಧ್ಯಾಯದರ್ಥ.

ಸೂತವಚನ.—ಎಲೈ ! ತಂದೆಯೆ ! ಸ್ಥಾವರಜಂಗಮಾತ್ಮಕವಾದ ಸಕಲ ಜಗತ್ತನ್ನು ನಾನು ಬ . ಒಂದು ಸಾರಿಯಾದರೂ ನಾನರಿಯದ ಆದ್ಯಂತಂಗಳಿಲ್ಲ. ಇದಾದರೆ ಮಹಾಶ್ಚರ್ಯವು. ಎನ್ನಿಂದ ಯಾವ ಗೌ . . . ನು, ಯಾವುದಾನೊಂದು ಪರ್ವತವು, ಸರೋವರವು, ಮಹತ್ತಾದ ವನವು ನೋಡಲ್ಪಟ್ಟುವು.

End:

ಆ ಮುದ್ಗಲೋಕ್ಷಾಯಣರು ಪರಮೇಶ್ವರನೇ ಆತ್ಮನೆಂದು ತಿಳಿದು, ಅಜ್ಞಾನವಮಂ ಬಿಟ್ಟು ಅಕ್ಷಯವಾದ ಸುಖವಂ ಪಡೆದರು. ಭಯನಿವಾರಣನಾದ, ಸಾಂಬನಾದ ಶಿವನಂ ಭಕ್ತಿಯಿಂದಾರಾಧಿಸಿ ಆ ಮುನೀಂದ್ರರು ಶೋಕಮೋಹ ಸಂಸಾರವಮಂ ದಾಂಟಿ, ಉತ್ತಮವಾದ ಶ್ರೇಯಸ್ಸಂ ಪಡೆದರು. ಬಳಿಕಾ ಮುನಿಗಳೀರ್ವರಿಗೂ ಚಿದಾನಂದ ಘನನಾದ ಮಹೇಶ್ವರನಂ ನೋಡಲಾಗಿ ಶೀಘ್ರದಲ್ಲಿ ಅಜ್ಞಾನದೋಷಂ ಕಳೆದು ಅನುಪಮ ತೃಪ್ತಿಯಾದುದು. ಆ ಚೂಡೇಶ್ವರನೆಂಬ ಪೆಸರುಳ್ಳ ಶಿವಲಿಂಗದಲ್ಲಿ ಈತನು ಸರ್ವತ್ರ ಪೂರ್ಣನಾದರೂ, ಅಂತವಿಲ್ಲದ ಪುರಾಣ ಮೂರ್ತಿಯಾದರೂ, ಪ್ರವೇಶಿಸಿ, ಅದೃಶ್ಯನಾದನು. ಬ್ರಹ್ಮ ಮೊದಲಾದ ದೇವತೆಗಳು ಮುನೀಶ್ವರರು ಬಂದಂತೆ ಹೋದರು. ಶಿವ ಭಕ್ತಾಗ್ರೇಸರರಾದಾ ಮುದ್ಗಲೋಕ್ಷಾಯಣರು ಭದ್ರಾಚಲದಲ್ಲಿ ಬಹುಕಾಲವಿದ್ದು ಕಡೆಗೆ ಸಿದ್ಧಿಯೋಗದಿಂದ ಶಿವನನೆಯ್ದಿ, ಪುನರಾವೃತ್ತಿಯಿಲ್ಲದ, ಶಾಶ್ವತವಾದ ಪದವನೆಯ್ದಿದರು. ಎಲೈ ! ದ್ವಿಜೇಂದ್ರರುಗಳಿರಾ ! ಈ ಪ್ರಕಾರವಾದ, ಉತ್ಕೃಷ್ಟವಾದ ಅಜ್ಞಾನವಂ ಪರಿಹರಿಸುವ, ಅವಧಿಯಿಲ್ಲದ, ಸುಖಾತಿಶಯ ಪ್ರಾಪ್ತಿಗೆ ಕಾರಣವಾದ ಜ್ಞಾನವು ಹೇಳಲ್ಪಟ್ಟಿತು. ಶಿವಕಥೆ . . . . ನೆ ನಿಮ್ಮನ್ನು ಕೇಳಲಪೇಕ್ಷೆಯಿರುವುದು. ಅದು ನಿಮ್ಮಿಂದ ಕೇಳಲ್ಪಡಲಿ.

Colophon:

ಇಂತು ಬ್ರಹ್ಮಾಂಡಪುರಾಣ . . . . . ತ್ಮ್ಯೆಯೊಳು ಪರಮಶಿವ ಪ್ರೋಕ್ತವಾದ ಪರಮಾತ್ಮ ಜ್ಞಾನೋಪದೇಶವೆಂದು ಹದಿನಾರನೆಯಧ್ಯಾಯದರ್ಥ.

ಇಂತು ರಿಪುಕುಲತಿಮಿರ ಮಿಹಿರ, ತುಷಾಕರನರ ವಂಶವಾರ್ಧಿ ನೃಪಾಲಮಣಿ ಕೌಸ್ತುಭ, ಕಳಲೆ ತಿಮ್ಮನರೇಂದ್ರ ನಂದನ . . ನೃಪಾಲ ತನಯ, ನಮಕೋವಿದ ದೊಡ್ಡಬಲಪತಿ ಸುತ, ಸುಜನ ನುತ ವೀರರಾಜ ತನೂಜ, ಗಿರಿಜಾರಮಣ ಚರಣಾರವಿಂದ ನಿರಂತರಧ್ಯಾನ ನಿರ್ಧೂತಾಶೇಷ ಕಲುಷಗೀರ್ವಾಣ ಕರ್ಣಾಟಕೋಭಯ ಸಾಹಿತ್ಯರಚಿತ ಬುಧಜನ ಮನೋರಂಜನ ನಂಜರಾಜ ಬ್ರಹ್ಮಾಂಡ ಪುರಾಣೋಕ್ತ ಭದ್ರಾದ್ರಿ ಮಹಿಮೆಯಂ ಕರ್ಣಾಟಕೋಕ್ತಿಯಿಂದಖಿಲರರಿವಂತೆ ಪೇಳ್ದ ನಂಜರಾಜ ವಚೋವಿಲಾಸವೆಂಬೀ ಟೀಕೆ ಸಮಾಪ್ತವಾದುದು.

(ವಿ.ವಿ.)—

ಇದರಲ್ಲಿ ೧೬ ಅಧ್ಯಾಯಗಳವೆ. ಗ್ರಂಥಪಾತ ಬಹಳವಿದೆ. ಅತಿಶಿಥಿಲ. ಕವಿ ಕಳಲೆ ನಂಜರಾಜ. ಉಳಿದ ವಿಷಯಗಳನ್ನು ಮೇಲೆ ಉದಾಹೃತವಾಗಿರುವ ಭಾಗಗಳಿಂದತಿಳಿಯುವುದು.

No. 260 ಯದುಗಿರಿ ಮಾಹಾತ್ಮ್ಯೆ.
YADUGIRIMAHĀTMYE.

Substance, palm-leaf. Size, $14\frac{3}{4} \times 1\frac{3}{8}$ inches. Pages, 166. Lines, 6 on a page. Character, Kanarese. Condition, very much injured. Appearance, old.

Complete.

A rendering in prose of the Sanskrit Yadugirimāhātmye forming part of the Nāradīyapurāṇa by Cikka Upadhyāya, who translated this at the instance of Cikkadēvarāja, King of Mysore. Yadugiri now known as Mēlukōte is in the Mysore district.

Name of the scribe.—Lakṣmaiya, son of Krisnaiya of Sindaghatta.

Beginning :

॥ ಶಾರ್ದೂಲ ವಿಕ್ರೀಡಿತ ॥

ಶ್ರೀರಾಮಾವದನಾರವಿಂದವಿಲಸನ್ಮಾರ್ತಂಡ ನುದ್ಯತ್ಕೃಪಾ ।
ನಾರಂ ನಿರ್ಜರಸಂಕುಲ ಪ್ರಣುತನಾನಂದಾನ್ವಿತಂ ಭಕ್ತಸಂ ॥
ಸಾರಂ ಸರ್ವಶರಣ್ಯನೆಂಬುದ ನಿಭಂ ನಿತ್ಯಾತ್ಮಕಂ ಲೋಕ ವಿ ।
ಸ್ತಾರಂ ಪಾಲಿಸುಗೆಮ್ಮ ನುತ್ಸಾಹದೊಳ್ ॥

* * * *

ಶ್ರೀಮದ್ವಿಷ್ಣುವಿನಿಂದಜಂ ಜನಿಸಿದಂ ಮತ್ತಾತನಿಂದತ್ರಿಯು ।
ದ್ಭಾವಮಂ ತತ್ಸುತನಿಂದು ಮಿಂದುವಿನಿನಾ ಸೋಮಾನ್ವಯಂ ರಾಜಿಸ ॥
ಲ್ಕಾಮಾಧುರ್ಯಚರಿತ್ರರೊಳ್ ಯಾದುವೆನಿಪ್ಪಾಭೂವರಂ ಪುಟ್ಟಲಂ ।
ತಾಮುನ್ನೊಪ್ಪಿತು ಯಾದವಾಹ್ವಯ ಲಸದ್ವಂಶಂ ಸುವಿಖ್ಯಾತಿಯೊಳ್ ॥

* * * *

ಕಂ ॥ ಯಾದುನಾಥ ನಸ್ಮದನ್ವಯ ॥
ಕಧಿದೈವಂ ಕಾನೆಯಾಗೆ ಯದುಗಿರಿ ಮಾಹಾ ॥
ತ್ಮ್ಯದ ಸಂಸ್ಕೃತ ದನ್ವಯಮಂ ।
ಮುದದಿಂ ಕನ್ನಡಿಸವೇಳ್ಕುಮೆಂದಂ ಮಹಿಪಂ ॥

ವೃ ॥ ನರನಾಥಾಗ್ರಣಿ ಸೂಚಿಸಲ್ಕೆ ಪರಮಾಪ್ತಂ ಸತ್ಪ್ರಧಾನಂ ಸುಧಾ ।
ಕರತೇಜಂ ವರಪೌರುಕುತ್ಸವಿಲಸದ್ಗೋತ್ರೋದ್ಭವಂ ರಂಗಯಾ ॥
ರ್ಯರಪುತ್ರಂ ಸುಪವಿತ್ರನಪ್ಪ ಚಿಕುಪಾಧ್ಯಾಯಂ ಯದುಕ್ಷ್ಮಾಧ್ರ ವಿ ।
ಸ್ತರ ಮಾಹಾತ್ಮ್ಯವನ್ನೈದೆ ಕನ್ನಡಿಸಿದಂ ಸತ್ಕೋವಿದರ್ಲಾಲಿಸಲ್ ॥

Colophon :

ಇತಿ ಪೀಠಿಕಾಪ್ರಕರಣಂ ಸಮಾಪ್ತಂ.

ಕಂ ॥ ನರನಾರಾಯಣನಂ ಮುನಿ ।
ವರರೆಯ್ದಲ್ಕೈದೆ ಕಲಿಮಲಾಪಹ ವಿಲಸ ॥
ದ್ವರಯದುಗಿರಿ ಮಹಾತ್ಮ್ಯಮ ।
ನುರು ಸಂಕ್ಷೇಪದೊಳು ಸುದ್ದ್ವ ಸಲೆ ಬೀಳ್ಕೊಟ್ಟಂ ॥

ಒಂದಾನೊಂದು ವೇಳೆಯೊಳು ಸಮಸ್ತಮುನಿಗಳು ಏಕಾಂತ ವ್ಯವಸ್ಥಿತರಾಗಿ ನರನಾರಾಯಣಾಶ್ರಮದೊಳು ನಾರಾಯಣದೇವರ ನೆಯ್ದಿದರು. ಆ ಮುನಿಗಳಾರಾರೆನೆ :—ವ್ಯಾಸಂ ವಶಿಷ್ಠನುಂ ಕಪಿಲ ಮಾರ್ಕಂಡೇಯ ಕಾಶ್ಯಪಾತ್ರಿ ದಕ್ಷ ಭಾರದ್ವಾಜರುಂ ವಿಶ್ವಾಮಿತ್ರ ಶೌನಕ ಗೌತಮ ಜಾಮದಗ್ನ್ಯರುಂ ಪುಲಸ್ತ್ಯ ಕುಂಭಸಂಭವರುಂ ವಾಲ್ಮೀಕಿ ವಾಮದೇವರುಂ ವೈಶಂಪಾಯನ ಭಾರ್ಗವರುಂ ಈ ಪೂರ್ವೋಕ್ತ ಮುನಿಗಳುಂ ಮತ್ತೆ ಕೆಲಬರ್ ಮುನಿಗಳುಂ ಸಮಸ್ತರುಂ ವಿಷ್ಣುಪರಾಯಣರಾಗಿ ಯುಗಯುಗಂಗಳೊಳು ವೇದಾರ್ಥ ನಿರ್ಣಯಕರರಾದ, ಆ ಮುನಿಗಳು ಆ ನಾರಾಯಣಾಶ್ರಮದೊಳು ಮುನಿರೂಪದಿಂದಿಹ ನಾರಾಯಣನಿಗೆ ನಮಸ್ಕರಿಸಿ ತದನಂತರಂ ನರಂಗಂ ನಮಸ್ಕರಿಸಿ ಸ್ತವ್ಯನಾಗಿ ಸ್ತವಪ್ರಿಯನಾದ ಹೃಷೀಕೇಶನಂ ಸ್ತೋತ್ರಕೋವಿದರಪ್ಪುದರಿಂ ಶ್ರುತಿ ಸಿದ್ಧಾಂತ ಸಿದ್ಧಂಗಳಾದ ಸ್ತೋತ್ರಂಗಳಂ ಸ್ತುತಿಸಿದರು.

* * * *

ಈ ಯಾದವ ಶೈಲಮಾಹಾತ್ಮ್ಯಮಂ ವಿಸ್ತರದಿಂ ಕೇಳಲಿಚ್ಛಿಸುತ್ತಿದ್ದೆವು. ಆವುದಾನೊಂದು ಕಾರಣದಿಂ ನೀನು ನಮಗೆ ಪರಮಬಂಧುವು. ನೀನೇ ಪರಮಗತಿಯು ಎಂದು ಮುನಿಗಳಿಂ ಹೇಳಿಲ್ಪಟ್ಟ ನಾರಾಯಣಂ ಪ್ರತ್ಯುತ್ತರಮಂ ನುಡಿದಂ ಅದೆಂತೆನೆ :—ಎಲೈ ! ಮುನಿಗಳಿರಾ ! ಸನತ್ಕುಮಾರನಿಂ ಕೇಳಲ್ಪಟ್ಟು ಬ್ರಹ್ಮನಿಂ ತದನಂತರಂ ನಾರದಂಗುಪದೇಶಿಸಲ್ಪಟ್ಟುದು. ಆ ನಾರದನೆ ನಿಮಗೆ ಪೇಳಲು ಯೋಗ್ಯನೆಂದು ನುಡಿದು ಪೂರ್ಣಷಾಡ್ಗುಣ್ಯ ಲಕ್ಷಣನಾದ ಪುಂಡರೀಕಾಕ್ಷಂ ಭಾವಿತಾತ್ಮರಾದ ಮುನಿಗಳಮುಂದೆ ಅಂತರ್ಧಾನಮನೆಯ್ದಿದಂ.

ಈ ಪ್ರಕಾರ ಮುನಿಮುಖ್ಯರಂ ನುಡಿದು ವಾಕ್ಯಂಗಳಿಂ ಪ್ರಾರ್ಥಿತಮಾದ ಲಕ್ಷ್ಮೀಪರಿಪಾಕ ಫಲಮಾದ ಯದುಗಿರಿಗತಮಾದ ತೇಜಸ್ಸಂ, ಅಂತರ್ದರ್ಶಿಗಳಿಗೆ ಚಕ್ರವರ್ತಿಯಾದ, ಯತಿಕುಲ ಬಹುಮಾನನಾದ ದೇವನಂ ಚಿಂತಿಸಿದನೆಂದು (ಸಂಕ್ಷೇಪ ವಿವರ್ಣನಂ ಪ್ರಥಮಾಶ್ವಾಸಂ. ಇತಿ ಶ್ರೀ ನಾರದೀಯ ಪುರಾಣೇ ಜ್ಞಾನಕಾಂಡೇ ಶ್ರೀ ಮದ್ಯಾದವಗಿರಿ ಮಾಹಾತ್ಮ್ಯೇ ಪ್ರಥಮೋಧ್ಯಾಯಃ).

Colophon :

ಶ್ರೀಮತ್ಸಕಲ ಸುರನಿಕರಪ್ರಣುತ ಮಕುಟತಟ ನಿಕಟಖಚಿತರುಚಿರ ಪ್ರಚುರಮಣಿಗಣಾರುಣ ತರಣಿಕಿರಣಾವರಣ ಸಮುಜ್ವಲನಖಾಂಶುಶೋಭಿತ ಯದುಗಿರಿಸದನ ನಾರಾಯಣ ಚಾರು ಚರಣಾರವಿಂದ ದ್ವಂದ್ವ ಮಕರಂದಶೇವಿತಮತ್ತಮಧು ಕರಾಯಮಾನ ಸೂರಿಜನ ಸಂಸ್ತೂಯಮಾನ ನಿಖಿಲಕಲಾವಿಧೇಯ ಚಿಕ್ಕುಪಾಧ್ಯಾಯವಿರಚಿತಮಪ್ಪ ಕರ್ಣಾಟಕ ವಚನರಚನಾಭಿಧಾನಮಾದ ಯಾದವಗಿರಿ ಮಾಹಾತ್ಮ್ಯೆಯೊಳ್ ಸಂಕ್ಷೇಪವರ್ಣನಂ ಪ್ರಥಮಾಧ್ಯಾಯಂ.

ಕಂ॥ ನಾರದನೊಲವಿಂದುಸುರಿದ ।
ನಾರಾಯಣ ನಾಮ ಮಹಿಮೆಯಂ ಶ್ರೀಹರಿ ವಿ ॥
ಸ್ತಾರತರ ಶುಭಚರಿತ್ರಮ ।
ನೋರಂತಜಹರರ ಜನ್ಮಕಾರಣದಿರವಂ ॥

ತದನಂತರದೊಳ್ ಕರತಳೋಲ್ಲಸಿತ ವೀಣಾವಾದನ ಲಾಲಸನಾದ ನಾರದ ನಲ್ಲಿ ಮುನೀಶ್ವರರಗ್ರದೊಳು ವಿರ್ಭವಿಸಿದಂ.

End :

ವೈಕುಂಠದಲ್ಲಿ ವೈಕುಂಠನಾಥಂ ನುಡಿದಂ. ಈ ಯಾದವಾದ್ರಿಯಲ್ಲಿ ಸಕೃದ್ವಾಸಿಗಳಾದೊಡೆಯುಮವರು ಮಾಕಾಶಮಧ್ಯದಿಂ ತೆರಳೆ ದೇವಯಾನದಿಂದೆಯ್ದಿ ಸಕಲಕಾಲದೊಳಂ ಸಾನುಬಂಧನರಾಗಿ ಪರಮಪುರುಷಗೋಷ್ಠೀ ಮಧ್ಯದಲ್ಲಿ ವಾಸಮಂ ಪಡೆವರು. ಈ ಪ್ರಕಾರ ಮಾದ ಮುನಿ . . . . ರು ನಾರದನವಾಕ್ಯಮಂ ಕೇಳೆ ಕೆಲಬರು ವೀತರಾಗರಾಗಿ ಯದು ಶೈಲದಲ್ಲಿಯೇ ವಾಸಮಂ ಮಾಡಿದರು. ಮತ್ತೆ ಕೆಲಬರು ಆದ್ಯಮಾದ (ಅವ್ಯಯ) ಮಾದ ವೈಕುಂಠವನೆಯ್ದಿ ಶೇಷಾದಿಗಳೊಡನೆ ನಾರಾಯಣನ ಸೇವೆಯಂ ಮಾಡಿದರು.

Colophon :

ಇತಿ ನಾರದೀಯ ಪುರಾಣೇ ಜ್ಞಾನಕಾಂಡೇ ಶ್ರೀ ಮದ್ಯಾದವಗಿರಿ ಮಾಹಾತ್ಮ್ಯೇ ಭಗವತ್ಸಂದರ್ಶನನಾಮ ದ್ವಾದಶೋಧ್ಯಾಯ :

ಶ್ರೀ ಮತ್ಸಕಲ ಸುರನಿಕರಪ್ರಣುತ ಮಕುಟತಟ ನಿಕಟಖಚಿತರುಚಿರ ಪ್ರಚುರಮಣಿಗಣಾರುಣ ತರುಣಕಿರಣಾವರಣ ಸಮುಜ್ವಲ ನಖಾಂಶು ಶೋಭಿತ ಯದುಗಿರಿಸದನ ನಾರಾಯಣಚಾರುಚರಣಾರವಿಂದ ದ್ವಂದ್ವಮಕರಂದಸೇವಿತಮತ್ತಮಧುಕರಾಯಮಾಣ ಸೂರಿಜನಸಂಸ್ತೂಯಮಾನ ನಿಖಿಲಕಲಾವಿಧೇಯ ಚಿಕ್ಕುಪಾಧ್ಯಾಯ ವಿರಚಿತಮಪ್ಪ ಕರ್ಣಾಟಕ ವಚನರಚನಾಭಿಧಾನಮಾದ ಯಾದವಗಿರಿ ಮಾಹಾತ್ಮ್ಯೆಯೊಳ್ ಮುನಿಗಳೆಲ್ಲಂ ಯದುಶೈಲಕ್ಕೆಸಾರ್ದು ಶ್ರೀಹರಿಯಂ ಸೇವಿಸುತಿರ್ದುದಂ ಪೇಳ್ದ ಕಥಾ ವಿವರ್ಣನಂ ದ್ವಾದಶೋಧ್ಯಾಯಂ.

(ವಿ.ವಿ.)—

ಇದರಲ್ಲಿ ಹನ್ನೆರಡು ಅಧ್ಯಾಯಗಳಿವೆ. ಇದು ಮೇಲುಗೋಟೆಯ ಮಹಿಮೆಯನ್ನು ನಿರೂಪಿಸುವ ಗದ್ಯರೂಪವಾದ ಗ್ರಂಥವು. ಅತಿ ಶಿಥಿಲ. ಕವಿ ಚಿಕ್ಕುಪಾಧ್ಯಾಯ. ಈತನು ತನ್ನ ಪೋಷಕನಾದ ಚಿಕ್ಕದೇವರಾಜನ ವಂಶಾವಳಿಯನ್ನು ಈ ಕೆಳಗೆ ಕೊಟ್ಟಿರುವ ಹಾಗೆ ಹೇಳಿದ್ದಾನೆ. ಚಿಕ್ಕದೇವರಾಜನಪ್ಪಣೆಯಂತೆ ಕವಿಯು ಈ ಗ್ರಂಥವನ್ನು ಸಂಸ್ಕೃತದಿಂದ ಕನ್ನಡಕ್ಕೆ ಭಾಷಾಂತರಿಸಿದೆನೆಂದು ಹೇಳುತ್ತಾನೆ. ಹೆಚ್ಚಿನ ವಿಷಯಗಳನ್ನು ಮೇಲೆ ಉದಾಹೃತವಾಗಿರುವ ಭಾಗಗಳಿಂದ ನೋಡಿ ತಿಳಿಯುವುದು. ಗ್ರಂಥಾಂತ್ಯದಲ್ಲಿ " ಶ್ರೀಯಾದವಗಿರಿಯ ಮಾಹಾತ್ಮ್ಯೆಯಂ ಬರೆದವಂ ಸಿಂದಘಟ್ಟದ ಕೃಷ್ಣಯ್ಯನವರ ಮಗ ಲಕ್ಷ್ಮಯ್ಯನು ಬರೆಸಿ (?) ಚಿಕ್ಕುಪಾಧ್ಯರಿಗೆ ಆಯುರಾರೋಗ್ಯ, ಐಶ್ವರ್ಯ, ಅಷ್ಟಪುತ್ರ ಬಹುಧನವಾಗಲಿಯೆಂದು ಲಕ್ಷ್ಮಯ್ಯನು ಸಾರ್ವಕಾಲದಲ್ಲಿ ಯಾದವಗಿರಿ ನಾರಾಯಣಸ್ವಾಮಿಯವರ ಸನ್ನಿಧಿಯಲ್ಲಿ ಪ್ರತಿದಿನವೂ ಆಶೀರ್ವಾದವ ಮಾಡಿಕೊಂಡು ಇರುತ್ತಿದ್ದೇನು. ಶ್ರೀ ರಕ್ಷಿಸುವಭಾರ ನಿಮ್ಮದು. " ಎಂದಿದೆ.

ಚಿಕ್ಕದೇವರಾಜ ವಂಶವೃಕ್ಷ.



No. 261. ಯದುಗಿರಿಮಾಹಾತ್ಮ್ಯ-

YADUGIRIMĀHĀTMYA.

Substance, Śrītāla. Size, 18½ × 2 inches. Pages, 74. Lines, 9 on a page. Character, Kanarese. Condition, slightly injured. Appearance, old. Complete.

Same work as the above.

Name of the scribe :—Lakṣmīnarasimha.

(ವಿ-ವಿ.)—

ಸಮಗ್ರ. ಸ್ವಲ್ಪ ಶಿಥಿಲ. ಕವಿ ಚಿಕ್ಕುಪಾಧ್ಯ. ಉಳಿದ ವಿಷಯಗಳನ್ನು ಹಿಂದಣ ನಂಬರಿನಲ್ಲಿ ನೋಡಿ ತಿಳಿಯುವುದು. ಗ್ರಂಥಾಂತ್ಯದಲ್ಲಿ,

" ಕಂ॥ ಲಕ್ಷ್ಮೀಶ ಯದುಗಿರೀಂದ್ರನ ।
ಲಕ್ಷ್ಮೀಕರವಾದ ಕೃತಿಯನೊಲವಿಂ ಪೇಳ್ದಿಂ ॥
ಲಕ್ಷ್ಮೀಪತಿ ಚಿಕುಪಾಧ್ಯಂ ।
ಲಕ್ಷ್ಮೀನರಸಿಂಹನೋದಿ ಬರೆದಂ ಮುದದಿಂ ॥ "

ಎಂದಿದೆ.—

No. 262. ಯದುಗಿರಿಮಾಹಾತ್ಮ್ಯ-

YADUGIRIMĀHĀTMYA.

Substance, palm-leaf. Size, 14⅝ × 1⅜ inches. Pages, 100. Lines, 7 on a page. Character, Kanarese. Condition, injured. Appearance, old.

Contains the Adhyāyas 1 to 7 complete, and 8th and 9th incomplete.

Same work as the above.

(ವಿ.ವಿ.)—

ಇದರಲ್ಲಿ ೧ ರಿಂದ ೭ ಅಧ್ಯಾಯಗಳು ಸಮಗ್ರ. ೮ ಮತ್ತು ೯ ನೆಯವು ಅಸಮಗ್ರ. ಕಿಥಿಲ ಕವಿ ಚಿಕ್ಕುಪಾಧ್ಯಾಯನು. ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ. ಉಳಿದ ವಿಷಯಗಳನ್ನು ೨೬೦ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

No. 263. ಯದುಗಿರಿಮಾಹಾತ್ಮ್ಯ. YADUGIRIMĀHĀTMYA.

Substance, Śrītāla. Size, $6\frac{5}{8} \times 1\frac{5}{8}$ inches. Pages, 118. Lines, 7 on a page. Character, Kanarese. Condition, injured. Appearance, old.

Complete.

A poem in the Sāṅgatya metre describing the story of Yadugirimāhātmya of Sanskrit Nāradīyapurāṇa, by Cikka Upādhyāya or Lakṣmīśa. For other particulars see under No. 260, *ante*.

Beginning:

ಶ್ರೀಮಹಿಳಾನನ ಸರಸಿಜ ವಿಕಸನ ।
ಧಾಮಹಿತಾರ್ಕ ಸುಪರ್ವ ॥
ಸ್ತೋಮ ಮಕುಟನುತಪಾದ ಯಾದವಗಿರಿ ।
ಧಾಮ ರಕ್ಷಿಪುದೆನ್ನನೊಲಿದು ॥

* * *

ಇದು ಯದುಗಿರಿಪತಿ ಪದಪದ್ಮಮಧು ಭೃಂಗ ।
ಚದುರ ಶ್ರೀ ಚಿಕದೇವನೃಪನ ॥
ಸದಮಲಮಾತ್ಯ ಲಕ್ಷ್ಮೀಶ ಪೇಳಿದ ಕೃತಿ ।
ಮುದವೀವುದೊಲಿದು ಕೇಳ್ವರಿಗೆ ॥
ಯದುಗಿರಿ ಚರಿತೆಯೊಳೊಂದಕ್ಕರವನು ।
ಪದುಳದಿ ಕೇಳ್ವ ನರರ್ಗೆ ॥
ಮುದದಿಂದ ವರದವೆಂಕಟಗಿರಿಯರಸ ಸಂ ।
ಪದವನಿತ್ತಪ ನೊಲವಿನಲಿ ॥

Colophon:

ಮೊದಲನೆಯ ಸಂಧಿ ಸಮಾಪ್ತಂ.

ಶ್ರೀಲಸದಮಲ ಕಿರೀಟ ಸನ್ಮಣಿಕಾಂತಿ ।
ಜಾಲ ನೀರಾಜಿತಚರಣ ॥
ಲೀಲಾವಿನೋದಿ ಯಾದವಶೈಲ ನಾಯಕ ।
ಪಾಲಿಸೆಮ್ಮನು ಮುದದಿಂದ ॥

End:

ಅರೆಬರದ್ಯ (?) ಮಿದಾದ ವೈಕುಂಠಪದದಲ್ಲಿ ।
ಪುರುಷೋತ್ತಮನನು ಬಳಿಕ ॥
ತಳದಿಂದ ಶೇಷಶೇಷಾಶನಾದಿಗಳೊಡ ।
ವೆರಸಿ ಸೇವೆಯು ಮಾಡಿದರು ॥
ಇಂತೊಪ್ಪುವ ಯದುಗಿರಿ ಚರಿತೆಯೊಳು ಸ ।
ಮಂತು ಪನ್ನೆರಡನೆ ಸಂಧಿ ॥ (?)
ಅಂತು ಮುನಿಗಳೆದುಗಿರಿಗೆಯ್ದಿದ ಕಥೆ ।
ಯಿಂತಿಲ್ಲಿ ಸಂಧಿ ಸಂಪೂರ್ಣ ॥
ಇದು ಯದುಗಿರಿಪತಿಪದ ಪದ್ಮಮಧು ಭೃಂಗ ।
ಚದುರ ಶ್ರೀ ಚಿಕದೇವನೃಪನ ॥
ಸದಮಲಾವಣಾತ್ಯ ಲಕ್ಷ್ಮೀಶ ಪೇಳಿದ ಕೃತಿ ।
ಮುದವೀವುದೊಲಿದು ಕೇಳ್ವರಿಗೆ ॥

Colophon:

ಅಂತು ಸಂಧಿ ೧೨ ಕ್ಕಂ ಮಂಗಳಂ.

(ವಿ-ವಿ.)—

ಇದು ಸಾಂಗತ್ಯದಲ್ಲಿ ಬರೆದಿದೆ. ಇದರಲ್ಲಿ ೧೨ ಸಂಧಿಗಳಿವೆ. ನಾರದೀಯ ಪುರಾಣೋಕ್ತವಾದ ಯಾದವಗಿರಿಯ ಅಥವಾ ಮೇಲುಗೋಟೆಯ ಮಹಿಮೆ ಹೇಳಿದೆ. ಗ್ರಂಥಾದಿಯಲ್ಲಿ ಯದುಗಿರಿನಾಥನ ಸ್ತುತಿ ಯಿದೆ. ಬಳಿಕ ಕವಿ ಲಕ್ಷ್ಮೀ, ರಾಮಾನುಜ, ಕಡಾಂಬಿ ಲಕ್ಷ್ಮಣಾಚಾರ್ಯ, ನಾರದ, ಗರುಡ, ವಿಷ್ವಕ್ಸೇನ ಇವರುಗಳನ್ನು ಹೊಗಳಿದ್ದಾನೆ. ಹಿಂದೆ ವರ್ಣಿತವಾಗಿರುವ ಗದ್ಯರೂಪವಾದ ಕೃತಿಯೇ ಇದರಲ್ಲಿ ಪದ್ಯರೂಪವಾಗಿದೆ. ಈ ಗ್ರಂಥ ಕರ್ತೃವು ಚಿಕ್ಕುಪಾಧ್ಯ ಮಂತ್ರಿಯೇ ಆಗಿರಬಹುದೆಂದು ತೋರುತ್ತದೆ.

No. 264. ಯದುಗಿರಿಮಾಹಾತ್ಮ್ಯ- YADUGIRIMÂHÂTMYA.

Substance, Śrītāla. Size, $16\frac{1}{16} \times 1\frac{5}{8}$ inches. Pages, 74. Lines, 8 on a page. Character, Kanarese. Condition, much injured. Appearance, old.

Contains the Adhyayās 1 to 8 complete and the 9th incomplete.

Same work as the above.

(ವಿ. ವಿ.)—

ಇದು ಸಾಂಗತ್ಯ ರೂಪವಾಗಿದೆ. ಇದರಲ್ಲಿ ೧ ರಿಂದ ೮ ಅಧ್ಯಾಯಗಳು ಸಮಗ್ರ. ೯ ನೆಯದು ಅಸಮಗ್ರ. ಅತಿ ಶಿಥಿಲ. ಹಿಂದೆ ವರ್ಣಿತವಾದ ಗ್ರಂಥವೇ ಆಗಿದೆ. ಉಳಿದ ವಿಷಯಗಳನ್ನು ಹಿಂದಣ ನಂಬರಿನಲ್ಲಿ ನೋಡಿ ತಿಳಿಯುವುದು.

No. 265. ಯದುಗಿರಿಮಾಹಾತ್ಮ್ಯ- YADUGIRIMĀHĀTMYA.

Substance, paper. Size, $10\frac{3}{8} \times 8\frac{5}{8}$ inches. Pages, 57. Lines, 16 on a page. Character, Kanarese. Condition, good. Appearance, new.

The other work herein is :—Prahlādacaritre in Telugu.

Contains the Adhyāyas 1 to 3 complete, and a small portion in the beginning of 4th Adhyāya.

Same work as the above.

(ಪಿ-ವಿ.)—

ಇದು ಸಾಂಗತ್ಯ ರೂಪವಾದ ಗ್ರಂಥ. ಇದರಲ್ಲಿ ೧ ರಿಂದ ೩ ಅಧ್ಯಾಯಗಳು ಸಮಗ್ರ. ೪ ನೆಯದರ ಆದಿ ಭಾಗವು ಸ್ವಲ್ಪವಿದೆ. ಹಿಂದೆ ವರ್ಣಿತವಾದ ಗ್ರಂಥವೇ ಆಗಿದೆ.

No. 266. ಯದುಗಿರಿಮಾಹಾತ್ಮ್ಯ- YADUGIRIMĀHĀTMYA.

Substance, palm-leaf. Size, $15\frac{11}{16} \times 1\frac{5}{8}$ inches. Pages, 188. Lines, 6 on a page. Character, Kanarese. Condition, slightly injured. Appearance, old.

Complete in 12 Aśvāsas.

A rendering in verse and prose of the Sanskrit Yadugirimāhātmya forming part of Nāradīyapurāṇa ; by Timma Kavi, who wrote this at the instance of Cikkadēvarāja, King of Mysore.

Beginning :

"ಸ್ರಗ್ಧರಾವೃತ್ತ."

ಶ್ರೀಮಾನಿಸ್ಯಾನನಾಂಭೋರುಹ ವಿಕಸನಬಾಲಾರ್ಕನಿಂದ್ರಾದಿದೇವ ।
ಸ್ತೋಮೋದ್ಯನ್ಮೌಳಿ ರತ್ನಾವಳಿ ರುಚಿ ವಿಲಸತ್ಪಾದ ಪಾನೀಯಜಾತಂ ॥
ಕಾಮಾನಂತಾಂಗರೂಪಂ ಮುನಿಜನಹೃದಯಾಗಾರ ದಿವ್ಯಪ್ರದೀಪಂ ।
ಪ್ರೇಮಂಬೆತ್ತಾವಗಂ ಯಾದವಗಿರಿಪತಿಯೈಶ್ವರ್ಯಮಿತ್ತೋವುಗೆಮ್ಮಂ ॥

* * * *

ಕಂ ॥ ನರನಾರಾಯಣಾಶ್ರಮ ।
ಕಿರವೇಂಕಾಂತವ್ಯವಸ್ಥೆಯಿಂದಂ ಮುನಿಗಳ್ ॥
ಪರುಠವಿಸಿ ಬಂದರಟ್ಟಿ ।
ರ್ವೈರಸಿ ಸಮಂತೊಂದು ವೇಳೆಯೊಳ್ ಕೃತಪುಣ್ಯರ್ ॥

ವ ॥ ಆಮುನಿಗಳಾರಾರೆಂದೊಡೆ :

ವೃ ॥ ಗುರುಪುತ್ರಂ ಕಪಿಲಂ ಮೃಕಂಡುತನುಜಂ ಕುಂಭೋದ್ಭವಂ ಶೌನಕಂ ।
ವರವಾಲ್ಮೀಕಿ ವಸಿಷ್ಠನತ್ರಿ ಭೃಗು ವೈಶಂಪಾಯನಂ ವ್ಯಾಸನೊ ॥
ಪ್ಪಿರೆ ದಕ್ಷಂ ಮಿಗೆಕಶ್ಯಪಂ ಕುಶಿಕಪುತ್ರಂ ಜಾಮದಗ್ನ್ಯಂ ತಪ ।
ಸ್ಫುರಿತಂ ಗೌತಮನಂದನಂ ಸಲೆ ಪುಲಸ್ತ್ಯಂ ಮೋದವಾಂತಿಂತಿವರ್ ॥

* * * *

ವ ॥ ಬಳಿಕಮಾ ನಾರಾಯಣ ನಿರೂಪಂದಾಳ್ದಿಯ್ತಂದ ಸಮಸ್ತಮುನಿಗಳಿಂ ಪ್ರಾರ್ಥಿತನಾದ ಸಕಲ ಲೋಕ ಪ್ರಪಂಚಜ್ಞಂ ವೈಷ್ಣವತಿಲಕಂ ಬ್ರಹ್ಮನಂದನಂ ನಾರದಮಹಾಮುನಿಪಂ ಬೇಟ ಲುಜ್ಜುಗಿಸಿ ಕಿಂಚಿನ್ನಿಮೀಲಿತಾಕ್ಷನಾಗಿ ;

ಕಂ ॥ ವರ ಯದುಗಿರಿತತ ತೇಜವು ।
ನುರು ಲಕ್ಷ್ಮೀಪಕ್ವಫಲಮನೂಹಿಸಿ ನೆನೆದಂ ॥
ಸುರುಚಿರ ಯತಿಕುಲ ಮಾನ್ಯನ ।
ನಿರದಂತದ್ದರ್ಶಿ ಚಕ್ರವರ್ತಿಯನೆರ್ದೆಯೊಳ್ ॥

Colophon :

ಇದು ವಿನಮದಮರವರ ಸರಸಿಜಭವಮುಖ ಸುರಸಮುದಯ ಸುರುಚಿರಮಕುಟ ನಿಕರಖಚಿತಮಣಿ ನಿಜಯುರುಚಿ ಕಲಿತ ಯದುಗಿರಿಸದನನಾರಾಯಣ ಮೃದುಪದಲಲಿತ ಜಲರುಹಜನಿತ ಮಕರಂದ ರಸಾಸ್ವಾದನೆ ನಿರತ ಮತ್ತ ಮಧುಕರಾಯಮಾನ ಬಿರುದಂತೆಂಬರಗಂಡ ಯದುಕುಲ ಶರಧಿರಾಕಾಸುಧಾಕರನಾದ ಚಿಕದೇವಮಹಾರಾಯನ ಕರುಣಾರಸಕಟಾಕ್ಷಾವಲೋಕನಮುದಿತ ಚಿಕುಪಾಧ್ಯಾಯಪ್ರೇರಿತ ಕವಿ ತಿಮ್ಮವಿರಚಿತ ಕರ್ಣಾಟಕವಚನರಚನೆಯ ಯಾದವಗಿರಿ ಮಹಾತ್ಮ್ಯದೊಳ್ ಯಾದವಗಿರಿವರ್ಣನಂ ತತ್ತೀರ್ಥವರ್ಣನಂ ಪ್ರಥಮಾಶ್ವಾಸಂ.

ಕಂ ॥ ಶ್ರೀಜಲಧಿಜಾನನಾಂಬುಜ ।
ರಾಜನ್ಮಕರಂದ ಮಧುರ ಸಾರರುಚಿಜ್ಞಂ ॥
ರಾಜೀವಾಕ್ಷಂ ಯದುಗಿರಿ ।
ರಾಜಂ ನಿಜಭಕ್ತಿಯಿತ್ತು ಪಾಲಿಸುಗೆಮ್ಮಂ ॥

End:

ಕಂ ॥ ಮುನಿವರ ನಾರದನೀ ವಿಧ ।
ದನುಪಮ ವಾಕ್ಯಮನೆ ಕೇಳ್ದು ಕೆಲಬರ್ ಯದುಶೈ ॥
ಲನಿವಾಸಂಗೆ ಸರ್ವ್ವ । (?)
ತನಿಜ ಮಹಾರಾಗರಾಗಿಯವರೊಳ್ ಕೆಲಬರ್ ॥
ತ್ವರಿತದಿನಾದ್ಯಂ ವಿಷ್ಣುವಿ ।
ದುರುಧಾಮಮನೆಯ್ದಶೇಷ ಶೇಷಾಶನವು ॥
ಖ್ಯರೊಡನೊಡೆವೆಡೆದು ಹರಿಪದ ।
ಸರಸಿಜ ಸೇವಾತಿನಿರತರಾದರ್ಮುದದಿಂ ॥

Colophon :

ಇದು ವಿನಮದಮರವರಸರಸಿಜ ಭವಮುಖಸುರ ಸಮುದಯ ಮಕುಟನಿಕರ ಖಚಿತಮಣಿ ನಿಜಯುರುಚಿತ ರುಚಿಕಲಿತ ಯದುಗಿರಿಸದನ ನಾರಾಯಣ ಮೃದುಪದ ಜಲರುಹ ಜನಿತ ಮಕ

ರಂದ ರಸಾಸ್ವಾದನ ನಿರತಮತ್ತ ಮಧುಕರಾಯಮಾನ ಬಿರುದಂತೆಂಬರಗಂಡ ಯಾದುಕುಲ ಶರಧಿ ರಾಕಾಸುಧಾಕರನಾದ ಚಿಕದೇವ ಮಹಾರಾಯನ ಕರುಣಾಕಟಾಕ್ಷಾವಲೋಕನ ಮುದಿತ ಚಿಕು ಪಾಧ್ಯಾಯಪ್ರೇರಿತ ಕವಿತಿಮ್ಮ ವಿರಚಿತ ಕರ್ಣಾಟಕ ವಚನ ರಚನೆಯ ಯಾದವಗಿರಿ ಮಾಹಾತ್ಮ್ಯ ದೊಳ್ ಬದರಿಕಾಶ್ರಮಸ್ಥ ಮುನೀಶ್ವರಾಗಮನ ಯಾದುಗಿರಿನಾಥ ಭಗವತ್ಸಂದರ್ಶನಾದಿವರ್ಣನಂ ದ್ವಾದಶಾಶ್ವಾಸಂ.

(ವಿ ವಿ.)—

ಇದರಲ್ಲಿ, ಹಿಂದಿನ ನಂಬರುಗಳಲ್ಲಿ ವರ್ಣಿತವಾಗಿರುವ ಕಥೆಯೇ ಚಂಪೂರೂಪದಲ್ಲಿ ಹೇಳಿದೆ. ಮೈಸೂರಿನ ದೊರೆಗಳಲ್ಲಿ ಒಬ್ಬನಾದ ಚಿಕದೇವರಾಜನ ಅಭಿಮತದಂತೆ ಕವಿಯು ಈ ಗ್ರಂಥವನ್ನು ಬರೆದಂತೆ ಕೇಳಿ ಮುಂದಿನ ಒಂದು ಪದ್ಯದಲ್ಲಿ "ಚಿಕದೇವರಾಯ ನೊಲ್ಮೆಯಿನುಸುಪ್ಪೆಂ" ಎಂದು ಹೇಳಿದ್ದಾನೆ. ಇಳಿಕ ರಾಜನ ವಿಷಯಕವಾಗಿ ಏನೂ ಹೇಳಿಲ್ಲ. ಕರ್ಣಾಟಕ ಕವಿಚರಿತ್ರೆಯಲ್ಲಿ, ಈ ಗ್ರಂಥವು ೧೬ ಆಶ್ವಾಸಗಳನುಳ್ಳುದೆಂದೂ, ಮೊದಲಿನ ೪ ಆಶ್ವಾಸಗಳಲ್ಲಿ ಚಿಕದೇವರಾಜನ ವಂಶಾವಳಿ, ದಿಗ್ವಿಜಯಗಳನ್ನು ವಿಸ್ತಾರವಾಗಿ ಕವಿಯು ವರ್ಣಿಸಿ ಮತ್ತೆ ಕಥೆಯನಾರಂಭಿಸಿರುವನೆಂದೂ, ಈ ಗ್ರಂಥವನ್ನು ಶಕ ೧೬೪೯ ನೇ ನಳಸಂವತ್ಸರದಲ್ಲಿ ರಚಿಸಿದುದಾಗಿ ಈ ಕೃತಿಯಿಂದಲೇ ತಿಳಿಯುವುದೆಂದೂ, ಕವಿಚರಿತ್ರಕಾರರು ಬರೆದಿರುತ್ತಾರೆ. ಆದುದರಿಂದ ಈ ವಿಷಯಗಳನ್ನು ಇದರಲ್ಲಿ ಈ ಪ್ರತಿಯನ್ನು ಬರೆದವನು ಯಾವ ಕಾರಣದಿಂದಲೋ ಬಿಟ್ಟಿರಬೇಕೆಂದು ತೋರುತ್ತದೆ. ಉಳಿದ ವಿಷಯಗಳನ್ನು ಮೇಲೆ ಉದಾಹೃತವಾಗಿರುವ ಭಾಗಗಳಿಂದಲೂ ಕವಿಚರಿತ್ರೆಯಿಂದಲೂ ತಿಳಿಯುವುದು.

No. 267. ಯದುಗಿರಿಮಾಹಾತ್ಮ್ಯ (ಸಟೀಕಾ)- YADUGIRIMĀHĀTMYA (WITH ṬĪKĀ).

Substance, Śrītāla. Size. $14\frac{3}{4} \times 1$ inches. Pages, 306. Lines, 8 on a page. Character, Kanarese. Condition, very much injured. Appearance, old.

Contains the Adhyāyas 1 to 11 complete, and the 12th incomplete.

The work consists of Sanskrit stanzas, with Kanarese commentary. The name of the author is not given.

Beginning:

. . . . ।

. . . . ॥

. . ನಾರಾಯಣಂ ದೇವಂ ।

ನರನಾರಾಯಣಾಶ್ರಮೇ ॥

. ಶುಕಸನಕಾದಿ(ವಂದಿ) . ತಮಜೇಶ್ವರ ಮುಖ್ಯನುತಂ । ಶ್ರುತಿಮ . . . . ಭ ಸಾರಗುಣಂ ॥ ಮಹಿತ ದಯಾಮಯಂಚ ಮನಸಾವ . ಸಾಸಿರ 1 ಯದುಗಿರಿ ನಾಯಕಾ ಪರಿವೃಢಂ ಪರಮಾಕಲಯೇ ॥ (?) . . . .

. . . ಸಂ . ॥ ಶ್ಲೋಕೈಕಶ್ರವಣಮಾತ್ರೇಣ ಧರ್ಮಾದಿನಿಖಿಲ ಪುರುಷಾರ್ಥಪ್ರದೇ ನಾರದೀಯ ಪುರಾಣೇ ಜ್ಞಾನಕಾಂಡೇ ಶ್ರೀಮದ್ಯಾದವಗಿರಿಮಾ . . . . . . ॥

ಶ್ರಿಯಃಪತಿಯಾಗಿ (?) ಅವಾಪ್ತಸಮಸ್ತಕಾಮನಾಗಿ, ಸಮಸ್ತ ಕಲ್ಯಾಣ ಗುಣಾತ್ಮಕನಾಗಿ ಸಕಲ ವೇದಾಂತವೇದ್ಯನಾಗಿ ಸರ್ವಕರ್ಮ ಸಮಾ . . . . ನಾಗಿ ನಾರಾಯಣನು ಸಕಲ ಜಗದ್ರಕ್ಷಣಾರ್ಥವಾಗಿ . . .

* * * *

" ಮಾಲಿನೀ. "

ಇತಿಕಿಲಮುನಿಮುಖ್ಯೋ ನೀರಯಿತ್ವಾ ವಚೋಭಿಃ ।
ಪರಿಣತಮಿವಲಕ್ಷ್ಮ್ಯಾಃ ಪ್ರಾರ್ಥಿತಾನಾಂ ಫಲಾನಾಂ ॥
ಯದುಗಿರಿಗತ . ತದ್ದರ್ಶನಾ ಚ್ಚಕ್ರವರ್ತೀ ।
ಯದುಕುಲ ಬಹುಮಾನ್ಯಂ ಚಿಂತಯಾಮಾಸ ದೇವಂ ॥

ಎಲೈ! ಈ ಪ್ರಕಾರದಲ್ಲಿ ಯೋಗಿಶ್ರೇಷ್ಠನಾದ ನರನಾರಾಯಣನು ವ್ಯಾಸಾದಿ ಮಹರ್ಷಿಗಳಿಗೆ ಉಕ್ತಪ್ರಕಾರ ವಾಕ್ಯಂಗಳಿಂದ ಬುದ್ಧಿಗಲಿಸಿ ಮಹಾಲಕ್ಷ್ಮಿಗೆ ಪ್ರಾರ್ಥಿತವಾದ ಫಲಗಳಿಗೆ ಪರಿಪಾಕರೂಪವಾಗಿ ಯಾದವಾಚಲವಾಸಿಯಾಗಿ ಯದುಕುಲಂಗಳಿಂ ಬಹುಮಾನ್ಯನಾಗಿ ಕೃಪಾಪರನಾಗಿ (?) ಹ ಆದಿನಾರಾಯಣನಂ ಧ್ಯಾನಮಾಡಿಕೊಂಡು ಅಂತರ್ಧಾನವನೈದ್ದಿದನು.

Colophon :

ವಾಧೂಲಾನ್ವಯ ಸಿಂಹಾದ್ರಿ ಮಹಾತ್ಮ್ಯೇ ಯದು ಭೂಭೃತ್ಕೃತವಾನ್ ಪ್ರಥಮೋಧ್ಯಾಯ ಟೀಕಾ ಕರ್ಣಾಟಭಾಷಯಾ.

ಇತಿ ನಾರದೀಯ ಪುರಾಣೇ ಜ್ಞಾನಕಾಂಡೇ ಶ್ರೀಮದ್ಯಾದವಗಿರಿಮಾಹಾತ್ಮ್ಯೇ ಪ್ರಥಮೋಧ್ಯಾಯಃ.

" ಶ್ಲೋಕ. "

ತತಃ ಕರತಲೋಲ್ಲಾ ಸಿ ।
ವೀಣಾವಾದನ ಲಾಲಸಃ ॥
ಆವಿರ್ಬಭೂವ ಭಗವಾನ್ ।
ಅಗ್ರತಸ್ತತ್ರ ನಾರದಃ ॥

ಆ ಉತ್ತರ ಬದರಿಕಾಶ್ರಮದಲ್ಲಿ ವ್ಯಾಸಾದಿಮಹರ್ಷಿಗಳು ಆ ನರನಾರಾಯಣರಂ ಕಾಣದೆ ಚಂಚಲಚಿತ್ತರಾಗಿಹ ಸಮಯದಲ್ಲಿ, ಕರತಲದಲ್ಲಿ ಪ್ರಕಾಶಿಸುತ್ತಿಹ (ವೀಣೆಯನುಳ್ಳವನಾಗಿ) ಹರಿಯ ಗಾನದಲ್ಲಿ ಲವಲವಿಕೆಯನುಳ್ಳವನಾಗಿ ಮಹಾಪ್ರಭಾವಶಾಲಿಯಾಗಿಹ ನಾರದನು ಆ ವ್ಯಾಸಾದಿ ಮಹರ್ಷಿಗಳ ಮುಂದೆ ಆವಿರ್ಭವಿಸಿದ[ರು] (ನು).

End :

"ಶ್ಲೋಕ."

ತತೋ ಗೋದಾವರೀ ತೀರೆ ।
ವಾಸಿನೋ ಹರ್ಣೋಮುನಿ ॥ (?)
ಅವಲೋಕ್ಯ ಪರಾಂ ಪ್ರೀತಿಂ ।
ಚಕ್ಷುಷಾಮುಪಲೇ . ರೆ ॥
ಮುನಯೋಪಿಚ ತಾಂ ದೃಷ್ಟ್ವಾ ।
ಮುದ . ತಥ್ಯಶಂ ಧಮುಃ ॥

ಅನಂತರದಲ್ಲಿ ಗೋದಾವರೀ ತೀರದಲ್ಲಿ ವಾಸವಂ ಮಾಡಿಕೊಂಡು ಇಹ ಹುಲ್ಲೆಗಳು ಋಷೀಶ್ವರರಂ ನೋಡಿ ಚಕ್ಷುಸ್ಸಿಗೆ ಪರಮ ಪ್ರೀತಿಯು ಪಡೆ(ಯಿಸಿ)ದವು. ಅನಂತರದಲ್ಲಿ ಮುನೀಶ್ವರರು ಆ ಹರಿಣಗಳಂ ನೋಡಿ ಮನಸಿನಲ್ಲಿ ಪರಮ ಸಂತೋಷ[ಗಳಂ] (ಮಂ) ಪಡೆದರು.

ಹರಿಣಾನಾಮಹೋಭಾಗ್ಯಂ ।
ಪರಿಪ . ಮಚೇತಪಾಂ ॥
ಲಿವಲಂ ಬಾ (?) . . . .

(ವಿ. ವಿ.)—

ಇದರಲ್ಲಿ ೧ ರಿಂದ ೧೧ ಅಧ್ಯಾಯಗಳು ಸಮಗ್ರ. ೧೨ ನೆಯದು ಅಸಮಗ್ರ, ಹಿಂದಿನ ನಂಬರುಗಳಲ್ಲಿ ವರ್ಣಿತನಾಗಿರುವ ಕಥೆಯೇ ಇದಕ್ಕೂ ವಿಷಯವು. ಆದರೆ ಇದು ಸಂಸ್ಕೃತ ಶ್ಲೋಕ ಮತ್ತು ಕನ್ನಡ ಟೀಕಾ ರೂಪವಾಗಿದೆ. ಈ ಟೀಕೆಯನ್ನು ಬರೆದ ಕವಿಯಾರೋ ತಿಳಿದುಬರುವುದಿಲ್ಲ. ಅತಿ ಶಿಥಿಲ ಗ್ರಂಥಪಾತ್ರ, ವಿಶೇಷ.

No. 268. ರಂಗಕ್ಷೇತ್ರಾಷ್ಟತೀರ್ಥಮಹಿಮೆ.
RAṄGAKṢĒTRĀṢṬATĪRTHAMAHIME.

Substance, Śrītāla. Size, $13\frac{5}{8} \times 1$ inches. Pages, 16. Lines, 8 on a page. Character, Kanarese. Condition, very much injured. Appearance, old.

Complete.

A work in Kanarese prose describing the religious importance of certain holy waters in Śrīraṅgam. The name of the author is not given.

Beginning:

ಅಷ್ಟತೀರ್ಥದ ಮಧ್ಯದಲ್ಲಿ ಚಂದ್ರ ಪುಷ್ಕರಣಿಯು ತೀರ್ಥವಿದ್ದೀತು. ಆ ತೀರ್ಥದೇವನು ಚಂದ್ರನು. ಆ ತೀರ್ಥದ ಋಷಿಯು ಹೆಸರು ವ್ಯಾಸ ಋಷಿ. ಆ ತೀರ್ಥ ರಕ್ಷಕರು—ಪುಷ್ಕರ, ಪುಷ್ಕರಾಕ್ಷೆ, ಕುಮುದ, ಕಾಲ ಈ ನಾಲ್ಕುಮಂದಿಯೂ ಈ ಚಂದ್ರ ಪುಷ್ಕರಣಿ ತೀರ್ಥ ರಕ್ಷಕರು. ಈ ತಿರ್ಥದಲ್ಲಿ ಆ ವ(ನಾ)ನೊಬ್ಬನು ಸ್ನಾನಮಾಡುವಾಗ 'ವಾಸುದೇವ ಪ್ರಿಯತಾಂ' ಎಂದುಸ್ನಾನ ದಾನ ಮಾಡಬೇಕು. ಮಹಾ ಸಂಕಲ್ಪವ ಹೇಳುವುದಕ್ಕೆ ಮುಂಚಿತಾಗಿ ಹೇಳು

ವಂಥಾ ಶ್ಲೋಕ:—' ಅಶೇಷ ಜಗದಾಧಾರ। ಶಂಖ ಚಕ್ರಗದಾಧರ॥ ಅನುಜ್ಞಾಂ ದೇಹಿಮೇ ದೇವ। ಯುಷ್ಮತ್ತೀರ್ಥ ನಿಷೇವಣೆ॥' ಈ ತೀರ್ಥದ ಸಮೀಪದಲ್ಲಿ ಮಾಡುವ ಸಕಲವಾದ ದಾನಕ್ಕಿಂತಲೂ ಅತ್ಯಧಿಕವಾದಂಥಾದ್ದು ತಿಲದಾನ, ಪ್ರಶಸ್ತವಾದಂಥಾದ್ದು. ಸರ್ವಪಾಪ ಪ್ರಕಾಶನವಾದಂಥಾದ್ದು. ಇದು ಚಂದ್ರಪುಷ್ಕರಣಿ ಯುತ್ಪತ್ತಿ.

* * * *

ಈ ತೀರ್ಥಕ್ಕೆ ಈಶಾನ್ಯ ಭಾಗದಲ್ಲಿ ಆಮ್ರವೃಕ್ಷತೀರ್ಥವಿದ್ದೀತು. ಆ ತೀರ್ಥದ ಋಷಿಯ ಹೆಸರು ವಸಿಷ್ಠನೆಂ[ಬ ನಾಮ] (ದು). ಆ ತೀರ್ಥದೇವತೆ ಸೂರ್ಯನು. ಆ ತೀರ್ಥಕ್ಕೆ ಕಾವಲು ವಿಷ್ವಕ್ಸೇನನು. ಆ ತೀರ್ಥದಲ್ಲಿ ಸ್ನಾನದಾನವನ್ನು ಮಾಡುವಾಗ ' ಹೃಷೀಕೇಶಃ ಪ್ರೀಯತಾ ' ಎಂದು ಜಪಿಸಿಕೊಳ್ಳಬೇಕು. ಈ ತೀರ್ಥದಲ್ಲಿ ಭೂದಾನ ವಿಶೇಷವಾದಂಥಾದ್ದು. ಈ ಸ್ನಾನ ದಾನದಿಂದ ಮಾತೃವಚನ ಪಿತೃವಚನಗಳ ನುಲ್ಲಂಘಿಸಿ ನಡೆದಂಥಾ ಪಾಪ ಪರಿಹಾರ. ಈ ನವ ತೀರ್ಥಗಳಲ್ಲಿ ಸ್ನಾನವನ್ನು ಮಾಡುವಾಗ ಆಯಾ ತೀರ್ಥ ಋಷಿಗಳ ಗಣನಾಯಕರ ಸ್ಮರಿಸಿಕೊಂಡು ಮತ್ತು ಬ್ರಹ್ಮ, ಸೂರ್ಯ, ಇಕ್ಷ್ವಾಕು ರಾಘವ ವಿಭೀಷಣಾದಿಗಳಿಗೆ ತರ್ಪಣವನ್ನು ಬಿಡಬೇಕು. ಆಯಾ ತೀರ್ಥದ ಸಮೀಪದಲ್ಲಿ ಉಚ್ಚರಿಸುವಂಥಾದ್ದು ವಾಸುದೇವ ನಾಮ ಮೊದಲಾಗಿ ಈ ನವತೀರ್ಥ ನಾಮಗಳಿಗೂ ತೃಪ್ತಿ [ಕರವ] (ಯ)ನ್ನು ಮಾಡಬೇಕು.

ಸಪ್ತ ಪ್ರಾಕಾರದ ವಿವರ :—ಮೊದಲ ಗೋಪುರದ ಪ್ರಾಕಾರ ರಾಯ ಗೋಪುರ ಪ್ರಾಕಾರ ವೆಂಬ ಹೆಸರು. ಆ ಗೋಪುರದ ಹೊರ ಪಾರ್ಶ್ವದಲ್ಲಿರುವ ದೇವಸ್ಥಾನಗಳು. ಅವಾವ್ಯವೆಂದರೆ :—(1) ವಿಠಲಸ್ವಾಮಿಯ ದೇವಸ್ಥಾನ, (2) ಆದಿವರಾಹಮೂರ್ತಿ, ಆ ದೇವಸ್ಥಾನದಲ್ಲಿ ಹನುಮಂತನಿದಾನೆ, (3) ವೆಂಕಟೇಶ್ವರ ದೇವಸ್ಥಾನ, (4) ಕರಾಲಸಿಂಗರಿ ದೇವಸ್ಥಾನ, (5) ಮೊಟಪಾಲಸ್ವಾಮಿ ದೇವಸ್ಥಾನ, (6) ಕುಲಶೇಖರಾಳ್ವಾರು ದೇವಸ್ಥಾನ, (7) ಪಳಗೆ ಪೆರುಮಾಳು ದೇವಸ್ಥಾನ, (8) ಆಮುಂದೆ ಲಕ್ಷ್ಮೀನಾರಾಯಣಸ್ವಾಮಿ, (9) ಆದಿ ವರಾಹಮೂರ್ತಿ, (10) ವರದ ನಾರಾಯಣಸ್ವಾಮಿ, (11) ದಶಾವತಾರಸ್ವಾಮಿ, (12) ತಿರು . . ರು, (13) ಜಂಗಲಿರಾಯ ಕೃಷ್ಣರಾಯ ಪಿಳ್ಳೈರ್ವಾರು, (14) ಆದಿಕೇಶವ ಪೆರುಮಾಳು ಕೊ . ಪೆರುಮಾಳು, (16) ರಘುಪತಿ ಸ್ವಾಮಿ, (17) ವಿತಿರಿಂದ ಪೆರುಮಾಳು, (18) . . . ಪೆರುಮಾಳು, (19) ವೆಂಕಟನಾಥ ಪೆರುಮಾಳು, (20) ಪಲಮುಂಡಲ ಪೆರುಮಾಳು, (21) ಎಲ್ಲಕರ ತಿರುಪಾಳ್ವಾರು, (22) ತಿರುವನಂತಾಳ್ವಾರು, (23) ಕಾಟಳ ಸಿಂಗರಿ ಇವು ಮುಂ . . . . . ಗಳು ರಾಯ ಗೋಪುರದ ಹೊರ ಪಾರ್ಶ್ವದಲ್ಲಿ ಅಷ್ಟ ತೀರ್ಥದ ಮಧ್ಯದಲ್ಲಿದ್ದಾವು.

End :

ಪೂರ್ವ ಭಾಗದಲ್ಲಿ ಬಿಳಿ ಗೋಪುರದ ನೆಲೆ . . . . ದಾಮೋದರ ಗೋಪುರ ನೆಲೆ, ಪಶ್ಚಿಮ ಭಾಗದಲ್ಲಿ ಮಾಳನಿತ್ತಿ ಸೂಳೆ ಕಟ್ಟಿಸಿದ ಗೋಪುರದ ನೆಲೆ ೫ ಕಂಲಿ ಗೋ . . . . ಗೋಪುರ ಹದಿನೈದು ಚಿಕ್ಕಗೋಪುರ ಒಂಭತ್ತು. ಗೋಪುರದ ಬಾಗಿಲು ೧೫. ದಿಡ್ಡಿ ೧೩. ಇನು ರಂಗ . . . . . ಈ ರಂಗ ಸ್ಥಳ ಗೋಪುರಗಳಲ್ಲಿ ಚಿನ್ನದ ಕಲಶ ನಾಲ್ವತ್ತು ಮೂರು ಸುವರ್ಣದ ತಗಡಿನ ಗರುಡಗಂಬ, ಈ ಪೆಶೊ . . . . ತ್ರದ (?) ವರ್ಣನೆ ಸಮಾಪ್ತ. ಮಂಗಳ ಮಹಾ.

Colophon :

[ಅಷ್ಟಕ್ಷೇ]ತ್ರದ ವರ್ಣನೆ ಸಮಾಪ್ತ. (?)

(ವಿ-ವಿ.)—

[ಅಷ್ಟಕ್ಷೇ]ತ್ರದ ವರ್ಣನೆ ಸಮಗ್ರ(?) ಶಿಥಿಲ. ಅಕ್ಷರಗಳು ಸಾಮಾನ್ಯ. ಗ್ರಂಥ ಪೂರ್ತವಿದೆ. ಕವಿ ಯಾರೆಂಬುದು ತಿಳಿಯುವುದಿಲ್ಲ. ರಂಗಕ್ಷೇತ್ರದ ಸುತ್ತಲೂ ಇರುವ ಅಷ್ಟ ತೀರ್ಥಗಳ ಮಹಿಮೆ, ಅವುಗಳ ಬಳಿಯಿರುವ ಗುಡಿ, ಗೋಪುರಗಳು ಅವುಗಳನ್ನು ಕಟ್ಟಿಸಿದ ವರ ವಿಷಯ ಇತ್ಯಾದಿಗಳನ್ನು ಈ ಗ್ರಂಥವು ಒಳಗೊಂಡಿರುವುದು.

No. 269. ವೆಂಕಟಗಿರಿಮಾಹಾತ್ಮ್ಯ-

VEṄKAṬAGIRIMĀHĀTMYA.

Substance, palm-leaf. Size, 14¼ × 1¼ inches. Pages, 104. Lines, 6 on a page. Character, Kanarese. Condition, much injured. Appearance, old.

Complete.

A free rendering in prose, describing the story of Veṅkaṭagiri-māhātmya of Sanskrit Bramhāndapurāṇa ; by Cikka Upādhyāya.

Beginning :

ಬ್ರಹ್ಮಾಂಡ ಪುರಾಣದ ಕ್ಷೇತ್ರ ಮಾಹಾತ್ಮ್ಯ ಖಂಡವು ಪ್ರವರ್ತಿಸುತ್ತಿರೆ ಶೌನಕಾದಿಮುನಿಗಳು ಸೂತನಂ ಪ್ರಶ್ನೆಯಂ ಮಾಡುತ್ತಿದ್ದಾರೆ. ಎಲೈ ! ಸೂತ ಪೌರಾಣಿಕನೆ ! ಮಹಾನುಭಾವನೆ ! ಭೂತಳದಲ್ಲಿ ಪ್ರಸಿದ್ಧಂಗಳಾದ ಅನೇಕ ಪುಣ್ಯಕ್ಷೇತ್ರಂಗಳು, ಪುಣ್ಯತೀರ್ಥಂಗಳು ನಿನ್ನಿಂದ ನಿರೂಪಿಸಲ್ಪಟ್ಟುವು. ಆ ಪುಣ್ಯಕ್ಷೇತ್ರಂಗಳತ್ತಣಿ ನಧಿಕ ತಮಮಾದ ಪಾಪನಿವಾರಕಮಾದ ಪುಣ್ಯಕ್ಷೇತ್ರಮುಂ ಅಂತಹ ಪುಣ್ಯತೀರ್ಥಮುಂಟಾದುದನ್ನು ನಿಶ್ಚಿತಮಪ್ಪಂತು ನಮಗೆ ನಿರೂಪಿಸು.

ಯಸ್ಮಿನ್ವಸತಿ ಸರ್ವಾತ್ಮಾ । ಮಾಧವೋ ಭಕ್ತವತ್ಸಲಃ ॥
ವಿಹರನ್ಮುದಿತೋ ನಿತ್ಯಂ । ಶ್ರಿಯಾ ಭೂಮ್ಯಾಚ [ನಿರ್ಮ] (ನೀಲಯಾ) ॥

ಆವ ಪುಣ್ಯಕ್ಷೇತ್ರದಲ್ಲಿ, ಸರ್ವಾತ್ಮಕನಾದ ಭಕ್ತವತ್ಸಲನಾದ ಮಾಧವನು ನಿತ್ಯಮುದಿತನಾಗಿ ಶ್ರೀ ಭೂಮಿ ನೀಳಾದೇವಿಯರೊಡನೆ ಕ್ರೀಡಿಸುತ್ತಿರುವನು.

* * * *

ನಿಮ್ಮ ಪಾದೋದ್ಭವೆ [ಭಾದ] ಗಂಗೆಗೆ ದಕ್ಷಿಣದಿಗ್ಭಾಗದಲ್ಲಿ ದಂಡಕಾರಣ್ಯದಲ್ಲಿ ತ್ರಿಶತ ಯೋಜನ ಪರಿಮಿತದಲ್ಲಿ ದಕ್ಷಿಣಾಂಬುಧಿಗೆ ಉತ್ತರಭಾಗದಲ್ಲಿ ಪೂರ್ವಾಬ್ಧಿಗೆ ಪಂಚಯೋಜನಗಳಿಂದ ಮಿತಮಾದ (?) ಪಶ್ಚಿಮಭಾಗದಲ್ಲಿ ; ಎಲೈ ಸ್ವಾಮಿಯೆ ! ಈ ಸ್ಥಾನದಲ್ಲಿ ಕ್ರೀಡಾಯೋಗ್ಯವು ನಿನಗೆ. ಅಲ್ಲಿ-ಇಹ ಜನಂಗಳು ತಪಸ್ವಾಧ್ಯಾಯ ವರ್ಜಿತರು. ಆಧಿವ್ಯಾಧಿಹತರಾಗಿ ರಕ್ಷಕನಂ ಕಾಣದೆ ಇರುತ್ತಿರುವರು. ಅವರ ಅನುಗ್ರಹಕ್ಕೋಸುಗ ಎಲೈ ! ಹರಿಯೆ ನೀನಿಂದಲ್ಲಿ ಇರಲ್ತಕ್ಕುದು. ಎಲೈ ! ಭೃಗುಮುನಿಯೆ ! ತಾನಿಂತು ಬಿನ್ನಹಂ ಮಾಡೆ ಆಗ ನಾರಾಯಣನಿಂತೆಂದಂ. ತನ್ನಂ ಕುರಿತು ಎಲೈ ! ನಾರದನೆ ! ಚೋಳರಾಜಸುತನೊರ್ವಂ

ಕಲಿಯುಗದಲ್ಲಿ ಪುಟ್ಟುವಂ. ಚಕ್ರವರ್ತಿಯೆಂದು ತನ್ನ ಭಕ್ತನು[ತನ್ನಂ] ಅಲ್ಲಿ ಪೂಜಿಸು ವಂ. ಎಲೈ ! ನಾರದನೆ ! ಆತನನನುಗ್ರಹಿಸಲೋಸುಗ ಅಲ್ಲಿ ವಾಸವಂ ಮಾಡುವೆಂ ತಾನೆಂ ದು ನಾರಾಯಣಂ ಶ್ವೇತದ್ವೀಪದಲ್ಲಿ ತನಗೆ ನಿರೂಪಿಸಿದನೆಂದು ನಾರದಮುನಿಯು ಭೃಗುಮು ನಿಗೆ ನಿರೂಪಿಸುತ್ತಿದ್ದನೆಂಬಲ್ಲಿಗೆ.

Colophon :

ಪ್ರಥಮಾಧ್ಯಾಯಃ.

ತದನಂತರ ಕಥಾ ವೃತ್ತಾಂತಮಂ ನಾರದಂ ಹೇಳುತಿದ್ದಾನೆ. ಎಲೈ ! ಭೃಗುಮುನಿಯೆ ! ಬಳಕ ಷಾಡ್ಗುಣ್ಯ ಪೂರ್ಣನಾದ ವಿಷ್ಣುವು ಮುಂದಿಹ ಅನಂತನಂ ಕರೆದು ಹರ್ಷೋತ್ಫುಲ್ಲ ವಿಲೋಚನನಾಗಿ ಮೇಘಗಂಭೀರವಾದ ವಾಕ್ಕಿನಿಂದ ನುಡಿದಂ.

End :

ಎಲೈ ! ಶೌನಕಾದಿ ಮುನಿಗಳಿರ ! ಕೇಳಿ· ಆ ನಾರದಮುನೀಶ್ವರನಿಂತು ಆ ಭೃಗುಮುನೀ ಶ್ವರಂಗೋಸುಗ ವೆಂಕಟಾಚಲ ಮಾಹಾತ್ಮ್ಯಮಂ ನಿರೂಪಿಸಿದನು. ಬಳಿಕ ತನಗೆ ವೇದವ್ಯಾಸ ಮುನಿಯಿಂದ ನಿರೂಪಿಸಲ್ಪಟ್ಟುದು. ಎಲೈ ! ಮುನಿಗಳಿರ ! ಆ ಭೃಗುಮಹಾಮುನೀಶ್ವರನು ಮುನಿವರನಾದ ನಾರದ ಮಹಾಮುನೀಶ್ವರನಿಂದ ಹೇಳಿಲ್ಪಟ್ಟ ವೆಂಕಟಾಚಲ ಮಾಹಾತ್ಮ್ಯಮಂ ಬಹಳವಾಗಿ ಕೇಳ್ದು ತದನಂತರದಲ್ಲಿ ಆ ಭೃಗುಮುನೀಶ್ವರನು ಲಕ್ಷ್ಮೀಪತಿಯಾದ ನಾರಾಯಣ ನಂ ನೋಡಲೋಸುಗ ಅತ್ಯಂತ ಸ್ಥಿರ ಚಿತ್ತನಪ್ಪುದರಿಂದ ವೆಂಕಟಾಚಲನೆಯ್ದಿದನೆಂದು ನೈಮಿ ಶಾರಣ್ಯವಾಸಿಗಳಾದ ಶೌನಕಾದಿಮುನಿಗಳ್ಗೆ ಸೂತ ಪೌರಾಣಿಕನಿಂತು ನಿರೂಪಿಸುತ್ತಿದ್ದನೆಂ ಬಲ್ಲಿಗೆ.

" ಮತ್ತೇಭ ವಿಕ್ರೀಡಿತ "

ಇದು ಬ್ರಹ್ಮಾಂಡ ಪುರಾಣದೊಳ್ ವಿದಿತ ಪುಣ್ಯಕ್ಷೇತ್ರ ಮಾಹಾತ್ಮ್ಯ ಖಂ |
ಡದೊಳುರ್ವೀವರ ಶೇಷಶೈಲ ಮಹಿಮಾವಿಸ್ತಾರಮಂ ನಾರದಂ ||
ಮುದವೊಪ್ಪಲ್ ಭೃಗುವಿಂಗೆ ಪೇಳ್ದುದಿದನಿಂತೆಲ್ಲರ್ಗೆ ಕಾಣ್ಬಂತೆವೋ |
ಚದುರಂ ಶ್ರೀ ಚಿಕುಪಾಧ್ಯ ಮಂತ್ರಿ ಬರೆದಂ ವ್ಯಾಖ್ಯಾನ ವಿಸ್ತಾರಮಂ ||

Colophon :

ಇದು ಸಮಸ್ತ ಸುರವಿರಾಜನ್ಮೌಳಿಮಾಣಿಕ್ಯಶೋಭಾ ನೀರಾಜಿತ ಚರಣರಾಜೀವ ರಂಗರಾಜ ಸತ್ಕಟಾಕ್ಷ ಪ್ರವರ್ಧಮಾನ ರಾಜರಾಜಪದವೀ ವಿಭ್ರಾಜಿತ ಶ್ರೀ ಚಿಕದೇವರಾಜ ಮುಖ್ಯಾಮಾತ್ಯ ಚಿಕುಪಾಧ್ಯಾಯ ಮಂತ್ರಿ ಶಿಖಾಮಣಿ ವಿರಚಿತಮಪ್ಪ ವೆಂಕಟಗಿರಿಮಾಹಾತ್ಮ್ಯ ಕರ್ಣಾಟಕ ಟಿಪ್ಪಣದೊಳ್ ಕೃಷ್ಣ ಶರ್ಮಭಾರ್ಯಾಪುನರುಜ್ಜೀವನ ದರ್ಶನಂ ದಶಮಾಶ್ವಾಸಂ.

(ವಿ-ವಿ.)—

ಇದು ಗದ್ಯರೂಪವಾದದು. ಇದರಲ್ಲಿ ೧೦ ಆಶ್ವಾಸಗಳಿವೆ· ೫೪೧ ವಾಕ್ಯಗಳಿವೆ· ಕಥಾ, ಕಥೋಪದೇಶ ಕವಿ ಇತ್ಯಾದಿ ವಿಷಯಗಳ ಸಂಗ್ರಹವು ಮೇಲ್ಕಂಡ ವೃತ್ತದಲ್ಲಿ ಸೂಚಿತವಾಗಿದೆ. ಅತಿ ಶಿಥಿಲ.

No. 270. ಶ್ರೀರಂಗಮಾಹಾತ್ಮ್ಯ.
ŚRĪRAÑGAMĀHĀTMYA.

Substance, Śrītāla. Size, 9⅜ × 1¾ inches. Pages, 106. Lines, 8 on a page. Character, Kanarese. Condition, much injured. Appearance, old.

Complete.

A free rendering in prose of Śrīraṅgamāhātmya from Sanskrit Brahmāṇḍapurāṇa; by Cikka Upādhyāya, son of Raṅgāryapaṇḍita and Nāccāramma.

Beginning:

" ಶಾರ್ದೂಲ ವಿಕ್ರೀಡಿತ "

ಶ್ರೀಕಾಂತಂ ಶ್ರಿತರಕ್ಷಣಾನಿರತನಂಭೋಜಾತಪತ್ರೇಕ್ಷಣಂ ।
ನಾಕಾಧೀಶ್ವರ ಮುಖ್ಯದೇವಗಣವಂದ್ಯಂ ರಾಕ್ಷಸಾರಾತಿ ವಿ ॥
ಶ್ವಾಕಾರಂ ಫಣಿರಾಜತಲ್ಪಶಯನಂ ಸಹ್ಯಾತ್ಮಮಧ್ಯಾಗಮಂ ।
ಲೋಕೇಶಂ ವರದಾತನಕ್ಕೆಮಗೆ ಶ್ರೀರಂಗೇಶನೊಲ್ದಾವಗಂ ॥

*   *   *

ಕಂ॥ ಕಾಮಂ ಚೆಲ್ವಿಕೆಯೊಳ್ ಕಲಿ ।
ಭೀಮಂ ಸಮರದಲಿ ಸತ್ಯದೊಳ್ ಶ್ರೀರಾಮಂ ॥
ಕಾಮಂ ಭೀಮಂ ರಾಮಂ ।
ಭೂಮಿಗೆ ಚಿಕದೇವರಾಯನೆನಿಪನದೊರ್ವಂ ॥

" ಮಹಾಸ್ರಗ್ಧರೆ "

ಸತತಂ ಶ್ರೀಚಿಕ್ಕದೇವ್ರೋರ್ವಿಪನೆಸಗುವ ದಾನಾಂಬುವಿಂ ಕೀರ್ತಿವಲ್ಲೀ ।
ತತಿ ಭೂಲೋಕಂಗಳಂ ವ್ಯಾಪಿಸಿ ಸುರನಗಮಂ ಪತ್ತಿಯೂರ್ವ್ಯೋಮವಂಶೋ ॥
ನ್ನತಿಯಿಂದಂ ಪರ್ಬಿ ತಾರಾಮುಕುಳನಿಕರಮಂ ಲಕ್ಷ್ಮಮತ್ತದ್ವಿರೇಫಾಂ ।
ಚಿತ ಚಂಚಚ್ಚಂದ್ರಪುಷ್ಪಸ್ತಬಕಮನಿರದಾಂತೀಂ ಜಗದ್ವ್ಯಾಪ್ತಮಾಯ್ತೋ ॥

*   *   *   *

ಸಕಲ ಪುರಾಣಸಾರಭೂತವಾದ ಮಹೇಶ್ವರನಾರದ ಸಂವಾದವಾದ ಪನ್ನೆರಡುಸಾವಿರ ಸಂಹಿತೆಗಳುಳ್ಳ ಬ್ರಹ್ಮಾಂಡಪುರಾಣದಲ್ಲಿ ದಶಾಧ್ಯಾಯಪರಿಮಿತವಾದ ಶ್ರೀರಂಗ ಮಾಹಾತ್ಮ್ಯದಲ್ಲಿ ಪರಮೇಶ್ವರದೇವರ ದೆಸೆಯಿಂದ ಕೇಳಲ್ಪಟ್ಟ ಸಕಲ ಪುರಾಣಾರ್ಥಂಗಳುಳ್ಳಂತಹ ಮಹಾನುಭಾವನಾದ ನಾರದಮುನೀಶ್ವರಂ ಆರುದ್ರದೇವನಂ ಸ್ತುತಿಸಿ ಅಭಿಮುಖನನ್ನಾಗಿ ಮಾಡಿಕೊಂಡು ಸಂಸ್ಕೃತಾರ್ಥಾನುಪೂರ್ವಕವಾದ, ಕೇಳಲು ಯೋಗ್ಯವಾದ ಅರ್ಥವಿಶೇಷವಂ ನಾರದಮುನೀಶ್ವರಂ ಪರಮೇಶ್ವರನಂ ಕೇಳುತಿದ್ದಾನೆ.

*   *   *

ರಂಗಮಾಹಾತ್ಮ್ಯಮಂ ಪಂಚಮಿ ಅಷ್ಟಮಿ ಏಕಾದಶಿ ದ್ವಾದಶಿ ಪೌರ್ಣಿಮೆ ಅಮಾವಾಸ್ಯೆಗಳಲ್ಲಿ ಪಠಿಸಿದಾತಂ ವಿಷ್ಣುಪದವನೆಯ್ದುವನೆಂಬ ಕಥಾ ವೃತ್ತಾಂತಮಂ ನಾರದಂಗೆ ಪರಮೇಶ್ವರಂ ಬೋಧಿಸುತ್ತಿದ್ದಾನೆಂಬೀ ಕಥಾಸಂಗತಿಯಂ ಸರ್ವಜನರ್ಗೆ ಸುಲಭಮಾಗಿ ತಿಳಿವಂತೆ ಕರ್ಣಾಟಕ ಭಾಷೆಯಿಂದೆ.

Colophon:

ಇದು ಸಕಲನೃಪ (ಮಣಿ) ಮಕುಟಮಣಿಗಣ ರುಚಿರಸದಮಳ ಪದಯುಗನಾದ ಚಿಕದೇವ ಮಹಾರಾಜೇಂದ್ರಪ್ರೇರಿತ ಕರಿವರದ ಚರಣಸರಸಿಜ ಮಧುಕರಾಯಮಾನನುರು ಕರ್ಣಾಟಕ ಭಾಷ್ಯಕಾರ ಚಿಕುಪಾಧ್ಯಾಯರಚಿತ ಶ್ರೀರಂಗಮಾಹಾತ್ಮ್ಯದೊಳ್ ಪ್ರಥಮಪರಿಚ್ಛೇದಂ.

ಕಂ॥ ಬೊಮ್ಮಂ ಪ್ರಣವೋಚ್ಚಾರಣ ।
ದಿಂಮಿಗೆ ತಾಂಪಡೆದ ವೇದಮಂ ನೀಗಿಬೊಡಾ ॥
ದಂ ಮತ್ಸ್ಯರೂಪದಿಂ ಕೊಂ ।
ದಂ ಮಧುಕೈಟಭರನಿತ್ತು ವಿಧಿಗಾಶ್ರುತಿಯಂ ॥

ಬಳಿಕ ನಾರದಂ ಭೂತಭವಿಷ್ಯದ್ವರ್ತಮಾನ ಜ್ಞಾನಮುಳ್ಳ ಪರಮೇಶ್ವರನಂ ಸ್ತೋತ್ರಮಂ ಮಾಡಿ [ನಾರದನು] ಕೃತೋಪಕಾರ ಪ್ರಕಾಶನ ಪೂರ್ವಕನಾಗಿ ಪ್ರಸನ್ನನನಾಗಿ ಮಾಡಿಕೊಳ್ಳುತ್ತಿದಾನೆ.

End:

ಈ ಕತೆಯಂ ಕೇಳಿದ ಬ್ರಾಹ್ಮಣಂ ಶತ್ರುಗಳಂ ಜೈಸುವಂ. ಕ್ಷತ್ರಿಯಂ ರಾಜ್ಯಮಂ ಪಡೆವಂ. ವೈಶ್ಯಂ ಧನಸಂಪನ್ನನಾಗುವಂ. ಶೂದ್ರಂ ವಿಷ್ಣುಭಕ್ತನಾಗುವಂ. ವೀರಭಟಂ ಯುದ್ಧಾಂಗಣದಲ್ಲಿ ಜೈಸುವಂ. ಗರ್ಭಿಣಿಯಾದ ಸ್ತ್ರೀ ಸುಖದಿಂ ಪುತ್ರನಂ ಪಡೆವಳು. ಕನ್ನಿಕೆ ಸತ್ಪತಿಯಂ ಕಾಣ್ಬಳು. ಈ ಮಾಹಾತ್ಮ್ಯಮಂ ಆವಂ ಕೇಳುತ್ತಿದ್ದಾನೋ, ಆವಂ ಬರೆಯುತ್ತಿದ್ದಾನೋ, ಆವಂ ಪಾಠವಂ ಮಾಡಿಕೊಂಡಿದ್ದಾನೋ ಅವಂ ಈ ಲೋಕದಲ್ಲಿ ಅನೇಕ ಸುಖಮನನುಭವಿಸಿ ವಿಷ್ಣುಸಾಯುಜ್ಯಮಂ ಪಡೆವನೆಂಬ ಕಥಾ ಸಂಗತಿಯಂ ನಾರದಂಗೆ ಪರಮೇಶ್ವರಂ ಓದಿಸುತಿರ್ದನೆಂಬ ಕಥಾ ಸಂಗತಿಯಂ ಸರ್ವಜನರ್ಗೆ ಸುಲಭಮಾಗಿ ತಿಳಿವಂತೆ ಕರ್ಣಾಟಕ ಭಾಷಾರಚನೆಯಿಂ;

Colophon:

ಇದು ಸಕಲ ನೃಪಮಕುಟಮಣಿಗಣ * * ಶ್ರೀರಂಗಮಾಹಾತ್ಮ್ಯದೊಳ್ ದಶಮಪರಿಚ್ಛೇದಂ ॥

(ವಿ.ವಿ.)—

ಇದು ಗದ್ಯರೂಪವಾದುದು. ಇದರಲ್ಲಿ ೧೦ ಆಶ್ವಾಸಗಳಿವೆ. ಗ್ರಂಥಾವತಾರದಲ್ಲಿ ರಂಗೇಶಸ್ತುತಿಯಿದೆ. ಬಳಿಕ ಕವಿ. ವರದರಾಜ, ಲಕ್ಷ್ಮಿ, ೧೨ ಆಳ್ವಾರುಗಳು, ಭಾಷ್ಯಕಾರ ಇವರನ್ನು ಸ್ತುತಿಸಿ, ಚಿಕದೇವರಾಜನ ಮತ್ತು ತನ್ನ ವಂಶಾವಳಿಯನ್ನು ಹೀಗೆ ಹೇಳಿಕೊಂಡಿರುವನು ಯದುಕುಲ ಪರಂಪರೆಯಲ್ಲಿ ಶೂರಸೇನನ ಮೊಮ್ಮಗನೂ, ವಸುದೇವನ ಪುತ್ರನೂ ಆದ ಶ್ರೀಕೃಷ್ಣಭಗವಂತನು, ಮುಂದೆ ತಾನಿರುವ ಪುರವು ಸಮುದ್ರದಲ್ಲಿ ಮುಳುಗಿಹೋಗುವುದೆಂಬುದಂ ತಿಳಿದು ಮಾಯಾದೇವಿಯಂ ಕರೆದು, ಯದುಶೈಲದಲ್ಲಿ ತನ್ನ ಕುಲದೈವವಿರುವುದೆಂದೂ, ಅದಕ್ಕೆ

ಸಮೀಪದಲ್ಲಿ ಕನ್ನಡ ರಾಜ್ಯವಿರುವುದರಿಂದ, ತನ್ನ ವಂಶಜರಂ ಅಲ್ಲಿಗೆ ಕೊಂಡು ಹೋಗುವುದೆಂದಾಜ್ಞಾಪಿಸಲು, ಮಾಯಾದೇವಿಯು ದೇವಕೀ ಗರ್ಭದಿಂದ ರೋಹಿಣೀ ಗರ್ಭಕ್ಕೆ ಬಲರಾಮನನುಯ್ದಂತೆ, ಆಯದುವಂಶಜರಂ ದ್ವಾರಕಾನಗರದಿಂದ ಮಹಿಶೂರೊಳಿಟ್ಟು, ಬಳಿಯ ಬೆಟ್ಟದೊಳ್ ತಾಂ ಚಾಮುಂಡಿಯೆಂಬ ಪೆಸರಿಂ ನಿಂತಳ್. ಆ ರಾಜವಂಶದಲ್ಲಿ ಬೆಟ್ಟದ ಚಾಮರಾಜನುದಯಿಸಿ, ಆ ಪರಂಪರೆಯಲ್ಲಿ ಚಿಕದೇವರಾಜನು ಜನಿಸಿ, ಯರಸಾಗಿ ವೈಭವದಿಂ ರಾಜ್ಯವಂ ವಿಸ್ತರಿಸಿದಂ. ಈತನೇ ಕವಿಯಾದ ಚಿಕ್ಕುಪಾಧ್ಯಾಯ ಮಂತ್ರಿಗೆ ಪೋಷಕನು. ಚಿಕ್ಕುಪಾಧ್ಯಾಯನು ಶ್ರೀವೈಷ್ಣವ ಕವಿ. ಯಜುರ್ವೇದಿ· ಪೌರುಕುತ್ಸಗೋತ್ರದವನು. ಇವನ ಕುಲದೇವತೆ ಕಂಚೀವರದರಾಜ. ಇವನ ಸ್ಥಳ ತ್ರಿಕದಂಬಪುರ. ಈತನ ವಂಶಪರಂಪರೆ:— ' ಅಲ್ಲಾಳನಾಥ; ಮಗ ಆರ್ಯ· ಇವನ ಪುತ್ರ ವರದಾಚಾರ್ಯ; ಈತನ ಮಗ ಕರ್ಣಾಟಕ ಭಾಷಾಚತುರ ದೇವರಾಚಾರ್ಯ· ಇವನ ತಮ್ಮ ಕವಿಕ್ಷ್ಮಾಪಾಲಕ ರಂಗಾರ್ಯಪಂಡಿತ· ಈತನ ಪತ್ನಿ ನಾಚ್ಯಾರಮ್ಮ. ಇವರಿಗೆ ಲಕ್ಷ್ಮೀಪತಿ, ದೇವರಾಜರೆಂದಿರ್ವರು ಪುತ್ರರು. ಈ ಲಕ್ಷ್ಮೀಪತಿಯೇ ಚಿಕ್ಕುಪಾಧ್ಯಾಯನು.' ಈತನು ಮೈಸೂರರಸನಾದ ಚಿಕದೇವರಾಜನಲ್ಲಿ (1672—1704) ಮಂತ್ರಿಯೂ, ಕವಿಯೂ ಆಗಿದ್ದನು. ' ಅಷ್ಟೈಶ್ವರ್ಯಾಪ್ತಪುತ್ರ ಬಹುಧನಸಂಪನ್ನನಾಗಿ ಯಾಚಕಜನ ಸುರಧೇನುವಾಗಿ ಸ್ವಜನಪರಜನ ಲೋಕಜನ ಚಿಂತಾಮಣಿಯಾಗಿ ಚಿಕ್ಕದೇವಮಹಾರಾಜೇಂದ್ರದತ್ತ ಸಕಲ ತಂತ್ರ ಸ್ವತಂತ್ರನಾಗಿ ಕರಣಿಕಾಗ್ರೇಸರನಾಗಿ ಅಧೀತ ಸಕಲ ವೇದಶಾಸ್ತ್ರ ಪುರಾಣಮುಖ್ಯ ನಾನಾವಿಧ ವಿದ್ಯನಾಗಿ ಕವಿತಾವಾಕ್ಪತಿಯಾಗಿ ಹರಿಭಕ್ತಿ ರಸಾಸ್ವಾದನಪರನಾಗಿ ಇದ್ದನು.' ಇನ್ನೂ ಈತನ ವಿಷಯಕವಾದ ಹೆಚ್ಚು ಸಂಗತಿಗಳನ್ನು ತಿಳಿಯ ಬೇಕಾದರೆ ಕರ್ಣಾಟಕ ಕವಿ ಚರಿತ್ರೆ ೨ ನೆಯ ಭಾಗವನ್ನು ನೋಡುವುದು.

No. 271. ಶ್ರೀರಂಗಮಾಹಾತ್ಮ್ಯ·
ŚRĪRAṄGAMĀHĀTMYA.

Substance, Śrītāla. Size, $18\frac{6}{16} \times 2\frac{1}{16}$ inches. Pages, 31. Lines, 12 on a page. Character, Kanarese. Condition, injured. Appearance, old.

Begins on fol. 15*a*. The other works herein are:—(1) Candraśēkharāṣṭaka 1*a*, (2) Liṅgāṣṭaka 1*b*, (3) Aparādhagrantha 2*a*, (4) Śivāṣṭōttara 2*b*, (5) Aṣṭōttaragrantha 3*b*, (6) Dēvī Aṣṭōttara 4*a*, (7) Ṣaḍakṣaragrantha 5*a*, (8) Mahādēvastōtra 5*a*, (9) Śivapūja Aparādhastōtra 6*a*, (10) Pradōṣadagrantha 6*a*, (11) Basavarājavijaya or Vṛṣabhēndravijaya, 7*a*.

Complete.

Same work as the above.

(ವಿ.ವಿ·)—

ಇದರಲ್ಲಿ ಮೊದಲಿಂದ ಕೊನೆಯವರೆಗೂ ಇದೆ. ಆದರೆ ೧ ನೆ ಅಧ್ಯಾಯದಂತ್ಯವೂ ೨ ರ ಆದಿಭಾಗವೂ ಉಳ್ಳ ಒಂದು ಓಲೆ ಮಾತ್ರ ಲೋಪವಾಗಿದೆ. ಶಿಥಿಲ ಕವಿ ಚಿಕ್ಕುಪಾಧ್ಯಾಯ ಹಿಂದೆ ವರ್ಣಿತವಾದ ಗ್ರಂಥವೇ ಆಗಿದೆ.

No. 272. ಶ್ರೀರಂಗಮಾಹಾತ್ಮ್ಯ.
ŚRĪRAṄGAMĀHĀTMYA.

Substance, palm-leaf. Size, $10\frac{15}{16} \times 1\frac{1}{8}$ inches. Pages, 124. Lines, on a page 5. Character, Kanarese. Condition, injured. Appearance old. Incomplete.

This is a treatise in prose-poetry on the greatness of Sriraṅga. Author's name is not known. It is said in the History of Karnātaka poets that a Brāhmin poet, Mallikārjuna by name, who lived in the Court of Cikkadēvarāja (1672—1704) of Mysore, wrote it in the year Piṅgaḷa—(Saka 1600), at the instance of Cikkupādhyāya, the minister.

Beginning:

॥ ಶಾರ್ದೂಲ ವಿಕ್ರೀಡಿತ ॥

ಶ್ರೀಕಾಂತಾವರನಬ್ಜನೇತ್ರನಹಿತಾಟೋಪಾಪಹಂ ವಿಶ್ವಹೃ ।
ದ್ವ್ಯಾಕಲ್ಪಾಂಚಿತವೈಭವಂ ಪರಗತಿಪ್ರೋ . ದ್ವಿಜೇಂದ್ರಾಶ್ರಯಂ ॥
ಸೌಕರ್ಯಾಕೃತಿ ಸಜ್ಜನ ಪ್ರಿಯನನಂತಾ ಭೋಗಭೋಗಾವಹಂ ।
ಲೋಕಾರಾಧ್ಯನುಪಾತ್ತಚ(ಕ್ರ) ನೆಮಗೀಗತ್ಯುತ್ತಮೈಶ್ವರ್ಯಮಂ ॥

* * * *

ಕಂ ॥ ಕಾಕರ ಬಗೆಯಂ ತಿಳಿದು ವಿ ।
ವೇಕಿಗಳೊಳವಂ ವಿಚಾರಿಪುದು ನಲ್ಮೆ ಮೊದಲ್ ॥
ಕಾಕಸ್ವರಮಂ ಪರಿಕಿಸೆ ।
ಕೋಕಿಲಕಲಕಂಠನಾದಮಿನಿದೊಗೆದಿರ್ಕುಂ ॥
ತುಡುಕದೆ ಮಾಣಿಂ ಕವಿಗಳ್ ।
ಕಡುಪೆರ್ಚಿಗೆಯಿಂ ಕಟಾಕ್ಷಿಶೋಡೆಯುಂ ಮರುಳಂ ॥
ಪಿಡಿದು ಕಳಾಧರನಂ ಕ ।
ಣ್ಗೆಡಿಪ ವಿಧುಂತುದನವ್ರೊಲ್ಕತೋರ್ಪತೆಯಿಂದಂ ॥
ಎಳ್ಳನಿತಿನಿವಿಲ್ಲದೆ ತ ।
ನ್ನಳ್ಳೆಗಳುರ್ವಲ್ಕೆ ಬೇಟ್ವಿಕುಕವಿಗೆ ಕಬ್ಬಂ ॥
ಕೊಳ್ಳೆಯೊ ಸೂರೆಯೊಕೇಟಿತ್ರೊಡ್ಡೆ ।
ಗೊಳ್ಳನೆ ನಗರೇ ಬುಧರ್ಕಳಾನೃಪಸಭೆಯೊಳ್ ॥

॥ ಉತ್ಪಲಮಾಲೆ ॥

ಶ್ರೀರಮಣೀಯಕಾಯನತಿಶೀತಳಶೀಲಕೃಪಾಕಟಾಕ್ಷನಂ ।
ಭೋರುಹ ಸಂಭವಾನನ ಚತುಷ್ಟಯ ನಿಸ್ಸೃತಸನ್ನುತಿ ಪ್ರಿಯಂ ॥
ಚಾರುಫಣೀಂದ್ರ ಭೋಗಶಯನಂ ಗರುಡಧ್ವಜನತ್ಯಪೂರ್ವಶ್ರೃಂ ॥
ಗಾರರಸಾಕರಂ ಸಲಹುಗೆಮ್ಮನತಿಪ್ರಿಯರಂಗನಾಯಕಂ ॥

ಕಂ॥ ಶ್ರೀವರನಬ್ಜದಳಾಕ್ಷಂ ।
ಭಾವಜಜನಕಂ ಪಿತಾಮಹಾರ್ಚಿತಚರಣಂ ॥
ದೇವಾಧಿದೇವನೆಡೆವಿಡ ।
ದೋವುಗೆ ಸಜ್ಜನರನೊಲ್ದು ಶ್ರೀರಂಗೇಶಂ ॥
ಸಕಲಪುರಾಣಂಗಳ ಸಾ ।
ತ್ವಿಕ ರಾಜಸ ತಾಮಸಪ್ರಧಾನ ಕಥಾ ಕೌ ॥
ತುಕಭಾವಂಗಳನೀಶಂ ।
ಪ್ರಕಟಿಸೆ ತಿಳಿದಮರಮುನಿಯಿದಂ ಬೆಸಗೊಂಡಂ ॥

*   *   *   *

॥ ಮತ್ತೇಭ ವಿಕ್ರೀಡಿತ ॥

ಇತಿಹಾಸಂಗಳಕಲ್ಪಿತಂಗಳದಪೊಳ್ ಕಾವೇರಿಯಂ ಪೇಳ್ವಿಸಂ ।
ಗತಿಯಿಂದೊಂದು ನಿವಾಸಮಾಹರಿಗೆ ಶ್ರೀರಂಗಾಖ್ಯೆಯಿಂ ಮುನ್ನಮೇ ॥
ನುತಿಸಲ್ಪಟ್ಟುದನಂತ ಸೌಖ್ಯವಿಲಸತ್ತ್ತೀರದಲ್ಲಾಮಹಾ ।
ಯತನಾಖ್ಯಾನಮನಿಂದು ಪಾಪಶಮನಕ್ಕಂ ಪುಣ್ಯಾಸಂವೃದ್ಧಿಗಂ ॥

ಕಂ ॥ ವಿಸ್ತರವಾಗಿಯೆ ಕೇಳಲ್ ।
ಪ್ರಸ್ತುತದಲ್ಲೊಗೆದ ಹರ್ಷದಿಂದುಜ್ಜುಗಿಪೆಂ ॥
ವಸ್ತು (ಕಕಾವ್ಯದ) ಕಥನಮ ।
ನಸ್ತೋಕಮೆನಲ್ಕೆ ಪೇಳ್ವುದೆನೆ ಪರಮೇಶಂ ॥
ದಶದಿಕ್ಕುಗಳೊಳ್ಪಸರಿಸಿ ।
ದಶನಚ್ಛವಿ ತೊಳಗಿ ಬೆಳಗೆ ಪೊಸಬಗೆಯಿಂದಂ ॥
ವಿಶದಕರವಾಗಿ ಕೃಪೆಯಿಂ ।
ಪಶುಪತಿ ತಾಂ ಗಡಣದಿಂ ಮನಂಗೊಳೆ ನುಡಿದಂ ॥

*   *   *

ಕೇಳಲ್ಕಂ ಬರೆಯಲ್ಕಂ ।
ಪೇಳಲ್ಕಂ ರಂಗಕಥೆಯು ನಲ್ಮೆಯೆನುತ್ತೋ ॥
ದಾಳ ಯೋದಿದೊಡೆ ನಿರ್ದಂ। (?)
ದಾಳಿಗನಾಗಾಗ ವಿಷ್ಣುಪದಮಂ ಸಾರ್ಗುಂ ॥

Colophon :

(ಪ್ರಥಮಾಧ್ಯಾಯಃ.)

ಶ್ರೀರಾಮಾರಮಣೀಮುಖ ।
ಸಾರಸ ಸೌರಭವಿಲೋಲ ಸಾರಂಗಂ ಕೃಂ ॥
ದಾರಕ ವಂದಿತಚರಣಂ ।
ಶ್ರೀರಂಗಂ ಮಾಳ್ಕೆ ಸಕಲಸಜ್ಜನ ಹಿತಮಂ ॥

End :

ಶ್ರೀರಂಗಶಾಯಿಯಂ ಮೇ ।
ಹಾರ . . . ತ್ಸವಂಗೊಳ್ಳುವಱಿಂದಂ ॥
ಭೋರನೆ ವಿವಿಧಮಹಾ ಸ ।
ತ್ಕಾರಂಗಳನರ್ಚಿಪಂತೆ ಮಾಡಿದನೊಲವಿಂ ॥

ಚಂ॥ ಅತಿಶಯಮಾಗಿ ರಂಗನನಭೀಕ್ಷಿಸಲುತ್ಸವವೆತ್ತು ಭಾಸ್ಕರಂ ।
ಪ್ರತಿದಿನದಲ್ಲಪೇಕ್ಷಿಸೆಯುದಾರಕೃಪಾನಿಧಿಪದ್ಮಸಂಭವಂ ॥
ಚತುರತೆಯಿಂದೆ ತೋಱಿಸಿದನಾಗಳೆಯಾರವಿಗೊಲ್ದು ಸನ್ನುತಾ ।
ಕೃತಿ ಹರಿ ಪಾಂಚರಾತ್ರವ . . . .

(ವಿ-ವಿ.)—

ಇದರಲ್ಲಿ ೧ ರಿಂದ ೫ ಅಧ್ಯಾಯಗಳು ಪೂರ್ಣವಾಗಿಯೂ, ೬ ನೆಯದು ಅಪೂರ್ಣವಾಗಿ ಯೂ ಇವೆ. ಆದರೆ ಅಧ್ಯಾಯಗಳ ಕೊನೆಯಲ್ಲಿ ಆಶ್ವಾಸಾಂತ್ಯ ಸೂಚಕವಾದ ಗದ್ಯವನ್ನು ಎಲ್ಲಿಯೂ ಕೊಟ್ಟಿಲ್ಲ. ಈ ಗ್ರಂಥಕರ್ತನಾರೆಂಬುದು ಇದರಿಂದ ತಿಳಿದುಬರುವು ದಿಲ್ಲ. ಶೈಲಿಯು ಮಾತ್ರ ಪ್ರೌಢವಾಗಿದೆ. ಕರ್ಣಾಟಕ ಕವಿಚರಿತ್ರೆಯಲ್ಲಿ "ಮೈಸೂರು ದೊರೆ ಚಿಕ್ಕ ದೇವರಾಜನ (1672—1704) ಆಶ್ರಿತನಾದ ಮಲ್ಲಿಕಾರ್ಜುನನೆಂಬ ಬ್ರಾಹ್ಮಣ ಕವಿಯು, ದೊರೆಯ ಆಜ್ಞಾನುಸಾರವಾಗಿ ಆತನ ಮಂತ್ರಿಯಾದ ಚಿಕ್ಕುಪಾಧ್ಯಾಯನು ಪ್ರೇರಿ ಸಲು, ಶಕ ೧೬೦೦ ನೆಯ ಪಿಂಗಳ ವರ್ಷದಲ್ಲಿ ಒಂದು ಶ್ರೀರಂಗಮಾಹಾತ್ಮ್ಯವನ್ನು ಚಂಪೂ ರೂಪದಲ್ಲಿ ಬರೆದಿರುವುದಾಗಿ ಸೂಚಿತವಾಗಿದೆ. ಇದು ೧೨ ಆಶ್ವಾಸಗಳುಳ್ಳ ಗ್ರಂಥವೆಂದೂ ಮೊದಲೆರಡು ಆಶ್ವಾಸಗಳಲ್ಲಿ ಕರ್ಣಾಟಕದೇಶದ ವರ್ಣನೆಯೂ ಚಿಕದೇವರಾಜ ವಂಶಾವಳಿ ಯೂ ಇವೆಯೆಂದೂ, ಮೂರನೆಯ ಆಶ್ವಾಸದಿಂದ ಕಥೆ ಆರಂಭವಾಗಿದೆಯೆಂದೂ ಹೇಳಿದೆ" ಆದ ರೆ ಇದರಲ್ಲಿ ಮೊದಲು, ಕವಿಪ್ರಶಂಸನಾದಿ ಪದ್ಯಗಳುಳ್ಳ ಭಾಗವು ಸ್ವಲ್ಪ ವರ್ಣಿತವಾಗಿ ಅನಂ ತರ ಕಥೆಯೇ ಆರಂಭವಾಗುತ್ತದೆ. ಈ ಗ್ರಂಥದಲ್ಲಿರುವುದಾದ ಈ ಕೆಳಗೆ ಬರೆದಿರುವ, ಪದ್ಯ ವೊಂದು ಕವಿಚರಿತ್ರೆ, ಭಾಗ, ೨ ಪುಟ ೪೯೮ ರಲ್ಲಿ ಮಲ್ಲಿಕಾರ್ಜುನನೆಂಬುವನು ಬರೆದುದಾಗಿ ಉದಾಹರಿಸಿರುವುದರಿಂದ ಇದನ್ನು ಮಲ್ಲಿಕಾರ್ಜುನಕೃತವೆಂದು ಹೇಳಬೇಕಾಗುತ್ತದೆ. ಉದಾಹೃತ ಭಾಗಗಳನ್ನೂ, ಕವಿಚರಿತ್ರೆಯನ್ನೂ ಹೋಲಿಸಿ ನೋಡಿ ಉಳಿದ ವಿಷಯಗಳನ್ನು ತಿಳಿಯುವುದು

ಕಂ ॥ ಕುಟಿಲಾಕುಟಿಲಕ್ರಿಯೆಯಂ ।
ಘಟಿಯಿಪರಶುಭಾತಿಶುಭಮನುಹಿತಹಿತರ್ಗಂ ॥
ಸಟೆ ದಿಟಮೆನಲ್ಕೆ ಧರೆಯೊಳ್ ।
ಘಟನಾಘಟನಾತಿಶಕ್ತರಲ್ಲವೆ ಕವಿಗಳ್ ॥

No. **273**. ಶ್ರೀರಂಗಮಾಹಾತ್ಮ್ಯ.
SRĪRAÑGAMĀHĀTMYA.

Substance, palm-leaf. Size, 15½ × 1½ inches. Pages, 105. Lines, 6 on a page. Character, Grantha. Condition, much injured. Appearance, old.

Incomplete.

This is a treatise in prose on the greatness of the place called Śrīraṅga. The author is Raṅgacārya.

Date of transcription.—The full moon day of the month of Aṣāḍha in the year Śōbhākṛt Śālivāhana Saka 1585.

Beginning:

ಸಕಲಪುರಾಣಸಾರಭೂತಮಾದ ಮಹೇಶ್ವರನಾರದ ಸಂವಾದಮಾದ ಪನ್ನೆರಡು ಸಾವಿರ ಸಂಹಿತೆಗಳುಳ್ಳ ಬ್ರಹ್ಮಾಂಡಪುರಾಣದಲ್ಲಿ ದಶಾಧ್ಯಾಯ ಪರಿಮಿತಮಾದ ಶ್ರೀರಂಗಮಾಹಾತ್ಮ್ಯದಲ್ಲಿ ಪರಮೇಶ್ವರ ದೇವರ ದೆಸೆಯಿಂದ ಕೇಳಿಸಲ್ಪಟ್ಟ ಸಕಲಪುರಾಣಾರ್ಥಂಗಳುಳ್ಳಂಥ ಮಹಾನುಭಾವನಾದ ನಾರದಮುನೀಶ್ವರಂ ಆರುದ್ರದೇವನಂ ಸ್ತುತಿಸಿ ಅಭಿಮುಖನಾಗಿ ಮಾಡಿಕೊಂಡು ಸಂಕ್ರುಶಾರ್ಥಾನುವಾದ ಪೂರ್ವಕಮಾದ, ಕೇಳಲು ಯೋಗ್ಯಮಾದರ್ಥ ವಿಶೇಷಮಂ ನಾರದಮುನೀಶ್ವರಂ ಪರಮೇಶ್ವರನಂ ಕೇಳುತಿದ್ದಾನು.

* * * *

ಶ್ರಿರಂಗಮಾಹಾತ್ಮ್ಯಮಂ ಪಂಚಮಿ ಅಷ್ಟಮಿ ಏಕಾದಶಿ ದ್ವಾದಶಿ ಪೌರ್ಣಿಮೆ ಅಮಾವಾಸ್ಯೆಗಳಲ್ಲಿ ಪಠಿಸಿದಾತಂ ವಿಷ್ಣುಪದಮನೆಯ್ದುವನೆಂಬ ಕಥಾವೃತ್ತಾಂತಮಂ ನಾರದಂಗೆ ಪರಮೇಶ್ವರಂ ಬೋಧಿಸುತ್ತಿದ್ದನೆಂಬೀ ಕಥಾ ಸಂಗತಿಯಂ ಸರ್ವಜನರ್ಗೆ ಸುಲಭಮಾಗಿ ತಿಳವಂತೆ ಕರ್ಣಾಟಕಭಾಷಾರಚನೆಯಿಂ ಕೌಂಡಿನ್ಯಗೋತ್ರೋದ್ಭವಂ ಕಂದಾಡೆಯಾಚಾರ್ಯ ಚರಣಾರವಿಂದ ಮಕರಂದಾಸ್ವಾದನ ಭೃಂಗಾಯಮಾನ ಸ್ವಾಂತನಾದ ಶ್ರೀಹೊಮ್ಮ ಗ್ರಾಮ ನಿವಾಸಿ ತಿರುಮಲಾಚಾರ್ಯಾನುಜಂ ರಂಗಾಚಾರ್ಯವಿರಚಿತಮಪ್ಪ ಶ್ರೀರಂಗಮಾಹಾತ್ಮ್ಯದೊಳು ಮಂಗಳಾಬಿಧಾನ ವರ್ಣನಂ ಪ್ರಥಮಃಪರಿಚ್ಛೇದ :—

ಬಳಿಕಾನಾರದಂ ಭೂತಭವಿಷ್ಯದ್ವರ್ತಮಾನಜ್ಞಾನಮನುಳ್ಳ ಪರಮೇಶ್ವರನಂ ಸ್ತೋತ್ರಮಂಮಾಡಿ [ನಾರದನು ತಾನು] ಕೃತೋಪಕಾರ ಪ್ರಕಾಶನ ಪೂರ್ವಕವಾಗಿ ಪ್ರಸನ್ನ ನನ್ನಾಗಿ ಮಾಡಿಕೊಳ್ಳುತಿದ್ದಾನು.

End:

« ಕಥಾವೃತ್ತಾಂತಮಂ * *

ಶ್ರೀರಂಗಮಾಹಾತ್ಮ್ಯದೊಳು [ತೀರ್ಥಮಬಿಧಾ] (ತೀರ್ಥಾಭಿಧಾನ) ವರ್ಣನಂ ದಶಮಃ ಪರಿಚ್ಛೇದ :—

ಸ್ವಸ್ತಿ ಸಮಸ್ತ ವಿಬುಧನಿವಹಮೌಳಿ ರಚಿತ ನಾನಾವಿಧೋಪಲಪ್ರಭಾವ್ರಾತ ರಂಜಿತದೇವ ಪದಕಮಲ ನಿಃಕಾಂತಃಕರಣೇನ ಅಪ್ರಮೇಯ ಕೃಪಾಕಟಾಕ್ಷೆ ವಿ(ೀಕ್ಷಿತ ಶ್ರೀ) ರಂಗನಾಮಕೇನ ವಿರಚಿತ ಶ್ರಿರಂಗಮಾಹಾತ್ಮ್ಯಂ ಸಂಪೂರ್ಣಂ.

(ವಿ-ವಿ)—

ಇದು ಗದ್ಯರೂಪವಾದುದು. ಹತ್ತು ಪರಿಚ್ಛೇದಗಳನುಳ್ಳದು. ಅತಿಶಿಥಿಲ. ಗ್ರಂಥ ಲಿಪಿಯಲ್ಲಿ ಬರೆದಿದೆ. ಕವಿ ರಂಗಾಚಾರ್ಯ. ಗ್ರಂಥಾಂತ್ಯದಲ್ಲಿ « ಸ್ವಸ್ತಿ ಶ್ರೀವಿಜಯಾಭ್ಯುದಯ ಶಾಲೀವಾಹನ ಶಕವರ್ಷ ಸಾವಿರ [ದರ್ಯೆ] (ದೈ)ನೂರೆಂಭ [ತ್ತೊಡ] (ತ್ತೈದ)ನೆಯ ಶೋಭಕೃತುಸಂವತ್ಸರದ ಆಷಾಢಶುದ್ಧಪೌರ್ಣಿ[ಮಿ ಯೂ] (ಮಾ)ಶುಕ್ರವಾರದಲ್ಲಿ ಮುಳವೂರ ಅಪ್ಪಾಜಯ್ಯಂಗಾರ್ ಕುಮಾರಕನಾದ ಶ್ರೀನಿವಾಸಯ್ಯಂಗಾರ್ ಸಹೋದರನಾದ ಅಪ್ರಮೇಯ ನಾಮಕಂ ಬರೆದನೆಂದು ತಿಳಿಯಲ್ವೇಟ್ಕುಂ " ಎಂದಿದೆ. ಉಳಿದ ವಿಷಯಗಳನ್ನು ಮೇಲೆ ಉದಾಹೃತವಾಗಿರುವ ಭಾಗಗಳಿಂದ ತಿಳಿಯುವುದು.

No. 274. ಶ್ರೀರಂಗಮಾಹಾತ್ಮ್ಯ-
SRĪRANGAMĀHĀTMYA.

Substance, Srītāla. Size, 18¾ × 1¾ inches. Pages, 240. Lines, 4 on a page, Character, Kanarese. Condition, much injured. Appearance, old.

Complete

This is a treatise in prose on the greatness of Śrīraṅga in ten chapters. The author is Singarācārya, who says that he was the tutor to Beṭṭada Cāmarāja Odeyar, king of Mysore. 1507 A.D.

Beginning :

॥ ಶಾರ್ದೂಲವಿಕ್ರೀಡಿತ ॥

ಭೂಭೃದ್ವರ್ಯಕದಂಬವಂದಿತಪದದ್ವಂದ್ವಾರವಿಂದೋಲ್ಲಸತ್ ।
ಶ್ರೀಭೃದ್ಬೆಟ್ಟದ ಚಾಮಭೂಪನ ಮಹದ್ವಂಶಾವಳೀ ಸಂಶ್ರುತಂ ॥
ಸಭ್ಯಂ ಸಂಪ್ರತಿ ಸಿಂಗರಾರ್ಯಕವಿರಾಡಧ್ಯಾಪಕಂ ಕನ್ನಡ ।
ಶ್ರೀಭಾಷಾತತಿಯಿಂ ಬುಧಂ ರಚಿಸಿದಂ ಶ್ರೀರಂಗಮಾಹಾತ್ಮ್ಯಮಂ ॥

ಕಂ ॥ ಕಬ್ಬಿಗರಾಪದ್ಯವನುಂ ।
ಡುಬ್ಬಸದಿಂ[ದುರೆ] (ದೊಲಿದು) ಪಳಯರೆನ್ನೀಕೃತಿಯಂ ॥
ಕಬ್ಬಗಿವ ರಸಿಕ ಮನುಜರ್ ।
ಪರ್ಬಿದ ಮುದದಿಂ(ದೆ) ಸವಿಯರೇ ಸಕ್ಕರೆಯಂ ॥

॥ ಶಾರ್ದೂಲವಿಕ್ರೀಡಿತ ॥

ರಾಗೋದ್ಭೂತ ಸಮಸ್ತ ಸದ್ಗುಣ ಸುಧಾಧಾರಾ ಪ್ರವಾಹಸ್ಫುರ ।
ತ್ತುಂಗಾಪಾಂಗತರಂಗ ಸಂಘಟನದಿಂ ಸತ್ಕೀರ್ತಿಸೌಭಾಗ್ಯಮಂ ॥
ವಾಗೀಶಾದಿಸುರಾರ್ಚಿತಾಂಘ್ರಿ ಕಮಲಂ ಮಾಧುರ್ಯಸೂಕ್ತಿ ಶ್ರಿಯಂ ।
ಯೋಗೆ ಶ್ರೀವರದಂ ಚಿರಂ ಯೆನಗತೀವಾನಂದ ಸಂದೋಹಮಂ ॥

ವ ॥ ದೇವರ್ಷಿಯಾದ ನಾರದನು ಈ ಪ್ರಕಾರವಾಗಿ ಪರಮೇಶ್ವರನನ್ನು ಪ್ರಶ್ನೆಯಂ ಮಾಡಿದನದೆಂತೆನೆ :—ಎಲೈ ! ಈಶ್ವರ ! ಸ್ವರ್ಗಮರ್ತ್ಯಪಾತಾಳಗಳೆಂಬ ಮೂರು ಲೋಕಂಗಳಲ್ಲಿಯೂ ಇರುವ ಸಾತ್ವಿಕ ರಾಜಸ ತಾಮಸ ಮೊದಲಾದ ಸಮಸ್ತ ಸದ್ಧರ್ಮವು, ಗಂಗೆ ಮೊದಲಾದ ಪುಣ್ಯನದಿಗಳು, ಪುಣ್ಯಕ್ಷೇತ್ರಗಳು, ಪುಣ್ಯತೀರ್ಥಗಳು, ಶ್ರೀಮದ್ರಾಮಾಯಣ ಮೊದಲಾದ ಪುರಾಣ ಪುಣ್ಯ ಕಥೆಗಳು, ನಿಮ್ಮ ಮುಖವೆಂಬ ತಾವರೆಯ ದೆಸೆಯಿಂದ ಹರಿದಿರುವ ಸೂಕ್ತಿಸುಧಾಧಾರೆಯಿಂದ ಮೊದಲು ವಿಸ್ತಾರವಾಗಿ ಹೇಗೆ ಕೇಳಲ್ಪಟ್ಟಿತೋ, ನಿನ್ನಿಂದ ಸ್ತೋತ್ರವಂ ಮಾಡಲ್ಪಟ್ಟು ಮಹಾಪುಣ್ಯನದಿಯಾದ ಕಾವೇರೀ ಮಧ್ಯದಲ್ಲಿರುವ ಚಂದ್ರಪುಷ್ಕರಣೀ ತೀರ್ಥದ ತಡಿಯಲ್ಲಿರುವ ಶ್ರೀರಂಗದ ಮಹಿಮೆಯಂ ಪಾಪಕ್ಷಯಕ್ಕೂ ಪುಣ್ಯವು ವರ್ಧಿಸುವುದಕ್ಕೂ ಈಗ ಹಾಗೆ ವಿಸ್ತಾರವಾಗಿ ಕೇಳುವುದಕ್ಕೆ ಇಚ್ಛೆಸುತ್ತಲಿದ್ದೇನೆ.

* * * *

ಅತ್ಯುತ್ತಮವಾದ ಈ ಶ್ರೀರಂಗಮಾಹಾತ್ಮ್ಯಮಂ ಅಮಾವಾಸ್ಯೆಯಲ್ಲಿ ಪೌರ್ಣಮೆಯಲ್ಲಿ ಏಕಾದಶಿಯಲ್ಲಿ ಶ್ರವಣನಕ್ಷತ್ರ ಕೂಡಿದಂಥ ದ್ವಾದಶಿಯಲ್ಲಿ ಅಷ್ಟಮಿಯಲ್ಲಿ ಯಾವನು ಕೇಳ್ವ

ವನೋ, ಯಾವನು ಪಾರಾಯಣಮಾಡುವನೋ, ಯಾವನು ಬರೆಯುವನೋ, ಯಾವನು ಈ ಮಾಹಾತ್ಮ್ಯವಂ ಪಾಠಮಾಡಿಹನೋ ಆ ಮಹಾತ್ಮನು ಪಾಪಪುಣ್ಯಗಳನ್ನು ಬಿಟ್ಟು ಸರ್ವೋತ್ಕೃಷ್ಟವಾದ ಪರಮಪದವನೆಯ್ದುವನು, ಎಂದು ಬ್ರಹ್ಮಾಂಡಪುರಾಣದಲ್ಲಿ ಮಹೇಶ್ವರ ನಾರದ ಸಂವಾದದಲ್ಲಿ ಪರಮೇಶ್ವರನು ದೇವರ್ಷಿಯಾದ ನಾರದಂಗೆ ನಿರೂಪಿಸಿದನೆಂಬಲ್ಲಿಗೆ.

Colophon :

ಶ್ರೀ ಮದ್ರಾಜಾಧಿ ರಾಜ ರಾಜಪರಮೇಶ್ವರ ಪ್ರೌಢಪ್ರತಾಪ ಯದುಕುಲಪಯಃ ಪಾರಾವಾರ ಕಲಾನಿಧಿ ಬಿರುದಂತೆಂಬರಗಂಡ ಲೋಕೈಕವೀರ ಶ್ರೀ ನರಪತಿ ಬೆಟ್ಟದ ಚಾಮುಮಹಾರಾಯನು ಪಾಧ್ಯಾಯ ಸಿಂಗರಾಚಾರ್ಯ ವಿರಚಿತಮಪ್ಪ ಶ್ರೀರಂಗ ಮಾಹಾತ್ಮ್ಯದೊಳ್ ಮೊದಲಧ್ಯಾಯಕ್ಕೆ ಜಯಮಂಗಳ ಮಹಾ.—

ಅನಂತರದಲ್ಲಿ ದೇವರ್ಷಿಯಾದ ನಾರದನು ಈ ಪ್ರಕಾರವಾಗಿ ಈಶ್ವರನಂ ಕೇಳಿದನು. ಅದೆಂತೆನೆ ;—ವಿಷ್ಣು ಭಕ್ತರಲ್ಲಿ ಉತ್ತಮನಾದ ಎಲೈ ! ಪರಮೇಶ್ವರನೇ ! ನಿನ್ನಿಂದ ಅತ್ಯಂತ ರಹಸ್ಯವಾದ ಶ್ರೀರಂಗ ಮಾಹಾತ್ಮ್ಯವು ಕೇಳಿಸಲ್ಪಟ್ಟಿತು. ನಿನ್ನ ಮುಖವೆಂಬ ತಾವರೆಯ ದೆಸೆಯಿಂದ ಹೊರಟಿರುವ ಮನೋಹರವಾದ ವಿಷ್ಣುಕಥಾಮೃತವನ್ನು ಕಿವಿಗಳಿಂದ ಚೆನ್ನಾಗಿ ಆಲಿಸಿ ಕೇಳಿ [ದಾಗ್ಯೂ] (ದರೂ) [ಈಗಲೂ] ನನಗೆ ತೃಪ್ತಿಯಾಗಲಿಲ್ಲವಾದುದರಿಂದ ಮತ್ತೂ ಶ್ರೀರಂಗ ವೈಭವವನ್ನು ಕೇಳುವುದಕ್ಕೋಸ್ಕರ ಇಚ್ಛೆಸುತ್ತಲಿದ್ದೇನೆ.

End :

ಕಾಮ ಕ್ರೋಧ ಲೋಭ ಮೋಹಾದಿಗಳಂ ಜೈಸಿ ವಿಮತ್ಸರನಾದ ವಿಷ್ಣುಭಕ್ತನು, (ಈ ಮಾಹಾತ್ಮ್ಯವನ್ನು) ಪಾರಾಯಣವಂ ಮಾಡಿದವನು, ಬರೆದವನು, ಕೇಳಿದವನು ಬ್ರಾಹ್ಮಣನಾದರೆ ವಿದ್ವಾಂಸರೊಳಗೆ ಶ್ರೇಷ್ಠನಾಗುವನು. ಕ್ಷತ್ರಿಯನು ಕೇಳಿದಲ್ಲಿ ರಾಜ್ಯಮಂ ಪಡೆವನು. ವೈಶ್ಯನು ಕೇಳಿದರೆ ಅನೇಕ ಧನ[ಸಂಪ್ರಾಪ್ತಿಯಂ](ಮಂ) ಪಡೆವನು. ಶೂದ್ರನು ಭಗವದ್ಭಕ್ತಿಯನ್ನು ಚೆನ್ನಾಗಿ ಪಡೆವನು. ಭಟನು ಜಯಮಂ, ಗರ್ಭಿಣಿಯು ಸತ್ಪುತ್ರನಂ, ಕನ್ಯಕೆಯು ಸತ್ಪ-ತಿಯಂ ಪಡೆವರು. ಪಾರಾಯಣವನ್ನು ಮಾಡಿದವರು, ಬರೆದವರು ಕೇಳಿದವರು ಸಕಲ ಪುಣ್ಯಪಾಪಂಗಳಂ ಬಿಟ್ಟು, ಇಹದಲ್ಲಿ ಸಕಲ ಭೋಗಭಾಗ್ಯಗಳನ್ನನುಭವಿಸಿ, ಶರೀರಾವಸಾನದಲ್ಲಿ ಮೋಕ್ಷಸಾಮ್ರಾಜ್ಯವಾದ ಪರಮಪದವನೆಯ್ದುವರೆಂದು ಬ್ರಹ್ಮಾಂಡ ಪುರಾಣದಲ್ಲಿ ಈಶ್ವರನು ನಾರದನಿಗೆ ನಿರೂಪಿಸಿದನೆಂಬಲ್ಲಿಗೆ,

Colophon :

ಶ್ರೀಮದ್ರಾಜಾಧಿರಾಜ ರಾಜ ಪರಮೇಶ್ವರ ಪ್ರೌಢಪ್ರತಾಪ ಯದುಕುಲಪಯಃ ಪಾರಾವಾರ ಕಲಾನಿಧಿ ಬಿರುದಂತೆಂಬರಗಂಡ ಲೋಕೈಕವೀರ ಶ್ರೀ ನರಪತಿ ಬೆಟ್ಟ (ದ) ಚಾಮ ಮಹಾರಾಯನು ಪಾಧ್ಯಾಯ ಸಿಂಗರಾಚಾರ್ಯ ವಿರಚಿತಮಪ್ಪ ಶ್ರೀರಂಗ ಮಾಹಾತ್ಮ್ಯದೊಳ್ತೀರ್ಥ ವಿಭವೋಕ್ತಮಾದ ಹತ್ತನೆಯ ಆಶ್ವಾಸಕ್ಕಂ ಜಯಮಂಗಳಮಹಾ.—

(ವಿ-ವಿ.)—

ಇದು ಗದ್ಯರೂಪವಾದದು. ಇದರಲ್ಲಿ ಹತ್ತು ಆಶ್ವಾಸಗಳಿವೆ. ಈ ಗ್ರಂಥಕರ್ತನು ಸಿಂಗರಾಚಾರ್ಯನು. ಈತನು ಬೆಟ್ಟದ ಚಾಮರಾಜವೊಡೆಯರಿಗೆ ಉಪಾಧ್ಯಾಯನಾಗಿದ್ದನೆಂದು ಹೇಳಿಕೊಂಡಿದ್ದಾನೆ. ಈ ಚಾಮರಾಜವೊಡೆಯರು ಕ್ರಿ. ಶ. ೧೫೦೭ ರಲ್ಲಿ ಮೈಸೂರು ರಾಜ್ಯಕ್ಕೆ

ಅರಸರಾಗಿದ್ದುದರಿಂದ ಕವಿಯ ಕಾಲವೂ ಅದೇ ಎಂದು ನಿರ್ಧರವಾಗುವುದು. ಈತನು ಇನ್ನಾವ ಗ್ರಂಥಗಳನ್ನು ಬರೆದಿರುವನೋ ತಿಳಿಯದು. ಕಥಾಗರ್ಭ, ಯಾರು ಯಾರಿಗೆ ಹೇಳಿದರೆಂಬೀ ವಿಷಯಗಳು ಮೇಲೆ ಉದಾಹೃತವಾಗಿರುವ ಭಾಗಗಳಿಂದ ತಿಳಿಯುವುದು. ಈ ಗ್ರಂಥಕ್ಕೆ ಶ್ರೀರಂಗ ವೈಭವವೆಂಬ ಹೆಸರೂ ಉಂಟು. ಗ್ರಂಥಾಂತ್ಯದಲ್ಲಿ "

ಹಸ್ತಿಮಸ್ತಕ ವಿನ್ಯಸ್ತ । ಹಸ್ತ ವೈಕಸ್ತ್ಯ ನಿಸ್ತುಲಃ ॥
ಸಮಸ್ತಾಭೀಷ್ಟ ವರದ । ಸ್ವಸ್ತಿದೋಸ್ತು ಮಮಾನಿಶಂ ॥

॥ ಶಾರ್ದೂಲ ವಿಕ್ರೀಡಿತ ॥

ವೇದಾಂತದ್ವಯ ತತ್ವಸಾರ ವಿಲಸಚ್ಛ್ರೀಕಾಂತ ಪಾದಾಂಬುಜ ।
ದ್ವಂದ್ವೋದ್ಭೂತ ಮಧು ಪ್ರವಾಹ ವಿಹರತ್ಸ್ವಾಂತಾಳಿರೇಷಾನಿಶಂ
ಸ್ವೈರ್ವೀಕ್ಷಾಮೃತ ವೀಚಿಕಾಜಯ ಶತ್ರೈರ್ಮಾಂ ಸೇಚಯಂತೀ ಮುದಾ।
ದೇವಾಂಬಾವತು ಕಾರಿಸೂನತನಯೋ ವೇದಂಹಿ ವಿಜ್ಞಾಪ್ಯತೇ ॥

॥ ಮಾಲನಿ ॥

ಸಪದಿ ವಿರಚಿತೇಯಂ ವರ್ಣಮಾಲಾ ಸುಶೀಲಾ ।
ವ್ಯಪಗತ ಲಿಪಿದೋಷಃ ಕ್ಷಮ್ಯತಾಂ ಪಂಡಿತೇಂದ್ರಾಃ ॥
ಅಭಿನವ ಸುಮಬೃಂದೈಃ ಕಲ್ಪಿತಾಯಾಃ ಸ್ರಜಸ್ಯಾತ್ ।
ನಹಿ ಪರಿಮಳಭಂಗಃ ಶ್ವೇತ ಪುಷ್ಪಾವಯೋಗಾತ್ ॥

॥ ಶ್ಲೋಕ ॥

ಕಾವೇರೀ ವರ್ಧತಾಂ ಕಾಲೇ । ಕಾಲೇ ವರ್ಷತು ವಾಸವಃ ॥
ಶ್ರೀರಂಗನಾಥೋ ಜಯತು । ಶ್ರೀರಂಗ ಶ್ರೀಶ್ಚ ವರ್ಧತಾಂ ॥
ಲಕ್ಷ್ಮೀಚರಣಲಾಕ್ಷಾಂಕ । ಸಾಕ್ಷಾತ್ ಶ್ರೀವತ್ಸವಕ್ಷಸೇ ॥
ಕ್ಷೇಮಂ ಕರಾಯ ಸರ್ವೇಷಾಂ । ಶ್ರೀರಂಗೇಶಾಯ ಮಂಗಳಂ ॥ "

ಎಂದಿದೆ. ಕವಿಚರಿತ್ರೆಯಲ್ಲಿ ಈ ಗ್ರಂಥದ ಪ್ರಸ್ತಾವವನ್ನು ಮಾಡಿದಹಾಗಿಲ್ಲ.

No. 275. ಹಾಲಾಸ್ಯಮಾಹಾತ್ಮ್ಯ-
HĀLĀSYAMĀHĀTMYA.

Substance, Śrītāla. Size, $14\frac{7}{8} \times 2$ inches. Pages, 530. Lines, 9 on a page. Character, Kanarese. Condition, slightly injured. Appearance, old.

Complete.

This describes the sanctity of Madura (Hālasyā).

The author's name is Nañjarāja. For details about the author and the work see the extracts given below.

Beginning :

" ಶ್ಲೋಕ. "

ಮಾತಾಮಹ ಮಹಾಶೈಲಂ । ಮಹಸ್ತದಪಿತಾಮಹಂ ॥
ಕಾರಣಂ ಜಗತಾಂ ವಂದೇ । ಕಂಠಾದುಪರಿ ವಾರಣಂ ।

ಟೀ ॥ ಗಿರಿರಾಜನಾದ ಹಿಮವತ್ಪರ್ವತನೆ ಮಾತಾಮಹನಾಗಿಯುಳ್ಳ ಪಿತಾಮಹನಿಲ್ಲದ ಕಂಠೆ
ಗಿಂದುಪರಿಭಾಗದಲ್ಲಿ ಗಜಸ್ವರೂಪನಾದ ಜಗತ್ತಿಗೆ ಕಾರಣನಾದ ತೇಜಸ್ಸನ್ನು ವಂದಿಸುವೆನು.
ಎಂದರೆ ಈ ರೀತಿಯಲ್ಲಿರುವ ವಿಘ್ನೇಶ್ವರನಿಗೆ ನಮಸ್ಕಾರವೆಂದರ್ಥ.

*   *   *   *

ನಮಃ ಸುಂದರನಾಥಾಯ । ತಸ್ಮೈ ಹಾಲಾಸ್ಯವಾಸಿನೇ ॥
ಚತುಃಷಷ್ಟಿವಿಧಾ ಲೀಲಾ । ಯೇನ ಪ್ರತ್ಯಕ್ಷತಾಂಗತಾ ॥

ಟೀ ॥ ಯಾವ ದೇವನಿಂದ ಅರುವತ್ತು ನಾಲ್ಕುಲೀಲೆಗಳು ಪ್ರತ್ಯಕ್ಷವಾಗಿ ಮಾಡಲ್ಪಟ್ಟಿ
ವೋ ಆ ಹಾಲಾಸ್ಯ ಕ್ಷೇತ್ರವಾಸಿಯಾದ ಸೌಂದರೇಶನಿಗೆ ನಮಸ್ಕಾರವು.

*   *   *   *

ಈ ಪ್ರಕಾರ ಗಿರಿಜಾಪಯೋಧರ ಪರಿಸರ ವಿಲಿಪ್ತ ಮೃಗಮದ ಘನಸಾರ ಕಾಶ್ಮೀರ ಸಾರಸಂ
ವಳಿತ ಪಟೀರ ಕರ್ದಮವಿಲಿಪ್ತ ದ್ಯುಮಣಿಘೃಣಿಗಣಾಕೀರ್ಣ ರಜತಧರಣೀಧರ ಕಟಕರುಚಿ
ಪಾಟಚ್ಚರವಕ್ಷಸ್ಥಳನ, ಅಖಿಲ ಜಗದುದಯಸ್ಥಿತಿ ವಿಲಯ ನಿದಾನನ, ಅಗಣಿತ ಗುಣಮಣಿ
ಗಣ ಮಹಾರ್ಣವನ, ಅಪಾರ ಕೃಪಾ ಪಾರಾವಾರನ, ಅಮರತರಂಗಿಣೀ ತರಂಗ ಪರಂಪರಾ
ತರಳಿತ ಕಪರ್ದನ, ಅಮೃತಮಯೂಖಪಾಕ ಕಮನೀಯ ಕಿರೀಟನ, ನಿಟಿಲನಯನ ಭವ ಕೃ
ಪೀಟ ಸಮುದ್ಭೂತ ನಿರಸ್ತಮನೋಭವನ, ಅಭವನನಾದ್ಯಂತನ ಪ್ರಮೇಯನನಘನ, ದರಹಸಿತ
ನಿಸ್ಸರದ್ರವಿಪ್ರಭಾಪಾಸ್ತ, ನಿಜಚರಣ ಸರಸಿರುಹ ಭಜಕಜನ ಮಹಾಮೋಹಾಂಧವಾರಕನ
ಅಂಧಕಾರಿಯನನವರತಂ ವೀತಕಾಮಕ್ರೋಧಾದಿ ವಿಕೃತಿಯಹ ನಿಜಮನಃ ಸರೋಜಪೀಠದೊಳ್
ನೆಲೆಗೊಳಿಸಿದ ಸಾತ್ಯವತೀಯ ಮುನಿವರನು ಮದನಾರಿಯ ಮಧುರತರ ಚತುಃಷಷ್ಟಿ ಲೀಲಾಮ
ಧುರ ಮಧುರಾಪುರ ಮಹಾ . . ಂ ಸ್ಕಾಂದ ಪುರಾಣ ಧೊಳಂದದಿಂ ವಿರಚಿಸಲು ನಿರಂತ
ರಾಯದಿಂದಭಿಮತ ಸಿದ್ಧಿಬುದ್ಧಿ ಸಕಲ ಹಿತಸಮೃದ್ಧಿಗೋಸುಗಂ ಶ್ರೀ ಶಿವ ಶಫರೇಕ್ಷಣಾಗುಹ
ಗಣಪತಿ ಪ್ರಣಾಮಸ್ತುತಿ ಧ್ಯಾನಾದಿಗಳಂ ಮಾಡಿ ಹಾಲಾಸ್ಯ ಕ್ಷೇತ್ರ ಮಹಿಮೆಯಂ ಪೇಳಲು
ಪೀಠಿಕಾರಚನೆಯನೀ ಪ್ರಕಾರದಿಂ ಪೇಳಿಹನು.

Colophon:

ಇಂತೀಯಾದಿ ಪುರಾಣವಾದ ಸ್ಕಾಂದದಲ್ಲಿ ಅಗಸ್ತ್ಯಸಂಹಿತೆಯ ಹಾಲಾಸ್ಯಮಾಹಾತ್ಮ್ಯದಲ್ಲಿ
ಕರ್ಣಾಟಕ ಭಾಷೆಯಿಂದ ವಿರಚಿಸಲ್ಪಟ್ಟ ಶ್ರೀಮಹಿಶೂರ ಸೇನಾಧಿಪತಿ ದೊಡ್ಡರಾಜೇಂದ್ರ
ಗರ್ಭಾಬ್ಧಿ ಚಂದ್ರ ವೀರರಾಜ ತನೂಭವ ನಂಜರಾಜ ವಾಣೀವಿಲಾಸವೆಂಬ ಟೀಕಿನಲ್ಲಿ ಪೀಠಿಕಾ
ವರ್ಣನಂ ಸಮಾಪ್ತಂ.

ಮಂಗಳವನೆಮಗೀವುದಿಂದು ತ ।
ರಂಗಿಣೀಧರ ವೃಷಭರಾಜತು ।
ರಂಗ ಜಿತಸಾರಂಗದಾನವ ಸರ್ವಮಂಗಳೆಯ ॥
ತುಂಗ ಕುಚ ತಟ ಕುಂಕುಮಾಂಕಿತ ।
ಮಂಗಳಾಂಗ ಮಹೇಶ ಪರಶುಕು ।
ರಂಗ ವರದಾಭಯಕರಾಬ್ಜ ಸುಮೇರುಕೋದಂಡ ॥

*   *   *

ಪಾಶುಪತಶಾಸ್ತ್ರಾರ್ಥ ತತ್ವವ ।
ದೇಶಿಕೋತ್ತಮರಂಘ್ರಿಸೇವೆಯ ।
ಲೇಸಿನಿಂದಲೆ ತಿಳಿದು ನಂಜ ನರೇಂದ್ರನೀನೀಗ ॥
ವ್ಯಾಸಕೃತ ಪೌರಾಣ ಸೂಕ್ತಿಗ ।
ಳಾಶಯುವನಿಂದಚ್ಚ ಕನ್ನಡ ।
ಭಾಷೆಯಿಂದುಸುರುವೆನು ಹಾಲಾಸ್ಯೇಶ ಲೀಲೆಗಳ ॥

ಈ ಪದ್ಯಗಳನ್ನು ಭಾರತವನೋದುವ ರೀತಿಯಿಂದೋದಿ ಮುಂದೆ ಕರ್ಣಾಟಕ ಭಾಷೆಯಿಂದ ಸ್ಕಂದಪುರಾಣದೊಳಿರ್ದ್ದ ಹಾಲಾಸ್ಯಮಹಿಮೆಯಂ ವಿರಚಿಸಿ, ನಂಜರಾಜ ವಾಣೀ ವಿಲಾಸಮೆಂಬ ಹೆಸರಿಟ್ಟು ಹೇಳುವೆನು. ನಿರ್ಮತ್ಸರರೆಲ್ಲರ್ವಿಚಾರಿಪುದು ಶಿವಚರಿತವನ್ನು ಸತ್ಕರಿಸಿ :

ಶ್ರೀ ಕೈಲಾಸವೆಂ[ದೊಂ]ದು, ಮಹಾಗಿರಿಗಳಲ್ಲಿ (ಒಂದು) ಉತ್ತಮ ಪರ್ವತವಿರುವುದು. ಅದು ಶ್ರೀಪತಿಯಾದ ನಾರಾಯಣ ಮೊದಲಾದ ದೇವತೆಗಳಿಂದ ಭೋಗಮೋಕ್ಷಗಳಿಗೋಸ್ಕರ ಸೇವಿಸಲ್ಪಟ್ಟಿ ಹುದು. ಲಕ್ಷ್ಮಿಯ ನಿಮಿತ್ತವಾಗಿ ಕ್ಷೀರಸಮುದ್ರವಂ ಜೈಸಿ ಉನ್ನತವಾಗಿಹುದು. ಜನರಿಗೆ, ಕೈಲಾಸವೆಂದು ಕೇಳದ ಮಾತ್ರದಿಂದಲೆ ಜನ್ಮ ಮೃತ್ಯುಭೀತಿಗಳಂ, ಪರಿಹರಿಸುವುದು. ಸಕಲ ತೀರ್ಥಗಳಿಂದ ಸಮೇತವಾಗಿಹುದು. ಸಕಲ ಲೋಕಂಗಳಿಂದ ನಮಸ್ಕರಿಸಲ್ಪಟ್ಟಿಹುದು.

End :

ಈ ಹಾಲಾಸ್ಯ ಕ್ಷೇತ್ರ ವೈಭವವನ್ನು ಬಹಳವಾಗಿ ಹೇಳುವುದರಿಂದೇನು. ಭಕ್ತಿಯಿಂದ ಕೇಳುವವನು ಪಾಪಂಗಳಂ ಕೊಡಹಿ ಇಹಲೋಕ ಪರಲೋಕಂಗಳಲ್ಲಿ ಅನುಪಮ ಸುಖಂಗಳನನುಭವಿಸಿ ಕಡೆಗೆ ಸಾಯುಜ್ಯವೆಂಬ ಹೆಸರನುಳ್ಳ ಪರಮ ಮುಕ್ತಿಯನೆಯ್ದುವನು. ಆದಿಯಲ್ಲಿ ನಿಮ್ಮಿಂದ ಕ್ಷೇತ್ರವಾದ ಶ್ರೇಷ್ಠವಾದ ಲಿಂಗವು ಅತ್ಯದ್ಭುತವಾದ ತೀರ್ಥವು, ಉತ್ತಮವಾದ ಶಿವಕ್ಷೇತ್ರವು ಕೇಳಲ್ಪಟ್ಟಿತು. ಅದು ಎನ್ನಿಂದ ಹೇಳಲ್ಪಟ್ಟಿತು. ಸಕಲರೂ ಕಷ್ಟಂಗಳ ದಾಂಟಲಿ. ಸಕಲರೂ ಭದ್ರಂಗಳ ಪಡೆಯಲಿ. ಸಕಲರೂ ಸದ್ಗತಿಯನೆಯ್ದಲಿ. ಸಕಲರಿಗೂ ಶುಭವಾಗಲಿ. ಈ ಪ್ರಕಾರ ಸರ್ವಜ್ಞನಾದ ಸೂತಪೌರಾಣಿಕನು ಪ್ರಾರ್ಥಿಸಿ, ಸಕಲ ಮುನಿಗಳನ್ನೂ ಕೃಪಾದೃಷ್ಟಿಯಿಂದನುಗ್ರಹಿಸಿ ಶಿವಧ್ಯಾನಪರನಾದನು.

Colophon :

ಶ್ರೀ ಚಂದ್ರವಂಶೋದ್ಭವರಾದ ಭಾರದ್ವಾಜ ಗೋತ್ರ ದಾಶ್ವಲಾಯನ ಸೂತ್ರದ ಋಗ್ವೇದಿಗಳಾದ ಮಹಿಶೂರ ದಳವಾಯಿ ದೊಡ್ಡಯ್ಯನವರ ಪೌತ್ರರಾದ ಕಳಲೆ ವೀರರಾಜಯ್ಯನವರ ಪುತ್ರರಾದ ನಂಜರಾಜಯ್ಯನವರು ಸ್ಕಾಂದಪುರಾಣದೊಳ್ಪೇಳಿರ್ದ ಹಾಲಾಸ್ಯ ಪತಿಯಾದ ಸೌಂದರೇಶನ ಅರುವತ್ತು ನಾಲ್ಕು ಲೀಲೆಗಳಂ ಕರ್ಣಾಟ ಕೋಕ್ತಿಯಿಂದಖಿಲರಱಿವಂತೆ ಪೇಳಿದ ನಂಜರಾಜ ವಾಣೀವಿಲಾಸವೆಂಬೀ ಟೀಕಿನಲ್ಲಿ ಅಗಸ್ತ್ಯ ವಸಿಷ್ಠಾದ್ಯನಂತ ಮುನಿಗಳಿಗೆ ಆನಂದ ಕಾನನದಿಂದ ಕದಂಬವನ ಪ್ರವೇಶವೆಂದು ಪೇಳ್ದಲ್ಲಿಗೆ ಅಧ್ಯಾಯ ೭೧ ಕ್ಕಂ ಮಂಗಳಂ.

(ವಿ.ವಿ.)—

ಸಮಗ್ರ. ಸ್ವಲ್ಪ ಶಿಥಿಲ. ಕವಿ ಕಳಲೆ ನಂಜರಾಜನು. ಕವಿಯ ವಿಷಯಗಳು ಮತ್ತು ಕಥಾಗರ್ಭ ಇತ್ಯಾದಿ ವಿಷಯಗಳನ್ನು ಮೇಲೆ ಉದಾಹೃತವಾಗಿರುವ ಭಾಗಗಳಿಂದ ತಿಳಿಯುವುದು.

ಗ್ರಂಥಾಂತ್ಯದಲ್ಲಿ ‘ ಶ್ರೀಮನ್ಮಹಾರಾ . . . . ಯ್ಯನವರ ಮಗ ಲೇಖಕ ನಾರಣ್ಯೆಯನು ಬರೆದ ಹಾಲಾಸ್ಯ ಕ್ಷೇತ್ರ ಮಾಹಾತ್ಮ್ಯದ ಪುಸ್ತಕಕ್ಕೆ ಜಯಮಂಗಳ ಮಹಾ ’ ಎಂದಿದೆ.

No. 276. ಹಾಲಾಸ್ಯಮಾಹಾತ್ಮ್ಯ-

HĀLĀSYAMĀHĀTMYA.

Substance, palm-leaf. Size, $17\frac{1}{2} \times 1$ inches. Pages, 536. Lines, 6 on a page. Character, Kanarese. Condition, injured. Appearance, old.

Contains Adhyāyas 1 to 66 complete, and 67th incomplete.

Same work as the above.

(ವಿ-ವಿ.)—

ಇದರಲ್ಲಿ ಒಂದರಿಂದ ಅರುವತ್ತಾರು ಅಧ್ಯಾಯಗಳು ಪೂರ್ಣವಾಗಿವೆ. ಅರುವತ್ತೇಳನೆಯದು ಅಸಮಗ್ರವಾಗಿದೆ. ಶಿಥಿಲ. ಕವಿ ಕಳಲೆ ನಂಜರಾಜನು.

ಹಿಂದೆ ವರ್ಣಿತವಾದ ಗ್ರಂಥವೇಆಗಿದೆ.

No. 277. ಹಾಲಾಸ್ಯಮಾಹಾತ್ಮ್ಯ-

HĀLĀSYAMĀHĀTMYA.

Substance, paper. Size, $10\frac{1}{2} \times 9\frac{1}{2}$ inches. Pages, 448. Lines, 20 on a page. Character, Kanarese. Condition, good. Appearance, new.

Contains Adhyāyas 1 to 60 complete, and 67th incomplete.

Same work as the above.

(ವಿ-ವಿ.)—

ಇದು ಹಿಂದಿನ ನಂಬರಿನಲ್ಲಿ ವರ್ಣಿತವಾದ ಪ್ರತಿಯ ಪುತ್ರಿಕೆಯಾಗಿದೆ. ಕವಿ ಕಳಲೆ ನಂಜರಾಜನು.

(ಅನುಬಂಧ)-

No. 278. ಧುಂಡಿವಿನಾಯಕ ಚಾರಿತ್ರ-

DHUṆDIVINĀYAKA CARITRA.

Substance, Śrītāla. Size, $10\frac{1}{2} \times 1\frac{3}{4}$ inches. Pages, 16. Lines, 8 on a page. Character, Kanarese. Condition, slightly injured. Appearance, old.

Begins on fol. 14*b*. The other works herein are—(1) Syamāntakōpākhyāna 1*a*. (2) Sāṅkaṣṭaharacaturthīvrata 22*a*.

Complete.

A free rendering in prose describing the story of Dhuṇḍivināyaka according to the Sanskrit Skāndapurāṇa ; by Kaḷale Nanjarāja.

Beginning :

ಪೂರ್ವದಲ್ಲಿ ಪರಮೇಶ್ವರನು ಮಂದರಾದ್ರಿಯಿಂದ ಕಾಶೀಪಟ್ಟಣವನ್ನು ಪ್ರವೇಶಮಾಡುವ ಸಮಯದಲ್ಲಿ ವಿಘ್ನೇಶ್ವರ ಸ್ವಾಮಿಯವರನ್ನು ಸ್ತುತಿಮಾಡಿದ ಪ್ರಕಾರವನ್ನು ಅಗಸ್ತ್ಯಮಹಾಋಷೀಶ್ವರರಿಗೆ ಕುಮಾರಸ್ವಾಮಿಯವರಿಂದ ನಿರೂಪಿಸಲ್ಪಟ್ಟ ಅರ್ಥವನ್ನು ಈ ಲೋಕದ ಜನರ ವಿಘ್ನನಿವೃತ್ತಿಗೋಸ್ಕರ ಶೌನಕಾದಿ ಋಷಿಗಳು ಸೂತಪೌರಾಣಿಕರಂ ಪೇಳ್ವುದೆಂದು ಕೇಳಲಾಗಿ ಆ ಸೂತಪೌರಾಣಿಕರು ಲೋಕಾನುಗ್ರಹಾರ್ಥವಾಗಿ ಪೇಳುತೆ ಉಪಕ್ರಮಿಸಿದರು.

ಕೇಳಿ ! ಶೌನಕಾದಿ ಋಷಿಗಳಿರ ! ಪೂರ್ವದಲ್ಲಿ ಪರಮೇಶ್ವರಸ್ವಾಮಿಯವರು ಮಂದರಾದ್ರಿಯಿಂದ ಪಾರ್ವತೀ ಸಮೇತರಾಗಿ, ಕುಮಾರಸ್ವಾಮಿ, ವಿಶಾಖ; ಮಹಾವಿಶಾಖ, ನಂದಿ, ಭೃಂಗಿ, ನೈಗಮೇಯ, ಏಕಾದಶರುದ್ರರು. ದೇವರ್ಷಿಗಳು, ಸನಕಾದಿಗಳು, ದಿಕ್ಪಾಲಕರು, ಸಕಲ ತೀರ್ಥಗಳು ಸಹಿತವಾಗಿ, ಅಪ್ಸರಸ್ತ್ರೀಯರು ನಾಟ್ಯವಾಡುತ್ತಿರಲು, ಪಂಚಮಹಾವಾದ್ಯಗಳಿಂದಲೂ, ಬ್ರಾಹ್ಮಣವೇದಘೋಷಗಳಿಂದಲೂ, ಸಕಲ ದಿಕ್ಕುಗಳಂ ಕಿವುಡು [ಪಡಿಸು] (ಮಾಡು) ತ್ತಿರಲು, ಸಿದ್ಧಚಾರಣರು ಸ್ತುತಿಸುತ್ತಿರಲು, ದೇವತಾಸ್ತ್ರೀಯರು ಮಂಗಳಾರ್ಥವಾಗಿ ಅರಳುಗಳಂ ಚಲ್ಲುತ್ತಿರಲು, ವಿದ್ಯಾಧರಸ್ತ್ರೀಯರು ಕಲ್ಪವೃಕ್ಷದ ಫಲ ಪುಷ್ಪಗಳನ್ನು ಕಾಣಿಕೆಗಳಂ ಕೊಡುತ್ತಿರಲು, ಯಕ್ಷಕಿನ್ನರರು ಸಂತೋಷಿಸಿದರು. ಮೃಗಪಕ್ಷಿಗಳು ಶುಭಶಕುನವಾಗುತ್ತಿರಲು ಸ್ತ್ರೀಸಹಿತರಾದ ಕಿನ್ನರರು ವೀಣೆಗಳಂ ನುಡಿಸಲು, ವಿಷ್ಣು, ಮಹಾಲಕ್ಷ್ಮಿ, ಬ್ರಹ್ಮನು, ವಿಶ್ವಕರ್ಮನು, ಗಣಂಗಳು ಮೊದಲಾದವರು ಬಳಸಿ ಓಲೈಸುತ್ತಿರಲು, ನಾಗಸ್ತ್ರೀಯರು ಆರತಿಗಳಂ ಬೆಳಗಲು ರಮ್ಯವಾದ ಕಾಶೀಪಟ್ಟಣವಂ ಪ್ರವೇಶಮಾಗಿ ಸಕಲ ದೇವತೆಗಳು ನೋಡುತ್ತಿರಲು ವೃಷಭವಾಹನದಿಂದಿಳಿದು ವಿಘ್ನೇಶ್ವರನಂ ತಕ್ಕೈಸಿ ಬಂದು ಮಾತನಾಡಿದರದೆಂತೆನೆ.

* * * *

ನೀನು ಸಕಲ ವಿಚಾರಗಳಲ್ಲಿಯೂ ಪ್ರೌಢನಾದ ಕಾರಣ ಧುಂಡಿವಿನಾಯಕನೆಂದು ಪೆಸರ ಪಡೆದೆ. ಎಲೈ ! ಧುಂಡಿ ! ನಿನಗೆ ನಮಸ್ಕರಿಸಿ ಮತ್ತೆ ನಮಗೆ ನಮಸ್ಕರಿಸಿದವರ್ಗೆ ಪುನರ್ಜನ್ಮವಿಲ್ಲದಂತೆ ಮಾಳ್ಪ ತಾರಕೋಪದೇಶಮಂ ಮಾಳ್ಪೆನು. ಆರೊಬ್ಬರು ಮಣಿಕರ್ಣಿಕೆಯಲ್ಲಿ ಸ್ನಾನವಂ ಮಾಡಿ ನಿತ್ಯಕರ್ಮಂಗಳಂ ಮುಗಿಯಿಸಿ ಭಸ್ಮೋದ್ಧೂಳನವಂ ಮಾಡಿಕೊಂಡು ಜ್ಞಾನವಾಪಿಯಲ್ಲಿ ಸ್ನಾನವಂ ಮಾಡಿ, ದಿವ್ಯಗಂಧ ಧೂಪದೀಪ, ಲಡ್ಡುಗೆ, ಭಕ್ಷ್ಯಭೋಜ್ಯಂಗಳಂ ನೈವೇದ್ಯವಂ ಮಾಡಿ ಆ ಮೇಲೆ ನನ್ನಂ ನೋಡಲು ಸಕಲ ಸಿದ್ಧಿಯಹುದು. ಕಾಶಿಯಲ್ಲಿ, ಆಚಾರಕ್ರಮದಿಂದ ನಡೆಯದೆ ನೀಚಕರ್ಮಂಗಳಂ ಮಾಡುತ, ನಿತ್ಯವೂ ನಿನ್ನ ಸೇವೆಯಂ ಮಾಡುತ್ತಿರೆ ಅವನಿಗೆ ಸಕಲ ವಿಘ್ನಹರ. ಇಹಪರಸೌಖ್ಯವುಂಟು.

End :

ಈ ರೀತಿಯಲ್ಲಿ ಧುಂಡಿವಿನಾಯಕನಂ ಈಶ್ವರನು ಸ್ತುತಿಸಿ ಸನ್ಮಾನವಂ ಮಾಡಿ, ತನ್ನ ನಿಜಸಿಂಹಾಸನದಲ್ಲಿ ಬ್ರಹ್ಮಾದಿಗಳಿಂದ ಪಟ್ಟಾಭಿಷೇಕವಂ ಮಾಡಿಸಿಕೊಂಡು ಸಕಲ ದೇವತೆಗಳ

ಗೂ ಸಕಲಾಭೀಷ್ಟವಸ್ತುಗಳ ನಿತ್ತು ಅನಂತರದಲ್ಲಿ ಪರಮೇಶ್ವರನಿಂತೆಂದನು.—ಕೇಳಿರೈ ! ದೇವರ್ಕಳಿರ ! ಇನ್ನು ಈಧುಂಡಿ ವಿನಾಯಕ ಅವತಾರಭೇದಗಳಾದ ಭಕ್ತರಿಂದ ಪ್ರತಿಷ್ಠಿತವಾದ ಭಗೀರಥಗಣಪತಿ ಹರಿಶ್ಚಂದ್ರಗಣಪತಿ ಕಪರ್ದಿಗಣಪತಿ ಬಿಂದುಗಣಪತಿ ಮೊದಲಾದ ಅನೇಕ ಗಣಪತಿಗಳಿರುವುವು. ಅವುಗಳ ಪೂಜೆ ಧ್ಯಾನ ನಮಸ್ಕಾರಗಳಿಂದ ಸರ್ವಕಾರ್ಯಸಿದ್ಧಿಯಹುದು ಎಂದು ಪರಮೇಶ್ವರನು ದೇವತೆಗಳಿಗೆ ಬುದ್ಧಿಗಲಿಸಿದನು.

ಈ ಅಧ್ಯಾಯಮಂ ಕೇಳಿದವರು ಸಕಲ ವಿಘ್ನಂಗಳಂ ಪರಿಹರಿಸಿಕೊಂಡು ಯಾವ ಕಾರ್ಯಗಳ ನಪೇಕ್ಷಿಸುವರೋ ಆ ಕಾರ್ಯಗಳೆಲ್ಲ ಕೈಸೇರುವುದೆಂಬುದಾಗಿ ಕುಮಾರಸ್ವಾಮಿಯು ಅಗಸ್ತ್ಯರಿಗೆ ನಿರೂಪಿಸಿದರೆಂದು ಸೂತಪೌರಾಣಿಕರು ಶೌನಕಾದಿ ಋಷಿಗಳಿಗೆ ನಿರೂಪಿಸಿದರು.

Colophon :

ಇಂತೀಸ್ಕಾಂದಪುರಾಣೋಕ್ತಮಾದ ಕಾಶೀಮಹಿಮಾದರ್ಪಣದಲ್ಲಿ ಧುಂಡಿವಿನಾಯಕಚಾರಿತ್ರ ವರ್ಣನೆಯಂ ಪೇಳ್ದಲ್ಲಿಗೆ ಕರ್ಣಾಟಕಭಾಷಾವಿರಚಿತಮಾದ ಶರಭಧ್ವಜ ಹನುಮಧ್ವಜ ಸಿಂಹ ಲಲಾಟಾಂಕಿತ ಶಿಬಿಕಾದಿ ಬಿರುದಾನ್ವಿತ ಕಳಲೆ ದೊಡ್ಡರಾಜಪೌತ್ರ ವೀರರಾಜತನೋಭವ ಶ್ರೀನಂಜರಾಜವಿರಚಿತಮಾದ ಧುಂಡಿವಿನಾಯಕ ವರ್ಣನೆಯಂ ಪೇಳ್ದಲ್ಲಿಗೆ ಅಧ್ಯಾಯಿಯು ೨ ಕ್ಕಂ ಮಂಗಳಂ.

(ವಿ.ವಿ.)——

ಸಮಗ್ರ. ಕವಿ ಕಳಲೆ ನಂಜರಾಜ. ಉಳಿದ ವಿಷಯಗಳನ್ನು ಮೇಲೆ ಉದಾಹರಿಸಿರುವ ಭಾಗಗಳಿಂದ, ತಿಳಿಯುವುದು.

(2) ARTHAŚĀSTRA.

ಅರ್ಥಶಾಸ್ತ್ರ.

No. 279. ಕಳಿಂಗ ನೀತಿ.

KAḶIṄGANĪTI.

Substance, palm-leaf. Size, 15 × 1¼ inches. Pages, 26. Lines, 5 on a page. Character, Kanarese. Condition, injured. Appearance, old. Begins on fol. 64*a* of the manuscript described under No. 26 *ante*. Complete.

This is a small portion from the Mahābhārata How Sakuni influenced Duryōdhana and increased his hatred towards the Pāndavās is described herein.

The author is Kumāravyasa alias Nāraṇappa.

For details about the author see No. 28 *ante*.

Beginning:

ವಾಯುಸುತನುರಿವನೆಯು ಕೌರವ ।
ರಾಯ ಕೃತಕವ ಕಳೆದು ಹೊಕ್ಕನು ।
ತಾಯಿವ್ರೊಡಹುಟ್ಟಿದರು ಸಹಿತ ಮಹಾವನಾಂತರವ ॥

ಕೇಳು ಜನಮೇಜಯ ಧರಿತ್ರೀ ।
ಪಾಲ ಗಜನಗರಿಯಲಿ ಪಾಂಡವ ।
ರಾಳ ಕೌರವರಾಳ ಸೆಣಸಿನ ಕಾಲುಮೆಟ್ಟುಗಳ ॥

ಸೂಳು ಮಚ್ಚರ ಬಿರುದು (ಪಾಡಿನ) ।
ಜೂಳಗಲಹದ ಕದಡು ಜಾಜಿನ ।
ತೋಳುವಲದೊಳು ತೋಟ ಮಸಗಿತು ದಿವಸದಿವಸದಲಿ ॥

*　　　*　　　*

ವಿದುರ ಭೀಷ್ಮಾದಿಗಳು ನಿನ್ನಯ ।
ಸದನದೊಳಗುಂಡುಟ್ಟು ಪರರ ।
ಭ್ಯುದಯವನೆ ಬಯಸುವರು ! ಹಾರುವರೆಂಬರವರುಗಳ ॥

ಹದನ ನೀನೇ ಬಲ್ಲೆ ! ಸಾಕೆ ।
ನ್ನದರ ಮಾತೇನರಸ ! ನಮ್ಮಯ ।
ಕದನವನು ಚಿತ್ರೈಸು ! ಸಾಕೆನ್ನೆಂದನಾ ಕರ್ಣ ॥

ಸಹಜವೀನುಡಿ ಕರ್ಣನಾಡಿದು !
ದಹುದು ! ಪಾಂಡವರೈವರುಂ ಕೆಡು ।
ಸಹಸಿಗರು (?) ಗೆಲಲರಿದು, ಕುಹಕೋಪಾಯಮಾರ್ಗದಲಿ ॥

ಅಹಿತರನು ಗೆಲಬಹುದು ಪರಿಕರ ।
ಸಹಿತವರುಗಳ ! ನಿಮ್ಮ ಚಿತ್ತಕೆ ।
ಬಹರೆ ನಮ್ಮಭಿಮತವನವಧರಿಸೆಂದನಾ ಶಕುನಿ ! ॥
ಐದು ಮುಖ ! ವೀರೈದು ಭುಜ ! ಹದಿ ।
ನೈದು ಕಣ್ಗಳ ವಿಗಡ ರುದ್ರನು ।
ಮೇದಿನಿಯು ಮೇಲೊಂದು ಶಿರಭುಜವೆರಡನೆಳವಡಿಸಿ ॥
ಆದಿಪುರುಷನು ಭೀಮವೇಷದೊ ।
ಳೈದಿ(?)ಜನಿಸಿದನಾತನಿದಿರಲಿ ।
ಕೈದುಗಾರನದಾವನೈ ! ಹೇಳೆಂದನಾಶಕುನಿ ! ॥
ಅರಸ ಕೇಳ್ಬಿಲುವಿದ್ಯೆಯಲಿ ಮೂ ।
ವರೆ ಕಣಾ ! ಸಾಮರ್ಥ್ಯಪುರುಷರು ! ।
ಧರೆಯೊಳೊಬ್ಬರಿಗೊಂದುಗುಣ ! ಪಾರ್ಥಂಗೆ ಮೂರುಗುಣ ! ॥
ಭರಿತವಾಗಿಹುದಾತನೊಬ್ಬನೆ ।
ಸರಿಸದಲಿ ಮಾರಾಂತು ಜೀವಿಸಿ ।
ಮರಳಬಲ್ಲವನಾವನೈ ! ಹೇಳಿರೆಂದನಾ ಶಕುನಿ ॥
ರಾಮಚಂದ್ರನ ಚರಣಯುಗ ನಿ ।
ಸ್ಸೀಮ ಭೀಷ್ಮಾಚಾರಿಯನ ಶಿರ ! ।
ವಾಮಹಾರಥ ದ್ರೋಣನೆದೆನಡುಗುವುದು ಕದನದಲಿ ॥
ಸೌಮನಸ್ಯನು ನಿಷ್ಪ್ರಕಂಪನ ।
ನಾಮನರ್ಜುನದೇವನಿದಿರಲಿ ।
ಭೂಮಿಯಲಿ ಬಿಲ್ಲಾಳದಾವ (ವ) ನೆಂದನಾಶಕುನಿ ॥
ಶತ್ರುಗಳ ಸಂಹರಿಸಿ ರಾಜ್ಯವ ।
ನೊತ್ತಿಯಾಳುವೆನೆಂಬ ಸಾಹಸ ।
ಸತ್ವಗುಣ ನಿನಗಿಲ್ಲ ! ಪಾಂಡವರತುಲ ಭುಜಬಲರು ! ॥
ಕೃತ್ರಿಮದ ಮುಖದಿಂದ ರಿಪುಗಳ ।
ಕಿತ್ತುಹಾಕುತ ನೆಲನನೇಕ ।
ಚ್ಛತ್ರದಲಿ ಸಲಹುವುದು ಮತವಹುದೆಂದನಾಶಕುನಿ ॥
ಸೋದರರುಗಳು ನೀವು ! ನಿಮ್ಮೊಳು ।
ಭೇದಮಂತ್ರವ ಮಾಡುವುದು ಮ !
ರ್ಯಾದೆಯೇ ! ನಾವ್ನಿಮ್ಮಡಿಗಳರಮನೆಯ ಸೇವಕರು ! ॥
ವಾದಿಸುವೊಡಿತ್ತಂಡ ಸರಿ ! ನಮ ।
ಗಾದರೆಯು ಕಂಡುದನುಡಿಯಬೇ ।
ಕಾದರಿಸು ! ಮೇಣ್ ಮಾಣು ! ಬಿನ್ನಹವೆಂದನಾ ಶಕುನಿ ॥
ಪಕ್ಷವೆರಡೇ ಲೋಕದೊಳು ! ಪಿತೃ ।
ಪಕ್ಷ ಮೇಣಾಮಾತೃಪಕ್ಷ ! ವಿ ।
ಪಕ್ಷ ತಂದೆಯು ದೆಸೆ ! ಸ್ವಪಕ್ಷವೆ ತಾಯದೆಸೆಯವರು ! ॥

ತಕ್ಷಕನ ತೆರನಂತೆ ನಿಮ್ಮನು ।
ಭಕ್ಷಿಸುವರಾವಂಗದಲಿ ! ನೀ ।
ಶಿಕ್ಷಿಸುವುದೀಪಾಂಡು ಪುತ್ರರ ! ನೆಂದನಾ ಶಕುನಿ ॥
ಮೊಳೆಯುಲೇ ಮುರುಡಿಸಲು ಬೇಹುದು ! ।
ಬಲಿದ ಬಳಿಕದು ನಿಮ್ಮಹವಣೇ ! ।
ಇಳೆಯೊಳರ್ಥವನಿತ್ತು ರಿಪುಗಳ ಹೆಚ್ಚಿಸಿದ ಬಳಿಕ ॥
ಗೆಲುವನಾವನು ದೇವದಾನವ ।
ರೊಳಗೆ ಭೀಮಾರ್ಜುನರ ! ಕೈಮನ ।
ದಳವನಱಿದಱಿದಱಿಯುದಂದದಿ ಮರುಳಹರೆ ! ಎಂದ ॥

* * *

ವಿಷವನುಣುವೆಂದಳುಕದುಪಯೋ ।
ಗಿಸಲು ಕೊಲ್ಲದೆ ಬಿಡುವುದೇ ! ಕರ ।
ಗಸದ ನಡು ಬಡವಾದರೆಯು ಕೊಯ್ದಿಕ್ಕದೇ ತರುವ ! ॥
ಶಿಶುವಿವನು ಸಾಮರ್ಥ್ಯ ಪುರುಷನೆ ।
[ನು] (ಪು) ಸಿಕಣಾ ಯೆಂದುಳುಹಿದೊಡೆ ರ ।
ಕ್ಕಸನಹನು ಮುಂದಕ್ಕೆ ತನಗಹುದೆಂದನಾ ಶಕುನಿ ॥
ಕಾಲವನು ಗೂಗೆಗಳು ! ನಿರ್ಜರ ।
ರೋಲಗವನಾದೈತ್ಯರುಂ ! ತಿಮಿ ।
ರಾಳ ರವಿರಶ್ಮಿಗಳ ! ನಾಬಲು ನಿದ್ರೆಯನು ಚೋರ ! ॥
ಕಾಳಭುಜಗನು ಗರುಡನುಳಿವನು । (?)
ಕೇಳದಂತಿರೆ ಪಾಂಡವರು ನಿ ।
ನ್ನೇಳಿಗೆಯ ಸೈರಿಸರು ಚಿತ್ತೈಸೆಂದನಾ ಶಕುನಿ ॥
ವಿಗಡರುದ್ರನು ಲೋಚನಾಗ್ನಿಯೊ ।
ಳೊಗುಮಿಗೆಯ ಕೋಪದಲಿ ಕಾಮನ ।
ಮಿಗೆ ದಹಿಸಿದಂದದಲಿ (ನೀ) ಕುಂತೀಕುಮಾರಕರ ॥
ಹೊಗೆವುದೈ ! ಲಾಕ್ಷಾಭವನದಲಿ ।
ಹಗೆಗೆ ಹರಿವಹುದಲ್ಲದಿದ್ದರೆ ।
ವಿಗಡಿಸುವುದೈ ! ರಾಜಕಾರ್ಯವಿದೆಂದನಾಶಕುನಿ ॥

End :

ದಾಟಿದರು ಗಂಗೆಯನು, ರಾಯನ ।
ಹೂಟದಲಿ ಹಲುಮುರಿದವೇ ! ನ ।
ವ್ಮಾಟಕಿದು ಹಿರಿದಲ್ಲ ಹಾ ! ಯೆನುತ್ತೈವರಡಿಗಡಿಗೆ ॥
ಕೋಟಲೆಯ ಕೊಲ್ಲಣಿಗೆಯ (ಲಿ) ಮ ।
ಯ್ನೋಟಕಲಸದೆ ಬಿಸಿಲಲವರು ಮ ।
ಹಾಟವಿ(ಯ) ಮಧ್ಯವನು ಹೊಕ್ಕರು ನೃಪತಿ ಕೇಳೆಂದ ॥

ಕಳಿಂಗನೀತಿ ಸಂಪೂರ್ಣಂ.

Colophon:

(ವಿ-ವಿ.)—

ಇದು ಭಾರತಾಂತರ್ಗತವಾದುದು. ಪಾಂಡವರ ವಿಷಯದಲ್ಲಿ ದುರ್ಯೋಧನನಿಗೆ ದ್ವೇಷವನ್ನು ಹೆಚ್ಚಿಸಲು ಶಕುನಿಯು ಬೋಧಿಸಿದ ನೀತಿಯು ಇದರಲ್ಲಿ ಉಕ್ತವಾಗಿದೆ. ಕವಿ ಕುಮಾರವ್ಯಾಸನೆಂಬ ಬಿರುದಾಂತ ನಾರಣಪ್ಪನೆಂಬುವನು. ಗ್ರಂಥಕರ್ತನ ವಿಷಯದಲ್ಲಿ ಹೆಚ್ಚು ಸಂಗತಿಯನ್ನು ಅಪೇಕ್ಷಿಸುವವರು ೨೭ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

No. 280. ಕಳಿಂಗ ನೀತಿ.
KALIṄGANĪTI.

Substance, palm-leaf. Size, $14\frac{1}{4} \times 1\frac{5}{16}$ inches. Pages, 26. Lines, 5 on a page. Character, Kanarese. Condition, very much injured. Appearance, old.

Begins on fol 2*a*. The other works herein are.—(1) Some stanzas in Sanskrit and Telugu 1*a*, (2) Draupadīsvayamvara 15*a*.

Complete.

Same work as the above.

(ವಿ-ವಿ.)—

ಸಮಗ್ರ. ಅತಿ ಶಿಥಿಲ. ಗ್ರಂಥಪಾತವುಂಟು. ಕವಿ ಕುಮಾರವ್ಯಾಸ. ಉಳಿದ ವಿಷಯಗಳನ್ನು ಹಿಂದಿನ ನಂಬರಿನಿಂದ ತಿಳಿಯುವುದು.

No. 281. ಕಳಿಂಗ ನೀತಿ.
KALIṄGANĪTI.

Substance, palm-leaf. Size, $14\frac{3}{4} \times 1\frac{1}{4}$ inches. Pages, 24. Lines, 6 on a page. Character, Kanarese. Condition, very much injured. Appearance, old.

Begins on fol. 1*a*. The other work herein is.—(1) Rājanīti 13*a*.

Complete.

Same work as the above.

(ವಿ-ವಿ.)—

ಸಮಗ್ರ. ಅತಿ ಶಿಥಿಲ. ಗ್ರಂಥಪಾತ ಬಹಳ. ಕವಿ ಕುಮಾರವ್ಯಾಸ. ಉಳಿದ ವಿಷಯಗಳನ್ನು ಹಿಂದಿನ ನಂಬರಿನಿಂದ ತಿಳಿಯುವುದು. ಹಿಂದಿನ ನಂಬರಿನಲ್ಲಿರುವುದಕ್ಕಿಂತಲೂ ಕಡೆಯಲ್ಲಿ ಇದರಲ್ಲೊಂದು ಪದ್ಯವು ಅಧಿಕವಾಗಿರುವುದರಿಂದ ಅದನ್ನು ಈ ಕೆಳಗೆ ಕೊಡಲಾಗಿದೆ.

“ ಈ ಪರಿಯಲಾಪಾಂಡುಸುತರತಿ ।
ಪಾಪಿ ಕೌರವನಿಂದ ಬಂದ ಮ ।
ಹಾಪದಂಗಳ ಕಳೆದು ಲಾಕ್ಷಾಗೇಹದಾಹದಲಿ ॥
ರೂಪಡಗ (ದ) ಮಲಾಂಗ ಕಂದದೆ ।
ಕಾಪದಲಿ ಕಂಗೆಡದೆ ಶಮೆದಮೆ ।
ಗೋಪರೆನಿಸಿಯೆ ಹೊಕ್ಕರಡವಿಯ ಹರಿಯ ನೆನೆವುತ್ತ ”

No. 282. ಕಾಮಂದಕ ನೀತಿ.
KĀMANDAKANĪTI.

Substance, paper. Size, 19¾ × 7½ inches. Pages, 76. Lines, 35 on a page. Character, Kanarese. Condition, much injured. Appearance, old.

Begins on page 1*a*. The other work herein is.—(1) Histroy of Srīraṅgapaṭṭaṇa, 77 (Mysore Rājavaṃśāvaḷi).

Contains the Āsvāsas 1 to 8 complete.

A rendering in Kanarese prose of the Sanskrit Kāmandakanīti, by Cikkaupādyhāya.

Beginning :

ಉ॥ ಮಾ॥ ಶ್ರೀಮದಪಾಂಗ ಲಬ್ಧ ವಿಭವಾಬ್ಜಭವೇಂದಿರೆಯಾಣ್ಮನಾತ್ಮಧಾ ।
ಮಾಮಳೆ ಪುಷ್ಪಲೋಲ ಮುನಿಪಾಳಿ ಸುಕೌಸ್ತುಭಹಾರನಚ್ಯುತಂ ॥
ಭೂಮನಿಜಾಂಶುಫುಲ್ಲಯುದು ಸ್ವೈನ್ಯ ಮುಖಾಂಬುಜ ಚಕ್ರಧಾರಿಯು ।
ದ್ಧಾಮ ಪವಿತ್ರಸಿಂಧುಪದನೀಗೆ ವಿನೋದಿ ಜಗಕ್ಕೆ ರಾಗಮಂ ॥

*　　　*　　　*　　　*

ಕಂ॥ ಇಂತಭಿನವ ರಂಬೆವ್ರೊಲೋ ।
ರಂತಾಡಿದ ನಟಿಗೆ ಪಸರ ನಗವಿತ್ತು (?) ॥
ಕಂತು ಸಮರೂಪನುರ್ವೀ ।
ಕಾಂತಂ ಚಿಕದೇವರಾಜನಿನಸಮತೇಜಂ ॥

Colophon :

ಇದು ಸತತ ನತಶತಧೃತಿ ಶತಮಖಮುಖ ಸುರವಿತತಿ ವಿತತಕೋಟೀರ ಕೋಟೀ ತಟಘಟಿತ ಚಟುಲಹರಿನೀಲ ಮಣಿಸ್ತೋಮಾಭಿರಾಮಧಾಮ ರೋಲಂಬಜಾಲ ಸೇವಿತ ಕಂದಳಿವರವಿಂದಾಮಂದ ಸುಂದರ ಮಂಗಳರಂಗನಾಥ ಚರಣ ಸುರುಚಿರ ನಖಮಯೂಖ ನಿಸ್ತಂದ್ರಸಾಂದ್ರ ಚಂದ್ರಿಕಾಲೋಲ ಲೀಲಾಚಕೋರ ಯಶೋವಿಮಲ ಸಮುದಯಸುರಭಿ ಹರಿದಂತಾಪ್ರತಿಮಪ್ರತಾಪ ಪ್ರಚುರಪ್ರಭಾಪಲ್ಲವ ಸಮುಲ್ಲಸಿತ ಸಕಲ ವಿಬುಧನಿಕರಸುಕರ ಮನೋರಥಪ್ರದಫಲಲಲಿತ ಚಿಕದೇವರಾಜ ರಾಜಿತಾನಲ್ಪಕಲ್ಪತರು ಸಮಾಶ್ರಿತ ಲಕ್ಷ್ಮೀಪತಿರಮ್ಯಾಭಿಧಾನ ಚಿಕುಪಾಧ್ಯಾಯಾಮಾತ್ಯ ಶಿಖಾಮಣಿ ವಿರಚಿತಮಪ್ಪ ಕಾಮಂಪಕ ನೀತಿಯೊಳ್ ಸಮುದ್ರ ಮೇರುದೇಶ ಚಿಕದೇವ ಮಹಾರಾಯನ ವಂಶಾವಳ್ಯಾದಿ ವರ್ಣನಂ ಪ್ರಥಮಾಶ್ವಾಸಂ.

*　　　*　　　*　　　*

ಈ ಕಾಮಂದಕೀಯ ಶಾಸ್ತ್ರದೊಳು ಹದಿನಾರು ಸರ್ಗಂಗಳಿಂ ಪ್ರತಿಪಾದ್ಯಾರ್ಥಾನುಕ್ರಮಣಿಕೆ :—ಪ್ರಥಮ ಸರ್ಗದೊಳಿಂದ್ರಿಯಜಯಂ ವೃದ್ಧ ಸಂಸರ್ಗಮುಂ, ದ್ವಿತೀಯಾಧ್ಯಾಯದೊಳ್ ವಿದ್ಯಾಸಮುದ್ದೇಶ ವರ್ಣಾಶ್ರಮ ಧರ್ಮದಂಡ ಮಾಹಾತ್ಮ್ಯವುಂ, ತೃತೀಯದೊಳಾಚಾರ ವ್ಯವಸ್ಥಾಪನಂ, ತುರೀಯ ಸರ್ಗದೊಳ್ ಪ್ರಕೃತಿಸಂಪತ್ತಿ ನಿರೂಪಣಂ, ಪಂಚಮಸರ್ಗದೊಳ್ ಸ್ವಾಮಿಭೃತ್ಯ ವೃತ್ತಾಂತಂ, ಷಷ್ಠದೊಳ್ ಕಂಟಕಶೋಧನಂ, ಆತ್ಮಪುತ್ರ ರಕ್ಷಣಯೋಗಂ, ಅಷ್ಟಮ ಸರ್ಗದೊಳ್ ಮಂಡಲಯೋಗಂ, ನವಮದೊಳ್ ಸಂಧಿವಿಕಲ್ಪಂ, ದಶಮದೊಳ್

ವಿಗ್ರಹವಿಕಲ್ಪಂ, ಏಕಾದಶದೊಳ್ ಆಸನದ್ವೈಧೀಭಾವವಿಕಲ್ಪಂ, ದ್ವಾದಶದೊಳ್ ಮಂತ್ರಿವಿಕಲ್ಪಂ, ತ್ರಯೋದಶದೊಳ್ ದೂತಪ್ರಚಾರ ವಿಕಲ್ಪಂ, ಚತುರ್ದಶದೊಳ್ ಪ್ರಕೃತಿಕರ್ಮ್ಮವ್ಯಸನಂ, ಪಂಚದಶದೊಳ್ ಸಪ್ತವ್ಯಸನವರ್ಗಂ, ಷೋಡಶಸರ್ಗದೊಳ್ ಯಾತ್ರಾಯೋಕ್ತ್ಯದರ್ಶನಂ ;

* * * *

ಅವಿನಯರತ ಇತಿ ; ವಿನಯಂ ಇಂದ್ರಿಯಜಯಂ ಶಾಸ್ತ್ರನಿಶ್ಚಯಪ್ರಾಪ್ಯಂ ತದ್ವಿರುದ್ಧಮವಿನಯಂ ತಾದೃಗ್ವ್ಯಸನಾ ಸಕ್ತನೃಪಂಗೆ ಸಾಧ್ಯಮು ಮಸಾಧ್ಯಮಪ್ಪುದು. ವಿದ್ವಿಷಃ = ರಿಪುಗಳುಂ ಶ್ರುತವಿನಯ ವಿಧಿಯನುಳ್ಳವರಂ ಸಮಾಶ್ರಯಿಪರು. ವಿನೀತಃ ತನುರಪಿ = ಕೃಶಮಾದ, ದೊ(?) ನೈತಿಪರಾಭವಂ = ಪರಾಭವಮಂ ಪಡೆಯಂ ಕ್ವಚಿದಪಿ ವಿನಯಯುಕ್ತನಪ್ಪುದಱಿಂ ;

Colophon :

ಇತಿ ಕಾಮಂದಕೀಯ ನೀತಿಸಾರಟೀಕಾಯಾಂ ಉಪಾಧ್ಯಾಯ ನಿರಪೇಕ್ಷಾಯಾಂ ಇಂದ್ರಿಯಜಯೋ ವೃದ್ಧಸಂಯೋಗಃ ಪ್ರಥಮಃಸರ್ಗಃ.

ವಿನಯಸಂಯಂಗಳ ಅನುಷ್ಠಾನಂ :—ಚಕ್ರವರ್ತಿ ಪದಪ್ರಾಪ್ತಿಗೋಸುಗ ಭವತಿ : ಆಗುತಿದ್ದಿತು,—ಎಂದು ಭಾವಿಸುತಿದ್ದಂಥ ನೀತಿಸಾರ ಗ್ರಂಥಕಾರನಿಂದ ಇಂದ್ರಿಯಜಯ ಪ್ರಕರಣ ಮಾದಿಯೊಳೇ ಪೇೞಲ್ಪಟ್ಟುದು.

End :

ಮಂಡಲ ವೃತ್ತಮಂ ಪೇೞ್ದಪಂ :—

" ಮಿತ್ರೋದಾಶೀನ ರಿಪವ । ಏತನ್ಮಾತ್ರಂಹಿ ಮಂಡಲಂ ॥
ಸಮ್ಯಕ್ ಶೋಧನಮೇತೇಷಾ । ಮಿತಿ ಮಂಡಲಶೋಧನಂ ॥ "

ಮಿತ್ರಮಂಡಲಂ ಪರಮಂಡಲ ಮುದಾಶೀನಮಂಡಲಮೆಂಬುದೇ ಚಿಂತ್ಯಮೆಂದು ಇದು ಮಾತ್ರಮೇ ಮಂಡಲಂ. ಇಲ್ಲಿ ಅತಿ ಪ್ರಯತ್ನಂ ಕಾರ್ಯಮೆಂದು ಭಾವಂ. ' ಸಮ್ಯಕ್ ಶೋಧನಮೇತೇಷಾಮಿತಿಮಂಡಲ ಶೋಧನಂ ' ಮಿತ್ರಮಂಡಲ ಪ್ರತಿಪಾದಿತಮೆಂದು ವಾಕ್ಯಶೇಷಂ.

ಉಪಸಂಹರಿಸುತ ಪೇೞ್ದಪಂ :—

" ಇತಿ ಸ್ಮ ರಾಜಾ ನಯವರ್ತ್ಮನಾ ವ್ರಜನ್ ।
ಸಮುದ್ಯಮೀ ಮಂಡಲ ಶುದ್ಧಿಮಾಚರನ್ ॥
ವಿರಾಜತೇ ಸಾಧು ವಿಶುದ್ಧಮಂಡಲಃ ।
ಶರಚ್ಛಶೀವ ಪ್ರತಿನಂದಯನ್ ಪ್ರಜಾಃ ॥ "

ಇತಿ ಉಕ್ತನ್ಯಾಯದಿಂ ನಯವರ್ತ್ಮನಾ ನೀತಿಮಾರ್ಗದಿಂ ವ್ರಜನ್ ಮಂಡಲ ಶುದ್ಧಿಯನಾಚರಿಸುತೆ ಪೇೞ್ದಪಂ. ' ವಿರಾಜತೇ * * ಪ್ರಜಾಃ ' ಇತಿ ಪ್ರತೀತಂ.

Colophon :

ಇತಿ ಶ್ರೀಮತ್ಕಾಮಂದಕೀಯ ನೀತಿಸಾರಟೀಕಾಯಾ ಮುಪಾಧ್ಯಾಯನಿರಪೇಕ್ಷಾಯಾ ಮಷ್ಟಮ ಸರ್ಗಃ.

ಇದು ಸತತ ನತಶತಧೃತಿ * * * . ಟೀಕುಪಾಧ್ಯಾಯ ಸಚಿವ ಶಿರೋಮಣಿ ವಿರಚಿತಮಪ್ಪ ಕಾಮಂದಕೀಯ ನೀತಿಯೊಳ್ ಮಂಡಲಯೋಗ ವರ್ಣನಮಷ್ಟಮಾಶ್ವಾಸಂ.

(ವಿ-ವಿ.)—

ಇದು ಅಸಮಗ್ರ ಎಂಟು ಸರ್ಗಗಳವೆ. ಅಲ್ಲದೆ ಆದಿಯಲ್ಲಿ ಚಿಕದೇವರಾಜನ ವಂಶಾವಳಿ ಇತ್ಯಾದಿ ವರ್ಣನೆಯನ್ನೊಳಗೊಂಡ ಒಂದು ಆಶ್ವಾಸವು ಪೂರ್ಣವಾಗಿಯೂ, ಮತ್ತೊಂದು ಅಪೂರ್ಣವಾಗಿಯೂ ಇದೆ. ಹೆಚ್ಚು ಶಿಥಿಲ. ಗ್ರಂಥಪಾತವಿದೆ.

ಇದು ಸಂಸ್ಕೃತ ಕಾಮಂದಕನೀತಿಗೆ ಗದ್ಯರೂಪವಾದ ಕನ್ನಡ ಟೀಕೆ. ಈ ಟೀಕೆಗೆ ‘ ಉಪಾಧ್ಯಾಯ ನಿರಪೇಕ್ಷಾ ’ ಎಂದು ಹೆಸರು. ಕವಿ ಚಿಕ್ಕುಪಾಧ್ಯಾಯ ಉಳಿದ ವಿಷಯಗಳನ್ನು ಉದಾಹೃತ ಭಾಗಗಳಿಂದ ತಿಳಿಯುವುದು. ಗ್ರಂಥಾಂತ್ಯದಲ್ಲಿ ;

ಕಂ॥ ಸಿಂಧು ಬಂಧನನ ವಿದ್ವಿ ।
ಟ್ಸಿಂಧುರ ಪರಿಚಯ ಮೃಗೇಂದ್ರ ನಡಿದಾವರೆಯಂ ॥
ಸಂಧಿಸಿ ಮನದೊಳ್ಪೇಳ್ವಂ ।
ಸಂಧಿವಿಕಲ್ಪಾಂತ್ಯಮೆನಿಪ ನೀತಿಯನಿದರೊಳ್ ॥
ನಂದಕಮುರು ಕೀರ್ತಿಲತಾ ।
ಕಂದಕಮತಿ ದರ್ಪಿತಾರಿ ಭೂಭೃದ್ವನಿತಾ ॥
ಕ್ರಂದಕ ಮಾಶ್ರಿತ ವಿಬುಧಾ ।
ನಂದಕ ಮಿಖಿಳ್ಗಮವನಿ ಸಂಕ್ರಂದನನಾ ॥

ಎಂದಿದೆ.

No. 283. ಕಾಮಂದಕನೀತಿ.

KĀMAṄDAKANĪTI.

Substance, palm-leaf. Size, 14¾ × 1⅜ inches. Pages, 62. Lines, 5 on a page. Character, Kanarese. Condition, very much injured. Appearance, old.

Begins on fol. 1*a*. The other work herein is :—(1) Paścimaraṅgadhāmaśataka

Incomplete.

Same work as the above.

(ವಿ-ವಿ.)—

ಓಲೆಯಪ್ರತಿ. ಅತಿ ಶಿಥಿಲ. ಗ್ರಂಥಪಾತ ಬಹಳ. ೩೦ ನೆಯ ಓಲೆಯಿಂದ ಪಶ್ಚಿಮ ರಂಗಧಾಮ ಶತಕವಿದೆ. (೩೦-೪೪).

ಕವಿ, ಚಿಕ್ಕುಪಾಧ್ಯಾಯ. ಹಿಂದೆ ವರ್ಣಿತವಾದ ಗ್ರಂಥವೇ ಆಗಿದೆ.

No. 284. ಕಾಮಂದಕನೀತಿ.

KĀMAṄDAKANĪTI.

Substance, paper. Size, 10⅝ × 9$\frac{5}{16}$ inches. Pages, 30. Lines, 20 on a page. Character, Kanarese. Condition, good. Appearance, new.

Begins on fol. 1*a*. The other work herein is ;—(1) Paścimaraṅgadhāmaśataka. 30.

Incomplete.

Same work as the above.

(ವಿ.ವಿ.)—

ಕಾಗದ ಪ್ರತಿ. ಅಸಮಗ್ರ. ಗ್ರಂಥ ಪ್ರಾತವಿದೆ. ಅಕ್ಷರಗಳು ಸಾಮಾನ್ಯ. ಸರ್ಗ ವಿಭಾಗವಿಲ್ಲ. ೩೦ ನೆಯ ಪುಟದಿಂದ ಮುಂದಕ್ಕೆ ಪಶ್ಚಿಮ ರಂಗಧಾಮಶತಕವಿದೆ. (೩೦. ೪೬). ಇದು ಹಿಂದಿನ ನಂಬರಿನ ಪ್ರತಿಯ ಪ್ರತಿಕೆಯಾಗಿದೆ.

ಕವಿ, ಚಿಕ್ಕುಪಾಧ್ಯಾಯ. ಹಿಂದೆ ವರ್ಣಿತವಾದ ಗ್ರಂಥವೇ ಆಗಿವೆ.

No. 285. ರಾಜನೀತಿ.
RĀJANĪTI.

Substance, palm-leaf. Size, 15 × 1¼ inches. Pages, 20. Lines, 6 on a page. Character, Kanarese. Condition, injured. Appearance, old.

Begins on fol. 34*a* of the manuscript described under No. 26 ante.

Complete.

A poem taken from the Bhārata of Kumārvyāsa. It is in the Bhāminī ṣaṭpadi metre describing 'Rajanīti,' (duties of a king) as told by Narada to Dharmarāja, when he was ruling at Indraprastha

Beginning:

ಸಭೆಯೊಳೋಲಗದೊಳು ವಿರಂಚಿ ।
ಪ್ರಭುವಿನನುಮತದಿಂದ ಧರಣೀ ।
ವಿಭು ಮಹಾಕ್ರತು ರಾಜಸೂಯವನೊಲಿದು ಕೈಕೊಂಡ ॥
ಕೇಳು ! ಜನಮೇಜಯ ಧರಿತ್ರೀ ।
ಪಾಲ ! ಖಾಂಡವವನದ ವಹ್ನಿ ।
ಜ್ವಾಲೆ ತೆಗೆದುದು ಕೂಡೆ ಹೊಗೆದುದು ಹೊದರ ಹೊಸ ಮಳೆಯು ॥
ಮೇಲುಗಾಳಿಗದುಬ್ಬಿನಲಿ ಸಿರಿ ।
ಲೋಲಸಹಿತರ್ಜುನನು ವಿಕ್ರಮ ।
ದೇಳಗೆಯ ಪರಿತೋಷದಲಿ ಮರಳದನು ಪಟ್ಟಣಕೆ ॥

* * *

ಬಂದನರಮನೆಗಾ(ಗಿ) ಮುನಿಯುಭಿ ।
ವಂದಿಸಿದುದಾಸ್ಥಾನವಿದಿರಲಿ ।
ನಿಂದು ಬಿಜಯಂಗೆಯ್ಸಿತಂದರು ಸಿಂಹವಿಷ್ಟರಕೆ ॥
ಸಂದ ಮಧುಪರ್ಕಾದಿ ಸತ್ಕೃತಿ ।
ಯಿಂದ ಪೂಜಿಸಿ ವಿನಯದಲಿ ನಗು ।
ತೆಂದನವನೀಪಾಲನುಚಿತೋಕ್ತಿಯಲಿ ನಾರದನ ॥

ಕುಶಲವೇ, ನಿಮ್ಮಂಘ್ರಿ ನಮಗಿಂ ।
ದೊಸಗೆಯಾಯಿತು, ನಿಮ್ಮ ದರುಶನ ।
ವಸಮಸಂಸ್ಕೃತಿ ವಹ್ನಿದಗ್ಧರಿಗಮೃತವರ್ಷವಲೇ ॥
ಪಶುಪತಿಯು ಪರಮೇಷ್ಠಿಯು ಮುರ ।
ದ್ವಿಷನ ಸಾಮರ್ಥ್ಯ(ದ) ಸಗಾಢದ ।
ಯೆಸಕ ನಿಮಗುಂಟೆಂದು ಕೊಂಡಾಡಿದನು ನಾರದನ ॥
ಕುಶಲ[ವೆನಮಗಿದಿದೆ] (ಮಗಿಂದ್ಯೈದೆ) ನೀನೀ ।
ಮಸುವತೀ ವಧುವಾಳಿದ್ಯೈ ಶೋ ।
ಭಿಸುವುವೇ ನಿನ್ನಾಜ್ಞೆಯಲಿ ವರ್ಣಾಶ್ರಮಾಚಾರ ॥
ದೆಸೆದೆಸೆಗಳಮಳಾಗ್ನಿ ಹೋತ್ರ ।
ಪ್ರಸರ ಧೂಮಧ್ವಜಗಳನು ನಿಂ ।
ದಿಸರಲ್ಕೈ ! ದುರ್ಜನರು ಸುಜನರನೆಂದನಾ ಮುನಿಪ ॥
ಅರ್ಥದಿಂ ಧರ್ಮವನು ಧರ್ಮದಿ ।
ನರ್ಥವನು ಧರ್ಮಾರ್ಥವೆರಡನು ।
ವ್ಯರ್ಥ ಕಾಮದಲಳಿಯಲೇ ರಾಜ್ಯಾಭಿಲಾಷೆಯಲಿ ॥
ಅರ್ಥಸಾಧನ ಧರ್ಮಸಾಧನ ।
ವರ್ಥ ಧರ್ಮದೊಳುಭಯ [ಭೇದಕ] (ಲೋಕಕ) ।
ನರ್ಥಸಾಧನ [ಧರ್ಮ] (ಕಾಮ)ವೆಂದನು ಮುನಿ ನೃಪಾಲಂಗೆ ॥

* * * *

ತುರಗಗಜ ಭಟರಳವರಿವ ಸಂ ।
ಗರಮಹೋತ್ಸಾಹನ ಜಿತಶ್ರಮ ।
ನರನ ರಥಚಯಭೇದ ನಾನಾಯುಧ ವಿಶಾರದನ ॥
ಭರಿತಧೈರ್ಯನ ಪತಿಹಿತನನಾ ।
ವರಸುನಾಮನ ನೂರ್ಧ್ವರೋಮನ ।
ನಿರದೆ ಸೇನಾಪತಿಯ ಮಾಡುವುದರಸ ಕೇಳೆಂದ ॥
ವಸನಮಣಿಗಣಲೋಹಕಾಂಚನ ।
ವಿಸರಭೇದವನರಿದು ಕೊಟ್ಟುದ ।
ಮಸಳಿಸದೆ ಮೇಣ್ತಾನು ಭಕ್ಷಿಸದಹಿನಿಧಾನವನು ॥
ಒಸೆದು ಕಾದಿಪ್ಪಂತೆ ಕಾದಿಹ ।
ಹುಸಿಯದಾಪ್ತನ ಬಹು ಕುಟುಂಬ ।
ವ್ಯಸನವುಳ್ಳನ ಮಾಳ್ಪುದೈ ಭಂಢಾರರಕ್ಷಕನ ॥
ನರೆದಲೆಯ ವೈಸಿರಿಯ ಕುಲವೃ ।
ದ್ಧರನು ಹೀನಾಂಗರನ ಹಿಂಸಾ ।
ಚರಿತರನು ಜಾತ್ಯಂಧರನು ಧನದಾಸೆಯಳಿದವರ ॥
ಅರಮನೆಯೊಳಾ ರಕ್ಷಣಾರ್ಥದೊ ।
ಳಿರಿಸಿದರೆ ಮಾನೋನ್ನತಿಗೆ ವಿ ।
ಸ್ತರಣವಹುದಿದನರಿದಿಹೈ ಭೂಪಾಲ ಕೇಳೆಂದ ॥

End:

ಕಳುಹಿದನು ಸುರಮುನಿಯನುದರದೊ ।
ಳಟಿದುದಂತಸ್ತಾಪ ಯಜ್ಞದ ।
ಬಲುಹ ನೆನೆದಡಿಗಡಿಗೆ ಕಂಪಿಸಿ ಕೈಯ್ಯ ಗಲ್ಲದಲಿ ॥
ಒಲಿದೊಲಿದು [ಬಿಡೆ] (ಮಿಗೆ) ಭಾವದಲಿ ಕಳ ।
ವಳಸಿ ಹುದುಳಿಸಿ ಮತ್ತೆ ಭೂಪತಿ ।
ತಿಲಕ ಚಿಂತಿಸಿ ನೆನೆಯುತಿರ್ದನು ವೀರನರಯಣನ ॥

Colophon:

ರಾಜನೀತಿ ಸಂಪೂರ್ಣಂ.

(ವಿ-ವಿ.)—

ಸಮಗ್ರ. ಶಿಥಿಲ. ಬರೆವಣಿಗೆ ಚೆನ್ನಾಗಿದೆ. ಮುದ್ರಿತ ಪುಸ್ತಕಕ್ಕೂ ಇದಕ್ಕೂ ಪಾಠ ಭೇದಗಳು ಅಲ್ಲಲ್ಲಿ ದೊರೆಯುವುವು. ಮತ್ತು ಪದ್ಯಸಂಖ್ಯೆಯು ಎರಡರಲ್ಲಿಯೂ ವ್ಯತ್ಯಸ್ತ ವಾಗಿರುವುದು.

ಇದು ಭಾರತಾಂತರ್ಗತವಾದುದು. ದಾಯಭಾಗವನ್ನು ತೆಗೆದುಕೊಂಡು ಧರ್ಮಜನು ಇಂ ದ್ರಪ್ರಸ್ಥದಲ್ಲಿ ದೊರೆತನಮಾಡುತ್ತಿರುವಾಗ, ದೇವರ್ಷಿಯಾದ ನಾರದನು ಬಂದು, ಯುಧಿಷ್ಠಿರ ನಿಗೆ ರಾಜನೀತಿಯನ್ನು ವಿಸ್ತಾರವಾಗಿ ವಿವರಿಸಿ, ರಾಜಸೂಯಯಾಗವನ್ನು ಕೈಕೊಳ್ಳಲು ಸೂಚಿ ಸಿದ ವಿಷಯವೇ ಈ ಸಂಧಿಯಲ್ಲಿ ಉಕ್ತ ವಿಷಯವು. ಕವಿ ಕುಮಾರವ್ಯಾಸನೆಂಬ ಬಿರುದನ್ನು ತಳೆದ ನಾರಣಪ್ಪನೆಂಬುವನು. ಕವಿಯ ವಿಷಯವಾಗಿ ಹೆಚ್ಚು ತಿಳಿಯಲಪೇಕ್ಷಿಸುವರು ೨೪ ನೆಯ ನಂಬರನ್ನು ನೋಡುವುದು.

No. 286. ರಾಜನೀತಿ.

RĀJANĪTI.

Substance, palm-leaf. Size, 9½ × 1 inches. Pages, 59. Lines, 5 on a page. Character, Kanarese. Condition, very much injured. Appearance, old.

Begins on fol. 1*a*. The other work herein is:—Maiduna Ramaiyana Ragaḷe 31*a*.

Complete.

Same work as the above.

(ವಿ.ವಿ.)—

ಸಮಗ್ರ. ಅತಿ ಶಿಥಿಲ. ಬರೆವಣಿಗೆ ಉತ್ತಮ. ಮುದ್ರಿತ ಪುಸ್ತಕಕ್ಕಿಂತಲೂ ಇದರಲ್ಲಿ ಪದ್ಯಗಳು ಅಧಿಕವಾಗಿವೆ. ಈ ಪುಸ್ತಕದಲ್ಲಿರುವ ಪದ್ಯಗಳ ಸಂಖ್ಯೆ ೧೪೧.

ಇದು ಹಿಂದೆ ವರ್ಣಿತವಾದ ಗ್ರಂಥವೆ. ಕವಿ ನಾರಣಪ್ಪ.

No. 287. ರಾಜನೀತಿ.

RĀJANĪTI.

Substance, palm-leaf. Size, $13\frac{1}{2} \times 1\frac{1}{4}$ inches. Pages, 28. Lines, 5 on a page. Character, Kanarese. Condition, much injured. Appearance, old.

Complete.

Same work as the above.

(ವಿ-ವಿ.)—

ಸಮಗ್ರ. ಅತಿ ಶಿಥಿಲ. ಅಕ್ಷರಗಳು ಸಾಮಾನ್ಯ. ಹಿಂದೆ ವರ್ಣಿತವಾದ ಗ್ರಂಥ. ಕವಿ ನಾರಣಪ್ಪ.

No. 288. ರಾಜನೀತಿ.

RĀJANĪTI.

Substance, palm-leaf. Size, $13\frac{1}{6} \times 1\frac{1}{4}$ inches. Pages, 30. Lines, 5 on a page. Character, Kanarese. Condition, injured. Appearance, old.

Begins on fol. 1*a*. The other works herein are:—(1) Airāvata 16*a*, (2) Rāmāyaṇadasandhigaḷu Vibhīṣaṇabuddhi 34*a*, (3) Aṅgadasandhāna 47*a*, (4) Yuddhadapadyagaḷu 57*a*, (5) Mālyagāranabuddhi 60*a*, (6) Indrajitukāḷaga 65*a*, (7) Maggigaḷu 67*a*.

Wants one stanza in the end, otherwise complete.

Same work as the above.

(ವಿ-ವಿ.)—

ಅಸಮಗ್ರ. ಕೊನೆಯಲ್ಲಿ ಒಂದು ಪದ್ಯ ಮಾತ್ರ ಇಲ್ಲ. ಶಿಥಿಲ. ಅಕ್ಷರಗಳು ಚೆನ್ನಾಗಿವೆ.

ಇದು ಹಿಂದೆ ವರ್ಣಿತವಾದ ಗ್ರಂಥ. ಕವಿ ನಾರಣಪ್ಪ.

No. 289. ರಾಜನೀತಿ.

RĀJANĪTI.

Substance, Śrītāla. Size, $13\frac{5}{8} \times 1\frac{1}{8}$ inches. Pages, 16. Lines, 10 on a page. Character, Kanarese. Condition, much injured. Appearance, old.

Begins on fol. 113*a* of the manuscript described under No. 281 ante.

Wants two stanzas in the end, otherwise complete.

Same work as the above.

(ವಿ.-ವಿ.)—

ಅಸಮಗ್ರ. ಕೊನೆಯಲ್ಲಿ ಎರಡು ಪದ್ಯಗಳು ಮಾತ್ರ ಹೋಗಿವೆ. ಅತಿ ಶಿಥಿಲ. ಗ್ರಂಥ ಪಾತವುಂಟು. ಲಿಪಿ ಉತ್ತಮ. ಮುದ್ರಿತ ಪುಸ್ತಕಕ್ಕೂ ಇದಕ್ಕೂ ಹಿಂದೆ ವರ್ಣಿತವಾದ ಗ್ರಂಥಕ್ಕೂ ಅಲ್ಲಲ್ಲಿ ಪಾಠಭೇದಗಳಿವೆ. ಮತ್ತು ಪದ್ಯ ಸಂಖ್ಯೆಗೂ ಹೆಚ್ಚು ಕಡಿಮೆಯಿದೆ.

ಇದು ಹಿಂದೆ ವರ್ಣಿತವಾದ ಗ್ರಂಥವೇ ಆಗಿದೆ. ಕವಿ ಕುಮಾರವ್ಯಾಸನೆಂಬ ಬಿರುದನ್ನು ಹೊಂದಿದ ನಾರಣಪ್ಪನು. ಉಳಿದ ವಿಷಯಗಳನ್ನು ಹಿಂದಿನ ನಂಬರಿನಲ್ಲಿ ನೋಡಿ ತಿಳಿಯುವುದು.

No. 290. ರಾಜನೀತಿ.

RĀJANĪTI.

Substance, palm-leaf. Size, $7\frac{1}{2} \times 1\frac{1}{4}$ inches. Pages, 44. Lines, 7 on a page. Character, Kanarese. Condition, very much injured. Appearance, old.

Incomplete.

Same work as the above.

(ವಿ.-ವಿ.)—

ಅಸಮಗ್ರ. ಅತಿ ಶಿಥಿಲ. ಲಿಪಿ ಸಾಮಾನ್ಯ. ಗ್ರಂಥ ಪಾತವಿದೆ. ಪದ್ಯಗಳು ಕ್ರಮವಾಗಿಲ್ಲ.

ಹಿಂದೆ ವರ್ಣಿತವಾದ ಗ್ರಂಥವೆ. ಕವಿ ನಾರಣಪ್ಪ. ಉಳಿದ ವಿಷಯಗಳನ್ನು ೨೮೯ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

(3) KĀMAŚASATRA.

ಕಾಮಶಾಸ್ತ್ರ.

No. **291**. ಜನವಶ್ಯ.

JANAVAŚYA.

Substance, palm-leaf. Size, $12\frac{3}{4} \times 1\frac{1}{4}$ inches. Pages, 46. Lines, 5 on a page. Character, Kanarese. Condition, very much injured. Appearance, old.

Incomplete.

Contains Sandhis 1 to 10, complete and a portion in the 11th.

This work is said to contain 12 chapters. Author's name is Kallarasa and his date is about 1450 A.D. The work is written in Śara, Kusuma, and Bhōga, Ṣatpadi metres, and purports to have been narrated by one Māllikarjuna to his wife.

Beginning :

ಶ್ರೀಮದಮರ ಮಕುಟರತ್ನ ।
ಭೌಮ ಲೋಹಿತಾಂಘ್ರಿ ಶೋಣಾ ।
ಆಮರಸನುದಾರ ಸುರತರಂಗಿಣೀಧರ ॥
ಸಾಮಗಾನಲೋಲನೆಮಗು ।
ಮಾಮಹೇಶನಿಂದುಭೂಷ ।
ಹೇಮಕೂಟಗಿರಿನಿವಾಸನೀಗೆ ಸೌಖ್ಯಮಂ ॥
ಮನದಲುೞಿದು ನೆನೆವನೊಡಲ ।
ಮನೆಯ ಮಾಡಿ ಬಂದು ನಿಂದು ।
ಬಿನದದಿಂದವರ್ಗೆ ಬಯಸಿದನುವ ನೊದವಿಸಿ ॥
ಘನಕೆ ಘನವೆನಿಸಿದ ಕರುಣಿ ।
ಯನಘನೆಮಗೆ ಮಾಡೆ ಮುದಮ ।
ನನು ತ್ರಿಯಂಬಕ . . . ॥

* * *

ನಲ್ಲ ! ನೀನೆಲ್ಲಮನೆ ।
ಬಲ್ಲೆ, ಮುನ್ನಮೆ ಕೆಲರು ।
ಫುಲ್ಲಶರ ಶಾಸ್ತ್ರಮನೆ ಪೇೞ್ದಿರವರು ॥
ಸಲ್ಲದನುಭವದಿ, (ತೆ) ಗೆ, ।
ಮಲ್ಲಿಕಾರ್ಜುನ ಕಳಾ ।
ವಲ್ಲಭನೆ ! ಬಗೆಗೊದಗಿದಂತೆ ಪೇೞಾ ॥

* * * *

ಜನವಶ್ಯಮೆಂಬ ವೋ ।
ಹನಕೃತಿಯಿದಿಂತಿದನೆ ।
ವನಿತೆ ! ನೀಂ ಕೇಳಲಾಂ ಪೇಳ್ವೆಂದಮಂ ॥
ಜನಮಾಲಿಸುತ್ತಮೆ ।
ನ್ನನೆ ಮಲ್ಲಿಕಾರ್ಜುನಾ ।
ವನಿಪನನುಭವಿಸಿದ್ದನೆನ್ನದಿಹುದೆ ॥

Colophon :

ಅಂತು ಸಂಧಿ ೧ ಕ್ಕಂ ಪದನು ೨೧ ಕ್ಕಂ ಮಂಗಳ ಮಹಾ.
ಮದನಶಾಸ್ತ್ರದೊಳಜ್ಜ ।
ವದನೆ ! ಕೇಳ್ ನಾಲ್ಭೇದ ।
ಸುದತಿಯರ ಜಾತಿಯಿಂತೆಂದೊರೆವೆನು ॥

End :

ಎಂತುಟೆಂತುಟಾರದಾರು ।
ಕಂತುನಿಭನೆ ಮರೆಯದಿಲ್ಲಿ ।
ಕಾಂತೆಯರ್ಕಳೆನಿಬರವಗೆ ಮಾಳ್ಪುದೇನನು ॥
ನಾಂ ತವರ್ಮನೆಯೊಳರಲ್ಕೆ ।
ನಿಂ ದಿಸು ।
ತಂತೆ ಪೊ ವಳಿ ಮತ್ತೆ ನುಡಿವ
ಜಾಣೆ ! ನಿನ್ನ ನೀಕ್ಷಿಸಿದುದೆ ।
ತ್ರಾಣಮಾಗಿ ಪೊಕ್ಕು ಪಂಚ ।
ಬಾಣನವನ ನಲಿವ ನದರಿ ನಳಲುದೊರೆಯೊಳು ॥
ಮಾಣನದ್ದಿ ಮೂಡಿ . . . . . . ।
. . . . ।
. . . . ॥

(ವಿ-ವಿ.)—

ಅಸಮಗ್ರ. ಮೊದಲಿಂದ ಹತ್ತು ಸಂಧಿಗಳಿವೆ. ಹನ್ನೊಂದನೆಯದರಲ್ಲಿ ಹತ್ತು ಪದ್ಯಗಳು ಪೂರ್ಣವಾಗಿಯೂ, ಹನ್ನೊಂದನೆಯದು ಅಪೂರ್ಣವಾಗಿಯೂ ಇರುವುವು. ಅತ್ಯಂತ ಶಿಥಿಲವಾಗಿದೆ. ಒಂದೆರಡು ಓಲೆಗಳು ಮುರಿದು ಹೋಗಿರುವುದೂ ಉಂಟು. ಕವಿಗಳನ್ನು ಸ್ತುತಿಸಿರುವ ಮತ್ತು ಕವಿಯ ಹೆಸರನ್ನು ಸೂಚಿಸಿರುವ ಕೆಲವು ಪದ್ಯಗಳು ಇದರಲ್ಲಿ ಬಿಟ್ಟು ಹೋಗಿವೆ.

ಇದು ಹನ್ನೆರಡು ಸಂಧಿಗಳುಳ್ಳುದೆಂದೂ ಕಲ್ಲರಸನಿಂದ ವಿರಚಿತವಾದುದೆಂದೂ, ಕವಿಯ ಕಾಲವು ಸು ೧೪೫೦ (ಕ್ರಿ.ಶ.) ಇರಬಹುದೆಂದೂ ಕವಿಚರಿತ್ರೆಯಲ್ಲಿ ಹೇಳಿದೆ. ಮಲ್ಲಿಕಾರ್ಜುನನೆಂಬ ದೊರೆಯನ್ನು ಆತನ ಹೆಂಡತಿಯು ಕಾಮಶಾಸ್ತ್ರದ ನೆಲೆಯನರುಹಬೇಕೆಂದು ಕೇಳಿಕೊಳ್ಳಲು ಆತನು ಹೇಳಿದುದನ್ನೇ ಕವಿಯು ಬರೆದಿರಬೇಕು. ಈ ಕೃತಿಯು ಶರ, ಕುಸುಮ, ಭೋಗ ಷಟ್ಪದಿಗಳಲ್ಲಿ ಬರೆದಿರುವುದಾಗಿದೆ.

No. 292. ಮದನತಿಲಕ.

MADANATILAKA.

Substance, Śrītāla. Size, $9\frac{3}{8} \times 1\frac{1}{8}$ inches. Pages, 60. Lines, 11 on a page. Character, Kanarese. Condition, very much injured. Appearance, old.

Contains the Adhikāras 1 to 11 complete, and 12th incomplete.

This is a campu kāvya of 18 Adhikaras. Author's name is Candraraja, a Brahmin by caste, belonging to Vāji Gotra. He had the titles of Sri Kavitāmahimārnava, Pratyākṣakandarpa, and Abjānanacandra. He was under the patronage of King Rēca. This work on erotics purports to have been narrated by King Rēca to his wife.

Beginning:

ಕಂ॥ ಶ್ರೀವಧುವಿಂಗಗಜೆಗೆ ವಾ ।
ಕ್ಯ್ರೀವಧುವಿಂಗಜನನಜನನಜನಂ ಕುಸುಮಾ ॥
ಸ್ತ್ರಾವಳಿಯಿಂದೋ ಲೈಸಿದ ।
ಭಾವೋದ್ಭವನೀಗೆ ನಮಗೆ ಸುಖಸಂಪದಮಂ ॥

ಶ್ರೀಯುನುರಸ್ಥಳದೊಳ್ ವಾ ।
ಕ್ಯ್ರೀಯುಂ ನಿಜವದನಕಮಲದೊಳ್ ಕೂರ್ತು ಜಯ ॥
ಶ್ರೀಯುಂ ಭುಜದೊಳ್ ಕೀರ್ತಿ ।
ಶ್ರೀಯುಂ ದಿಕ್ತಟದೊಳೋವಿದಂ ರೇಚನೃಪಂ ॥

" ಮತ್ತೇಭವಿಕ್ರೀಡಿತ "

ತ್ರಿಜಗದ್ವ್ಯಾಪಿತ ಕೀರ್ತಿಕಾಂತಳಧರಾಧೀಶಂ ದ್ವಿಷದ್ಭೂಮಿಪ ।
ವ್ರಜಕಾಲಂ ಹರಿಮೂರ್ತಿ ನಿರ್ಮಳಗುಣಂ ಸಿಂಹಾಸನಾಧಿಷ್ಠಿತಂ ॥
ವಿಜಯಾದ್ಯಾತ್ತನಿಳಾತಿವರ್ತಿ ಜಯಸಿಂಹಂ ದೇವದೇವಾಂಘ್ರಿಪಂ—
ಕಜಭೃಂಗಂ ನುತಚಕ್ರವರ್ತಿತಿಲಕಂ ಚಾಳುಕ್ಯವಂಶೋತ್ತಮಂ ॥

*   *   *   *

ಕಂ॥ ಎನಿಪ ಜಯಸಿಂಹದೇವನ ।
ಮನುಚರಿತನ ತೊಡೆಯೆ ತೊಟ್ಟಿಲಾಗಿರೆ ಬಳೆದಂ ॥
ವಿನಯಾಂಬುರಾಶಿ ವರಬುಧ ।
ವಿನತಾಂಘ್ರಿ ಕಿರೀಟಕೋಟಿ ಘಟ್ಟಿತಚರಣಂ ॥
ಅಮಿತಗುಣಂ ರೇಚಂ ವಿ ।
ಕ್ರಮದಿಂದಂ ಸ್ವಸ್ತಿ ಸಮಧಿಗತಪಂಚಮ ಶ ।
ಬ್ದಮಹಾಸಾಮಂತಾಸ್ಪದ ।
ನುಮೆಲ್ಲಮಂ ಪಡೆದನೀಯ ಜಯಸಿಂಹನೃಪಂ ॥

*   *   *   *

" ಮತ್ತೇಭ ವಿಕ್ರೀಡಿತ "

ಮಳಯೇಂದ್ರಾರ್ಬುದ ಮಾಗಧ ದ್ರವಿಡ ವೆಂಗೀ ವಂಗ ನೇಪಾಳ ಕೇ ।
ರಳ ಪಾಂಚಾಳ ಕಳಿಂಗ ಕೊಂಕಣ ಸುರಾಷ್ಟ್ರಾಭೀಳ ಕಾಶ್ಮೀರ ಕಾ ॥
ಶಲ ಲಂಪಾಕ ತುರುಷ್ಕಗೌಳಕ ಸಕಾಮಾರ್ಕ್ಷೇಂದ್ರ ಕಾಂಭೋಜ ಸಿಂ ।
ಹಳದೇಶಾಧಿಪರಂ ಭಯಂಗೊಳಿಸಿದಂ ವಿಕ್ರಾಂತದಿಂ ರೇಚಿಗಂ ॥

*   *   *   *

ಮದನದರ್ಪಹರಂ ವರಕೈಲಾಸಾದ್ರಿಯೊಳದ್ರಿ ತನೂಜೆಗಾ ।
ಮದನತತ್ವಮನಿಂತಿರೆ ಪೇಳ್ದಿಂ ರೇಚಮಹೀಶನುಮಂತೆ ನಿ ॥
ರ್ಮದಸಮಯಗುಣಂ ನಯದಿಂದಂ ಸ್ವಾಮಿಯ ಛಂದಮೆ ಛಂದಮೆಂ ।
ಬುದನೆ ವಿಭಾವಿಸಿ ಕಾಂತೆಗೆ ಪೇಳ್ದಿಂ ಮಚ್ಚಿ ಮನೋಭವತತ್ವಮಂ ॥

*   *   *   *

ಕಂ॥ ಅಗಣಿತಗುಣಿ ರೇಚನೃಪಂ ।
ಮೃಗನಯನೆಗೆ ಪೇಳ್ದ ಕಾಮತತ್ವಮನಿಂಪಾ ॥
ವಗವೊದಗೆ ಪಲವು ಛಂದದೊ ।
ಳೊಗೆದಂಬೋ[ದಾದ್ಯ] (ಜಾಸ್ಯ) ಚಂದ್ರನಭಿವರ್ಣಿಸಿದಂ ॥
ಸಕಲ ಕಳಾಗಮಕೋವಿದ ।
ನಕಳಂಕ ಚರಿತ್ರನುದ್ಧಗುಣಗಣಮಣಿ ವಿ ॥
ಪ್ರಕುಲಲಲಾಮಂ ಲೋಕ ।
ಪ್ರಕಟಿತಶ್ರುತಕೀರ್ತಿ ನೆಗಳ್ದ ಚಂದ್ರಕವೀಂದ್ರಂ ॥

" ಇದು ಪಣವ ಬಂಧಮುಂ ಗೋಮೂತ್ರಿಕೆಯು ಮಕ್ಕುಂ "

ಶ್ಲೋ॥ ಆಜಿಜೈತ್ರಕರಂ ಧೀರಂ ।
ರಾಜಿತಂ ಚಂದ್ರನೂರ್ಜಿತಂ ॥
ವಾಜಿಗೋತ್ರಸ್ಫಿರಂ ಧೀರಂ ।
ಪೂಜಿತಂ ಚಂದ್ರನೂರ್ಜಿತಂ ॥

*   *   *   *

॥ ಮಹಾಸ್ರಗ್ಧರೆ ॥

ಶಿವಶೀಲಂ ಪುಣ್ಯಶೀಲಂ ವಿಬುಧವಿಬುಧಶಾಳಂ ಗುಣಾನೀಕಶಾಳಂ ।
ಸುವಿನೀತಂ ಬಂಧುನೀತಂ ನಿಕೃತಸುಕೃತಜಾತಂ ಸುವಿಸ್ತಾರಿಜಾತಂ ॥
ಕವಿಭಾವಂ ಸುಪ್ರಭಾವಂ ವಿಶದವಿಶದಭಾವಂ ಮಹಾಭಾವಭಾವಂ ।
ಭವತೇಜಂ ಚಂದ್ರರಾಜಂ ಕರಣಕರಣರಾಜಂ ದ್ವಿಜಾಂಭೋಧಿರಾಜಂ ॥

॥ ಮತ್ತೇಭವಿಕ್ರೀಡಿತ ॥

ಸಕಲವ್ಯಾಕರಣಾರ್ಥಶಾಸ್ತ್ರ ಗಣಿತಾಲಂಕಾರ ಸತ್ಕಾವ್ಯ ನಾ ।
ಟಕ ವಾತ್ಸ್ಯಾಯನ ನೃತ್ಯ ಗೀತ ಹಯಶಾಸ್ತ್ರಾದ್ವೈತ ಗಾಂಧರ್ವತಂ ॥

ತ್ರ ಕವೀಂದ್ರಾಗಮ ವೈದ್ಯ ವಾದ್ಯ ಶಕುನೋದ್ಯದ್ಧ್ಯುದ್ಯವಿದ್ಯಾಕದಂ ।
ಬಕನುಂ ಚಂದ್ರಕವೀಂದ್ರನೊರ್ವನೆ ವಲಂ ಬಲ್ಲಂ ಪೆಱರ್ಬಲ್ಲರೇ ॥

ಅನಕಂ ಕುಂಡಳಿ ಬಾಭ್ರವೀಯನತಿಲೌಲ್ಯಂ ಕೂಬರಂ ಕಾತರಂ ।
ಕಿನಿಸಂ ಭದ್ರನರೂಪಿ ಕೇತು ಕುವಿಟಂ ವಾತ್ಸ್ಯಾಯನಂ ಗಾಣಿಕಾ ॥
ತನಯಂ ನಿರ್ದಯನಲ್ಪವೀರ್ಯನೆನಿಪಂ ಚಾರಾಯಣಂ ಜತ್ತಕಂ ।
ತನುಹೀನಂ ದೊರೆಯಲ್ಲ[ದಿ](ರಿ)ಂತಿನಿಬರುಂ ಪ್ರತ್ಯಕ್ಷಕಂದರ್ಪನೊಳ್ ॥

ಕಂ ॥ ಎನೆ ನೆಗಟ್ದಿ ಚಂದ್ರನಬ್ಜಾ ।
ನನಚಂದ್ರಂ ಶ್ವೇತಕೇತು ಚಿತ್ರಿತ ವಾತ್ಸ್ಯ ॥
ಯನ ಪಾಂಚಾಳಾದಿ ಮಹಾ ।
ಮುನಿಮತಮಿಗೆ(?)ಪೇಳ್ವನೆಸೆಯೆ ಪೊಸಗನ್ನಡದಿಂ ॥

ನೆರೆಯೆ ಮುನ್ನಿನ ತತ್ವಮನಾರುಂ ಮುನ್ನಿನವರ್ಣಿದಿತಾರ್ಥವಱ ।
ಗರಿಪಲೊಲ್ಲದಣಂ ಪಲವ್ರೋದಂ ಮಾಡಿ ಸಮಂತೊಗೆದೆಂದವಾ ॥ (?)
ರರಿವರೆಂದು ಧರಾತ್ರಳಕೆಲ್ಲಂ ಕಾಮಕಳಾಗಮಮೆಲ್ಲಮಂ ।
ಕಿರಿದರಿಂದರಿವಂತಿರೆ ಪೇಳ್ದಿಂ ಶ್ರೀಕವಿತಾಮಹಿಮಾರ್ಣವಂ ॥

*   *   *   *

ಕಂ ॥ ಕೃತಿಪತಿ ರೇಚನೃಪಂ ಕವಿ ।
ಪತಿ ಚಂದ್ರಂ ತಿರ್ದಿಬರೆವವಂ ಬ್ರಹ್ಮಂ ಸ ॥
ತ್ಕೃತಿ ಮದನತಿಲಕಮಿದು ಕಾ ।
ಮತತ್ವಮೆನೆ ನಚ್ಚಿ ಮೆಚ್ಚಿ ಪೊಗಳದಪೊಳರೇ ॥

ವ ॥ ಅದೆಂತೆಂದೊಡೆ.—ಮೊದಲೊಳಬ್ಜಸಂಭವಂ ಧರ್ಮಾರ್ಥಕಾಮಶಾಸ್ತ್ರಂಗಳನೊಂದು ಲಕ್ಷಾಧ್ಯಾಯವಮಾಡಿದಂ. ಅಲ್ಲಿ(ಂದಂ) ತೆಗೆದುಕೊಂಡು ಚತುರ್ಮುಖಪುತ್ರಂ ಸ್ವಾಯಂಭುವೆಂಬನಂ ಮನುಧರ್ಮಮಂ ಪೇಳ್ದಿಂ. ಬೃಹಸ್ಪತಿಯರ್ಥಶಾಸ್ತ್ರಮಂ ಪೇಳ್ದಂ. ಮಹಾದೇವರ ಗಣಂ ನಂದಿಕೇಶ್ವರಂ ಸಹಸ್ರಾಧ್ಯಾಯದಿಂ ಕಾಮಶಾಸ್ತ್ರಮಂ ಪೇಳ್ದಿಂ. ಕಿಱಿದಱತೊಳ್ದ್ದಾಲಕಮುನಿಯ ಮಗಂ ನೂಱಧ್ಯಾಯದಿಂ ಪೇಳ್ದಿನದಂ ಪಿಱಿದೆಂದು ಬಭ್ರುವಿನ ಮಗಂ ಪಾಂಚಾಳಂ ನೂರೈವತ್ತಧ್ಯಾಯದಿಂ ಸಾಧಾರಣ ಸಾಂಪ್ರಯೌಗಿಕನ್ಯಾಸಂ ಪ್ರಯುಕ್ತಭಾರ್ಯಾಧಿಕಾರಿಕ ಪಾರಾವಾರೀ ವೈಶೇಷಿಕ ಜಪವೇಷಾದಿಕಮೆಂಬೇಳಧಿಕರಣಮಂ ಪೇಳ್ದಿಂ. ಅಲ್ಲಿ ಆಱನೆಯಧಿಕರಣಮಂ ವೈಶೇಷಿಕಜತ್ತಕ ಪಾಟಳಪುತ್ರಂ ಗಣಿಕೆಯರ್ಗೆ ಪೇಳ್ದಿನದಲ್ಲದೆ ಸಾಧಾರಣಮೆಂಬಧಿಕರಣಮಂ, ಚಾರಾಯಣಂ ಸಾಂಪ್ರಯೌಗಿಕಮಂ,ಸ್ವರ್ಣನಾಭಂ ಕನ್ಯಾರಸಪ್ರಯುಕ್ತಮಂ, ಘೋಟಕಮುಖಂ ಭಾರ್ಯಾಧಿಕರಣಮಂ, ಗೋನರ್ದಿ, ಪತಂಜಳಿಯಂ, ಪಾರದಾರಿಕಮಂ, ಗಾಣಿಕಾಪುತ್ರಂ ; ಕೂಚಿಮಾರನುಪಷೇದಕಮಂ, ಪೇಳ್ದಿನಿಂತು ಪಾಂಚಾಳನಿಂದಿತ್ತ ಪಲಬರುಮಾಚಾರ್ಯರಿಂದಂ ಪೈರಬ್ಬಂನ? (ವಿನಿರ್ಭಿನ್ನ) ಮಾದ ಮದನಾಗಮಮನೊಂದುಮಾಡಿ, ವಾತ್ಸ್ಯಾಯನಂ ಮೂವತ್ತಾಱಧ್ಯಾಯಮೇಳಧಿಕರಣದೊಳ್ ನಾಲ್ವತ್ತೆಂಟಕ್ಕರದ ಸಮಪಾದ

ಸಹಸ್ರಗ್ರಂಥದಿಂ ಬೇಟ್ಟನಲ್ಲಿ ಚಂದ್ರರಾಜನಾಗಮಲೌಕಿಕವಿರೋಧಮಂ ಕಳೆದು ಸಾರಾಂಶಮಂ ಕೊಂಡು ಪಲವು ಮತಂಗಳನೊಂದು ಮಾಡಿ ಪದಿನೆಂಟಧಿಕರಣಂಗಳಿಂದಲಂಕಾರಾಲಂಕೃತಮಾಗೆ ನಾನಾ ಛಂದದಿನ್ನೈನೂರು ಗದ್ಯಪದ್ಯಂಗಳಂ ವಿಶ್ರುತಂ ಮಾಡಿ ಬೇಟ್ಟಂ.

* * * *

ಕಂ ॥ ಬಲಗೆಲದೆಡೆಯೊಳ್ ಗರ್ಭಂ ।
ನಿಲೆ ಪುರುಷಂ ವಾಮಭಾಗದಿಂ ಸ್ತ್ರೀ ಯೆರಡುಂ ॥
ಕೆಲದೊಳಮಲ್ಲಗಳ್ ನಡುವಣ ।
ನೆಲೆಯಿಂದಂ ಷಂಡರಾಗಿ ಪುಟ್ಟುವರೆಂದುಂ ॥

ಅನಿಲೋಪಪ್ರೈತ್ಯದೋಷದಿ ।
ನನಿಲನ ಕುಂದಿಂದೆ ಪಂಗುಳಾಂಧಕ್ಯಕಂ ವಾ ।
ಮನಕುಬ್ಜ ಬಧಿರ ಮೂಕರು ।
ಮನೇಕವಿಧದಂಗ ಹೀನರುಂ ಜನಿಯಿಸುವರ್ ॥

ವನಿತಾಲಕ್ಷಣವೆನಿತೊಳ ।
ವನಿತುಂ ಪುರುಷಂಗಮಕ್ಕುಮಿದನರಿದು ಜಗ ॥
ಜ್ಜನವೆನಿಪುನ್ನತಿಯಂ ತಾಂ ।
ತನಗಾಗಿಪನೊಲಿದು ನೆಗಟಿತ್ರಿ ವರ್ಗತ್ರಯದೊಳ್ ॥ (?)

Colophon:

ಇದು ವಿಬುಧ ಜನವಿನುತ ಕಾವ್ಯಾಲಂಕಾರ ನೀತಿನಿಬಂಧನಮುಂ ಛಂದೋಮಹಾರ್ಣವಮುಂ (?)ಕವಿತಾಮಹಾರ್ಣವಂ ಚಂದ್ರರಾಜ ವಿರಚಿತಮಪ್ಪ ಮದನತಿಲಕದೊಳ್ ಪೀಠಿಕಾ ವರ್ಣನಂ ಪಿಂಡೋತ್ಪತ್ತಿವಿವರಣಂ ಪ್ರಥಮಾಧಿಕಾರಂ ಸಮಾಪ್ತಂ.

End:

ಕಂ ॥ ಕಾಮಂಗೆ (ಕಾಮ) ಮೂಲಂ ।
ಕಾಮಿನಿ ತಾನನ್ಯಚಿತ್ತೆಯಾಗದ ತೆಱದಿಂ ॥
ಪ್ರೇಮದೆ ನಿಚ್ಚಂ ಯತ್ನದೊ ।
ಳೇಮಾತೋ ನೆಗಳೆ ನೆಗಳೆ ಪಡೆಗುಂ ಸುಖಮಂ ॥

(ವಿ.ವಿ.)—

ಅಸಮಗ್ರ. ೧೧ ಅಧಿಕಾರಗಳು ಪೂರ್ಣವಾಗಿಯೂ ೧೨ ನೆಯದು, ಅಪೂರ್ಣವಾಗಿಯೂ ಇವೆ. ಈ ಅಧಿಕಾರಗಳಲ್ಲಿ ಕ್ರಮವಾಗಿ ' ಪಿಂಡೋತ್ಪತ್ತಿ, ಜಾತಿ, ಅಂಶ, ದೇಶ, ತ್ರಿದೋಷಪ್ರಕೃತಿ, ನಾಯಿಕಾ, ಬಾಲ್ಯಾದವಸ್ಥೆ, ಪಹ್ಯಾಂಗನಾ, ಕುಸ್ತ್ರೀ, ವೇಶ್ಯಾ, ಸ್ತ್ರೀಯರ ಶುದ್ಧಾಶುದ್ಧತೆ, ಭಾವೇಂಗಿತ ' ವರ್ಣನೆಗಳು ವರ್ಣಿತವಾಗಿವೆ. ಶ್ರೀತಾಳ. ಅತಿಶಿಥಿಲ. ಗ್ರಂಥಾಥವುಂಟು. ಲಿಪಿ ಉತ್ತಮ. ಈ ಪ್ರತಿಗೆ ಉಪಪ್ರತಿಯನ್ನು ಬರೆದಾಗಿದೆ.

ಇದು ಚಂಪೂ ಗ್ರಂಥವು. ೧೮ ಅಧಿಕಾರಗಳುಳ್ಳದೆಂದು ತಿಳಿಯಬರುವುದು. ಕವಿ ಚಂದ್ರರಾಜನು. ಬ್ರಾಹ್ಮಣನು. ವಾಜಿಗೋತ್ರದವನು. ಈತನಿಗೆ ಶ್ರೀಕವಿತಾ ಮಹಿಮಾರ್ಣವ

ಪ್ರತ್ಯಕ್ಷಕಂದರ್ಪ, ಅಬ್ಜಾಸನನ ಚಂದ್ರ ಎಂಬ ಬಿರುದುಗಳು ಇದ್ದಂತೆ ತೋರುತ್ತದೆ. ಕವಿಯ ಪೋಷಕನು ರೇಚ ನೃಪನು. ಈತನು ಚಾಳುಕ್ಯರಾಜ ಜಯಸಿಂಹದೇವನ ಮನುಚರಿತನ ತೊಡೆಯೋ ತೊಟ್ಟಿಲಾಗಿದೆ ಬೆಳೆದ ' ನೆಂದೂ, ಜಯಸಿಂಹನಿಂದ ' ಸಮಧಿಗತ ಪಂಚಮ ಶಬ್ದ ಮಹಾಸಾಮಂತಾಸ್ಪದಮುಮೆಲ್ಲಮಂ ಪಡೆದ ' ನೆಂದೂ ಹೇಳಿದೆ. ಈ ರೇಚನೃಪತಿಯು ಅವನ ಹೆಂಡತಿಗೆ ಹೇಳಿದ ಕಾಮತತ್ವವನ್ನು ಕವಿಯು ಈ ಗ್ರಂಥರೂಪವಾಗಿ ಬರೆದಂತೆ ಹೇಳುತ್ತಾನೆ. ಗ್ರಂಥಾವತಾರದಲ್ಲಿ ಮನ್ಮಥನನ್ನು ಸ್ತುತಿಸಿದ್ದಾನೆ. ಆ ಮೇಲೆ ಚಾಳುಕ್ಯ ಜಯಸಿಂಹ ರಾಜನನ್ನೂ ತನ್ನ ಪೋಷಕನಾದ ರೇಚನೃಪತಿಯನ್ನೂ ಅಧಿಕವಾಗಿ ಹೊಗಳಿದ್ದಾನೆ. ಬಳಿಕ ಈ ಶಾಸ್ತ್ರವನ್ನು ಯಾರು ಯಾರಿಗೆ ಹೇಳಿದರೆಂಬುದು, ತನ್ನ ಜಾತಿ, ಗೋತ್ರ, ಕವಿತಾಚಾತುರ್ಯ, ಕಾಮಶಾಸ್ತ್ರವನ್ನು ಬರೆದ ಪೂರ್ವ ಕವಿಗಳಿಗಿಂತ ತಾನು ಅಧಿಕನೆಂಬುದು; ಕಾವ್ಯೋತ್ಪತ್ತಿ ಇತ್ಯಾದಿ ವಿಷಯಗಳನ್ನು ವಿವರಿಸಿದ್ದಾನೆ.

' ಇವನ ಗ್ರಂಥವು ಚಿಕ್ಕದಾದರೂ ಪ್ರತಿಪದ್ಯವೂ ಶಬ್ದಾಲಂಕಾರ ಚಿತ್ರಿತವಾಗಿಯೂ ರಚನಾಕೌಶಲವ್ಯಂಜಕವಾಗಿಯೂ ಇದೆ. ಅನೇಕ ಪದ್ಯಗಳು ಚಕ್ರಾದಿಬಂಧರೂಪವಾಗಿವೆ ಕೆಲವು ಪದ್ಯಗಳಿಂದ ನಾನಾಬಂಧಗಳೂ ವೃತ್ತಗಳೂ ಉದ್ಧಾರವಾಗುತ್ತವೆ. ಕನ್ನಡದಲ್ಲಿ ಇಂತಹ ಚಿತ್ರಕವಿತೆ ವಿಶೇಷವಾಗಿಲ್ಲ. ಚಿತ್ರಕವಿತೆಯಾದರೂ ಈ ಗ್ರಂಥದಲ್ಲಿ, ಲಾಲಿತ್ಯದಲ್ಲಿಯೂ ರಸಪುಷ್ಟಿಯಲ್ಲಿಯೂ ಆವ ವಿಧವಾದ ಕೊರತೆಯೂ ಕಾಣಬರುವುದಿಲ್ಲ. ಈತನ ಕವಿತಾಶಕ್ತಿ ಆಶ್ಚರ್ಯಾವಹವಾಗಿದೆ. ಈ ಗ್ರಂಥವನ್ನು ' ಬೇಬ್ಬನೆಸೆಯೆ ಪೊಸಗನ್ನಡದಿಂ ' ಎಂಬುದರಿಂದ ಈತನು ಆ ಕಾಲದ ಹಳೆಗನ್ನಡವನ್ನು ಬಿಟ್ಟು ಹೊಸಗನ್ನಡದಲ್ಲಿ ಬರೆದಿರಬೇಕು.'

ಉದಾಹರಣೆಗಾಗಿ ಈ ಕೆಳಗೆ ಒಂದೆರಡು ಪದ್ಯಗಳನ್ನೂ ಬರೆದಿದೆ.

॥ ಚಕ್ರವೃತ್ತ ॥

ಗಂಗಾಚಂದ್ರಹಿಮೋಚಲಾಭಯಶನುತ್ತಸ್ತ್ರೋಗ್ರರಾಜಪ್ರಭಂ ।
ಗಂಗೊ ತ್ಥಸ್ಥಿರಶಕ್ರನಪ್ರಿಯತನೋಮಿತ್ರಂ ದಿವಾಕೃತ್ಯಮು ॥
ತ್ತುಂಗಾರಾಜಿತ ಸದ್ವಿಪಂ ನಯವಿದಂ ದುರ್ಾಗ್ಗಭ್ರವಾತದ್ರುಮಂ ।
ವಂಗಾಂಗಾಂಧ್ರಕಳಿಂಗ ಪಾರ್ಜತುಹಿನಾಭಂ ರೇಚಿಮಂತ್ರೋದ್ಭವಂ ॥

' ಇದುವೆ ಎಡೆಯಕ್ಕರಮುಂ ಕಿರಿಯಕ್ಕರಮುಂ ಚೌಪದಿಗೆಯುಂ ಎರಡು ಷಟ್ಪದಿಯುಂ ತ್ರಿಪದೋನ್ನತಿಯುಂ ವಜ್ರಮುಖಿಯುಂ ವ್ರಾಟಮುಂ (?) ಚಿತ್ರಪದಕಮುಂ ಕಮಳಮುಂ ಚಂದ್ರಿಕೆಯುಂ ಇಂದುಮುಖಿಯುಂ ಮೊದಲಾಗೆ ೮೪ ವೃತ್ತಮುಂ ಪಾದಮುರಜ ಚಂಕ್ರಬಂಧಮುಂ ಗೋಮೂತ್ರಿಕೆಯುಮಕ್ಕುಂ. '

ಅಂಗನೃಪಾಯತಿ ತುಂಗಭುಜಂ ಕಲಿಯಿಂಗಿತ ಶಿಕ್ಷಿತನಿಂದುಯಶಂ ।
ಲಿಂಗಜದೊಂಗತ ಭೃಂಗಕಚಂ ಕಲಿ ಮಂಗಳ ಲಕ್ಷಣಯುಕ್ತನಿವಂ ॥
ಸಂಗರಕೇಸರಿ ಸಂ[ದ] (ಗ) ಗುಣಂ ಬಲಿ ಭೃಂಗರದಕ್ಷನುವಾಯುತನುಂ ।
ಸಂಗದ ಸನ್ಮತಿ ವಂಗವಹಂ ಸಲೆ ಭಂಗಿಯ ನೀಕ್ಷಿಸಿ ರೇಚನೃಪಂ ॥

ಗ್ರಂಥ ರಚನೆಯ ಕಾಲವು ಕ್ರಿ.ಶ. " ೧೦೬೪ ರಿಂದ ೧೦೪೦ ರ ಮಧ್ಯಭಾಗ " ವೆಂದು ನಿರ್ಣಯವಾಗಿರುತ್ತದೆ. ಈ ವಿಷಯದಲ್ಲಿ ಹೆಚ್ಚು ಬಯಸುವವರು ' ಕರ್ಣಾಟಕ ಕವಿ ಚರಿತ್ರೆಯ ಪ್ರಥಮ ಸಂಪುಟ ' ದಲ್ಲಿಯೂ ' ರಾಜಾದಿತ್ಯ ದುರ್ಗಸಿಂಹಾದಿ ಕೆಲವು ಕನ್ನಡ ಕವಿಗಳ ಜೀವನ ವಿಚಾರ ' ದಲ್ಲಿಯೂ ನೋಡಿ ತಿಳಿಯುವುದು.

No. 293. ಮದನತಿಲಕ-
MADANATILAKA.

Substance, paper. Size, 10 × 9½ inches. Pages, 84. Lines, 20 on a page. Character, Kanarese. Condition, good. Appearance, new.

Contains the Adhikāras 1 to 11 complete, and 12th incomplete.

Same work as the above.

(ವಿ.ವಿ.)—

ಅಸಮಗ್ರ ೧೧ ಅಧಿಕಾರಗಳ್ಳು ಪೂರ್ಣವಾಗಿಯೂ ೧೨ ನೆಯದು ಅಪೂರ್ಣವಾಗಿಯೂ ಇವೆ ಕಾಗದ ಪ್ರತಿ. ಗ್ರಂಥಪಾತವುಂಟು. ಲಿಪಿ ಉತ್ತಮ. ಹಿಂದೆ ವರ್ಣಿತವಾದ ಗ್ರಂಥವೇ ಇದಕ್ಕೆ ಮಾತೃಕೆಯು. ಕವಿ ಚಂದ್ರರಾಜ. ಉಳಿದ ವಿಷಯಗಳನ್ನು ಹಿಂದಿನ ನಂಬರಿನಲ್ಲಿ ನೋಡಿ ತಿಳಿಯುವುದು.

No. 294. ಮನ್ಮಥವಿಜಯ-
MANMATHAVIJAYA.

Substance, paper. Size, 10 $\frac{7}{16}$ × 9½ inches. Pages, 98. Lines, 20 on a page. Character, Kanarese. Condition, good. Appearance, new.

Complete in 18 Adhikāras.

This is a Campu kāvya on erotics. The author's name is Malla or Mallaṇa. His date is about 1400 A.D.

Beginning:

॥ ಶಾರ್ದೂಲವಿಕ್ರೀಡಿತ ॥

ಶ್ರೀಮನ್ಮೋಹನಮಂತ್ರದೇವಿಯರಿರಲ್ ಪಕ್ಕಂಗಳೊಳ್ ಚೈತ್ರಚೈ ।
ತ್ರ್ಯಾಮಾತ್ಯನಿರ್ಲಿ ಪಿಂದೆ ಮುಂದಳಿಕುಳಂ ಸಂಗೀತಮಂ ಪಾಡೆ ಶೈ ॥
ತ್ರ್ಯಾಮೋದಂ ಮೃದುಯಾನದಿಂ ಮರುತನೋಲೈಸಲ್ ಪ್ರಿಯಳ್ಗೊಡಿಯು ।
[ಲ್ಯಮಂ ॥
ದ್ಧಾಮಂ ಮೃದಿಸ್ಥಿತ (ಸುಸ್ಥಿತ) (?)ನಾಗಿ ರಂಜಿಸುವ ಕಾಮಂ ಮಾಟ್ಕಿಮಾಂಗ

* * * *

ಕ॥ ಸಕ್ಕದದ ಭಾಷೆಯೊಳ್ನಗ ।
ಳ್ದಕ್ಕರಿಗರ್ಕಾಳಿದಾಸ ಬಾಣಮಯೂರರ್ ॥
ಚೊಕ್ಕಳಿಕೆಯಿಂದೆ ಮನ್ಮನ ।
ವ್ರೊಕ್ಕುದ್ಯನ್ಮತಿವಿಶಾಲಮಂ ಸತ್ಕೃಬೆಯಿಂದಂ ॥

“ ಮಹಾಸ್ರಗ್ಧರೆ ”

ಇಳೆಯೊಳ್ ಕರ್ಣಾಟ ಭಾಷಾವಿದರೆಸಲೆಸೆವ್ರೊಳ್ಗಬ್ಬಿಗರ್ರಾವೆನಿಪ್ಪ ।
ಗ್ಗಳದೇವಂ ನೇಮಿಚಂದ್ರಂ ಮನಸಿಜ ಸುಜನೋತ್ತಂಸ ರುದ್ರಾಂಕ ಪೊನ್ನಂ ॥
ಕಳೆಯಾಣ್ಮಂ ನಾಗವರ್ಮಾದ್ಯನುಪಮ ಗುಣಿಗಳ್ ನೂತನಬ್ರಹ್ಮರೆಮ್ಮೊಳ್ ।
ವಿಳಸದ್ವಾಗ್ವೃತ್ತಿಯಂ ಕಾಟ್ಪಿರಮೆನಿಸುವಿನಂ ಮಾಟ್ಕಿ ಕಾರುಣ್ಯದಿಂದಂ ॥

ಕಂ॥ ನಿರುತಂ ಕರ್ಣಾಟಕದೊಳ್ ।
ಪರಿಕಿಸೆ ಶಬ್ದಜ್ಞನಾವನೊರ್ವನೆ ಲೋಕ ॥
ಕ್ಕರಿದಲ್ತೆ ಭಾಷ್ಪು ಕವಿಕುಂ ।
ಜರಕೇಶವರಾಜ ಗೋಚರಿಕೆ ಮನ್ಮನದೊಳ್ ॥

॥ ಚಂಪಕಮಾಲೆ ॥

ಚತುರಚತುರ್ಮ್ಮುಖಂ ಕೃತಧೃತಿಪ್ರಮುಖಂ ವರವೇದಶಾಸ್ತ್ರವಿ ।
ಶ್ರುತಮತಿ ಕಾಮತತ್ವ ಭರತಾಗಮ ಶಬ್ದವಿಚಾರ ಕಾವ್ಯಪ ॥
ದ್ಧತಿ ರಸಭಾವ ರಾಗರಮಣೀಯಕರಂ ಕವಿ ಪುಷ್ಪಬಾಣಂಕಪಂ ।
ಡಿತನೆನಲಾತನಿಂದಱಿವು ಪೊಣ್ಮಿದ ಮ್ಮಲ್ಲಿಸಿದೇಂ ಕೃತಾರ್ಥನೋ ॥

* * * *

ಕಂ॥ ಸ್ಮರವಿಜಯಂ ಕೃತಿವೆಸರಾ ।
ದರಿಪರ್ ಶೃಂಗಾರಸಾರಕೋವಿದರೊಲವಿಂ ।
ವಿರಚಿಸಿದಂ ಲಕ್ಷ್ಮಣಕವಿ ।
ವರನೆನೆ ಮಿಗೆ ಮಚ್ಚಿ ಕೊರ್ತು ಪೊಗಟಿದರೊಳರೇ ॥

* * * *

Colophon:

ಇದು ವಿದಿತಮದನ ಮುದ್ರಾಂಕಿತ ವಿದೂರಜನನಿಬಂಧನ ಕಾರಾಗಾರಮಭಿನವ ನಾಯಕ ನಾಯಿಕಾ ಶೃಂಗಾರ ಸಾರೋದ್ಧಾರಮುಂ ಸಕಲವಿಬುಧ ಸೇವ್ಯಮಾನಮುಂ ಲಕ್ಷ್ಮಣ ಕವೀಂದ್ರ ವಿರಚಿತಮಪ್ಪ ಮನ್ಮಥವಿಜಯದೊಳ್ ಪೀಠಿಕಾಪ್ರಕರಣಂ ಸಂಪೂರ್ಣಂ.

ಕಂ॥ ಇಂತಾದ ಪೀಠಿಕಾತದ ।
ನಂತರಮುಬಲೆಯರ ಜಾತಿಭೇದಮುಮಂ ತ ॥
ತ್ಕಾಂತರ ತೆಱನುಂ ವಿದ್ವ
ತ್ಸಂತತಿಗಱಿವಂತು ಪೇೞ್ದಪೆಂ ಕ್ರಮದಿಂದಂ ॥

End:

॥ ಚಂಪಕಮಾಲೆ ॥

ಅಗಲಿರಲೊಂದುಗೂಡಿಸುವ ಜೀವರಸಂ . . . . . . ॥
ಮಾಟ್ಪಿ) ಜಾ ॥
. . . . ಕ್ಷಿಸುವ ಕೂರದರಂ ಬಸವಂಗೆಮೊಳ್ಪಿ ? (ಮಾಗೆ
ಣ್ಮಿಗೆ ನೆಲೆಯಪ್ಪ ವಿತ್ತಿಗರ ಚಿತ್ತಮನಿಜ್ಯಳಗೊಟ್ಟಿ ಸದ್ಗುಣಂ ।
ನೆಗಟ್ಟಿದಱಿಂದೆ (ನಿ) ಲ್ಕೆ ಪರವೀಕೃತಿ ಬೊಂ . . . . . . ॥

Colophon:

ಇದು ವಿದಿತ * * * ಮನ್ಮಥವಿಜಯದೊಳ್ ವಶ್ಯಾಧಿಕಾರಂ ಸಂಪೂರ್ಣಂ.

(ವಿ.ವಿ.)—

ಸಮಗ್ರ. ಕಾಗದದಪ್ರತಿ. ಗ್ರಂಥಪಾತವುಂಟು.

ಗ್ರಂಥಾದಿಯಲ್ಲಿ ಮನ್ಮಥಸ್ತುತಿಯಿದೆ. ಅನಂತರ ಈಶ್ವರ, ವಿಷ್ಣು, ಬ್ರಹ್ಮ, ಆದಿಶಕ್ತಿ, ಗಣಪತಿ, ವಾಣಿ ಇವರುಗಳ ಸ್ತುತಿಯೂ, ಕೆಲವು ಸಂಸ್ಕೃತ ಕನ್ನಡ ಕವಿಗಳ ನುತಿಯೂ, ಕವಿಕಾವ್ಯ ಪ್ರಶಂಸೆಯೂ ಕ್ರಮವಾಗಿ ಉಕ್ತವಾಗಿ ಶಾಸ್ತ್ರವಿಷಯವು ಆರಂಭವಾಗಿದೆ. ಇದು ಚಂಪೂರೂಪವಾಗಿದೆ. ಇದರಲ್ಲಿ ಪೀಠಿಕಾ ಜಾತಿ, ಕಳಾ, ಅಂಶ, ದೇಶವಿಭಾಗ ಸ್ತ್ರೀ ವರ್ಣನೆ, ಪ್ರಕೃತಿಭೇದ, ಪ್ರಾಯೋಪಭೇದ,ಮೋಹಭಾವೇಂಗಿತ, ಪ್ರಮಾಣಭೇದ, ಮರ್ಮಭೇದ, ಆಲಿಂ

ಗನ, ಚುಂಬನ, ಸ್ತಖಕ್ಷತ, ರತಿ, ಭಾರ್ಯಾ, ಕುಲಟಾ, ವೇಶ್ಯಾ, ವಶ್ಯ ಎಂಬುದಾಗಿ ೧೮ ಅಧಿಕಾರಗಳವೆ. ಕವಿಯು ಹೆಸರು ಮಲ್ಲ ಅಥವ ಮಲ್ಲಣ. ಈತನು ಕವಿಪುಷ್ಟ್ಟಣಾಂಕಪಂಡಿತನಿಂದ ಅಱಿವು ಸಂಪಾದಿಸಿದಂತೆ ಹೇಳುತ್ತಾನೆ. ಇವನ ಕಾಲವು ಸು. ೧೪೦೦ ಎಂದು ಕವಿ ಚರಿತ್ರಕಾರರು ಹೇಳುತ್ತಾರೆ.

No. 295. ಮನ್ಮಥವಿಜಯ-
MANMATHAVIJAYA.

Substance, palm-leaf. Size, 12½ × 1¼ inches. Pages, 64 Lines, 7 on a page. Character, Kanarese. Condition, very much injured. Appearance, old.

Complete in 18 Adhikāras.

Same work as the above.

(ವಿ.ವಿ.)--

ಸಮಗ್ರ. ೧೮ ಅಧಿಕಾರಗಳವೆ. ಒಲೆಯ ಪ್ರತಿ ಅತ್ಯಂತ ಶಿಥಿಲ. ಗ್ರಂಥಪಾತವುಂಟು. ಹಿಂದೆ ವರ್ಣಿತವಾದ ಪುಸ್ತಕವು ಇದರ ಪ್ರತಿಕೆಯಾಗಿದೆ.

No. 296. ವಾತ್ಸ್ಯಾಯನೀಯ ಟಿಪ್ಪಣಂ-
VĀTSYĀYANĪYAṬIPPAṆAM.

Substance, palm-leaf. Size, 17 × 1⅝ inches. Pages, 383. Lines, 6 on a page. Character, Kanarese. Condition, very much injured. Appearance old.

Incomplete—contains 34 chapters.

This work is an easy commentary in prose, on Vātsyāyana's Kāmasūtra.

Beginning:

ವಾತ್ಸ್ಯಾಯನನೆಂಬ ಋಷಿ ಈ ಗ್ರಂಥಾರಂಭ ಕಾಲದೊಳ್ ನಿರ್ವಿಘ್ನದಿಂದಿದಂ ಪರಿಪೂರ್ಣ . . . . ಶಾಸ್ತ್ರದೊಳ್ ಕಾಮ ಪುರುಷಾರ್ಥಮಂ ಪ್ರತಿಪಾದಿಸಲ್ಪಡುವ ಕಾರಣಂ ಮಿಕ್ಕ ಧರ್ಮಾರ್ಥಂಗಳೆರಡುಮದರ್ಕನುಕೂಲಮಾಗಿರವೇಟ್ಟುದೆಂದು . . . .

* * *

ಇಂತು ಬಾಭ್ರವ್ಯಂ ಪೇಟ್ದ ಕಾಮತಂತ್ರಂ ಚದುರಿಪೋದುದಂ ಕಂಡು ವಾತ್ಸ್ಯಾಯನನೆಂಬ ಋಷಿ, ಮುಂ ಬಾಭ್ರವ್ಯಂ ಪೇಟ್ದುದತಿವಿಸ್ತರಮಾದುದರಿಂದೆಯುಂ, ರತ್ನಕಂ (?) ಮೊದಲಾದವರ್ ಪೇಟ್ದುದೊಂದೊಂದಧಿಕರಣಂಗಳ್ಬೇಱೆವೇಱೆಯಿರ್ಪುದಱಿಂದೆಯುಮೆಲ್ಲರ್ಗಂ ತಿಳಯ ಕೂಡದಾದ ? (ತಿಳಯದುದಾದ) ಕಾರಣಮನಿಬರ್ಗಂ ತಿಳವಂತೆ ಜಾಣ್ಮೆಯಿಂದೀ ಶಾಸ್ತ್ರಮಂ ಮುಂ ಬಾಭ್ರವ್ಯಂ ಪೇಟ್ದಂತು ವಿಸ್ತಾರಮಾದ ಶಬ್ದಂಗಳಂ ಬಿಟ್ಟರ್ಥಂಗಳೆಲ್ಲಮಂ ಬಿಡದೆ ಯುಕ್ತಿಯಿಂ ಕಿಱಿದುಗೆಯ್ದು ಮುಂ ಪೇಟಿದ್ದೇಳಧಿಕರಣಂಗಳುಂ ಮೂವತ್ತಱಧ್ಯಾಯಂಗಳುಮಱುವತ್ತುನಾಲ್ಕು ಪ್ರಕರಣಂಗಳುಮಾಗಿ ಪೇಟ್ದಪಂ.

* * * *

ಏಳನೆಯ ಔಪನಿಷದಿಕಾಧಿಕರಣದೊಳ್ . . . ಎಂದಾಱು ಪ್ರಕರಣಂಗಳುಂ ಎರಡಧ್ಯಾಯಂಗಳುಂ. ಎಂದಿಂತು ಅಱುವತ್ತುನಾಲ್ಕುಂ ಪ್ರಕರಣಂಗಳುಂ ಮೂವತ್ತಱ

ಧ್ಯಾಯಂಗಳು ಮೇಳಧಿಕರಣಂಗಳಾಗಿ ಈ ಶಾಸ್ತ್ರಮಂ ಯುಕ್ತಿಯಿಂ ವಾತ್ಸ್ಯಾಯನಂ ಪೇೞ್ದಂ. ಈ ಪ್ರಕರಣಂಗಳ ಪೆಸರ . . . . ವಿವರವಾಗಿ ಯರ್ಥಂ ಪೇೞಲ್ಪಡು ತಿರ್ದ್ದಿತು.

Colophon:

ಇದು ಶಾಸ್ತ್ರ ಸಂಗ್ರಹಮೆಂಬ ಮೊದಲ ಪ್ರಕರಣಂ. ಇಂತಿದು ವಾತ್ಸ್ಯಾಯನೀಯ ಟಿಪ್ಪಣದೊಳ್ ಸಾಧಾರಣಮೆಂಬ ಮೊದಲಧಿಕರಣದೊಳ್ ಮೊದಲಧ್ಯಾಯಂ.

ಇಂತು ಶಾಸ್ತ್ರ ಸಂಗ್ರಹಮಂ ಪೇೞ್ದನಂತರದೊಳ್ ಈ ಶಾಸ್ತ್ರದೊಳ್ ಧರ್ಮಾರ್ಥಂಗಳ್ಗನು ಗುಣಮಾದ ಕಾಮಪುರುಷಾರ್ಥಮಂ ಪ್ರತಿಪಾದಿಪುದಱಿಂ ಮನುಷ್ಯರುಮಿಂ ಮೂರುಂ ಪುರು ಷಾರ್ಥಂಗಳನೊಂದರ್ಕೊಂದು ಅನುಕೂಲಮಾಗಿಯೆ ಸೇವಿಸಬೇಕೆಂಬುದಂ ತಿಳಿಯಿಸುವು ದಕ್ಕಾಗಿ ಈ ತ್ರಿವರ್ಗ ಪ್ರತಿಪತ್ತಿಯೆಂಬ ಪ್ರಕರಣಮಂ ಪೇೞ್ದಪನದೆಂತೆನೆ ;

End:

ಸ್ತ್ರೀಯು ಕಾಮಪರೆಯೆಂದುಂ ಅರ್ಥಪರೆಯೆಂದು ಮೆರೆಟಿತ್ತೆಱಂ. ಇದಱಿತೊಳ್ ಕಾಮ ಪರೆಯಾದ ಸ್ತ್ರೀಯರ ನಡತೆಯುಂ ಮೊದಲ್ಕನ್ಯಾಸಂ ಪ್ರಯುಕ್ತ . . . . ಱ ಮಧಿಕರಣಂಗಳೊಳಂ ಪೇೞ್ದುದು. ವೇಶ್ಯೆಯರೊಳ್ ಕಾಮಪರರಾದ ಸ್ತ್ರೀಯರುಂ ಟಾಗಿರ್ದರುಮವರ ನಡತೆಯಾರ್ಥಪ್ರಧಾನಮಾಗಿರ್ಪುದಱಿಂದರ್ಥಪರರಾದ (ಸ್ತ್ರೀಯ)ರ ನಡತೆಯುಮಿ ವೈಶಿಕಾಧಿ ಕರಣದೊಳ್ಪೇೞ್ದುದು. ಆದಱಿಂ ಸೂಳೆಯರ್ಗೆ ಬೊಜಗರ ಕೂಟ ದಿಂ ಸೊಗ ಮುಂ ಪೊನ್ನುಂ ತನ್ನಿಂದಮೆ ಪೆರ್ಚಿಬರ್ಕ್ಕು ಮೆಂಬುದುಚಿತಂ.

Colophon:

ಇಂತಿದರ್ಥಾನರ್ಥಾನು ಬಂಧ ಸಂಶಯ ವಿಚಾರ ವ್ಯೈವತ್ತೆಂಟನೆಯ ಪ್ರಕರಣಂ :— ಇಂತೀ ವಾತ್ಸ್ಯಾಯನೀಯ ಟಿಪ್ಪಣದೊಳ್ ವೈಶಿಕಮೆಂಬಾರನೆಯಧಿಕರಣದಲ್ಲಿ ಷಷ್ಠಾಧ್ಯಾ ಯಂ. ಮೊದಲಿಂದ ಅಧ್ಯಾಯ ಮೂವತ್ತುನಾಲ್ಕು.

(ವಿ.ವಿ.)—

ಈ ಪ್ರತಿ ಅಸಮಗ್ರ. ೩೪ ಅಧ್ಯಾಯಗಳವೆ. ಪ್ರತಿ ಅತಿ ಶಿಥಿಲ. ಅಕ್ಷರಗಳು ಉತ್ತಮ. ಗ್ರಂಥಪಾತ ಬಹಳ.

ಈ ಗ್ರಂಥವು ಹಳಗನ್ನಡ ಗದ್ಯರೂಪವಾದುದು. ವಾತ್ಸ್ಯಾಯನ ಕಾಮಸೂತ್ರಕ್ಕೆ ವಿವರ ವಾದ ಟೀಕೆಯು. ೩೬ ಅಧ್ಯಾಯಗಳನುಳ್ಳದು. ಕವಿಯಾರೆಂಬುದು ತಿಳಿದುಬರುವುದಿಲ್ಲ.

No. 297. ವಾತ್ಸ್ಯಾಯನೀಯ ಟಿಪ್ಪಣಂ.
VĀTSYĀYANĪYAṬIPPAṆAM.

Substance, paper. Size, $10\frac{1}{2} \times 9\frac{6}{16}$ inches. Pages, 298. Lines, 20 on a page. Character, Kanarese. Condition, good. Appearance, new. Contains 34 chapters.

Same work as the above.

(ವಿ.ವಿ.)—

ಅಸಮಗ್ರ. ಮೊದಲಿಂದ ಮೂವತ್ತುನಾಲ್ಕು ಅಧ್ಯಾಯಗಳು ಮಾತ್ರ ಇವೆ. ಗ್ರಂಥ ಪಾತ ವಿಶೇಷವಾಗಿರುವುದು. ಹಿಂದಿನ ಪ್ರತಿಗಿದು ಪ್ರತಿಕೃತಿಯು.

ಇದು ಹಳಗನ್ನಡ ಗದ್ಯರೂಪ ಗ್ರಂಥ. ವಾತ್ಸ್ಯಾಯನ ಕಾಮಸೂತ್ರಕ್ಕೆ ವಿವರವಾದ ಟೀಕೆ. ೩೬ ಅಧ್ಯಾಯಗಳನುಳ್ಳುದು. ಕವಿ ಗೊತ್ತಿಲ್ಲ. ಉಳಿದ ವಿಷಯವನ್ನು ಹಿಂದಿನ ನಂಬರಿನಿಂದ ತಿಳಿಯುವುದು.

(4) YOGA.

ಯೋಗ.

No. 298. ಪರಮಾರ್ಥಪ್ರಕಾಶಿಕೆ.

PARAMĀRTHA-PRAKĀŚIKE.

Substance, Śrītāla. Size, $13\frac{13}{16} \times 2\frac{1}{16}$ inches. Pages, 106. Lines, 9 on a page. Character, Kanarese. Condition, much injured. Appearance, old.

Complete.

This is a commentary in Kannada, on Śivayōgapradīpa of Cenna sadāśiva in five chapters, dealing with the several methods of practising yōga. The name of the author is Nijaguṇa śivayōgi. Name of the scribe :—Siddhavīraiah, son of Nañjaiah.

Date of transcription :—Sunday the 12th day of the bright fortnight of the lunar month Mārgaśira in the year Parābhava, Saka 1648, corresponding to A.D. 1726.

Beginning :

ಶ್ರೀಮದನಂತಕೋಟಿ ಬ್ರಹ್ಮಾಂಡಪಿಂಡಾಂಡ ತತ್ವತಾತ್ವಿಕ, ಮಾಯಾಬಿಂದು ಮುಖ್ಯಚೇತನಾ ಚೇತನಾತ್ಮಕ ವಿಶ್ವ ಪ್ರಪಂಚದೊಳಕ್ಕೊರಗೆಲ್ಲಿಯೂ ಪರಿಪೂರ್ಣವಾಗಿ ಸರ್ವಾಧಾರಕತ್ವ ಸರ್ವಶಕ್ತಿತ್ವ ಸರ್ವಾನುಗ್ರಾಹಕತ್ವಾದಿಗಳುಳ್ಳ ಸರ್ವ ಕಾಲಕ್ರಮಾರ್ಥಂಗಳೆಲ್ಲವನೇಕ ಕಾಲದಲ್ಲಿ ನಿರ್ವಿಕಾರತ್ವದಿಂದರಿವ ನಿತ್ಯನಿರ್ಮಳ ನಿರ್ವಿಕಲ್ಪ ನಿರಾವರಣ ನಿರತಿಶಯಾದ್ವಿತೀಯಮಪ್ಪ ಸತ್ಯಸ್ವಯಂಪ್ರಕಾಶನಂ ವಿದ್ರೂಪಮಾದ ಶಂಭುಲಿಂಗದನುಮತದಿಂ ಸರ್ವಜ್ಞಾನ ಸಂಪನ್ನನೆನಿಪ ನಿಜಗುಣ ಶಿವಯೋಗಿಯು ನಿಮಿತ್ತ ಬಂಧುತ್ವದಿಂ ನೆನೆದು ನೋಡಿ ಸಂಸ್ಕೃತ ಶಬ್ದ ವ್ಯಾಕರಣ ಪ್ರಮಾಣಾದಿಗಳ ಲಕ್ಷಣ ಶಿಕ್ಷೆಗಳಿಲ್ಲದ ಮೋಕ್ಷಮಾತ್ರಾಪೇಕ್ಷಿತರಾದ ಸಾಧುಜನಂಗಳಾಯಾಸವಿನಿತಿಲ್ಲದೋದಿ ಕೇಳಿ ತಿಳಿದು ಕೃತಾರ್ಥರಾಗಲೆಂದು ಶಿವಯೋಗ ಪ್ರದೀಪಿಕೆಯೆಂಬ ವಿಶಿಷ್ಟಯೋಗಶಾಸ್ತ್ರದ ಗ್ರಂಥಗಳನ್ವಯ ತಾತ್ಪರ್ಯವನೇ, ಸೂಪಶಾಸ್ತ್ರ ಸಮ್ಮತದಿಂ ಕೂಡಿ ಮಾಡಿದ ಸುಪದಾರ್ಥದಂದವನರಿದೊಂದಿ ನೀಸು ತುಪ್ಪವ ನೆರೆದೊಪ್ಪವಾಗಿ ಪೊಡಣೆಗೆಗೊಟ್ಟು ಬೇರೆಂದು ಮಹಾ ಸ್ವಾದುಗೊಳಿಸುವಂತೆ ಲಾಲಿತಮಾದ ಮಾಲಾ ಟೀಕಾನುರೂಪದಿಂದಲಿತ್ತಾಗಿ ಸೇರುವೆಗೆಯ್ದು ಸಕಲಯೋಗೀಶ್ವರರೊಡಂಬಡುವಂತೆ ಕರ್ಣಾಟಕ ವಚನರಚನೆಗಳಿಂ ಪರಮಾರ್ಥ ಪ್ರಕಾಶಿಕೆಯೆಂಬ ಪೆಸರನಿಟ್ಟು ಬೇಱತೊಂದು [ಬೇಱತೊಂದು] ಪ್ರಕಾರವಾಗಿ ಮಾಡಿದನದೆಂತೆಂದೊಡೆ :—

* * * *

ನಾಲ್ಕಂಗುಲದ ತೆರಪಿನ ಪಾವಡೆಯೊಂದು ತುದಿಯಂ ಪಿಡಿದು ಮತ್ತೊಂದು ತುದಿಯಂ ಮೆಲ್ಲನೆ ಹೃದಯಪರ್ಯಂತರನುಂಗಿ ತೆಗೆವುದೆ ಧೌತಿಯೆನಿಸುವುದು. ಕುಳಿತೊಡೆ ನಾಭಿ ಪ್ರಮಾಣವಾಗುವ ಜಲದಲ್ಲಿ ಕುಳಿತು ಆಧಾರ ಕೂಚನದಿಂದುದಕಮಂ ಪೂರಿಸಿಬಿಡುವುದೆ ವಸ್ತಿ

ಯೆನಿಸುವುದು. ಹನ್ನೆರಡಂಗುಲ ಪ್ರಮಾಣದ ನೂಲನ್ನು ನಾಶಿಕದ್ವಾರದಲಿಲ್ಲೇರಿಸಿ ಬಾಯೊಳು ತೆಗೆವುದೆ ನೀತಿಯೆನಿಸುವುದು. ಅತಿ ಸೂಕ್ಷ್ಮವಾದ ವಸ್ತುಗಳನ್ನು ಸ್ಥಿರದೃಷ್ಟಿಯಿಂ ಕಂಬನಿ ಬರುವ ಪರ್ಯಂತರಂ ನೋಡುವುದೆ ತ್ರಾಟಕವೆನಿಸುವುದು. ಕಂಭಬರಿಮ(?)ನಿಲಿಸಿ ಯಡಚಾರಿ ಬಲಚಾರಿಯಾಗಿ ಕುಕ್ಷಿಯು ತಿರುಗಿಸಲದೆ ಲೌಡಿಯೆನಿಸುವುದು. ಇಡಾ ಪಿಂಗಳ ದ್ವಾರಂಗಳೆಲ್ಲಿ ಅತಿ ತೀವ್ರವಾಗಿ ರೇಚಕ ಪೂರಕವಮಂ ಮಾಳ್ಪುದೇ ಕಪಾಲ ಭಾತಿಯೆನಿಸುವುದು. ಎಂಬೀಪಟ . . ಗಳಿಂದಲೂ, ಮೇಣ್ ರೇಚಕ ಪೂರಕಂಗಳಿಲ್ಲದೆ ಕುಂಭಿಸುವ ಕೇವಲ ಕುಂಭಕದಿಂದಲಾದರೂ ವಾಯುವಮಂ ತನ್ನಾಧೀನ ಮಾಳ್ಪುದೇ ಹಠಯೋಗ ಮಕ್ಕುಂ.

* * * *

ಈ ಪ್ರಕಾರಮಾದಂತಃ ಪೂಜಾವಿಧಾನಕ್ಕೆ ಸಮರ್ಥನಲ್ಲದಾತನು ಆ ಪೂರ್ವೋಕ್ತನಾದ ಶಿವನಂ ಪ್ರತ್ಯಕ್ಷನಾದ ರಾಜನೋಪಾದಿಯಲ್ಲಿ ವಾಹನ ಛತ್ರಚಾಮರಗಳಿಂದಲೂ ಆ ವಾಹನ ಸ್ಥಾಪನ ಸನ್ನಿಧಾನ ಸಮ್ಮುಖೀ ಕರಣಂ ಮೊದಲಾದುಪಚಾರಗಳಿಂದ ಹೃತ್ಕಮಲ ಮಧ್ಯದಲ್ಲಿ ಪೂಜಿಸಲ್ವೇಳ್ಕುಂ. ಬಳಿಕೀ ಪ್ರಕಾರಮಾದ ಪೂಜೆಯಂ ಮಾಡೆ ಪೂಜಕಂಗೆ ಸಮಸ್ತಪಾಪ ಕ್ಷಯವನ್ನೂ, ಮನಸ್ಸಿಗೆ ನಿರ್ಮಲತ್ವವನ್ನೂ ಸರ್ವೈಶ್ವರ್ಯವನ್ನೂ ಶಿವಯೋಗ ಜ್ಞಾನವನ್ನೂ ಲೇಸಾಗಿ ಕೊಡುವುದರಿಂದೀ ಯಭ್ಯಂತರವಾದ ಹೃದಯ ಸಂಬಂಧಿನಿಯಾದ ಪೂಜೆಯನ್ನೆ ಎಲ್ಲ ಕಾಲದಲ್ಲಿಯೂ ಮಾಡಬೇಕೆಂಬುದೇ ನಿಶ್ಚಿತಮಕ್ಕುಂ.

Colophon :

ಇತಿ ಶ್ರೀ ನಿಜಗುಣ ಶಿವಯೋಗಿ ವಿರಚಿತಮಾದ ಪರಮಾರ್ಥ ಪ್ರಕಾಶಿಕೆಯಲ್ಲಿ ಮಂತ್ರಾದಿ ಚತುರ್ಯೋಗ ಸ್ವರೂಪನಿರ್ಣಯಂ ಪ್ರಥಮ ಪರಿಚ್ಛೇದಃ.—ಇತಿ ಪ್ರಥಮ ಪ್ರಕರಣಂ ಸಂಪೂರ್ಣಂ.

ಇಂತು ಮೊದಲ ಪರಿಚ್ಛೇದದಲ್ಲಿ ಹಠಯೋಗಾಭ್ಯಾಸದಿಂ ಮುನ್ನವೆ ಮಾಳ್ಪಂತಃ ಪೂಜಾವಿಧಾನದಿಂ ಮನಕ್ಕೆ ಚಂಚಲತ್ವಮುಂಟಾಗಿ ಆಮನದ ಚಂಚಲತೆಯಂ ನಿಲ್ಲಿಸಲೋಸುಗ ವಾಗಿ, ಆ ಯೋಗಧಾನ (?) ಮಾದ ಬೇಱೊಂದು ಪೂಜಾವಿಧಾನಮಂ ಪೇೞ್ವೆನೆಂದಾಚಾರ್ಯನಾ ಶಿಷ್ಯಂಗೆ ನಿರೂಪಿಸಿದನದೆಂತೆಂದೊಡೆ :—

End:

ವೇದಾಂತಾಗಮ ಪುರಾಣೇತಿಹಾಸಗಳಲ್ಲಿ ಪರಮರಹಸ್ಯಮಾದ ಶಿವಯೋಗ ಸ್ವರೂಪವನಭಿವ್ಯಕ್ತಮಾಗಿ ಕೈದೋರಿಕೆಯೆನಿಸಿ ಕರ್ಣಾಟಕ ವಚನ ಪ್ರಬಂಧಮಾಗಿ ವಿರಚಿತಮಾದ ಈ ಪರಮಾರ್ಥ ಪ್ರಕಾಶಿಕೆಯೆಂಬ ಪ್ರಕರಣವನ್ನು ಆವಾತನು ಬಲ್ಲತನಮಂ ಮೆರೆಯಬೇಕೆಂದು ಲೌಕಿಕ ಪ್ರಯೋಜನವಮಂ ಪಡೆಯಬೇಕೆಂದು ಅಯೋಗ್ಯನಾದ ಮೂಢಂಗೆ ಕೊಡುವನಾತಂಗೆ ಡಾಕಿನಿಯೆಂಬ ಮಂತ್ರಶಕ್ತಿಯ ಶಾಪವು. ಗುರುದ್ರೋಹವು ಬರುವುದು. ಮತ್ತಾರ್ಗಿವುದೆನೆ ; ಈ ಯೋಗಮಾರ್ಗವನುಪದೇಶಮಂ ಮಾಡಿದಾಚಾರ್ಯನಲ್ಲಿಯೂ ವಿಚಿತ್ರಧ್ಯೇಯರೂಪನಾಗಿ ತನಗೆ ಮುಕ್ತಿ ಸಾಧನವಾದ ಪರಶಿವನಲ್ಲಿಯೂ ಸಮಾನವಾದ ನಿಶ್ಚಲಭಕ್ತಿಯುಳ್ಳ, ಯೋಗಾಭ್ಯಾಸದಲ್ಲಿ ಸಮಾ (ನ) ಮಾದ, ಜಿತೇಂದ್ರಿಯನಾದ ವಿರಕ್ತಂಗೆ, ಉತ್ತಮ ಶಿಷ್ಯಂಗೆ, ಸತ್ಪುತ್ರಂಗುಪದೇಶಂಗೆಯ್ಯಲಿದು ಸಫಲಮಕ್ಕುಂ.

Colophon :

ಇತಿ ಶ್ರೀ ನಿಜಗುಣ ಶಿವಯೋಗಿ ವಿರಚಿತಮಾದ ಪರಮಾರ್ಥಪ್ರಕಾಶಿಕೆಯಲ್ಲಿ ರಾಜಯೋಗತ್ರಯ ನಿರ್ಣಯಂ ಪಂಚಮ ಪರಿಚ್ಛೇದಃ.

ಇದು ನಿಜಗುಣ ಶಿವಯೋಗಿ ಶಂಭುಲಿಂಗ . . . . ದಖಿಳ ವೇದವೇದಾಂತಾಗಮ ಸ್ಮೃತಿ ಪುರಾಣೇತಿಹಾಸ ಪುರಾತನಗೀತಾದಿಗಳ ಯೋ(ಗ)ಪಾದದ ಪರಮರಹಸ್ಯಾರ್ಥಂಗಳಂ ಪ್ರಸ್ತುತವಾಗಿ ವಿಸ್ತರಿಸಿದ ಶಿವಯೋಗ ಪ್ರದೀಪಿಕೆಯೆಂಬೀ ಸಮ್ಯಗನುಭವ ಗ್ರಂಥಾನ್ವಯ ತಾತ್ಪರ್ಯಾಂಗವನ್ನೆ ಕನ್ನಡಿಸಿ ಕರತಳಾಮಳಕವಾಗಿ ಪೇಳ್ದಿದ ಪರಮಾರ್ಥ ಪ್ರಕಾಶಿಕೆಯೆಂಬ ಪ್ರಕರಣವಿದಂ ಪದುಳದಿಂದೊಮ್ಮೆ ಬರೆದೋದಿ ಕೇಳದವರಾಕ್ಷಣದಲ್ಲಿಯೇ ಪಾಪಕ್ಷಯ ಸಮಸ್ತದುಃಖನಿವೃತ್ತಿ, ಸದ್ಧರ್ಮಾಭಿವೃದ್ಧಿ, ಸಂಶಯ ನಿರುಹರಣ, ಬುದ್ಧಿಶುದ್ಧಿ, ವಿರಕ್ತಿ, ವಿವೇಕ, ಶಿವಯೋಗ ಸಂಪತ್ತಿ, ಸಮುನ್ನತಸಿದ್ಧಿ ಮುಕ್ತಿಗಳು ಮಾಳ್ಪುದು ಸತ್ಯವಹುದಾಗಿ ಸಾಧಕಜನಂಗಳನ್ಯಶಾಸ್ತ್ರ ಸಂಭ್ರಮಂಗಳಲ್ಲಿ ಸಾಯಾಸಂಗೊಳದಿದನೆ ಶ್ರದ್ಧಾಭಕ್ತಿ ಪೂರ್ವಕವಾಗಿ ಶ್ರೀಗುರುಮುಖದಿಂ ತಿಳದು ಕೃತಾರ್ಥರಾಗಲೆಂಬಾಶೀರ್ವಾದ ಲಕ್ಷಣ ಮಂಗಳಾಚರಣದೆ ಪರಿಸಮಾಪ್ತಿ.

ಶ್ರೀಮಚ್ಛಂಬುಲಿಂಗನ ಪಾದಾರವಿಂದ ಪ್ರಸಾದದಿಂದಾಗಿ ನಿಜಗುಣ ಶಿವಯೋಗಿ ಪೇಳ್ದ ಪರಮಾರ್ಥ ಪ್ರಕಾಶಿಕೆಯೆನಿಪ ಪ್ರಬಂಧವು ಸಂಪೂರ್ಣವು.

(ವಿ-ವಿ.)—

ಸಮಗ್ರ. ಅತಿ ಶಿಥಿಲ. ಶ್ರೀತಾಳಪ್ರತಿ. ಗ್ರಂಥಾಂತ್ಯದಲ್ಲಿ ' ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕವರುಷ ೧೬೪೪ ನೆಯ ಪರಾಭವ ಸಂವತ್ಸರದ ಮಾರ್ಗಶಿರ ಶುದ್ಧ ೧೦ ರಲ್ಲು ಭಾನುವಾರದ ೨೫ ನೆಯ ಘಳಿಗೆಯ ವೇಳೆಗೆ ಪರಮಾರ್ಥ ಪ್ರಕಾಶಿಕೆಯೆಂಬ ಯೋಗಶಾಸ್ತ್ರವನ್ನು ಬಸವರಾಜಪುರದ ಸುಶಾಸ್ತ್ರ . ದಸುತ್ತುರಾಸಿದ ನಂಜಯ್ಯನ ತನೂಭವ ಸಿದ್ಧವೀರಯ್ಯನು ಮಾತ್ರ ರಾಜಪುರದ ಪುರವರ್ಗದ ಶಾಸ್ತ್ರ ಮಲ್ಲಪ್ಪನವರಿಗೆ ಬರಕೊಟ್ಟ ಪುಸ್ತಕ ಸಂಪೂರ್ಣ ಮಂಗಳ ಮಹಾ.

ತಪ್ಪಂ ಬರೆದಂ ಕಡುಜಡ ।
ನಪ್ಪಂ ತಾನೆಂದುಯೆನ್ನ ಬಯ್ಯಲುಬೇಡಂ (ಬಯ್ಯಲ್ವೇಡಿರ್) ॥
ತಪ್ಪಿಲ್ಲ ಶುದ್ಧ ಮಕ್ಕುಂ ।
ತಪ್ಪಿದ್ದರೆ ತಿದ್ದಿಕೊಂಬುದುತ್ತಮ ಪುರುಷರ್ ॥ " ಎಂದಿದೆ.

ಇದು ಚೆನ್ನ ಸದಾಶಿವಯೋಗಿ ಕೃತ ಶಿವಯೋಗ ಪ್ರದೀಪಿಕೆಯೆಂಬ ಗ್ರಂಥಕ್ಕೆ ಕನ್ನಡ ಟೀಕೆಯು. ಇದರಲ್ಲಿ ಐದು ಪರಿಚ್ಛೇದಗಳಿವೆ. ಮಂತ್ರಯೋಗ, ಜಪವಿಧಾನ, ರಾಜಯೋಗ ಲಕ್ಷಣ, ಹಠಯೋಗ ಇವೇ ಮುಂತಾದ ಅನೇಕ ವಿಷಯಗಳನ್ನೊಳಗೊಂಡಿದೆ. ಕವಿ ನಿಜಗುಣ ಶಿವಯೋಗಿ. ಈತನ ಕಾಲ ಮೊದಲಾದ ವಿಷಯಗಳನ್ನು ಕರ್ಣಾಟಕ ಕವಿ ಚರಿತ್ರ ಎರಡನೆಯ ಭಾಗದಿಂದ ತಿಳಿಯುವುದು.

No. 299. ಶಿವಯೋಗಾಂಗ ವಿಭೂಷಣ.

ŚIVAYŌGĀṄGAVIBHŪṢAṆA.

Substance, Śrītāla. Size, 7 × 1³ inches. Pages, 70. Lines, 10 on a page. Character, Kanarese. Condition, much injured. Appearance, old.

Begins on fol. 1a. The other works herein are :—(1) Sadgururahasya 36a. (2) Kalvāṇēśvara 61b. (3) Svarūpāmṛta 75b. (4) Vṛṣabhagīte 84b. (5) Avadhūtagīte 93b.

Complete.

A work dealing with the practice of Yōga, etc., written in Pari vardhini Ṣaṭpādi metre.

Name of the author :—Gurubasava who lived in about 1430 A.D. Other works such as Sadgururahasya kalyāṇēsvara, Svarupāmṛta, Vṛṣabhagīte, Avadhūtagīte, and Manōvijaya, are attributed to the same author.

Beginning :

ತನ್ನಿರವಂ ತೋಱಿಸಿ ನಿಜಸುತನಂ ।
ಧನ್ಯನ ಮಾಡಿ ನಿರಂತರ ದಯೆಯಿಂ ।
ಮನ್ನಿಸಿ ಪಿಂಡೋತ್ಪತ್ತಿಯನುಚಿತದೆ ಪೇೞಿದ ದೇಶಿಕನು ॥
ಶ್ರೀಗುರುಲಿಂಗಪದೋದಿತ ಘನಸುಖ ।
ಸಾಗರ ಷಟ್ಸ್ಥಲನಾಯಕ ಪರಶಿವ ।
ಯೋಗಿ ಮನೋಮಂದಿರ ಸರ್ವಾಂತರ್ಯಾಮಿ ಜಗತ್ಸಾಕ್ಷಿ ॥
ರಾಗ ವಿರಾಗವಿದೂರ ನಿಖಿಲಭವ ।
ರೋಗ ಚಿಕಿತ್ಸಕ ಬಸವೇಶ್ವರಗಮ ।
ನಾಗಮನಾದಿ ವಿವರ್ಜಿತ ಕರ್ಮಫಲಪ್ರದ ಜಯ ಸತತಂ ॥
ಪ್ರಣವವೆ ಪುಸ್ತಕೆ ಪರಮಾಮೃತಸ್ಯ ।
ಕ್ವಣಿಯಿಂದಿಳಿತಹ ಜಲವಖಿಳಾದ್ಯರು ।
ಹಿಣಿಲುಪನಿಷದಾದಿಗಳು ವಿಷಾಣಂಗಳು ಕುಣಿವಂಘ್ರಿಗಳು ॥
ಬಣಿಸುವ ವೇದಂಗಳು ಗುಣಷಟ್ಕವೆ ।
ಠಣಕಾರಧ್ವನಿಯು ವನಂಗಳ ತಿಂ ।
ಥಿಣಿ ಸಕಲೋದರವೆನಿಸುವ ವೃಷಭೇಂದ್ರಂಗೆ ನಮಸ್ಕಾರ ॥

* * * *

ತರ್ಕಿಸಿ ಮಿಗೆ ಕಂಡವಱೊಳು ತತ್ವಮ ।
ಯುಕ್ಕೆ ಸದೃಶವಹ ವಚನಂಗಳ ಸಂ ।
ದಿಕ್ಕೆ ವಿವಾದವ ಮಾಡಿ ಜಗಜ್ಜನರರ್ಥವ ನೆವದಿಂದ ॥
ತಸ್ಕರರಲ್ಲದ ಹಾಗಪಹರಿಸುವ ।
ಠಕ್ಕು ಠವಾಳನು ಬಿಟ್ಟನು ಭವಗುರು ।
ಪ್ರೊಕ್ಕಣೆಯೊಳಗನುವ:ತಿಸಿಹ ನಿಶ್ಶಂಕರಿಗಿದು ಸಾಧನವು ॥
ಪುರದೋದನದಿಂ ಹೊಟ್ಟೆಯು ಕಳವಳ ।
ಹರಿಯದೆನುತ್ತತಿಯತ್ನದಿ ದಿಳ್ಳಿಯ ।
ತಿರಿದು ಮನೋತ್ಸಾಹದಲುಣ ಬೇಕೆಂದಲವರುವವನಂತೆ ॥
ಮರುಳಾಗದೆ ಬಹುಮತ ತಂತ್ರಂಗಳ ।
ಹರವರಿಗಪವರ್ಗಾರ್ಥ ಮಹಾತ್ಮರು ।
ವರಯೋಗಾಂಗ ವಿಭೂಷಣಮದು ಕೇೞಿದೆನ್ನದೆ ಭಾವಿಪುದು ॥

ಅನವಧಿಯಿಂ ನಾನಾ ಜನ್ಮಂಗಳ ।
ನನುಭವಿಸೇತಕೆ ನರಜನ್ಮದ ವಾ ।
ಸನೆಯಳಿದುನ್ನತ ಮುಕ್ತಿಯುನೆಯ್ದುವ ಕಾಲವು ಸಂಘಟಿಸಿ ॥
ಘನ ಪಿಂಡಜ್ಞಾನವು ತೋರಲ್ಕಾ ।
ಯನದೊರ್ವಂ ಸುದ್ಗುರುವಂ ಪಡೆದಪೆ ।
ನೆನುತತ್ಕಾರ್ಥದೊಳುತ್ಸಹದಿಂ ಮಿಗೆ ತಾಂ ಧ್ಯಾನಿಸುತಿರ್ದ್ದ ॥

* * * *

ಅಂಜದಿರೆಲೆ ಬಾಲಕ್ಕ ಕೇಳ್ನನಗೆ ಸ ।
ಮಂಜಸದಿಂದೆ ಸುಲಭವೆಂದೆನಿಸುವ ।
ಮಂಜುಳವರವಾಕ್ಯಂಗಳ ಪೇಟಿರಿ ಮಹಾಭವಜಾಲವನು ।
ಕಂಜಸಖನ ಕಿರಣಂಗಳ ಮಂಜಿನ ।
ಪುಂಜವ ನುಂಗಿದ ಲಘುಗತಿಯಿಂ ಬಿಡೆ ।
ಭಂಜಿಸುವೆನು ಕೇಟಿತೆಂದಂತರ್ಮುಖ ಸುಖಮಯನಾಗಿರ್ದ್ದ ॥

Colophon:

ಇತಿ ಶ್ರೀ ಶಿವಯೋಗಾಂಗ ವಿಭೂಷಣೇ ಪಿಂಡೋತ್ಪತ್ತಿಸರ್ಗಮ ಪ್ರಥಮೋಪದೇಶಃ ।

ಸ॥ ಸುನಿಯತವಾಗಿ ಮನೋನಿಲ ಬಿಂದುಗ ।
ಳನುಮತಿಸಿಹ ವೃತ್ತಿಗಳನು ತನ್ನಯ ।
ತನಯಂಗತಿ ಕರುಣದಿ ಪೇಟಿದನಘತಿಮಿರದಿವಾಕರನು ॥

* * * *

ದ್ವಿದಳಸರೋಜದ ಭಾಸ್ವದ್ಬೆಳಗಿನ ।
ಸದನದ ಪುರುಷಕ್ಷೇತ್ರದ ಹಂಸಃ ।
ಪದ ಹುಬ್ಬುಗಳಂತರದಾಜ್ಞಾಚಕ್ರದ ಸೌಭಾಗ್ಯದೊಳು ॥
ಉದಯಾಸ್ತಂಗಳು ಹುಗದ ಚಿದದ್ವಯ ।
ದೊದವಿನ ತೇಜಃ ಪುಂಜದ ಬಲಿಕೆಯ ।
ಸದಮಳ ಲಿಂಗದ ನೆನಹಿನೊಳಿಹುದೇ ಧ್ಯಾನ ಸುನಿಶ್ಚಯದಿಂ ॥
ದಶಶತದಳಪದ್ಮದ ಶಶಭೃತ್ಸಂ ।
ಧಿಸಿ ಬೆಳಗುವ ಮೂಲಾಕ್ಷರ ರೂಪಿನ ।
ಶಶಿಕಾಂತದ ಮಂಟಪದ ಶಿರೋಸ್ಥಾನದ ಪರವಾಮೃತವು ॥
ಪೊಸರುವ ಚಿಚ್ಛಿವಪೀಠದೊಳಭಿ ಚಿಂ ।
ತಿಸಿ ನಿಂದುದ ಬಡದಂತೆ ಧರಿಸಿಕೊಂ ।
ಡೆಸೆದಿಹುದೇ ಧಾರಣಲಕ್ಷಣವೆಂರಿಯೆಂದನು ದೇಶಿಕನು ॥
ಈರೆಂಟಂಗುಲ ಮಾನದ ಕುಱುಹಿನ ।
ಭೂರಿ ಶುಭಾಶ್ರಯವೆನಿಸುವ ನಾದದ ।
ಮೇರೆಯ ಚಿದ್ರೂಪಿನ ಘನಲಿಂಗಕಳೆಯ ನಿಜ ನಿರುಪಮದ ॥
ನಾರಶಿಖಾಂತದೊಳೆರಡಿಲ್ಲದೆ ಘನ ।
ಸಾರವಳಿದು ಹೋದಂತುರಿಯೊಳು ತಿಳಿ ।
ಹಾರಿ ಸಲಿಲದೊಳಗಿಹ ಪರಿಯಂತಿಹುದೇ ಪರಮಸಮಾಧಿ ॥

End :

ಮೂಱನು ಕಡೆಯಾಗುಳ್ಳಱುವತ್ತೞ ।
ಸೇರಿ ನಿರಂತರದಿಂ ಲಕ್ಷಿಸುವಿ ।
ನ್ನೂಱಱ ಸಂಖ್ಯೆಯೊಳತಿ ಸುಲಭತೆಯಿಂದೆಸೆದಾ ಚಂದ್ರಾರ್ಕ ॥
ತಾರಾಂಬರ ಪರಿಯಂತ್ರರ ಸುಖದಿಂ ।
ಸ್ಥೈರಿಯವಾಗಿ ಮಹಾತ್ಮರುಗಳ ಹೃ ।
ತ್ಸಾರಸದೊಳು ಬೆಳಗುತ್ತಿಹುದೀಯೋಗಾಂಗ ವಿಭೂಷಣವು ॥

ಶ್ಲೋ॥ ಕಥಿತಂ ಶಿವಯೋಗಾಂಗ । ವಿಭೂಷಣಮಸದ್ಭ್ರಮಾ ॥
ರಹಿತಾನಾಂ ಮುಮುಕ್ಷೂಣಾ । ಮಧುನಾ ಜ್ಞಾನಸಿದ್ಧಯೇ ॥
ಭೂಷಯಿತ್ವಾ ವಿಶೇಷೇಣ । ಸತ್ಯಾದ್ಯಷ್ಟಾಂಗ ಭೂಷಣಂ ॥
ಶಿವೇನ ಸಹ ಯೋಗತ್ವಾತ್ । ಶಿವಯೋಗಾಂಗ ಭೂಷಣಂ ॥
ತಸ್ಮಾದೌತ್ಸುಕ್ಯ ಮತಿರ್ಮಾ । ತೃಣೀಕೃತ ಜಗತ್ರಯಃ ॥
ಭೂತ್ವಾ ಸದ್ಗುರುಮಾಶ್ರಿತ್ಯ । ಶಿವಯೋಗಾಂಗಮಭ್ಯಸೇತ್ ॥

Colophon :

ಇತಿ ಶ್ರೀಶಿವಯೋಗಾಂಗ (ವಿ)ಭೂಷಣೇ ಉತ್ತರ ಲಿಂಗೋಪದೇಶೋನಾಮ ಷಷ್ಠೋಪದೇಶಃ :—

(ವಿ-ವಿ.)—

ಸಮಗ್ರ. ಶ್ರೀತಾಳೆಪ್ರತಿ. ಆರು ಉಪದೇಶಗಳು. ೨೭೮ ಪದ್ಯಗಳು. ಅತಿ ಶಿಥಿಲ. ಇದರೊಡನೆ ಸದ್ಗುರು ರಹಸ್ಯ ಕಲ್ಯಾಣೇಶ್ವರ, ಸ್ವರೂಪಾಮೃತ, ವೃಷಭಗೀತೆ, ಅವಧೂತ ಗೀತೆ ಮೊದಲಾದ ಇತರ ಗ್ರಂಥಗಳೂ ಬರೆದಿವೆ.

ಇದು ಪರಿವರ್ಧಿನಿ ಷಟ್ಪದಿಯ ರೂಪವಾದುದು. ಗ್ರಂಥಾವತಾರದಲ್ಲಿ ಕವಿ; ಶಿವ, ವೃಷಭೇಂದ್ರ, ನೀಲಾಂಬಿಕೆ, ಬಸವೇಶ, ಬಸವೇಶನ ರಾಣಿ ಮೊದಲಾದವರು, ಶಿವಗಣ ಚಕ್ರ ಇವರುಗಳನ್ನು ಪರಿಪರಿಯಿಂದ ಸ್ತುತಿಸಿದ್ದಾನೆ. ಈ ಗ್ರಂಥದ ಪದ್ಯಗಳ ಕಡೆಯಲ್ಲಿ ಸಾಮಾನ್ಯವಾಗಿ 'ಎಂದನು ದೇಶಿಕನು,' 'ಪೇಳಿದ ದೇಶಿಕನು,' ಎಂದಿರುವುದು. ಗ್ರಂಥಾಂತ್ಯದಲ್ಲಿ ಮೂಱು ಅನುಷ್ಟುಪ್ ಶ್ಲೋಕಗಳಿವೆ. ಈ ಕೃತಿಗೆ ಶಿವಯೋಗಾಂಗ ವಿಭೂಷಣವೆಂದು ಹೆಸರು ಬರಲು ಕಾರಣವನ್ನು 'ಸತ್ಯವಿರತಿ ಗತಲಾಲಸನಿಶ್ಚಲ, ಯುಕ್ತಿ ಮನೋಮತನಿರಸನವೆಚ್ಚಱು, ನಿತ್ಯಸ್ವಪ್ರತ್ಯಕ್ಷತೆ ಸಂತೃಪ್ತಿಗಳು ಯಮಾದಿಗಳು ॥ ಅತ್ಯುತ್ಸಾಹದೊಳವನನುದಿನ ನಿಜ । ಭಕ್ತಿಸಹಿತ ಭೂಷಿಸಿ ಶಿವನೊಳು ಸಂ । ವ್ಯಕ್ತದಲೇ ಬೆರಸುವ ಕಾರಣ ಯೋಗಾಂಗ ವಿಭೂಷಣವು' ॥ ಎಂಬೀ ಪದ್ಯದಲ್ಲಿ ತಿಳಿಯಿಸುವನು. ಈ ಗ್ರಂಥದಲ್ಲಿ ಪಿಂಡೋತ್ಪತ್ತಿ, ಯೋಗಾಭ್ಯಾಸ ಕ್ರಮ ಮೊದಲಾದ ವಿಷಯಗಳು ಬರೆದಿವೆ. ಈ ಗ್ರಂಥಕರ್ತನು ಗುರುಬಸವ (ಸು 1430) ನೆಂದೂ; ಸದ್ಗುರು ರಹಸ್ಯ, ಕಲ್ಯಾಣೇಶ್ವರ, ಸ್ವರೂಪಾಮೃತ, ವೃಷಭಗೀತೆ, ಅವಧೂತಗೀತೆ, ಮನೋವಿಜಯ ಮುಂತಾದ ಕೃತಿಗಳೂ ವಿತತ್ಕೃತವೇ ಎಂದು ಕವಿ ಚರಿತ್ರಕಾರರು ಹೇಳಿರುತ್ತಾರೆ. ಆ ಬಗ್ಗೆ ಹೆಚ್ಚು ವಿಷಯಗಳನ್ನು ತಿಳಿಯಲು ಬಯಸುವರು ಕವಿ ಚರಿತ್ರೆಯ ಎರಡನೆಯ ಭಾಗವನ್ನು ನೋಡಿ ತಿಳಿಯುವುದು.

No. 300. ಶಿವಯೋಗಾಂಗವಿಭೂಷಣ-
ŚIVAYŌGĀṄGAVIBHŪṢAṆA.

Substance, palm-leaf. Size, 12⅝ × 1¹ inches. Pages, 254. Lines, 5 on a page. Character, Kanarese. Condition, much injured Appearance, old.

Begins on fol. 1*a*. The other works herein are.—(1) Sadguru-rahasya 51*b*, (2) Kalyāṇēśvara 97*b*, (3) Svarūpāmṛta 115*a*, (4) Vṛṣabhagīte 126*a*.

Complete.

Same work as the above.

(ವಿ.ವಿ.)—

ಸಮಗ್ರ. ತಾಳಪ್ರತಿ. ಅತಿಶಿಥಿಲ. ಇದರೊಡನೆ ಸದ್ಗುರು ರಹಸ್ಯ ಕಲ್ಯಾಣೇಶ್ವರ, ಸ್ವರೂಪಗೀತೆ, ವೃಷಭಗೀತೆ ಮುಂತಾದ ಕೆಲವು ಕೃತಿಗಳಿವೆ.

ಮುಂದೆ ವರ್ಣಿತವಾದ ಗ್ರಂಥವೇ ಆಗಿದೆ. ಇದರ ವಿಷಯವಾಗಿ ಎಲ್ಲಾ ಸಂಗತಿಗಳನ್ನೂ ಹಿಂದಿನ ನಂಬರಿನಿಂದ ತಿಳಿಯುವುದು.

No. 301. ಅವಧೂತಗೀತೆ.
AVADHŪTAGITA.

Substance, Śrītāla. Size, 7 × 1¾ inches. Pages, 13. Lines, 10 on a page. Character, Kanarese. Condition, much injured. Appearance, old.

Begins on fol. 93*b* of the manuscript described under No. 299 *ante*.

Complete.

A short treatise in 101 songs describing the characteristics of one who has renounced the world.

Author's name—Gurubasava.

Beginning:

ಸ್ವಸ್ತಿ ಸಮಸ್ತಜಗನ್ನಿಜರೂಪ।
ಭಕ್ತ ಮನೋ ಮಂದಿರ ಚಿದ್ದೀಪ॥
ನಿತ್ಯ ಗುರು ಬಸವೇಶ ಪರಾಪ।
ಕೀರ್ತನೆನ್ನೊಳು ನೆಲಸಿರು ನಿರ್ಲೇಪ॥
ಗುರು ಬಸವೇಶ ಸಮಗ್ರ ಪರೇಶ।
ಶರಣ ಮನಃಸರಸಿರುಹ ನಿವಾಸ॥
ಪರಮ ನಿರಂತರ ಸುಖಪರಿತೋಷ।
ವರಕರ ಸಲಹೆನ್ನನು ಭವನಾಶ॥

* * *

ಮನವಿದು ನೆನೆದಂತಾಚರಿಸುವನು।
ತನು ತಾನೆಂದುಳುಮೆಯ ಮಱೆದವನು॥
ತನಗಿತರವ ಕಲ್ಪಿಸಿ ಬಱೆದಹನು।

ಜನಿಮೃತಿಗಳಗಂಗವ ಕೊಟ್ಟವನು ॥
ಅದು ಕಾರಣ ವಿಷಯೇಂದ್ರಿಯಗಳನು ।
ಬೆಗಱಿಸಿ ಗುರುಚರಣದ ಸಂಗವನು ॥
ಮುದವದಿರದೆ ಮಾಡುತ ಭವಗಳನು ।
ಸದೆಬಡಿದಮಲಾತ್ಮನ ಕೂಡಿದನು ॥
ಮನವಿದು ಸಂಯಮದಿಂ ಪೀಯೂಷ ।
ವಿನಯುವ ಮಾಡಲದೆಂಬವ ನಾಶ ॥
ತನಗೊದವಿದ ಮನದಿಂದುದ್ವೇಶ ।
ಜನಿಸದಿರಲು ತನಗತಿ ಪರಿತೋಷ ॥

*   *

ಅಱನೆಲೆ ಕರುನಾಡದೊಳಿಹನೊಲಿದು ।
ಗಿರಿಗುಹೆ ವನದೊಳಹನು ಸುಖದಳಿದು ॥
ಹರುಷ ವಿಷಾದಂಗಳನತಿಗಳೆದು ।
ಚರಿಸುವನಭವಾಂಘ್ರಿಯ ದೃಢವಿಡಿದು ॥
ಉರುಬಿ ಮರುನ್ಮುಖದಿಂ ದಂಡವನು ।
ಕೊರೆದು ಸೀಳಿ ಮುಖದಿಂ ತಗ್ಗಿಯನು ॥
ತರುಬುತಲಾಕಾಶಕೆ ಪಾಯಿಸಿದನು ।
ತೆರಹುಗುಡುತ ಗುರು ಶರಣೆನುತಿಹನು ॥
ಉಚ್ಚಳಿಸಿಯೆ ಮಾರುತನನಂಬರದ ।
ಮುಚ್ಚಳವಂ ಸಡಲಿಸಿ ಮಣಿಸರದ ॥
ನಿಚ್ಚಣಿಗೆಯನಡರಿಯೆ ಕಂಧರದ ।
ಬೆಚ್ಚರದಿಂ ಗುರುವಿಹ ವರಕರದ ॥

End:

ಸ್ವಾನುಭವದ್ವಯದಿಂ ಗುರುಬಸವ ।
. . ॥
. . . ಮಾರ್ಗದ ಬಹುವಿಧವ ।
ಸಾನಂದದಿ ಪೇಳ್ದನು ನಿಜಮತವ ॥

Colophon:

ಅವಧೂತಗೀತೆ . . . ದಲ್ಲಿ ಬರೆದ ಪುಸ್ತಕವು (ಅವಧೂತಗೀತೆ ಸಮಾಪ್ತಂ.)

(ವಿ.ವಿ.)—

ಸಮಗ್ರ. ಅತಿ ಶಿಥಿಲ. ಶ್ರೀತಾಳಪ್ರತಿ. ಈ ಪ್ರತಿಯಲ್ಲಿ ಶಿವಯೋಗಾಂಗ ವಿಭೂಷಣ ವೇ ಮುಂತಾದ ಇನ್ನೂ ಅನೇಕ ಕೃತಿಗಳಿವೆ. ಈ ವಿಷಯವಾಗಿ ೨೯೯ ನೆಯ ನಂಬರನ್ನು ನೋಡುವುದು. ಕಡೆಯ ಓಲೆಯು ಮುರಿದಿದೆ.

ಈ ಗ್ರಂಥವು ವಿರಕ್ತಿಬೋಧಕವಾಗಿ ಹಾಡಿನರೂಪದಲ್ಲಿ ಬರೆದಿದೆ. ಹಾಡುಗಳು ೧೦೧. ಕಡೆಯಲ್ಲಿ ಅವಧೂತ ಲಕ್ಷಣವು ಹೇಳಿದೆ. ಕವಿ ಗುರುಬಸವ. ಈತನು ಶಿವಯೋಗಾಂಗ ವಿಭೂಷಣವೇ ಮೊದಲಾದ ಇನ್ನೂ ಅನೇಕ ಗ್ರಂಥಗಳನು ರಚಿಸಿರುವನು. ಆವಿಷಯವಾಗಿ ಹೆಚ್ಚುತಿಳಿಯಲು ಬಯಸುವವರು ಕವಿಚರಿತ್ರೆ ಎರಡನೆಯ ಭಾಗವನ್ನು ನೋಡುವುದು.

(5) VEDANTA.

ವೇದಾಂತ

No. 302. ಅನುಭವ ಮುಕುರ-

ANUBHAVAMUKURA.

Substance, palm-leaf. Size, $10\frac{3}{8} \times 1\frac{3}{16}$ inches. Pages, 92. Lines, 6 on a page. Character, Kanarese. Condition, very much injured. Appearance, old.

Begins on fol. 44*a*. The other works herein are :— (1) Kēśava-śataka 1*a*. (2) Jñānasanyāsa 7*a*. (Sanskrit) (3) Dīkṣābbōdbe 13*a*.

Wants some foll in the beginning.

A work on Vedānta elucidating the Chāndogya text 'Tattvamasi'

Author's name is :—Parañjyōti yati. Vidyāśrama seems to be his teacher.

Beginning :

ಗ್ನಿಂ ನ . . ಅಕು . . . ದ ತೂರ್ಯನಿ . ವಾತ್ಮ ॥ ೧೧ ॥ ಶಾರೀರ ಯಾ . . ಚ್ಛ್ವ ತರಿಗರುಪಿದಂ ತೂರ್ಯಕರ್ಮ . . ॥ ೧೨ ॥ ಇವು ತೂರ್ಯನಿರೂಪಣೆ. ಸೂ ॥ ಮತ್ತವ ಪೇ . . . ತ್ರಿಂಗೆ ಘಟಿ . ಹಮಿ . . . ವಿರಿ . . ನೆನಿಪ್ಪು . ಆವಿರಿಂ ಚಂಗೆ ಮುನ್ನ ಪಂಚಸಾರವನ್ನು ತಿಳುಪುತ್ತವಸ್ತಿಗಳ ಪಂಚಕವ ವರ್ಣಿಸಿ.

End :

"ತ್ರಿಪದಿ"

ಇದು ಪರಂಜ್ಯೋತಿಯತಿ ಪದ . ಂದ ।
. . . . ಲಾತ್ಮಾನುಭವಮುಕುರ।
ದಧಿಕಾರಿಗಿದಱೊಳಾತ್ಮಂ ನಿಜವೆ . ರ್ಕುಂ ॥
ಹೇಳಿದೌ ನಾಲ್ವತ್ತು ಪದವಾಕ್ಯ।
ವಾಳೋಚಿತಾ . . ತಿಸು ಯುವ।
ರೋಲಾಲ ಕಾಖ್ಯಪದವೇಱು ॥

"ಕಂದ"

ಶ್ರೀವಿದ್ಯಾಶ್ರಮಪರತರ।
ದೇವ ಪರಂಜ್ಯೋತಿಯೋಗಿ ವಿರಚಿತಗ್ರಂಥಂ॥
ಭಾವಿಪೊಡನುಭವಮುಕುರವಿ।
ದೀವುದು ಸಾಧಕರಿಗಾತ್ಮಸುಖಸಂಪದಮಂ ॥

Colophon :

ಸಂಧಿ ೪, ಸೂತ್ರ ೨೦ ತ್ರಿಪದಿ ೧೫೯.

ಇತಿ ಶ್ರೀಕೈವಲ್ಯಾನ್ವಯ ಪ್ರವರ್ತಕ ಪರಮಹಂಸ ಪರಿವ್ರಾಜಕಾಚಾರ್ಯ ಸಕಲ ಯೋಗೀಂದ್ರ ವೃಂದವಂದ್ಯ ಪಾದಾರವಿಂದ ಶ್ರೀವಿದ್ಯಾಶ್ರಮ ಪಾದಕಮಲನೀರಾಜ ಹಂಸ ಶ್ರೀ ಪರಂಜ್ಯೋತಿಯತಿ ವಿರಚಿತಮಪ್ಪನುಭವಮುಕುರದೊಳ್ ತತ್ವಮಸಿ ವಾಕ್ಯಾರ್ಥ ಪ್ರಕರಣಂ ತೃತೀಯ ಖಂಡಂ.

(ವಿ.ವಿ.)—

ಈ ಗ್ರಂಥದ ಮೊದಲಲ್ಲಿ ಸ್ವಲ್ಪ ಭಾಗವಿಲ್ಲ. ಓಲೆಗಳಂತೂ ಅತ್ಯಂತ ಜೀರ್ಣವಾಗಿ ಹೋಗಿವೆ. ಇದರೊಡನೆ ಕೇಶವಶತಕ ಜ್ಞಾನಸಸ್ನಾನ (ಸಂಸ್ಕೃತ)ದೀಕ್ಷಾಬೋಧೆ ಮುಂತಾದ ಕೆಲವು ಗ್ರಂಥಗಳವೆ. ಮಧ್ಯಭಾಗದಲ್ಲಿ ಅಲ್ಲಲ್ಲಿ ಕೆಲವು ಓಲೆಗಳು ಮುರಿದು ಹೋಗಿವೆ.

ಇದು ತ್ರಿಪದಿಯ ರೂಪವಾಗಿದೆ. ಖಂಡ ೩, ಸಂಧಿ ೧೬, ಸೂತ್ರ ೧೦೨, ತ್ರಿಪದಿ ೯೯೫. ಕವಿ ಪರಂಜ್ಯೋತಿಯತಿ. ಇದು ಲೋಕವಿದು ವೇದವಿದುನಾಂ ಪ . . . । ವದಿ (?) ದೆನ್ನದೆಲ್ಲವ್ರುಳದ ವಿದ್ಯಾಶ್ರಮನ । ಪದಾವಾಸತಾನೆ ಸುಖವಿಕ್ರ್ಯ೯೦॥' ಎಂದು ಹೇಳಿರುವುದರಿಂದ, ವಿದ್ಯಾಶ್ರಮನು ಕವಿಗೆ ಗುರುವಾಗಿರಬಹುದು. ಈತನ ಕಾಲವು ಸು ೧೪೫೦ (ಕ್ರಿ. ಶ.) ಇರಬಹುದೆಂದು ಕವಿಚರಿತ್ರಕಾರರ ಊಹೆಯು.

No. **303**. ಅನುಭವಾಮೃತ.

ANUBHAVĀMṚTA.

Substance, palm-leaf. Size, $15\frac{7}{8} \times 1\frac{3}{8}$ inches. Pages, 80. Lines, 9 on a page. Character, Kanarese. Condition, very much injured. Appearance, old.

Complete in 11 Sandhis.

This is a work on Vēdānta written in Bhamini Ṣaṭpadi metre.

Name of the author—Ranga, son of Mahālinga and a pupil of Sahajānanda.

The date of the author is 1675 A.D. according to Kavicaritre.

This work has been edited by Hosakere Chidambaraiah, with a commentary called Sarvārtha Sandarśini.

Beginning :

ಸೂ ॥ ವ್ಯಾಸಮುನಿ ಶುಕಮುನಿಗೆ [ಪರಮ] (ಯತಿ) ಸಂ ।
, ತೋಪದಿಂದಲಿ ತತ್ವಬೋಧೆಯ ।
ಲೀಸೆನಲು ವಿಸ್ತರಿಸಿ ಪೇಳಿದನಾತ್ಮವಿದರೊಲಿಯೆ ॥
ಶ್ರೀಮದನುಪಮತೇಜ, ನತಜನ ।
ಕಾಮಿತಾರ್ಥ ಫಲಪ್ರದಾಯಕ ।
ಸೋಮಶೇಖರ, ಸುರಮುನೀಂದ್ರಾರ್ಚಿತ ಪದಾಂಭೋಜ ॥
ಸಾ(ಮಗಾನಪ್ರಿಯ) ಸದಾಶಿವ ।
ವಾಮಭಾಗಾಶ್ರಿತಭವಾನೀ ।
ಪ್ರೇಮ, ಶ್ರೀಗಿರಿಮಲ್ಲಿಕಾರ್ಜುನ ಸಲಹು, ಮೂಜಗವ ॥
ಶ್ರೀಗಿರೀಶನ ಪಾದಪದ್ಮಪ ।
ರಾಗರಂಜಿತಮೌಳ, ಭ್ರಮರಾಂ ।
ಬಾಗುಣಾರ್ಣವ ಪೂರ್ಣಚಂದ್ರ ವಚೋವಿಚಕ್ಷಣನು ।
ಶ್ರೀಗುರುವಿನುಪದೇಶದಿಂದನು ।
(ರಾಗಪುದಿಸಲು) ರಂಗನಾಥನು ।
ೞಗಿಜನವಹುದೆನಲು ಪೇಳಿದನನುಭವಾಮೃತವ ॥

ಘನತರದ ಸಹವಾಸಿವಂಶದ।
ಲನುಪಮನು, ಮಹಲಿಂಗದೇವನ।
ತನಯನಹ ಶ್ರೀರಂಗ, ಸಹಜಾನಂದಗುರುಪದಪ॥
ನೆನೆದು ಸಮ್ಯಗ್ಜ್ಞಾನವನು ಬ।
ಲ್ಲನುಭವಿಗಳಹುದೆ (ನಲು ಪೇಳಿದ।
ವಿನು) ತರಾಸ್ವಾದಿಸುವುದೋಲಿದೀ ಯನುಭವಾಮೃತವ॥
ಕನ್ನಡದ ನುಡಿಯೆಂದುಬೇಕ್ಷಿಸ।
ಲಿನ್ನು ಹಿರಿಯರಿಗಂಡಿ ನಡೆವುದು।
ಕನ್ನಡಿಯೊ ದರ್ಪಣವೆಯಲ್ಲವೆ ಭೇದವೇನದಕೆ॥
ಮುನ್ನಲುಪನಿಷದರ್ಥವನು ಸಂ।
ಪನ್ನಮತಿಗ(ಳು ಪೇಳ್ದಿದನೆ ನಾ।
ಕನ್ನಡಿ)ಸಿದೆನು ಕೊರತೆಯಿರ್ದೊಡೆ ಮನ್ನಿಸುವುದೊಲಿದು॥

*　　　　*　　　　*

ಕಾಲ, ಕಾಲಾತೀತ, ಕಲಿಮಲ।
ಜಾಲವಾಮಲೋನ್ಮೂಲ, ನಿಗಮವಿ।
ಶಾಲ ಸನ್ನುತ, ನಿಷ್ಕಲಾತ್ಮ, ನಿರಾಳ, ನಿರ್ಮಾಯ,॥
ಭಾಳ ಲೋಚನ, ಭರ್ಗ, ಭಸ್ಮೋ।
ದ್ಧೂಳನಭವೌಘಪ್ರಭೇದನ।
ಶೂಲಧರ ಶ್ರೀಮಲ್ಲಿಕಾರ್ಜುನ ಸಲಹು ಮೂಜಗವ॥

Colophon:

ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯ ಸಹಜಾನಂದ ಗುರುವರ್ಯ ಪಾದಕಮಲ ಭೃಂಗಾಯಮಾನ ಸಹವಾಸಿ ಮಹಲಿಂಗರಂಗ ವಿರಚಿತಾವನನುಭವಾಮೃತವೆಂಬ ಗ್ರಂಥದಲ್ಲಿ ಅಧಿಕಾರ ನಿರ್ಣಯ ಪ್ರಕರಣಂ ಪ್ರಥಮಸಂಧಿಸ್ಸಮಾಪ್ತಃ.

ಕಷ್ಟವಹ ಸಂಸಾರ ಧರ್ಮವ।
ದಿಷ್ಟವಲ್ಲವೆನುತ್ತ ತನಯಗೆ।
ಶಿಷ್ಟವೇದವ್ಯಾಸಮುನಿಪತಿ ಬೋಧಿಸಿದನೊಲಿದು॥

*　　　　*　　　　*

ಒಡವೆಯುಳ್ಳೊಡೆ ಮಡದಿಮಕ್ಕಳು।
ಕಡುಮಮತೆಯನು ಮಾಳ್ಪರಾತ್ರಗೆ।
ಬಡತನಗಳಡಸಿದರೆ ಮೆಲ್ಲನೆ ಸಡಲಿ ತೊಲಗುವರು॥
ಬಿಡದು ಕರು ಹಾಲಿರಲು ತಾಯನು।
ಕಡೆಗೆ ಹೋಹುದು ಬತ್ತಿದರೆ (ತಾ)।
ಕೆಡುವ ಕಾಲಕ್ಕಾರಿಗಾರೈ? ಮಗನೆ! ಕೇಳೆಂದ॥
ಒಂದಱೊಳು ಕೊರತೆಯನು (ಕೊಡದೆಯೆ)।
ತಂದು ತಂದೀ(ಯುತ್ತಮಿರಲುಂ)।
ಕುಂದುಗಳನೇ ಹಿಡಿದು ಹೆಂಡಿರು ಮಕ್ಕಳಾವಾಗ॥

ಇಂದು ತಮಾಗಿದು ಕಡಿಮೆ ಯಾಗಿದೆ।
ಯೆಂದು ಹೋರುವರವರು ತನಗದ।
ರಿಂದ ಸುಖವನು ಕಾಣ: ಬರಿದೆಭ್ರಮೆಯು ಬಳಲಿಕೆಯು ॥

End :

ಸರ್ವಲೋಕಾಧ್ಯಕ್ಷ ಜಯಜಯ।
ಸರ್ವಲೋಕಾಧಾರ ಜಯಜಯ।
ಸರ್ವಮಂಗಳೆಯರಸ ಜಯಜಯ ಶರ್ವ ಸರ್ವೇಶ ॥
ಗರ್ವಿತಾಸುರಮಥನ ಜಯಜಯ।
ದುರ್ವಿದಗ್ಧದುರಾಪ ಜಯಜಯ।
ಪರ್ವತಾಧಿಪ ಮಲ್ಲಿಕಾರ್ಜುನದೇವ ಜಯಜಯತು ॥
ದೇವ ಜಯಜಯ, ಭಕ್ತನಿಕರವ।
ಕಾವ ಜಯಜಯ ಸಕಲನಿರ್ಜರ।
ದೇವ ಜಯಜಯ, ಜಯ ಜನಾರ್ದನಬಂಧು ಜಯಜಯತು।
ಪಾವಕಾಂಬಕ ಫಣಿವಿಭೂಷಣ।
(ಭಾವನಾತ್ಮನೆ) ಸಕಲಲೋಕದ।
ಜೀವರಂತರ್ಯಾಮಿ ರಕ್ಷಿಸು ಮಲ್ಲಿಕಾರ್ಜುನನೆ ॥

Colophon :

ಶ್ರೀಮತ್ಪರಮಹಂಸ * * * ಅನುಭವಾಮೃತವೆಂಬ ಗ್ರಂಥದಲ್ಲಿ ನಿರ್ಗುಣಾರಾಧನೆ ಶ್ರೀಗಿರಿ ಮಲ್ಲಿಕಾರ್ಜುನ ಕೃತಿಸ್ತುತಿ ಕರುಣ(ಯೆಂಬ) ಏಕಾದಶಾಧ್ಯಾಯಂ ಸಂಪೂರ್ಣಂ.

(ವಿ-ವಿ.)—

ಸಮಗ್ರ. ಅತಿ ಶಿಥಿಲ. ತಾಳಪ್ರತಿ. ಗ್ರಂಥಪಾತವು ವಿಶೇಷವಾಗಿದೆ. ಗ್ರಂಥಾಂತ್ಯದಲ್ಲಿ ‘ ವಿಶ್ವಾವಸು ನಾಮಸಂವತ್ಸರದ ಪುಷ್ಯಶುದ್ಧ ೬ ಬುಧವಾರದದಿನ ಸೂರ್ಯೋದಯ ಆದಿಗಳಗೆಯಲ್ಲಾ . ಜ್ಯದ ಕೊಚ್ಚಯ್ಯನವರ ಕುಮಾರ ವೆಂಕಣ್ಣನು . ಪಟ್ಟದಯಿಟ್ಟ (?) ಊಳಗದ ಕತಿ (?) . . . ಲಿಂಗಣ್ಣ . . . ವರ ಕುಮಾರಗ್ರ್ದ (?) ಲಿಂಗಣ್ಣಗೆ ಶ್ರೀರಂಗವ . . ಲ್ಲಿ ೧೧ ಅಧ್ಯಾಯವು ಸಂಪೂರ್ಣವಾಗಿ ಬರೆದವರಿಗೂ, ಬಾಂಧವರಿ (?) ಬರಸ್ತವರಿಗೂ ಓದಿದವರಿಗೂ ಮಂಗಳ . . ’ ಎಂದಿದೆ.

ಇದು ಭಾಮಿನೀ ಷಟ್ಪದೀ ರೂಪವಾದುದು. ೧೧ ಅಧ್ಯಾಯಗಳವೆ. ವೇದಾಂತಗ್ರಂಥಂ ‘ ಅಖಿಳ ವೇದಾಂತಾರ್ಥವನು ಸಂಗ್ರಹಿಸಿ ಪೇಟುವೆ ಸಕಲರಿಗೆ ತಿಳವಂತೆ ’ ಎಂದು ಹೇಳದ್ದಾನೆ. ಕವಿ ಸಹಜಾನಂದನ ಶಿಷ್ಯನೂ, ಮಹಲಿಂಗನ ಮಗನೂ ಆದ ರಂಗನೆಂಬುವನು. ಕವಿಯು ತನ್ನ ಈ ಗ್ರಂಥವನ್ನು ಶ್ರೀಗಿರಿ ಮಲ್ಲಿಕಾರ್ಜುನ ದೇವರ ಅಂಕಿತದಲ್ಲಿ ಬರೆದಿದ್ದಾನೆ. ಗ್ರಂಥಾವತಾರದಲ್ಲಿಯೂ ಈ ದೇವರ ಸ್ತುತಿಯೇ ಇದೆ. ಈತನಕಾಲವು ಸು. ೧೭೬೫ ಇರಬಹುದೆಂದು ಕವಿಚರಿತ್ರಕಾರರ ಅಭಿಮತವು. ಈ ಗ್ರಂಥವನ್ನು ‘ ಸರ್ವಾರ್ಥ ಸಂದರ್ಶಿನಿ ’ ಯೆಂಬ ಟೀಕೆಯೊಡನೆ ಮ - ರಾ - ರಾ - ಶ್ರೀ ಹೊಸಕೆರೆ ಚಿದಂಬರಯ್ಯನವರು ಅಂದವಾಗಿಯೂ ಒಪ್ಪವಂತೆಯೂ ಮುದ್ರಿಸಿರುವರು.

No. 304. ಅನುಭವಾಮೃತ.

ANUBHAVĀMṚTA.

Substance, palm-leaf. Size, 16 $\frac{1}{16}$ × 1$\frac{3}{8}$ inches. Pages, 48. Lines, 5 on a page. Character, Kanarese. Condition, very much injured Appearance, old.

Contains the first and second Sandhis complete and the third incomplete.

Same work as the above.

(ವಿ-ವಿ.)—

ಇದರಲ್ಲಿ ಮೊದಲ ಎರಡು ಸಂಧಿಗಳು ಪೂರ್ಣವಾಗಿವೆ. ಮೂರನೆಯದರಲ್ಲಿ ೪ ಪದ್ಯಗಳು ಮಾತ್ರ ಇವೆ. ಗ್ರಂಥಾದಿಯ ಓಲೆಯು ಮುರಿದು ಹೋಗಿದೆ. ಅತಿ ಶಿಥಿಲ. ತಾಳ ಪ್ರತಿ.

ಇದು ಹಿಂದೆ ವರ್ಣಿತವಾದ ಗ್ರಂಥವೇ ಆಗಿದೆ. ಕವಿ ರಂಗನೆಂಬುವನು. ಉಳಿದ ವಿಷಯಗಳನ್ನು ಹಿಂದಿನ ನಂಬರಿನಲ್ಲಿ ನೋಡಿ ತಿಳಿಯುವುದು.

No. 305. ಆನಂದಕಲ್ಲೋಲ.

ĀNANDAKALLŌLA.

Substance, paper. Size, 10$\frac{1}{16}$ × 4$\frac{3}{8}$ inches. Pages, 240. Lines, 9 on a page. Character, Kanarese. Condition, very much injured. Appearance, old.

Complete in 20 Prakaraṇas.

A work in prose on Advaita Philosophy. Author's name is :— Avadhūta Sivayogi and his date is about 1750 A.D.

Beginning :

॥ ಶಿಖರಿಣಿ ॥

ವಚಃ ಪಾರಾವಾರ ಪ್ರಮಥನಮಪೂರ್ವಂ ಶ್ರುತಿತತೇಃ ।
ಪ್ರಸಿದ್ಧಂ, ಯದ್ವಸ್ತು ಪ್ರಥಿತನವನೀತೋಪಮಮಭೂತ್ ॥
ತದಾದ್ವೈತಾಶಾಂತ ಪ್ರತಿಪದವಧೂತಾ ಪ್ರಭುವರಃ ।
ಶಿವೋಮಾಯಾ ಶಕ್ತ್ಯಾ ಜನಯತಿ ಜಗನ್ನಿಷ್ಕೃತಿ ಕರಮ್ ॥
ತತ್ವಂ ಪದವಿವೇಕೋಕ್ತಿ । ಮವಧೂತ ಸದಾಶಿವಃ ॥
ಕುರುತೇ ಬಾಲಬೋಧಾಯ । ಯಥಾವೇದಾಂತಸದ್ಗತಿಃ (?)
ತಥಾಪಿ ಬುದ್ಧಿಸಂಕೋಚ । ಜಿಜ್ಞಾಸಾವದಲಕ್ಷಿತಃ ॥
ಅವಧೂತ ಶಿವೇನಾದ್ಯ । ಯುಕ್ತಿರಿತ್ಯನುಮನ್ಯತೇ ॥
ನಿತ್ಯಾಯ ನಿರ್ವಿಕಲ್ಪಾಯ । ಯೋಗಿಧ್ಯೇಯಾಯ ಸರ್ವದಾ
ತತ್ವಂ ಪದಾರ್ಥರೂಪಾಯ । ಶಂಭವೇ ಗುರುವೇ ನಮಃ ॥

॥ ಶಾ ॥ ವಿ ॥

ವೇದಾಂತೇಷು ಯಮಾಹುರೇಕಪುರುಷಂ ವ್ಯಾಪ್ಯಸ್ಥಿತಂ ರೋದಸೀ ।
ಯಸ್ಮಿನ್ನೀಶ್ವರ ಇತ್ಯನನ್ಯವಿಷಯಃ ಶಬ್ದೋಯಥಾರ್ಥಾಕ್ಷರಃ ॥
ಅಂತರ್ಯಶ್ಚ ಮುಮುಕ್ಷುಭಿರ್ನಿಯಮಿತ ಪ್ರಾಣಾದಿಭಿರ್ಮ್ರಗ್ಯತೇ ।
ಸಃ ಸ್ಥಾಣುಸ್ಥಿರಭಕ್ತಿಯೋಗ ಸುಲಭೋ ನಿಶ್ರೇಯಸಾಯಾಸ್ತು ವಃ ॥

ಕ್ರಿಯಾವಸ್ತು ನಿರ್ದೇಶಃ ಎಂಬ ಶಾಸ್ತ್ರಸಮಯವುಂಟಾಗಿ ಈ ಮಹಾ ಗ್ರಂಥಾರಂಭದಲ್ಲಿ ವಸ್ತು ನಿರ್ದೇಶವು ಹೇಳಲ್ಪಟ್ಟಿತು.

ಯಾವದಾಯುಷ್ಯ ಯೋವಂದ್ಯಾ । ವೇದಾಂತೋಗುರುರೀಶ್ವರಃ ॥
ಆದೌಬೋಧಾ ಪ್ರಸಿದ್ಧಾರ್ಥಂ । ತತ್ವಂ ಯದ್ಯಪಿ ನಿಶ್ಚಯಂ ॥ (?)

ಸಮಯವುಂಟಾಗಿ ಗುರುದೇವತಾ ನಮಸ್ಕಾರ ಪೂರ್ವಕದಿಂ—

'ಕರ್ಮೇಂದ್ರಿಯಾಣಿ ಸಂಯಮ್ಯ । ಯ ಆಸ್ತೇ ಮನಸಾ ಸ್ಮರನ್ ॥
ಇಂದ್ರಿಯಾರ್ಥಾನ್ ವಿಮೂಢಾತ್ಮಾ । ಮಿಥ್ಯಾಚಾರಃ ಸ ಉಚ್ಯತೇ ॥'

ಎಂಬ ಭಗವದ್ವಾಕ್ಯದಿಂದಲೂ,

'ಆಸುಪ್ತೇರಾಮೃತೇಃ ಕಾಲಂ । ನಯೇದ್ವೇದಾಂತಚಿಂತಯಾ ॥' ಎಂಬ ಶಾಸ್ತ್ರಾರ್ಥವುಂಟಾಗಿಯೂ ಪ್ರಕೃತ ಮುಮುಕ್ಷುಗಳ ಸಂಶಯ ನಿರಾಸಾರ್ಥವಾಗಿಯೂ ಅವಧೂತಶಿವಯೋಗಿ ಯುಕ್ತಿವ್ಯಾಜದಿಂ ಶ್ರುತಿ, ಸ್ಮೃತಿ, ಶಾಸ್ತ್ರ, ತಾರ್ಕಿಕೋಕ್ತಿಸ್ವಾನುಭವದಿಂ,

'ಅಧ್ಯಾರೋಪಾಪವಾದಾಭ್ಯಾಂ । ನಿಷ್ಪ್ರಪಂಚಂ ಪ್ರಪಂಚ್ಯತೇ ॥' ಎಂಬ ವೇದಾಂತ ಶಾಸ್ತ್ರಾನುಮತದಿಂ ಅಧ್ಯಾರೋಪವಾದದಿಂ ಸರ್ವರೂ ತಿಳಿವಂತೆ ವಸ್ತುಸಾಕ್ಷಾತ್ಕಾರಮಂ ವಸ್ತು ನಿರ್ದೇಶಾ, ಇನ್ನು ಅಧ್ಯಾರೋಪಗಳಾವಾವುವೆಂದೊಡೆ ;

* * * *

'ನಾಕಿಂಚಿನ್ಮಾತ್ರೋಽಹಂ ಸದಾಶಿವಃ' ಎಂದು.

ಬ್ರಹ್ಮತ್ವೇ ಸೃಜತೇ ವಿಶ್ವಂ । ಸ್ಥಿತೌ ಪಾಲಯತೇ ಹರಿಃ ॥
ರುದ್ರರೂಪಾಯ ಕಲ್ಪಾಂತೇ । ನಮಸ್ತುಭ್ಯಂ ತ್ರಿಮೂರ್ತಯೇ ॥

ಎಂದುಂಟು. ಅಂತು ಜೀವ ಜಗದಾಕೃತಿಯಾಗಿ ಕಲ್ಪಿತನೆ ತೋರೆದನೆಂದು ಹೇಳಲ್ಪಟ್ಟಿತು. ಉತ್ತರ ನಿರ್ಣಯದಲ್ಲಿ ಬ್ರಹ್ಮಾಂಡಪಿಂಡಾಂಡ ಸೃಷ್ಟಿ ಹೇಳಲ್ಪಟ್ಟಿತು.

Colophon :

ಇತಿ ಶ್ರೀ ಕೈವಲ್ಯಾನ್ವಯ ಪ್ರವರ್ತಕ ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯವರ್ಯ ಪರ ಶಿವಪಾದ ಕಮಲನೀ ರಾಜಹಂಸಾವಧೂತ ಶಿವಯೋಗೀಂದ್ರ ವಿರಚಿತ ವಾಕ್ಯಕಲ್ಪಿತ ಪುರುಷೋತ್ಪತ್ತಿ ಪ್ರಕರಣಂ ಸಮಾಪ್ತಂ.

ಕಾಮಾನುಜ್ಞಾ ಶ್ರುತಿಶತಗುಣ ಶ್ರೋತ್ರಿಯಸ್ಯ ಪ್ರಧಾನಃ ।
ಕಾಮೋಕಾಮೋಪಹತಧಿಷಣಃ ಶಾಂತಸನ್ಮಾನಸಸ್ಯ ॥
ತಸ್ಮಾದೂರ್ಧ್ವಂ ಘನತರರಸಾನಂದ ಸಂಭಾವಿತಾಯಾಂ ।
ನಿರ್ವ್ಯಾಪಾರ ಪ್ರಕೃತಿವಿಕೃತಿ ರ್ವರ್ತತೇ ಸಾವಧೂತಃ ॥

End :

ಇನ್ನು ಈ ಜೀವನ್ಮುಕ್ತನ ಪ್ರಶಂಸೆಯಲ್ಲಿ ಇನ್ನು ಶಾಸ್ತ್ರಾನುಭವವುಂಟಾಗಿಹುದು· ಅದು ಹೇ [ಗಯ್ಯ 7 ಎ] (ಗೆ) ನೆ :—ಆವುದಾನೊಂದು ಅರ್ಥದ ಶ್ರೇಷ್ಠನೀಚತೆಯಿಂದಲೆ ತನ್ನಿಷ್ಟವಾದ ಜ್ಞಾನಕ್ಕೂ ಶ್ರೇಷ್ಠನೀಚತೆ ದೊರೆಕೊಂಬುದು. ಜ್ಞಾನದ ಶ್ರೇಷ್ಠನೀಚತೆಯಿಂದಲೆ ತದನುಸಾರವಾಗಿ ಕಲ್ಪಿತವಾದ ಶಬ್ದಕ್ಕೂ ಶ್ರೇಷ್ಠನೀಚತೆ ದೊರೆಕೊಂಬುದು. ಏತತ್ಸಂಬಂಧದಿಂ ಜ್ಞಾತೃಪಗೂ ಶ್ರೇಷ್ಠನೀಚತ್ವ ದೊರೆಕೊಂಬುದು. ಜೀವನ್ಮುಕ್ತಗೆ ವಿಚಾರರೂಪ ವಾಕ್ಯವು ಮ (ಹಾ) ವಾಕ್ಯವೆನಿಸಿಕೊಂಡಿತಾಗಿ ತದ್ದ್ವಾರದಿಂ ತಿಳಿದ ಜ್ಞಾನವು ಬ್ರಹ್ಮಜ್ಞಾನವೆನಿಸಿಕೊಂಡಿತಾಗಿ ಏಕವಿಶಿಷ್ಟತೆಯನ್ನುಳ್ಳ ಪುರುಷನು ಜೀವನ್ಮುಕ್ತನೆಂಬಲ್ಲಿ ಸಂದೇಹವಿಲ್ಲವೆಂಬುದೀಗ ರಹಸ್ಯ.—' ಏತಸ್ಮಿನ್ ವಿಜ್ಞಾತಂ ಸರ್ವಮಿದಂ ವಿಜ್ಞಾತಂ ಭವತಿ ' ಎಂದು.

' ಭಿದ್ಯತೆ ಹೃದಯಗ್ರಂಥಿಃ । ಛಿದ್ಯಂತೇ ಸರ್ವಸಂಶಯಾಃ ॥
ಕ್ಷೀಯಂತೇ ಚಾಸ್ಯಕರ್ಮಾಣಿ । ತಸ್ಮಿನ್ ದೃಷ್ಟೇ ಪರಾವರೇ ॥ '

ಎಂದು,

' ಅಹಂಕಾರಾದಿ ದೇಹಾಂತೋ । ವೇದ್ಯೋನಾತ್ಮಘಟಾದಿವತ್ ॥
ತತ್ಸಾಕ್ಷಿ ಸರ್ವಗಂಜ್ಯೋತಿ । ರಾತ್ಮಾತ್ವಂ ಶಬ್ದಲಕ್ಷಿತಃ ॥
ಸದೇವೇತ್ಯಾದಿ ಸ್ತೈವ್ರೋಕ್ತ । ಮದ್ವಯಂ ಸರ್ವಕಾರಣಂ ।
ಏಕಮೇವ ಪರಂ ಬ್ರಹ್ಮ । ತಚ್ಛಬ್ದೇನೋಪಲಕ್ಷಿತಃ ॥
ತತ್ಪದೈಸ್ಸಂಗತಾಸತ್ಯಂ । ವಿರುದ್ಧಾಂಶಂ ವಿವರ್ಜಯೇತ್ ॥ (?)
ದ್ವೈತಪಾರೋಕ್ಷ್ಯ ಹೀನೇನ । ಪೂರ್ಣಭಾಧೋವ ಶಿಷ್ಯತೆ ॥
ಸರ್ವಭೂತಸ್ಥಿತಂ ಯೋ ಮಾಂ । ಭಜತ್ಯೇಕತ್ವಮಾಸ್ಥಿತಃ ।
ಸರ್ವಥಾವರ್ತಮಾನೋಪಿ । ಸಯೋಗೀ ಮಯಿವರ್ತತೇ ॥
ಆತ್ಮೌಪಮ್ಯೇನ ಸರ್ವತ್ರ । ಸಮಂ ಪಶ್ಯತಿ ಯೋರ್ಜುನ ।
ಸುಖಂವಾ ಯದಿವಾ ದುಃಖಂ । ಸ ಯೋಗೀ ಪರಮೋಮತಃ ॥ '

ಎಂದು ಭಗವದ್ವಾಕ್ಯವುಂಟಾಗಿ ಜೀವನ್ಮುಕ್ತಿ ಪ್ರಕರಣ(ವು) ಹೇಳಲ್ಪಟ್ಟಿತು.

ಈ ವೇದಾಂತ ಪ್ರಕರಣ ವಿಂಶಿಕೆಯೆಂಬ ಮಹಾ ಗ್ರಂಥದಲ್ಲಿ ಪೂರ್ವದಶಕ, ಉತ್ತರ ದಶಕವೆಂದು ಅಧಿಕಾರಭೇದದಿಂ ದ್ವಿವಿಧವಾಗಿಹುದು. ಅಲ್ಲಿ ಪ್ರಥಮ ಪ್ರಕರಣದಲ್ಲಿ ಉದ್ದೇಶಕ್ರಮ ಎರಡನೆ ಯ(ದರ)ಲ್ಲಿ ಕಲ್ಪಿತ ಪುರುಷನ ಉತ್ಪತ್ತಿ, ಮೂರನೆಯ (ದರ)ಲ್ಲಿ ಬ್ರಹ್ಮಾಂಡ ಸೃಷ್ಟಿ, ನಾಲ್ಕನೆಯ (ದರಲ್ಲಿ) ಪ್ರಾಕೃತಸೃಷ್ಟಿ, ಐದನೆಯ (ದರ) ಲ್ಲಿ ಸಮಸ್ತ ಮತಸಂಗ್ರಹೋಪದೇಶ, ಆರನೆಯ (ದರ) ಲ್ಲಿ ಅಹಂಕಾರದ ಉತ್ಪತ್ತಿ, ಏಳನೆಯ (ದರ) ಲ್ಲಿ ಅವಸ್ಥಾತ್ರಯನಿರಾಕರಣ, ಎಂಟನೆಯ (ದರ) ಲ್ಲಿ ನಿರ್ವರ್ತ್ಯನಿರ್ವರ್ತಕ ಭಾವವಿಚಾರ, ಒಂಬತ್ತನೆಯ (ದರ)ಲ್ಲಿ ಮೋಕ್ಷಸಂವಾದ, ಹತ್ತನೆಯ (ದರ) ಲ್ಲಿ ಆರೂಢ ಚರಿತ್ರೆ, ಇವು ಪೂರ್ವದಶಕವೆನಿಸುವುವು.

ಉತ್ತರ ಪ್ರಕರಣಕ್ಕೆ ಮೊದಲ (ನೆಯದಾದ) ಹನ್ನೊಂದನೆಯ (ದರ)ಲ್ಲಿ ಭೇದವಾದ ಖಂಡನ, ಹನ್ನೆರಡನೆಯ (ದರ)ಲ್ಲಿ ಕರ್ಮೋಪದೇಶ ವಾಕ್ಯತ್ರಯೋಪದೇಶ, ಹದಿಮೂರನೆಯ (ದರ) ಲ್ಲಿ ಸಗುಣೋಪದೇಶ, ಹದಿನಾಲ್ಕನೆಯ (ದರ) ಲ್ಲಿ ಜಡಾಜಡ ವಿಭಾಗ, ಹದಿನೈದನೆಯ (ದರ) ಲ್ಲಿ ವಾಕ್ಯತ್ರಯೋಪದೇಶ, ಹದಿನಾರನೆಯ (ದರ) ಲ್ಲಿ ಅಭಿಮಾನ ಚೈತನ್ಯಗಳ ಏಕಾನೇಕ

ವಿಚಾರ, ಹದಿನೇಳನೆಯ (ದರ) ಲ್ಲಿ ಪಿಂಡಬ್ರಹ್ಮಾಂಡಗಳೈಕ್ಯ, ಹದಿನೆಂಟನೆಯ (ದರ) ಲ್ಲಿ ಬ್ರಹ್ಮಾನಂದ ಸುಖ, ಹತ್ತೊಂಬತ್ತನೆಯ (ದರ) ಲ್ಲಿ ವಿಶ್ವನಾಟಕ ಪ್ರಕರಣ, [ಯೊ] ಇಪ್ಪತ್ತನೆಯ (ದರ) ಲ್ಲಿ ಜೀವನ್ಮುಕ್ತಿ ಪ್ರಶಂಸೆ ಹೇಳಲ್ಪಟ್ಟಿತು.

ಇನ್ನು ವಿಶೇಷಾನುಭವಗಳನ್ನು ಕೈವಲ್ಯಪ್ರದೀಪಿಕೆಯಿಂದೂ, ಸಂಸ್ಕೃತಪ್ರಕರಣವಿಂಶಿಕೆಯಿಂದೂ, ಗಿರಿಜಾಬೋಧೆಯಿಂದೂ ಗ್ರಂಥಗಳ(ನ್ನು) ಹೇಳದ್ದೇ [ವು] (ವೆ) ಅಲ್ಲಿ ವಿಶೇಷಕತೆಗಳಂ ನೋಡಿಕೊಂಬುದು. ಈ ಕರ್ನಾಟಕ ಪ್ರಕರಣ ವಿಂಶಿಕೆಯೆಂಬುದು ಶ್ರೋತೃಗಳಿಗೆ ನಿರುಪಮಾನಂದ ಗತಿಯನ್ನು ಕೊಡುತ್ತಲಿಹುದು.

ಯಸ್ಯೋಪದೇಶಾದಿತಿ ದಾದಿಭಿನ್ನಃ । (?)
ಪ್ರಪಂಚಮಿಥ್ಯತ್ವಮತಿಪ್ರತೀತಾಂ ॥
ತಂ ಯೋಗಿವರ್ಯಂ ಪರಮಾವಧೂತಂ ।
ಜ್ಞಾತ್ವೈಕ್ಯಪಾಳುಂ ತರಸಾಬಬಧ್ವಂ (?)
ಮೋಕ್ಷಾದಿದತ್ತ ಹಸ್ತೇನ । ಮಹಾವಾಕ್ಯಾರ್ಥವಾದಿನಾ ॥
ಅವಧೂತಶಿವೇ ಸೇವೋ । ವರ್ಣಯಾ ದಶವರ್ಣ್ಯತಾಂ ॥

Colophon :

ಇತಿ ಶ್ರೀ ಕೈವಲ್ಯಾನ್ವಯ ಪ್ರವರ್ತಕ ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯವರ ಪರಶಿವಪಾದಯುಗಳ ಕಮಲಿನೀರಾಜಹಂಸಾವಧೂತ ಶಿವಯೋಗೀಂದ್ರ ವಿರಚಿತ ವಾಕ್ಯಪ್ರಕರಣ ವಿಂಶಿಕಾ ಸಂಪೂರ್ಣ.

(ವಿ-ವಿ.)—

ಸಮಗ್ರ. ಅತ್ಯಂತ ಶಿಥಿಲ. ತಪ್ಪುಗಳು ಹೇರಳವಾಗಿವೆ. ಪುಟಗಳ ಸೇರುವೆಯು ಹಿಂದು ಮುಂದಾಗಿವೆ. ಪುಸ್ತಕದಂತ್ಯದಲ್ಲಿ ' ಶಕ್ಯಸೋಳಸ್ಯಂ ಹೆ ೧೭೧೩ ವರುಷ ಪ್ರವರ್ತಮಾನೆ ಪ್ರಜಾಪತಿನಾಮ ಸಂವತ್ಸರೇ ವೈಶಾಖವದಿ ಷಷ್ಠಿ ಶುಕ್ರವಾರ ಘಟಿಕಾ ೧೩, ಪಳೆ ೩೦, ಶ್ರವಣನಕ್ಷತ್ರ ಘಟಿಕಾ ೪೭, ಹಳೆ ೫೫, ಬ್ರಹ್ಮನಾಮಯೋಗೇ ಘಟಿಕಾ ೪೭, ಪಳೆ ೫೭, ಗರಜಾಕರಣೇ ಘಟಿಕಾ ೧೦, ಪಳೆ ೩೩, ತದ್ದಿವಸ ಪ್ರಾತಃ ಕಾಲೇ ಪ್ರಥಮಯಾಮೇ ಘಟಿಕಾ ೭ ಲಿಖಿತಃ ಆನಂದ ಕಲ್ಲೋಲಗ್ರಂಥಸ್ಸಮಾಪ್ತಃ.

ಭಗ್ನಮುಷ್ಟಿಕಟಿಗ್ರೀವ । ಸ್ತಬ್ಧದೃಷ್ಟಿರಧೋ ಮುಖಃ ॥
ಕಷ್ಟೇನಲಿಖಿತಂ ಗ್ರಂಥಂ । ಯತ್ನೇನ ಪ್ರತಿಪಾಲಯೇತ್ ॥ (?)

ಶ್ರೀ ಗುರು ಕಾಶೀಪತಿ ಕಲಿಗಣನಾಥನ ಕರಕಂಜದೆ ಜನಿತನಾದಂಥ ನಿರಂಜನನು ಲಿಖಿತ ಮಾಡಿದ ಪ್ರತಿ. ತಪ್ಪಿ ಪ್ರತಿಯಿದ್ದರೆ ತಿದ್ದುವುದು ಬಲ್ಲವರು. ನಿಮ್ಮ ಬಾಲಕರ ಬಾಲನಾನಯ್ಯ ' ಎಂದಿದೆ.

ಇದು ಗದ್ಯರೂಪವಾದುದು. ಪೂರ್ವೋತ್ತರದಶಕಗಳೆಂದು ಇಪ್ಪತ್ತು ಪ್ರಕರಣಗಳನ್ನುಳ್ಳುದು. ಇದಕ್ಕೆ ವಾಕ್ಯಪ್ರಕರಣ ವಿಂಶಿಕೆಯೆಂದೂ ಹೆಸರುಂಟು. ಅದ್ವೈತ ವೇದಾಂತವನ್ನು ಬೋಧಿಸುವುದು. ಕವಿ ಅವಧೂತ ಶಿವಯೋಗಿ. ಈತನ ಕಾಲವು ಸು ೧೭೫೦ ಇರಬಹುದೆಂದು ಕವಿಚರಿತ್ರಕಾರರ ಮತವು. ಉಳಿದ ವಿಷಯಗಳನ್ನು ಉದಾಹೃತಭಾಗಗಳಿಂದ ತಿಳಿದುಕೊಳ್ಳುವುದು.

No. 306. ಆನಂದಕಲ್ಲೋಲ-
ĀNANDAKALLŌLA.

Substance, paper. Size, 10½ × 9½ inches. Pages, 380. Lines, 20 on a page. Character, Kanarese. Condition, fair. Appearance, new.

Complete in 20 Prakaraṇas.

Same work as the above.

(ವಿ-ವಿ.)—

ಸಮಗ್ರ. ಇದು ಹಿಂದೆ ವರ್ಣಿತವಾಗಿರುವ ಗ್ರಂಥದ ಪ್ರತಿಕೆಯು. ಈ ಗ್ರಂಥಕ್ಕೆ ಸಂಬಂಧಪಟ್ಟ ವಿಷಯಗಳನ್ನು ಹಿಂದಿನ ನಂಬರಿನಲ್ಲಿ ನೋಡಿ ತಿಳಿಯುವುದು.

No. 307. ಉತ್ತರಗೀತೆ-
UTTARAGĪTE.

Substance, Śrītāla. Size, 14 × 2½ inches. Pages, 14. Lines, 11 on a page. Character, Kanarese. Condition, much injured. Appearance, old.

Begins on fol. 24*a*. The other works herein are .—(1) Airāvata 1*a*. (2) Rāṅgakṣētratīrthamahime 12*a*. (3) Uttaragīte 20*a* (in Sanskrit). (4) Bhagavadgīte (Ṭīkāsahita). (5) Śivagīta 33*a*. (6) Saptapadi 36*a*, (7) Vīraśaivaviṣaya 37*a*, (8) Śivagīte (in prose) 40*a*. etc.

This is a work in 3 Adhayayas, being a brief commentary on Uttaragītā in Sanskrit.

The name of the author is not known. The date of the work is about 1700 A.D.

Beginning :

ಭಗವದ್ಗೀತೆಯಲ್ಲಿ ಹೇಳಿದ ತತ್ವಾರ್ಥವ್ಯಾಖ್ಯಾನುಸಂಧಾನವನ್ನು ಮನೋವಿಕ್ಷೇಪದಿಂದ ಮರೆದು ಅರ್ಜುನನು ಶ್ರೀಕೃಷ್ಣದೇವರ ಕುರಿತು ಬಿನ್ನಹಂ ಮಾಡಿದನು.

ಅರ್ಜುನ ಉವಾಚ :—

